ಕರ್ಣಾಟಕ ಕಾವ್ಯಕಲಾನಿಧಿ, ಕೋಶಸಂಖ್ಯೆ — ೪೩

ಮಹಾರಾಜಾಧಿರಾಜ ಮಹಿಶೂರ ಮಹಾರಾಜ

ಮುಮ್ಮಡಿ ಶ್ರೀ ಕೃಷ್ಣರಾಜ ಕಂಠೀರವ

ವಿರಚಿತ

ಕೃಷ್ಣರಾಜ ವಾಣೀವಿಲಾಸ ರತ್ನಾಕರಂ

ಎಂಬ

ಶಾಕುಂತಲನಾಟಕ

ನವೀನ ಟೀಕೆ

REGISTRAR
OSMANIA UNIVERSITY.

(ವಚನ ಗ್ರಂಥ)

REGISTRAR
OSMANIA UNIVERSITY

ಮ. ಆ. ರಾಮಾನುಜಯ್ಯಂಗಾರ್

ಆಕ್ಟಿಂಗ್ ಕನ್ನಡ ಟ್ರಾನ್ಸ್ಲೇಟರ್

ಮೈಸೂರು ಎಡ್ಯುಕೇಷನ್ ಇಲಾಖೆ, ಬೆಂಗಳೂರು:—

ಇವರಿಂದ ಪರಿಷ್ಕರಿಸಲ್ಪಟ್ಟು

ಮೈಸೂರು

ಶ್ರೀನಿವಾಸ ಮುದ್ರಾಶಾಲೆಯಲ್ಲಿ ಮುದ್ರಿತವಾಯಿತು

1914

UNIVERSAL
LIBRARY
OU_200189
UNIVERSAL
LIBRARY

OSMANIA UNIVERSITY LIBRARY

Call No. K83 K89S Accession No. G1K 156

Author

Title

This book should be returned on or before the date last marked below.

All Rights Reserved by the Editor
Registered according to Act XXV of 1867

ಪ್ರಸ್ತಾವನೆ.

ಶ್ರೀಮನ್ಮಹೀಶೂರಮಹಾಸಂಸ್ಥಾನಮಧ್ಯದೇದೀಪ್ಯಮಾನರತ್ನ ಸಿಂಹಾಸನಾರೂಢರಾಗಿ ಆಳ್ದ ಮಹಾಸ್ವಾಮಿಯವರಾದ ನಾಲ್ವಡಿ ಶ್ರೀಕೃಷ್ಣರಾಜವೊಡೆಯರ್ ಬಹಾದೂರ್, ಜಿ. ಸಿ. ಎಸ್. ಐ. ಸಾರ್ವಭೌಮರವರು 17 ನೇ ಏಪ್ರಿಲ್ 1903 ನೆಯ ಇಸವಿಯ 956 ನೆಯ ಹುಕ್ಕುಮಿನಲ್ಲಿ ತಮ್ಮ ಪ್ರೈವೇಟ್ ಸೆಕ್ರೆಟರಿಯವರ ಮೂಲಕ ಕೃಪಾಪುರಸ್ಸರವಾಗಿ ಈ ಶಾಕುಂತಲನಾಟಕ ನವೀನಟೀಕೆಯನ್ನೂ ಇನ್ನೂ ಕೆಲವು ಗ್ರಂಥಗಳನ್ನೂ ಮುದ್ರಿಸಲು ನಮಗೆ ಅಧಿಕಾರವನ್ನು ದಯಪಾಲಿಸಿದ ಮೇರೆ ಈ ಗ್ರಂಥವನ್ನು ಮುದ್ರಿಸಿರುತ್ತೇವೆ. ಆದಕ್ಕಾಗಿ ಯಾವಾಗಲೂ ಮಹಾಸ್ವಾಮಿಯವರಿಗೆ ಕೃತಜ್ಞರಾಗಿ ಅವರ ಶ್ರೇಯಃಪ್ರಾರ್ಥನೆಯನ್ನು ಮಾಡುತ್ತಿರುತ್ತೇವೆ.

REGISTRAR
OSMANIA UNIVERSITY

ಅವತಾರಿಕೆ.

ಈ ಗ್ರಂಥವನ್ನು ರಾಜಾಧಿರಾಜ ಮಹಿಶೂರ ಮಹಾರಾಜ ಮುಮ್ಮಡಿ ಶ್ರೀಕೃಷ್ಣರಾಜಕಂಠೀರವರು ಕವಿಸಾರ್ವಭೌಮನೆನಿಸಿದ ಕಾಳಿದಾಸನಿಂದ ನವರಸಭರಿತವಾಗಿ, ಸರಸಜನಾನಂದಕರವಾಗಿ, ದುಷ್ಯಂತಶಕುಂತಲಾ ಕಥಾಸಂದರ್ಭಗರ್ಭಿತವಾಗಿ ರಚಿತವಾದ ಸಂಸ್ಕೃತದ ನಾಟಕಗಳಲ್ಲೆಲ್ಲಾ ಅತ್ಯುತ್ತಮವೆಂದು ಪ್ರಸಿದ್ಧವಾದ ಶಾಕುಂತಲನಾಟಕದ ಕಥಾಸಾರಸ್ಯವೇ ಮೊದಲಾದ ಮಹಿಮೆಗಳನ್ನು ತಾವು ಅನುಭವಿಸಿ ತೃಪ್ತಿಹೊಂದದೆ, ಸಂಸ್ಕೃತದ ಪರಿಚಯವಿಲ್ಲದೆ ಇರುವ ತಮ್ಮ ಪ್ರಜೆಗಳಿಗೂ ಆ ತಮ್ಮ ಅನುಭವಪರೀವಾಹವನ್ನು ಕೊಡಬೇಕೆಂಬ ಉದ್ದೇಶದಿಂದ. ಕರ್ಣಾಟಕಭಾಷೆಯಲ್ಲಿ ವಚನಕಾವ್ಯವಾಗಿ ರಚಿಸಿದರು. ಈ ಗ್ರಂಥವನ್ನು ನಾಟಕರೂಪದಲ್ಲಿ ಬರೆದರೆ ಜನರು ಅರಿಯಲಾರರೆಂದು ಯೋಚಿಸಿ ಮಹಾಸ್ವಾಮಿಯವರು ಕಥೆಯನ್ನು ಹೊಸಗನ್ನಡದಲ್ಲಿ ಗದ್ಯರೂಪವಾಗಿ ಬರೆದು, ಇದಕ್ಕೆ ಕೃಷ್ಣರಾಜವಾಣೀವಿಲಾಸರತ್ನಾಕರವೆಂದು ಹೆಸರಕೊಟ್ಟರು. ಇದರ ಶೈಲಿಯು ಬಹಳ ರಮಣೀಯವಾಗಿರುವುದರಿಂದಲೂ, ಅಲ್ಲಲ್ಲಿ ಸ್ವಕಪೋಲಕಲ್ಪಿತಗಳಾದ ವರ್ಣನೆಗಳನ್ನು ಸೇರಿಸಿ ಕಥೆಯ ರಮಣೀಯತೆಯನ್ನು ಹೆಚ್ಚಿಸಿರುವುದರಿಂದಲೂ, ಈ ಗ್ರಂಥಕ್ಕೆ "ಕೃಷ್ಣರಾಜವಾಣೀವಿಲಾಸರತ್ನಾಕರ"-ಶ್ರೀಕೃಷ್ಣರಾಜಪ್ರಭುಗಳವರ ವಾಣಿಯ ವಿಲಾಸಗಳಿಗೆ ರತ್ನಾಕರ ಸಮುದ್ರ, ಎಂದರೆ, ಇದರಲ್ಲಿ ಮಹಾರಾಜರವರ ವಾಗ್ಧೋರಣೆಯನ್ನು ನೋಡಬಹುದಾಗಿರುವುದರಿಂದಲೂ, ಆ ನಾಮವು ಈ ಗ್ರಂಥಕ್ಕೆ ಉಚಿತವಾಗಿಯೂ ಅನ್ವರ್ಥವಾಗಿಯೂ ಇದೆ.

ಈ ಗ್ರಂಥದ ಕಥೆಯನ್ನು ನಾಲ್ಕು ಕಲ್ಲೋಲಂಗಳಾಗಿ ಪ್ರತಿಕಲ್ಲೋಲದಲ್ಲಿಯೂ ನಾಲ್ಕು ನಾಲ್ಕು ತರಂಗಗಳನ್ನಾಗಿ ಉಚಿತವರಿತು ವಿಭಾಗಮಾಡಿದ್ದಾರೆ.

ಕನ್ನಡದಲ್ಲಿ ಗದ್ಯ ಗ್ರಂಥಗಳು ವಿರಳವಾಗಿರುವುದನ್ನು ಯೋಚಿಸಿ, ಶ್ರೀಕೃಷ್ಣರಾಜ ಸಾರ್ವಭೌಮರು ತಮ್ಮ ರಾಜ್ಯಭಾರ ನಿರ್ವಾಹದಲ್ಲಿಯೂ ಕೂಡ ಅವಕಾಶ ಕಲ್ಪಿಸಿಕೊಂಡು ಆ ಕೊರತೆಯನ್ನು ನಿವಾರಣೆಮಾಡುವ ಉದ್ದೇಶದಿಂದ ಸೌಗಂಧಿಕಾಪರಿಣಯ, ಸಹಸ್ರಾಯು ಕಥೆ, ವತ್ಸರಾಜಕಥೆ, ದಶಕುಮಾರಕಥಾಕಲಾನಿಧಿ, ಶಾಕುಂತಲನಾಟಕನವೀನ ಕಥೆ; ವಿಕ್ರಮೋರ್ವಶೀಕಥೆ,

ಮಾಲವಿಕಾಗ್ನಿಮಿತ್ರ ಕಥೆ, ಮುದ್ರಾಮಂಜೂಷ, ರಾಮೋದಂತ ಕಥೆ, ಕೃಷ್ಣೋದಂತ ಕಥೆ, ರಾಜವಂಶರತ್ನಪ್ರಭೆ, ಉಪನಿಷತ್ತಾತ್ಪರ್ಯ, ಅಧ್ಯಾತ್ಮರಾಮಾಯಣಟೀಕೆ ಇವೇ ಮೊದಲಾದ ಅನೇಕ ಗ್ರಂಥಗಳನ್ನು ರಚಿಸಿ ಲೋಕೋಪಕಾರಮಾಡಿರುವುದಕ್ಕಾಗಿ ಕನ್ನಡನಾಡಿನ ಪ್ರಜೆಗಳು ಎಷ್ಟು ಕೃತಜ್ಞರಾಗಿರಬೇಕೋ! ಈ ಗ್ರಂಥಗಳನ್ನು ಮುದ್ರಿಸಿ ಪ್ರಚುರಮಾಡಲು ಅನುಮೋದಿಸಿ ಅಪ್ಪಣೆಯನ್ನು ದಯಪಾಲಿಸಿದ ಈಗಿನ ನಮ್ಮ ಮಹಾರಾಜರವರ ಉದಾರಾಶಯವನ್ನು ಎಷ್ಟು ವರ್ಣಿಸಿದರೂ ತೀರದು.

30—7—14
ಬೆಂಗಳೂರು.

ಮಂ. ಆ. ರಾ.

ನಾಟಕಕಥಾಕಲ್ಲೋಲಸೂಚಿ.

ಪ್ರಥಮಕಲ್ಲೋಲಂ—

ಪುಟಗಳು.

ಪ್ರಥಮತರಂಗಂ--ದುಷ್ಯಂತರಾಯನು ಮೃಗಯಾರ್ಥವಾಗಿ ಅರಣ್ಯಕ್ಕೆ ಬಂದನು. ೧- ೧೨

ದ್ವಿತೀಯತರಂಗಂ--ದುಷ್ಯಂತರಾಯನು ಕಣ್ವಾಶ್ರಮವಂ ಪ್ರವೇಶಿಸಿ ಶಕುಂತಲೆ ಮೊದಲಾದವರ ವಿಲಾಸಮಂ ನೋಡುತಿರ್ದನು. ೧೨- ೧೮

ತೃತೀಯತರಂಗಂ— ದುಷ್ಯಂತನು ಕಣ್ವಾಶ್ರಮದಲ್ಲಿ ಶಕುಂತಲೆ ಅನಸೂಯೆ ಪ್ರಿಯಂವದೆಯರಿಂ ಸಹಿತನಾಗಿ ಲತಾಮಂಟಪದಲ್ಲಿ ಸುಖದಿಂದಿರ್ದನು. ೧೯- ೨೪

ಚತುರ್ಥತರಂಗಂ— ದುಷ್ಯಂತನು ತನ್ನ ಸೇನಾಸಮೀಪಕ್ಕೆ ಬರುತಿರ್ದನು ೨೫- ೩೬

ದ್ವಿತೀಯಕಲ್ಲೋಲಂ—

ಪ್ರಥಮತರಂಗಂ--ದುಷ್ಯಂತರಾಯನು ವಿದೂಷಕನೊಡನೆ ಶಕುಂತಲೆಯ ಸೌಂದರ್ಯವರ್ಣನೆಯಂ ಗೆಯ್ಯುತಿರ್ದನು ... ೩೭- ೪೫

ದ್ವಿತೀಯತರಂಗಂ—ದುಷ್ಯಂತನು ವಿದೂಷಕನಂ ಪುರಕ್ಕೆ ಕಳುಹಿಸಿ ತಾನು ಕಣ್ವಾಶ್ರಮಕ್ಕೆ ಪೋದನು. ... ೪೬- ೫೨

ತೃತೀಯತರಂಗಂ—ಶಕುಂತಲೆಯು ವಿರಹಾತುರಳಾಗಿ ದುಷ್ಯಂತರಾಯಂಗೆ ಕಳುಹಿಸಲೋಸುಗ ಶ್ಲೋಕರಚನೆಯಂ ಗೆಯ್ಯುತಿರ್ದಳು. ೫೩- ೬೨

ಚತುರ್ಥತರಂಗಂ—ದುಷ್ಯಂತನು ಶಕುಂತಲೆಯಂ ಗಾಂಧರ್ವವಿವಾಹದಿಂ ವಿವಾಹಿತಳಂ ಮಾಡಿಕೊಂಡು ಅವಳನಗಲಿ ಚಿಂತೆಯೊಡಗೂಡಿ ತಪೋವನಕ್ಕೆ ರಾಕ್ಷಸನಿಗ್ರಹಾರ್ಥವಾಗಿ ಪೋಗಲಿಚ್ಛೈಸಿದನು. ೬೩- ೭೦

ತೃತೀಯಕಲ್ಲೋಲಂ—

ಪ್ರಥಮತರಂಗಂ—ಶಕುಂತಲೆಯು ಸರ್ವಾಲಂಕಾರಯುಕ್ತಳಾಗಿ ಪತಿಯಾದ ದುಷ್ಯಂತರಾಯನ ಪುರವಂ ಕುರಿತು ಪೋಗಲು ಸನ್ನದ್ಧಳಾದಳು ೭೧- ೮೫

ದ್ವಿತೀಯತರಂಗಂ—ಶಕುಂತಲೆಯು ಕಣ್ವಮುನಿಯಿಂ ಸಮಸ್ತ ಬುದ್ಧಿಮಾರ್ಗವಂ ತಿಳಿದು ಗೌತಮಿ, ಋಷಿಶಿಷ್ಯರಿಂ ಕೂಡಿ ಪ್ರತಿಷ್ಠಾನನಗರಾಭಿಮುಖಳಾಗಿ ಬಂದಳು. ... ೮೫- ೯೫

ತೃತೀಯತರಂಗಂ—ಶಕುಂತಲೆ, ಗೌತಮಿ, ಶಾರ್ಙ್ಗರವ, ಶಾರದ್ವತಋುಷಿಗಳು ದುಷ್ಯಂತಮಹಾರಾಯನಂ ಕಂಡರು ... ೯೬-೧೦೫

ಚತುರ್ಥತರಂಗಂ—ದುಷ್ಯಂತ, ಶಕುಂತಲೆಯರಿಗೆ ಸಲ್ಲಾಪ. ೧೦೬-೧೧೩

ಚತುರ್ಥಕಲ್ಲೋಲಂ—

ಪ್ರಥಮತರಂಗಂ—ದುಷ್ಯಂತರಾಯನಿಂದ ತಿರಸ್ಕಾರವಂ ಪಡೆದ ಶಕುಂತಲೆಯಂ ಸಾರಸಿಕೆಯೆಂಬ ಅಪ್ಸರೆಯು ಮೇನಕೆಯ ಸಮೀಪಕ್ಕೆ ತೆಗೆದುಕೊಂಡು ಪೋದಳು. ...೧೧೪-೧೨೨

ದ್ವಿತೀಯತರಂಗಂ—ದುಷ್ಯಂತರಾಯನು ವಿರಹದಿಂ ಉನ್ಮಾದಾವಸ್ಥೆಯಂ ಹೊಂದಿರಲು ಚತುರಿಕೆಯು ಶಕುಂತಲೆಯ ಭಾವಚಿತ್ರವಂ ತೆಗೆದುಕೊಂಡು ರಾಯನಹೊರೆಗೆ ಬಂದಳು. ...೧೨೩-೧೪೧

ತೃತೀಯತರಂಗಂ—ದುಷ್ಯಂತರಾಯನು ಮಾತಲಿ ತಂದ ಇಂದ್ರರಥಾರೋಹಣಂ ಗೆಯ್ದು ಸ್ವರ್ಗಕ್ಕೆ ಹೋಗಲುದ್ಯುಕ್ತನಾದನು. ೧೪೨-೧೫೬

ಚತುರ್ಥತರಂಗಂ—ದುಷ್ಯಂತರಾಯನು ಶಕುಂತಲೆಯಿಂದಲೂ ಮಗನಾದ ಸರ್ವದಮನನಿಂದಲೂ ಯುಕ್ತನಾಗಿ ಮಾತಲಿ ಸಮೇತಮಾದ ಇಂದ್ರರಥಾರೋಹಣಮಂ ಗೆಯ್ದು ಪ್ರತಿಷ್ಠಾನಪುರಕ್ಕೆ ಬಂದು ಸುಖದಿಂ ಪೃಥ್ವೀಸಾಮ್ರಾಜ್ಯಮಂ ಗೆಯ್ಯುತಿರ್ದನು. ೧೫೭-೧೮೫

REGISTRAR
OSMANIA UNIVERSITY.

ಶ್ರೀಕೃಷ್ಣರಾಜ ವಾಣೀವಿಲಾಸ ರತ್ನಾಕರ ವೆಂಬ

ಶಾಕುಂತಲನಾಟಕ ನವೀನಟೀಕೆ

ಮಂಗಳಾಚರಣೆಯ ಪದ್ಯಗಳು

ಶ್ರೀಮಚ್ಚಾಮುಂಡಿಕೆ ನೀಂ |
ಸೋಮೋದ್ಭಾಸಿತಕಿರೀಟಸುಂದರಿಯೆನಗು ||
ದ್ದಾಮಮನೋಮುದಮಂ ಸುರ |
ರಾಮಾರ್ಚಿತೆ ಕುಡು ಸುರಾಗರಾಜಿತಚರಣೇ ||೧||
ನೆಲಸಿ ಮಹಾಚಲಗಿರಿಯೊಳ್ |
ನಲವಿಂ ಸಲಹುವೆನು ಸೋಮಕುಲಜರನೆಂದೀ ||
ಛಲದಿಂದಿರುತಿಹೆಯೆನ್ನಯ |
ಕುಲದೇವತೆ ಕುವಲಯಾಕ್ಷಿ ಕುಡು ಶುಭತತಿಯಂ ||೨||
ಗಿರಿರಾಜಪುತ್ರಿಯಿಂ ಕೂ |
ಡಿರುತಾನತಜನಕೆ ವರವನೀಯುವೆನೆನುತುಂ ||
ಗರಪುರದೊಳ್ ನೆಲಸಿಹ ಪುರ |
ಹರಚರಣಾಂಬುಜಕೆ ನಮಿಪೆ ಭರದಿಂ ಶಿರದಿಂ ||೩||

ಸಂಸ್ಕೃತ|| ಶ್ರೀಚಾಮೇಂದ್ರಸುಶೀಲಧರ್ಮಮಹಿಷೀ ಶ್ರೀಕೆಂಪನಂಜಾಂಬಿಕಾ |
ಗರ್ಭಾಂಭೋಧಿಸುಧಾಕರೋ ನಿಜಯಶಸ್ಸಂಪೂರಿತಾಶಾಮುಖಃ ||
ಶ್ರೀಕೃಷ್ಣಕ್ಷಿತಿನಾಯಕಸ್ಸರಸಹೃನ್ಮೋದಾಯ ಬೋಧಾವಹಾಂ |
ಟೀಕಾಂ ಪ್ರಾಕೃತಭಾಷಯಾ ವಿತನುತೇ ಶಾಕುಂತಲಸ್ಯಾದರಾತ್ ||೪||

ನೀರುಮನುಳಿದು ಕ್ಷೀರವ |
ನಾರೈದುಣ್ಕೆ ಪೀರ್ವ ಹಂಸೆಯಂತೆ ಗುಣಜ್ಞರ್ ||
ಊರುತೆ ಮನಮಂ ಗುಣದೊಳು |
ದಾರದೋಷಮನೆ ತಿರ್ದಿ ಸಂತಸಗೊಳ್ವರ್ ||೫||

ಚಂಡಕರಮಂಡಲೋಚ್ಚಂಡ ತೇಜಃಪ್ರಕಾಂಡಕಾಂಡ ಷಂಡಖಂಡಿತಾಖಂಡ
ಶೌರ್ಯಪರಿಮಂಡಿತ ಭಂಡನೋದ್ದಂಡಾರಿಮಂಡಲ ಕಂಡೂಲದೋರ್ದಂಡ ಪಾಂಡಿತ್ಯ
ಪಾಂಡುರುಚಿಖಂಡಡಿಂಡೀರಪುಂಡರೀಕ ಪರಿಪಾಂಡುರಯಶಃಪಿಚಂಡಿಲ ಬ್ರಹ್ಮಾಂಡ
ಭಾಂಡೋದ್ಭಟಕಾಲಕೂಟ ಪ್ರತಿಭಟಕಟು ಕಪಟನಿಶಾಟಕೂಟಪಾಟನಲಂಪಟನಿಟಿಲಪು
ಟಘಟಿತವಿಕಟಕೃಪೀಟಯೋನಿಕುಟಿಲಮೋಹಾಂಧಕಾರಚ್ಛಟಾವಿಘಟನ ಪಟು ನಟನ್ಮ
ಹಾನಟಮುಕುಟತಟಪರ್ಯಟತ್ತಟಿನೀತಟಾಂತರಿಂಗದಭಂಗೋತ್ತುಂಗತರಂಗ ಸಂಗರ
ಭಂಗದಸಂಭ್ರಮೋಜ್ಜೃಂಭಮಾಣಗಂಭೀರವಾಗ್ಗುಂಭಸಂಭಾವಿತ ಗರನಗರವರನಿ
ಲಯ ಚಂದ್ರಚೂಡಚರಣಾರವಿಂದ ಸೇವಾಮರಂದನಿರಂತರನಿಷೇವಣ ಸ್ವಯಂವೃತ
ಕವಿತಾವಧೂರತ್ನ ರಾಜಾಧಿರಾಜಮಹಾರಾಜ ಶ್ರೀ ಚಾಮರಾಜೇಂದ್ರಪುತ್ರಾತ್ರೇಯ
ಸಗೋತ್ರ ಪವಿತ್ರಚರಿತ್ರ ಶಂಖಚಕ್ರಮಕರಮತ್ಸ್ಯಶರಭಸಾಳ್ವಗಂಡಭೇರುಂಡಧರ
ಣೀವರಾಹಹನೂಮದ್ಗರುಡಕಂಠೀರವಾದ್ಯನೇಕಬಿರುದಾಂಕಿತ ನರಪತಿಬಿರುದ ಬಿರು
ದಂತೆಂಬರ ಗಂಡ ಪ್ರತಾಪಮಾರ್ತಾಂಡ ಶ್ರೀಚಾಮುಂಡಿಕಾವರಪ್ರಸಾದಲಬ್ಧಮಹೀ
ಶೂರ ಮಹಾಸಂಸ್ಥಾನಮಧ್ಯದೇದೀಪ್ಯಮಾನ ಕುಲಕ್ರಮಾಗತದಿವ್ಯರತ್ನಸಿಂಹಾಸನಾ
ರೂಢೋಭಯಕವಿತಾವಿಚಕ್ಷಣ ಶ್ರೀ ಕೃಷ್ಣರಾಜಕಂಠೀರವರು–ಸಂತುಷ್ಟಹೃದಯ
ರಾಗಿ ಸರ್ವವಿಘ್ನೋಪಶಾಂತಿಗೋಸುಗ ಅನಿಷ್ಟನಿವೃತ್ತಿಪೂರ್ವಕ ಇಷ್ಟಪ್ರಾಪ್ತಿಗೋ
ಸುಗ ಗ್ರಂಥಾದಿಯಲ್ಲಿ ಸ್ವೇಷ್ಟದೇವತಾಪ್ರಾರ್ಥನೆಯಂ ಗೈದು–ಸಂತತಸಂಪೂಜಿತಪರ
ಶಿವಪದಾಂಭೋಜನಾದ ಭೋಜರಾಜನಂ, ಕಾಳಿಕಾಚರಣದಾಸನಾದ ಕಾಳಿದಾಸನಂ,
ವಿದ್ಯಾಲತೆಗೆ ಆಶ್ರಯದಂಡನಾದ ದಂಡಿಯಂ, ಸರಸ್ವತೀಕೃಪಾಲಬ್ಧ ಸಮಸ್ತವಿದ್ಯಾ
ವಿಭೂತಿಯುಳ್ಳ ಭವಭೂತಿಯಂ, ಕವಿಮನೋಭೀಮನಾದ ಭೀಮನಂ, ಕವಿತಾವನಿ
ತಾಪಂಚಬಾಣನಾದ ಬಾಣನಂ, ಇನ್ನು ಮಾಘಮಯೂರ ಮೊದಲಾದ ಸುಕವಿಸಮು
ದಾಯಮಂ ಭಕ್ತಿಯಿಂ ಮನದೊಳ್ ವಂದಿಸಿ ಗುಣದೋಷಂಗಳಂ ತಿಳಿಯದೆ ಉಪಮಾ
ನೋಲ್ಲೇಖ ಮೊದಲಾದ ಕವಿತಾಚಮತ್ಕಾರವನ್ನರಿಯದೆ ಮುಳ್ಳುಗಿಡಕ್ಕೆ ಮುಖ
ವನ್ನಿಕ್ಕುವ ಒಂಟೆಗಳಂತೆ ಗುಣದಲ್ಲಿ ಬುದ್ಧಿಯನ್ನಿರಿಸದೆ ದೋಷೈಕದೃಷ್ಟಿಗಳಾಗಿರುತ್ತ,
ಅನ್ಯಪುತ್ರರಂ ನೋಡಿ ಅಸೂಯೆಯಂ ಕೊಳ್ಳುವ ವಂಧ್ಯಜನರುಗಳಂತೆ ತಾವು ಕವಿತ್ವ
ವಂ ಮಾಡುವುದಕ್ಕೆ ತ್ರಾಣವಿಲ್ಲದೆ ಇದ್ದರೂ ಪರಗ್ರಂಥಗಳಂ ನೋಡಿ ಸಂತಾಪಂ
ಗೊಳುತಲಿರುವ ಕುಕವಿಗಳಂ ನಿರಾಕರಿಸಿ–ನ್ಯಾಯಮೀಮಾಂಸವ್ಯಾಕರಣವೇದಾಂತ
ವೈದ್ಯಜ್ಯೋತಿಷಗಳೆಂಬ ಶಾಸ್ತ್ರಾಂಬುಧಿಯ ತೀರವಂ ಸೇರಿ ಕಾವ್ಯನಾಟಕಾಲಂಕಾರ
ಮೊದಲಾದ ಕಲಾಕಲಾಪಾಲಂಕೃತರಾಗಿ ದಿನದಿನಪ್ರಬಂಧನಿಬಂಧನಧುರೀಣರಾಗಿ

ಗುಣೈಕಪಕ್ಷಪಾತಿಗಳಾಗಿ ನಿರ್ಮಲಾಂತಃಕರಣವುಳ್ಳ ವಿದ್ವಾಂಸರಂ ನಾನು ಪೇಳ್ವ ಕೃತಿಯಲ್ಲಿ ಪದಾರ್ಥಗತದೋಷಗಳೇನಿದ್ದರೂ ತಿದ್ದಿ ಈಕೃತಿಯಂ ಜಗದ್ವಿಖ್ಯಾತವಂ ಮಾಳ್ಪುದೆಂದು ವಿನಯಪರರಾಗಿ ಬೇಡಿಕೊಂಡು - ಈಗ್ರಂಥಕ್ಕೆ ಕೃಷ್ಣರಾಜವಾಣೀವಿಲಾಸರತ್ನಾಕರವೆಂದು ನಾಮಾಂಕಿತವಂ ಗೈದು—ಸರಸಜನಾನಂದಕರಮಾಗುವಂತೆ ಲೋಕೋಪಕಾರಾರ್ಥಮಾಗಿ ನವರಸಭರಿತಮಾಗಿ ದುಷ್ಯಂತಶಕುಂತಳಾಕಥಾಸಂದರ್ಭಗರ್ಭಿತಮಾಗಿ ಕವಿಸಾರ್ವಭೌಮ ಕಾಳಿದಾಸವಿರಚಿತವಾದ ಶಾಕುಂತಲವೆಂಬ ನಾಟಕವಂ ಕರ್ಣಾಟಕಭಾಷೆಯಿಂ ವಚನಕಾವ್ಯವಂ ರಚನೆಗೆಯ್ಯುವರು.

ಯಾವ ಸುರಾಸುರವಂದ್ಯನಾದ ಪರಮೇಶ್ವರನು ಬ್ರಹ್ಮನ ಆದಿಸೃಷ್ಟಿಯಾದ ಜಲಮಯತನುವಿನಿಂದಲೂ, ಮಂತ್ರಪೂರ್ವಕವಾಗಿ ದೇವತೋದ್ದೇಶ್ಯಮಾಗಿ ಹೋಮವಂ ಗೈವ ಹವಿಸ್ಸಂ ವಹಿಸುತಿರುವ ಅಗ್ನಿರೂಪಮೂರ್ತಿಯಿಂದಲೂ, ಯಜ್ಞಾಧಿಕಾರಿಯಾದ ಯಜಮಾನರೂಪವಿಗ್ರಹದಿಂದಲೂ, ದಿವಾರಾತ್ರಿಗಳೆಂಬ ಕಾಲಂಗಳಂ ನಿರ್ಮಿಸುತಿರುವ ಸೂರ್ಯಚಂದ್ರರೂಪಂಗಳಾದ ಕಾಯಂಗಳಿಂದಲೂ, ಶಬ್ದಗುಣಕರವಾಗಿ ಸಮಸ್ತಪ್ರಪಂಚವಂ ವ್ಯಾಪಿಸಿರುವ ಆಕಾಶರೂಪವಾದ ದೇಹದಿಂದಲೂ, ಸಕಲಜನಕ್ಕೂ ಆಧಾರಮಾಗಿರುವ ಭೂರೂಪವಾದ ಶರೀರದಿಂದಲೂ, ಸಮಸ್ತಪ್ರಾಣಿಗಳಿಗೂ ಪ್ರಾಣರೂಪವಾದ ವಾಯುರೂಪಗಾತ್ರದಿಂದಲೂ— ಈಪ್ರಕಾರಂಗಳಾಗಿ ಲೋಕವೇದಪ್ರಸಿದ್ಧಂಗಳಾದ ಅಷ್ಟಮೂರ್ತಿಗಳಿಂ ಯುಕ್ತನಾಗಿರುವನೋ ಆಸದಾಶಿವನು ನಮ್ಮಂ ರಕ್ಷಿಸಲಿ! ಎಂದು ನಾಂದೀಶ್ಲೋಕದಲ್ಲಿ ಕವಿಯು ಈಶ್ವರಪ್ರಾರ್ಥನೆಯಂ ಗೈದು ಆದುಷ್ಯಂತರಾಯನ ಕಥೆಯಂ ವರ್ಣಿಸುವದೆಂತೆನೆ:—

ಲವಣೇಕ್ಷುಸುರಾಸರ್ಪಿರ್ದಧಿಕ್ಷೀರಜಲಂಗಳೆಂಬ ಸಪ್ತಸಮುದ್ರಂಗಳಲ್ಲಿ ಮೊದಲನೆಯದಾದ ಲವಣಸಮುದ್ರದಿಂ ಸುತ್ತುವರಿಯಲ್ಪಟ್ಟು, ಜಂಬೂ ಕುಶ ಕ್ರೌಂಚ ಶಾಕ ಶಾಲ್ಮಲಿ ಪುಷ್ಕರಂಗಳಲ್ಲಿ ಮೊದಲನೆಯದಾದ ಜಂಬೂದ್ವೀಪದಲ್ಲಿ ಅಂಗವಂಗ ಕಳಿಂಗ ತ್ರಿಲಿಂಗ ಕಾಂಭೋಜ ಲಾಟ ಮರಾಟ ಬಂಗಾಳ ನೇಪಾಳ ಮಳೆಯಾಳ ಕೇರಳ ಸಿಂಹಳ ಕೇಕಯ ಕಾಶ್ಮೀರಾಂಧ್ರ ಪಾರಸೀಕ ಮೊದಲಾದ ದೇಶಗಳೆಂಬ ಕಮಲಕ್ಕೆ ಕರ್ಣಿಕಾಯಮಾನವಾಗಿ, ಸಮಸ್ತ ಸೌಖ್ಯಂಗಳಿಗೂ ಆಶ್ರಯಮಾಗಿ, ಅಷ್ಟಲಕ್ಷ್ಮಿಯರಿಗೆ ಜನ್ಮಭೂಮಿಯಾಗಿ, ಗಂಗಾಯಮುನಾಸಂಗಮಮಧ್ಯದಲ್ಲಿ ಪ್ರತಿಷ್ಠಾನಪಟ್ಟಣವು ಪ್ರಕಾಶಿಸುತ್ತಿರುವುದು.

ಗೀರ್ವಾಣರು ಆ ಪಟ್ಟಣದ ಸೌಂದರ್ಯವಂ ನೋಡಲೋಸುಗ ಅನಿಮಿಷತ್ವವಂ ಪಡೆದುದು ಸಾಲದೆ ಈಗಲೂ ಸಹಸ್ರನಯನನ ಪ್ರಾರ್ಥನೆಯಂ ಮಾಡಿ ಬಳಲುತ್ತಿರುವರು. ರಾಹುಕೇತುಗಳು ಗಗನವಂ ವ್ಯಾಪಿಸಿರುವ ಆ ಪುರದ ಚಂದ್ರಶಾಲೆಗಳಲ್ಲಿ ಕಟ್ಟಿರುವ ಗುಂಡುಗನ್ನಡಿಗಳಂ ನೋಡಿ ಸೂರ್ಯಚಂದ್ರರೆಂಬ ಭ್ರಾಂತಿಯಿಂದ ಪರ್ವಕಾಲಂಗಳಲ್ಲಿ ಅವಂ ತುಡುಕುಲಿಚ್ಛೈಸುತ್ತಿರುವರು. ಮತ್ತು ಪೋಷಿತಮಯೂರಂಗಳು ಆಪುರದ ಉಪ್ಪರಿಗೆಗಳಲ್ಲಿ ಒಪ್ಪುತ್ತಿರುವ ಇಂದ್ರನೀಲಕಾಂತಿಪುಂಜವಂ ಅದರ ನಡುವೆ ಪಾದಸರ ಗಗ್ಗರ ಮೊದಲಾದ ಭೂಷಣಂಗಳ ಧ್ವನಿಯಿಂ ಕೂಡಿ ಮಿಂಚಿನ ಬಳ್ಳಿಗಳಂತೆ ಸಂಚರಿಸುವ ಚಂಚಲಾಕ್ಷಿಯರಂ ಅವರ ಮುಖಚಂದ್ರಕಾಂತಿಯಿಂ ಚಂದ್ರಕಾಂತಶಿಲೆಗಳಿಂ ಪೊಱಮಡುವ ಜಲಬಿಂದುಸಂದೋಹವಂ ಸಹ ಕಂಡು ವರ್ಷಾಕಾಲದ ಮೇಘೋದಯವಾಯಿತೆಂದು ಹರ್ಷಪರವಶಂಗಳಾಗಿ ಕೇಕಾಧ್ವನಿಯಂಗೆಯ್ಯುತ ಗಱಿಗಳಂ ಕೆದಱಿ ಕತ್ತುಗಳನ್ನೆತ್ತಿ ಸುತ್ತಲೂ ನೋಡುತ ನಾಟ್ಯವಂ ಗೆಯ್ಯುತ್ತಿರುವುವು. ಮತ್ತಂ ಆ ಪುರದ ಅಷ್ಟದಿಕ್ಕುಗಳಲ್ಲಿ ಬ್ರಾಹ್ಮಣಶ್ರೇಷ್ಠರುಗಳಿಂ ವಿರಚಿಸಲ್ಪಟ್ಟ ರಾಜಸೂಯ ವಾಜಪೇಯ ಪೌಂಡೀರಕ ಮೊದಲಾದ ಯಜ್ಞಗಳ ಶಾಲೆಗಳಿಂ ಪೊಱಮಡುವ ಧೂಮರಾಜಿಯು ಹವಿರ್ಭಾಗವಂ ಕೊಳ್ಳಲೋಸುಗ ಭೂಲೋಕಕ್ಕೆ ಬರುವ ಇಂದ್ರಾದಿ ದೇವಸಮುದಾಯಕ್ಕೆ ಇಂದ್ರನೀಲಸೋಪಾನವಂ ಗೈದಿರುವುದೋ ಎಂಬ ಶಂಕೆಯನ್ನುಂಟುಮಾಡುತ್ತ ಅಂಬರತಲವನ್ನವಲಂಬಿಸುತ್ತಿರಲದಂ ಕಂಡು ಚಾತಕಪಕ್ಷಿಗಳು ಮೇಘವೆಂಬ ಭ್ರಾಂತಿಯಿಂ ಬೆಂಬಿಡದೆ ಹಂಬಲಿಸುತ್ತ ಪೋಗಿ ಆ ಧೂಮ ಸೋಂಕಿದ ಅಂಬರದಲ್ಲಿರ್ದ ಸುರನಿತಂಬಿನಿಯರ ಕಂಬನಿಗಳಂ ಜಲಬಿಂದುಗಳೆಂದು ಪಾನವಂ ಗೈದು ಬೇಸಱಿದೆ ಆಸೆ ತೀರದೆ ಸಂಚರಿಸುತ್ತಿರುವುವು. ಮತ್ತು ಆಪುರದ ಲಕ್ಷ್ಮಿಯು ಧರಿಸಿದ ಒಡ್ಯಾಣವೋ ಎಂಬಂತೆ ವಿರಾಜಿಸುತ್ತಿರುವ ಅಗಳಿನಿಂದಲೂ, ಪುರದ ಸೌಭಾಗ್ಯವಂ ನೋಡುವೆನೆಂದು ಪಾತಾಳದಿಂ ಬಂದು ಶಿರವನ್ನೆತ್ತಿರುವ ಆದಿಶೇಷನ ಫಣೆಗಳೋ ಎಂಬಂತೆ ರಾಜಿಸುತ್ತಿರುವ ರತ್ನಮಯವಾದ ಕೋಟೆಯ ತೆನೆಗಳಿಂದಲೂ, ಸಾವಿರಾರು ಫಿರಂಗಿಗಳಿಂದ ಪರಿಶೋಭಿಸುತ್ತ ಒತ್ತಾಗಿ ಬಿಗಿದಿರುವ ವಜ್ರಶಿಲೆಗಳಿಂ ಚಿತ್ರರಂಗಳಾಗಿ ಉತ್ತಮಂಗಳಾದ ಅಗಣಿತವಾದ ಕೊತ್ತಲಂಗಳಿಂದಲೂ ಅಲಂಕೃತಮಾಗಿರುವುದು.

ಆಪುರದ ಒಂದು ಸ್ಥಾನದಲ್ಲಿ ಅನೇಕರಾದ ರಾಜಪುತ್ರರು ಹಾರ ಕಂಕಣ ಕೇಯೂರ ಮೊದಲಾದ ಆಭರಣಂಗಳಂ ಧರಿಸಿ, ಮದ್ದಾನೆಗಳ ಮಸ್ತಕಂಗಳಲ್ಲಿ ಕುಳಿತು, ಅಶ್ವಾರೋಹಣವಂ ಗೈದು, ಕೆಲವರು ರಥವನ್ನೇಱಿ ಜಯಂತನಂ ಜರೆ

ಯುತ, ನಳಕೂಬರನಂ ನಾಚಿಸುತ, ವಾಜಿಗಳ ರಾಜಿಗಳಿಂ ಪರಿವೃತರಾಗಿ, ನೋಳ್ಪರಿಗೆ ಸೋಜಿಗವಂ ಪುಟ್ಟಿಸುತಿಹರು.

ಮತ್ತೊಂದು ಸ್ಥಾನದಲ್ಲಿ ವರ್ತಕರು ಬೀದಿಬೀದಿಗಳಲ್ಲಿ ನವರತ್ನರಾಶಿಗಳಂ ಅನೇಕ ದ್ರವ್ಯಸಮೂಹವಂ ಇದಿರೊಳಿರಿಸಿ ಬಹುಜನ ಕುಬೇರರುಗಳು ಈಪುರದಲ್ಲಿರುವರೋ ಎಂಬಂತೆ ಶಂಕೆಯನ್ನುಂಟುಮಾಡುತಿರುವರು.

ಮತ್ತೊಂದೆಡೆಯಲ್ಲಿ ಮಾಲೆಗಾರ್ತಿಯರು ತಮ್ಮ ಕಣ್ಣುಗಳಂ ತೇಲಿಸುವುದರಿಂದಲೇ ಮುಖವಂ ಸೋಲಿಸುವರೋ ಎಂಬಂತೆ ಕೊಂಕುಗೂಡಿದ ಕೊನೆ ಹುಬ್ಬುಗಳಿಂ ಯುಕ್ತರಾಗಿ,-ಪುಷ್ಪಂಗಳು ಕಾಮನಿಗೆ ಶರಂಗಳಾಗಿ ನಾರಿಯರಾದ ಎಮ್ಮ ಹೃದಯಂಗಳಂ ಸೂರೆಗೊಳ್ಳುತಿರುವುವಾದ್ದರಿಂದ ಇವಂ ಬಂಧಿಸಿ ಬೀದಿಗಳಲ್ಲಿ ತುಂಡುಗೈದು ಮಾರದೆ ಬಿಡುವೆವೇ ಎಂಬ ಕ್ರೋಧದಿಂದಲೋ ಎಂಬಂತೆ ಕರಕಂಕಣಂಗಳ ಝಣತ್ಕಾರಗಳುಂಟಾಗುವಂತೆ ಅವಂ ಬಂಧಿಸುತ್ತ, ಪೂಗೊಳಲು ಬಂದ ವಿಟಪುರುಷರಂ ತಮ್ಮ ಕಡೆಗಣ್ಣ ಕುಡಿನೋಟಗಳಿಂ ನೋಡಿ ಸವಿನುಡಿಗಳಂ ನುಡಿಯುತ್ತ, ಜಾರಿದ ಸೆರಗಂ ಬಾರಿಬಾರಿಗೂ ಮೇಲಕ್ಕೆ ಸೇರಿಸುತ್ತ, ತಮ್ಮ ಸೊಗಸುಗಳನ್ನೇ ಬೀರಿ, ಪೂಸರವನ್ನೀಯದೆ ದ್ರವ್ಯಾಕರ್ಷಣವಂ ಗೈಯುತ್ತಿರುವರು.

ಮತ್ತೊಂದು ದಿಕ್ಕಿನಲ್ಲಿ ವೇದವೇದಾಂತ ಮೀಮಾಂಸಾದಿ ಶಾಸ್ತ್ರಂಗಳ ನೆಲೆಗಳಂ ತಿಳಿದು ಅನೀಶ್ವರ ಅನೇಕೇಶ್ವರ ವಾದಿಗಳಾದ ಬೌದ್ಧಚಾರ್ವಾಕರ ಮತ ಸಿದ್ಧಾಂತವಂ ಖಂಡಿಸುತ, ಸಮಸ್ತ ಶಾಸ್ತ್ರಾರ್ಥಂಗಳಂ ತಮ್ಮ ತಮ್ಮ ಶಿಷ್ಯರಿಗೆ ಬೋಧಿಸುತ, ಸತ್ಕರ್ಮಾನುಷ್ಠಾನಪರರಾಗಿ, ತೇಜೋಮಯರಾಗಿ, ಸ್ವಾಶ್ರಮಧರ್ಮಂಗಳನ್ನತಿಕ್ರಮಿಸದೆ ಇರುವ ಬ್ರಾಹ್ಮಣಶ್ರೇಷ್ಠರುಗಳಿಂ ನಿಬಿಡಿತಮಾಗಿರುವುದು.

ಮತ್ತೊಂದು ದೆಸೆಯಲ್ಲಿ ವೇಶ್ಯಾಂಗನೆಯರು ಮನ್ಮಥಮಾಯಾವಿದ್ಯೆಯೇ ಬಹುರೂಪವಂ ತಾಳಿರುವುದೋ ಎಂಬಂತೆ ಪೊಳೆಯುತ, ಹಾರ ಪದಕಂಕಣ ತೋಳ್ಬಳೆ ಮೊದಲಾದ ಆಭರಣಗಳಂ ಧರಿಸಿ, ತಮ್ಮ ಅಂಗಸೌಂದರ್ಯವು ಒಂದು ಮಟ್ಟಾಗಿ ಹೊರಸೂಸುವಂತೆ ನಯವಾದ ಸೀರೆಗಳನ್ನುಟ್ಟು, ಗಂಟಿನಿಂದ ಊಹಿಸುವುದಕ್ಕೆ ಯೋಗ್ಯವಾದ ಕುಪ್ಪಸವಂ ತೊಟ್ಟು, ಒತ್ತಿನಲ್ಲಿರುವ ಬಿತ್ತರಿಯರ ಕೈಗಳಿಂದ ವೀಳ್ಯದೆಲೆಯ ಮಡಿಪುಗಳಂ ಮಡಿಸಿಕೊಳ್ಳುತ ಬಂದು, ಪವಳದ ಕಂಭಗಳಿಂದಲಂಕೃತವಾದ ವಜ್ರದ ಮೊಗಸಾಲೆಯಲ್ಲಿ ನಿಂತು, ಬೀದಿಯಲ್ಲಿ ಬರುವ ಸೊಗಸುಗಾರರಾದ ವಿಟ ವಿದೂಷಕ ಪೀಠಮರ್ದಕ ನಾಗರಿಕ ಮೊದಲಾದ ವಿಟಪುರುಷರುಗಳಂ ತಮ್ಮ

ಕಣ್ಣುಸನ್ನೆಗಳಿಂದ ಕರೆದು. ಸಖಿಯರಂ ಕುರಿತು–“ ಎಲೌ ಬಾಲೆಯರುಗಳಿರಾ, ಈರಾತ್ರಿಯಲ್ಲಿ ಸವಿನುಡಿಗಳಂ ನುಡಿಯುವುದಕ್ಕೆ, ಸಂಗೀತವಂ ಕೇಳುವುದಕ್ಕೆ, ಆಲಿಂಗನವಂ ಗೆಯ್ಯುವುದಕ್ಕೆ, ರತಿಜಮತ್ಕಾರಮುಂ ತೋರಿಸುವುದಕ್ಕೆ, ಎಷ್ಟೆಷ್ಟು ದ್ರವ್ಯವಂ ಒತ್ತೆಗೊಡುವರು ಅದಂ ಮೊದಲೊಳು ವಿಚಾರಿಸಿ” ಎಂದು ದೂತಿಯರಿಗೆ ಪೇಳುತ್ತಿರುವರು. ಇನ್ನು ಕೆಲವು ವೃದ್ಧವೇಶಿಯರು ಯೌವನದಿಂ ಕೊಬ್ಬಿರುವ ತಮ್ಮ ಪುತ್ರಿಯರಂ ಕುರಿತು, “ ಎಲೌ ಬಾಲೆಯರುಗಳಿರಾ, ನೀವು ಉಬ್ಬಿ ಬರುವ ಪ್ರಾಯವಂ ತಾಳಲಾರದೆ ದ್ರವ್ಯದಲ್ಲಿ ಆಸೆಯಿಲ್ಲದೆ ಮುಂಬರಿದು ಬಂದ ಕಾಮುಕರುಗಳಿಗೆ ಕಾಯುವನ್ನೀಯುವುದು ನ್ಯಾಯವಲ್ಲ; ಬ್ರಹ್ಮ ವಿಷ್ಣು ಮೊದಲಾದ ದಿಕ್ಪತಿಗಳು ಬಂದರೂ ಅವರ ಐಶ್ವರ್ಯಕ್ಕೂ ರೂಪಿಗೂ ಗುಣಕ್ಕೂ ವಿದ್ಯೆಕ್ಕೂ ಮನಸೋಲದೆ ಉಕ್ಕಿಬರುವ ಮೋಹವಂ ತಡೆಗೈದು ವೇಶ್ಯಾಧರ್ಮವಂ ಮೀರದೆ ದ್ರವ್ಯಾಕರ್ಷಣೋಪಾಯದಲ್ಲಿ ಮನವನ್ನಿಟ್ಟು ಅವರಿಗೆ ಕಾತರವಂ ಪುಟ್ಟಿಸಿ, ನಿಮ್ಮಂ ಕಾಣದಿರಲು–ಎನ್ನ ಪ್ರಾಣಗಳು ತ್ರಾಣಗೆಡುವುವು, ಯಾವಾಗಲು ಎನ್ನಮನವು ನಿನ್ನಸಂಗವನ್ನೇ ಬಯಸುವುದೆಂದು ಅವನ ಶಿರವಂ ಪಿಡಿದು ಭಾಷೆಯಂಗೈದು, ನಂಬಿಗೆಯಂ ಪುಟ್ಟಿಸಿ, ಮೋಹಸಮುದ್ರದೊಳ್ಮುಳುಗಿಸಿ, ಅವನಲ್ಲಿರುವ ಯಾವದ್ವಿತ್ತವನ್ನಪಹರಿಸಿ ದರಿದ್ರನಾದನೆಂಬುದಂ ತಿಳಿದು ಮನೆಯ ಬಾಗಿಲಿಗೆ ಬಾರದಂತೆ ಗೌಡಿಯರಿಂ ಓಡಿಸುವ ರೀತಿಯುಂ ಮಾಡಬೇಕು. ಎಲೌ ಕೋಮಲಾಂಗಿಯರುಗಳಿರಾ, ನಿಮ್ಮ ಯೌವನವು ನೀರುಗುಳ್ಳೆಯಂತೆ ನಿತ್ಯವಲ್ಲವಾದಕಾರಣ ಯಾವ ಪುರುಷನು ಅಧಿಕದ್ರವ್ಯವಂ ಕೊಡುವನೋ ಅವನೇ ದೇವರು, ಅವನೇ ಪ್ರಿಯನಾಯಕನು, ಅವನೇ ಸಕಲಗುಣವುಳ್ಳವನೆಂದು ಸಮುಸ್ತೋಪಚಾರವಂಗೈದು ಸಂತೋಷವಂ ಸಲಿಸಬೇಕು” ಎಂದು ತಮ್ಮ ಪುತ್ರಿಯರಿಗೆ ವೇಶ್ಯಾನೀತಿಯುಂ ಬೋಧಿಸುತ್ತಿರುವರು.

ಮತ್ತು ಆ ಪುರದಲ್ಲಿರುವ ಸಮಸ್ತ ಜನಗಳು ಧನಧಾನ್ಯ ಪುತ್ರಪೌತ್ರ ಸಮೃದ್ಧಿಯಂ ಪಡೆದು, ಆಚಾರಪರರಾಗಿ ಅಸತ್ಯವನ್ನಾಚರಿಸದೆ, ಸ್ವಜಾತಿಧರ್ಮಂಗಳನ್ನತಿಕ್ರಮಿಸದೆ, ವಿಪತ್ತುಗಳೆಂಬುದಂ ಸ್ವಪ್ನದಲ್ಲಿಯೂ ಅರಿಯದೆ, ಪ್ರಭುವಾದವನಲ್ಲಿ ಭಯಭಕ್ತಿಯುಕ್ತರಾಗಿ, ಪ್ರಭುವಿನ ಶ್ರೇಯಸ್ಕಾಮಿಗಳಾಗಿ, ಪಾಪಭೀತರಾಗಿ, ಪರಸ್ತ್ರೀಪರದ್ರವ್ಯಂಗಳನ್ನೊಂದುವೇಳೆಯಾದರೂ ಕಣ್ಣೆತ್ತಿ ನೋಡದೆ, ನಿರಂತರದಲ್ಲಿಯೂ ಸಂತುಷ್ಟಹೃದಯರಾಗಿರುವರು.

ಇಂತು ಸರ್ವಸೌಖ್ಯಸಂಪೂರ್ಣವಾದ ಅಪ್ರತಿಷ್ಠಾನಪುರವನ್ನಾಳ್ವ ಇಳ್ವಲ ರಾಜಪುತ್ರನಾದ ದುಷ್ಯಂತರಾಯನು ಸತ್ಯಸ್ವರೂಪನಾಗಿ ಧರ್ಮೈಕನಿರತನಾಗಿ

ಪ್ರಜಾರಂಜಕನಾಗಿ ಆಜಾನುದೀರ್ಘಬಾಹುವಾಗಿ ಚತುಸ್ಸಮುದ್ರ ಮುದ್ರಿತವಾದ ಭೂಮಂಡಲವಂ ತನ್ನ ಭುಜಬಲದಿಂದಾಕ್ರಮಿಸಿ ಆಳುತ್ತ, ಪುಣ್ಯಕ್ಷೇತ್ರಂಗಳಲ್ಲಿ ಅನೇ ಕಾಶ್ವಮೇಧರಾಜಸೂಯಯಾಗಂಗಳಂ ಮಾಡಿ ಸ್ವರ್ಗಮರ್ತ್ಯಪಾತಾಳಂಗಳಂ ತನ್ನ ಕೀರ್ತಿಯಿಂದ ಶುಭ್ರವರ್ಣಂಗಳಂ ಮಾಡುತ್ತ, ದಯೆ ದಾಕ್ಷಿಣ್ಯ ಧೈರ್ಯೌದಾರ್ಯಗಾಂ ಭೀರ್ಯಮಾಧುರ್ಯಸ್ಥೈರ್ಯಶೌರ್ಯಸೌಹಾರ್ದ ಸೌಕುಮಾರ್ಯಮಾರ್ದವಾರ್ಜವ ಮೊದ ಲಾದ ಅನಂತಕಲ್ಯಾಣಗುಣಗಣಕ್ಕೆ ಜನ್ಮಭೂಮಿಯಾಗಿ, ಜಿತೇಂದ್ರಿಯನಾಗಿ, ಪಾಪಭೀತನಾಗಿ, ಪುಣ್ಯಚರಿತ್ರನೆನಿಸಿ, ತರ್ಕವೇದಾಂತ ಧರ್ಮಶಾಸ್ತ್ರ ಮೊದಲಾದ ವಿದ್ಯಾವಿಶಾರದನಾಗಿ, ನ್ಯಾಯಮಾರ್ಗವಂ ಬಿಡದೆ, ಪೂಜ್ಯರಿಗೆ ಅವಮಾನವಂ ಗೆಯ್ಯದೆ ದುಷ್ಟರಿಗೆ ಪೂಜ್ಯತೆಯನ್ನೀಯದೆ, ನಿರಪರಾಧಿಗಳಂ ದಂಡಿಸದೆ, ತಪ್ಪಿಗೆ ತಕ್ಕಶಿಕ್ಷೆಯಂ ಗೈಯುತ್ತ, ಮುಖಕೆ ತಾಂದರೂ ಅನೃತವನ್ನಾಡದೆ, ಏನು ಕಾರ್ಯವಿದ್ದರೂ ರಾಜಕಾರ್ಯಗ ಳಂ ಜಾಗರೂಕನಾಗಿ ನೋಡುತ್ತ, ಆಪ್ತರಾದ ಗೂಢಚಾರರ ಮುಖದಿಂ ತನ್ನ ರಾಜ್ಯ ಪರರಾಜ್ಯ ಶತ್ರುಮಿತ್ರರುಗಳ ವೃತ್ತಾಂತವಂ ತಿಳಿದು, ಅದಂ ಚೆನ್ನಾಗಿ ಪರಿಶೋಧಿಸಿ ಸಿಕ್ಷೆಯುವಂ ಗೆಯ್ಯುತ, ಕಾರ್ಯವಿಲ್ಲದೆ ಬಹುವಾಕ್ಯಗಳನ್ನಾಡದೆ, ತನ್ನ ಪ್ರಾಣಕ್ಕಿಂ ತಲೂ ಹೆಚ್ಚಾಗಿ ಮಂತ್ರಗೋಪನವಂ ಗೆಯ್ಯುತ, ಕುಲಕ್ರಮಾಗತನಾದ ಸ್ವಾಮಿಕಾ ರ್ಯೈಕನಿರತನಾದ ಪ್ರಜಾಸಮ್ಮತನಾದ ನೀತಿಶಾಸ್ತ್ರಜ್ಞನಾದ ಪಾಪಭೀತನಾದ ಮಂತ್ರಿಗೆ ಸಮ್ಮತನಾಗಿ, ತನ್ನ ವೈದ್ಯರಲ್ಲಿ ಸೇನೆಯಲ್ಲಿ ಸ್ತ್ರೀಯರಲ್ಲಿ ಭೋಜನದಲ್ಲಿ ಸೇವಕರಲ್ಲ ಶತ್ರುಗಳಲ್ಲಿ ತಾಂ. ಊಲಪಾನೀಯಪದಾರ್ಥಂಗಳಲ್ಲಿ ದಾಯಾದರಲ್ಲಿ ಎಚ್ಚರವುಳ್ಳವನಾಗಿ, ಸಾಮದಾನಭೇದದಂಡಮಾಯೋಪೇಕ್ಷೇಂದ್ರಜಾಲಂಗಳೆಂಬ ಸಪ್ತೋಪಾಯಂಗಳಂ ತಿಳಿದು, ಸ್ವಬಲ ಪರಬಲದ ಪರಿಯನ್ನರಿಯುತ್ತ, ಸಂಧಿ ವಿಗ್ರಹ ಯಾನಾಸನಾಸನದ್ವೈಧೀಭಾವಸಮಾಶ್ರಯಂಗಳೆಂಬ ಷಡ್ಗುಣಸಂಪನ್ನನಾಗಿ ಕ್ಷಯಸ್ಥಾನವೃದ್ಧಿಗಳೆಂಬ ವರ್ಗತ್ರಯವನ್ನರಿತು, ಪ್ರಭುಶಕ್ತಿ ಉತ್ಸಾಹಶಕ್ತಿ ಮಂತ್ರಶಕ್ತಿಗಳೆಂಬ ಶಕ್ತಿತ್ರಯದಿಂ ಯುಕ್ತನಾಗಿ, ಜಲದುರ್ಗಸ್ಥಲದುರ್ಗಭೂದುರ್ಗ ಮೊದಲಾದ ದುರ್ಗಭೇದಂಗಳ ನೆಲೆಯಂ ತಿಳಿದು, ಕಾಲದೇಶವರ್ತಮಾನಂಗಳ ಮೂಲ ವಂ ಪರಿಶೋಧಿಸಿ, ಶತ್ರುಗಳಂ ಜಯಿಸುತ್ತ, ಬ್ರಾಹ್ಮಣ ಮೊದಲಾದ ವರ್ಣಗಳಿಗೆ ಸಾಂ ಕರ್ಯವುಂಟಾಗದಂತೆ ಪ್ರಜಾಪಾಲನೆಯಂ ಗೆಯ್ಯುತ, ಪರಶಿವನಂತೆ ಆರ್ಯಾನುರಕ್ತ ನಾಗಿ, ಕೃಷ್ಣನಂತೆ ಸತ್ಯಭಾಮಾಯುಕ್ತನಾಗಿ, ಬ್ರಹ್ಮನಂತೆ ಸರಸ್ವತೀವಿಲಾಸಾ ಸ್ಪದನಾಗಿ, ಇಂದ್ರನಂತೆ ಸುಮನಸ್ಸಂತೋಷಕರನಾಗಿ ಗುರುವಾಕ್ಯಾನುಸಾರಿಯೆ ನಿಸಿ, ಅಗ್ನಿಯಂತೆ ಶುಚಿಯಾಗಿ, ಯಮನಂತೆ ದಂಡಧಾರಿಯಾಗಿ, ನಿಋತಿಯಂತೆ

ಪುಣ್ಯಜನಪರಿವೃತನಾಗಿ, ವರುಣನಂತೆ ಸ್ವರ್ಣಸ್ತೋಮಾಭಿವೃದ್ಧಿಯಂ ಪಡೆದು, ವಾಯುವಿನಂತೆ ಜಗತ್ಪ್ರಾಣನಾಗಿ, ಕುಬೇರನಂತೆ ರಾಜರಾಜನೆನಿಸಿ, ಆದಿಶೇಷನಂತೆ ಅನೇಕ ಭೋಗಾನುಷಕ್ತನಾಗಿ ಭೂಭಾರವಾಹಿಯೆನಿಸಿ, ಸೂರ್ಯನಂತೆ ಪದ್ಮಾಹ್ಲಾದಕಾರಿಯಾಗಿ ಸನ್ನಿಹಿತಬುಧನೆನಿಸಿ, ಚಂದ್ರನಂತೆ ಕುವಲಯಾನಂದಜನಕನಾಗಿ ಸನ್ಮಾರ್ಗನಿರತನೆನಿಸಿ, ವರ್ಷಾಕಾಲದ ಮೇಘದಂತೆ ವಿಮಲತರವಾರಿಧಾರಾತಿರಸ್ಕೃತ ರಾಜಹಂಸನೆನಿಸಿ, ಸರ್ವದೇವಮಯೋರಾಜಾ, ಎಂಬ ಋಷಿವಾಕ್ಯವಂ ಯಥಾರ್ಥವಂ ಗೆಯ್ಯುತ ಸತ್ಯಾಚಾರನಾಗಿ ಪ್ರಕಾಶಿಸುತ, ರಾಮನಂತೆ ಪ್ರೇಮದಿಂ ರಾಜ್ಯವನಾಳುತ್ತಿರಲು:—

ಕಾಲಕಾಲಕ್ಕೆ ಆಗುವ ಮಳೆಗಳಿಂದಲೂ, ದಿನದಿನದಲ್ಲೂ ಅಭಿವೃದ್ಧಿಯಂ ಪೊಂದುತ್ತಿರುವ ಬೆಳೆಗಳಿಂದಲೂ,ನಾನಾವಿಧ ಪುಷ್ಪವಾಸನೆಗೆ ಮೊತ್ತವಾಗಿ ಎರಗುತ್ತಿರುವ ಅಳಿಗಳಿಂದಲೂ ಇಳೆಯೆಲ್ಲಾ ಕಳೆಯಿಂ ಸಂಪೂರ್ಣವಾಗಿ, ಗೋವುಗಳೆಲ್ಲಾ ಅಧಿಕಕ್ಷೀರಂಗಳುಳ್ಳುವಾಗಿ, ಸಮಸ್ತ ಸ್ತ್ರೀಯರುಗಳು ಸುಮಂಗಲಿಯರಾಗಿ ಪತಿವ್ರತಾಶಿರೋಮಣಿಗಳೆನಿಸಿ ತಮ್ಮತಮ್ಮ ಪತಿಗಳಲ್ಲಿ ಅತಿಶಯವಾದ ಭಕ್ತಿಯುಕ್ತರಾಗಿ, ಪುತ್ರಪೌತ್ರಾಭಿವೃದ್ಧಿಯಂ ಪಡೆದಿರುವರು. ಸಮಸ್ತ ಪ್ರಜೆಗಳು ಈತಿಬಾಧೆಗಳಿಲ್ಲದೆ ಧನಧಾನ್ಯಗಳಿಂ ಪುಷ್ಟರಾಗಿ, ಪ್ರಭುವಿನಲ್ಲಿ ವಿಶ್ವಾಸಶಾಲಿಗಳಾಗಿ, ತಾವು ಬಿತ್ತಿದ ಧಾನ್ಯಂಗಳಂ ನಷ್ಟವಂ ಪೊಂದದಂತೆ ಸಮಸ್ತ ಸಸ್ಯಸಮೃದ್ಧಿಯಂ ಪಡೆದು ಚೋರೋಪದ್ರವಶೂನ್ಯರಾಗಿ ಅಧಿಕಾನಂದಯುಕ್ತರಾಗಿರುವರು.

ಈಪ್ರಕಾರವಾಗಿರುವಲ್ಲಿ ಒಂದಾನೊಂದು ದಿನದಲ್ಲಾ ದುಷ್ಯಂತರಾಯನು ತನ್ನ ಸಭೆಯಂ ಪ್ರವೇಶಿಸಿದನು. ಆ ಸಭೆಯೆಂತಿರುವುದೆಂದರೆ:—ವಜ್ರಸ್ತಂಭಗಳಿಂ, ಪಚ್ಚೆಲೋವೆಗಳಿಂ, ಕಡೆದು ಮಾಡಿದ ಪವಳದ ಮೊಗಸಲೆಗಳಿಂ, ಇಂದ್ರನೀಲದ ತೊಲೆಜಂತಿಗಳಿಂ ಸುಂದರವಾಗಿ, ರತ್ನಮಯಭಿತ್ತಿಗಳಿಂ ರಂಜಿಸುತ, ಸುಧರ್ಮಸಭೆಯ ಸೊಗಸಂ ಒಳಕೊಂಡಿರುವ, ಅನೇಕ ರತ್ನಗನ್ನಡಿಗಳಿಂ ರಾಜಿಸುತ, ಪ್ರಭಾತಕಾಲದಂತೆ ಪದ್ಮರಾಗಭಾಸುರವಾಗಿ, ತಪೋವನದಂತೆ ಮುಕ್ತಾಹಾರವಿಭೂಷಿತವಾಗಿ, ಉಪವನದಂತೆ ಪ್ರವಾಳಮಯವೆನಿಸಿ, ಅನೇಕ ಮಂಡಲಿಕರ ತಂಡಂಗಳಿಂ ಮಂಡಿತವಾಗಿ, ಒಂದೆಡೆಯಲ್ಲಿ ವೇದಾಂತ ಮೀಮಾಂಸೆ ಮೊದಲಾದ ಶಾಸ್ತ್ರಂಗಳಂ ವಿಚಾರಿಸುತ ಅನೇಕ ಜಯಪತ್ರಗಳ ಸಂಪಾದಿಸಿರುವ ವಿದ್ವಾಂಸರುಗಳ ಶಬ್ದಕೋಲಾಹಲದಿಂ ಯುಕ್ತವಾಗಿ, ಬಂದು ಪ್ರದೇಶದಲ್ಲಿ ಉಪಮಾಸೋಲ್ಲೇಖರೀತಿಪಾಕವೃತ್ತಿಗುಣಾಲಂಕಾರ ಯಮಕಾನುಪ್ರಾಸ ಶಯ್ಯಾ ವ್ಯಂಗ್ಯ ಮೊದಲಾದ ಕವಿತಾಪರಿಪಾಕವ

ನಱಿತು ದೋಷಂಗಳಂ ದೂರೀಕರಿಸಿ, ರಸಿಕಜನ ಹೃದಯಾನಂದಕರಮಾಗುವಂತೆ ನಾಟಕ ಪ್ರಹಸನ ಘಟಿಕಾಶತಕ ಭಾಣ ಮೊದಲಾದ ಕವಿತ್ವವಂ ಪೇಳುವ ಕವಿಸಾರ್ವಭೌಮರಿಂ ಭೂಷಿತವಾಗಿ ; ಮತ್ತೊಂದೆಡೆಯಲ್ಲಿ ಕಲ್ಯಾಣಿ ಮಾಳವಿ ಮೋಹನ ರೇಗುಪ್ತಿ ಮಧ್ಯಮಾವತಿ ಕಾಂಬೋಧಿ ಪುನ್ನಾಗ ವರಾಳಿ ಮೊದಲಾದ ಭೇದವಂ ತಿಳಿದು ದ್ರುತವಿಲಂಬಮಧ್ಯಮವೆಂಬ ಕಾಲತ್ರಯವನ್ನನುಸರಿಸಿ, ಮೂರ್ಛನಾಕ್ರಮವಂ ತಿಳಿದು ತಾಳವಂ ಮೇಳೈಸಿ, ಕೇಳುವರ ಕಿವಿಗಳ್ಗೆ ಹಿತವಾಗುವಂತೆ ನಯವಾಗಿ ಪಾಡುವ ಗಾಯಕವೈಣಿಕರ ಗಾನಸ್ವರದಿಂದ ರಮ್ಯವಾಗಿ; ಮತ್ತೊಂದು ಸ್ಥಾನದಲ್ಲಿ ಅಂಗ ವಂಗ ಕಳಿಂಗ ಕಾಂಭೋಜಾದಿ ದೇಶಗಳಿಂ ಬಂದು ದುಷ್ಯಂತರಾಯನ ಪಾದದರ್ಶನವಂ ಗೈಯುವೆವೆಂದು ಕಪ್ಪಂಗಳಂ ಕರಗಳಲ್ಲಿ ಪಿಡಿದು ಸಮಯವನ್ನಿರೀಕ್ಷಿಸುತ್ತಿರುವ ದೊರೆಗಳಿಂ ನಿಬಿಡಿತವಾಗಿ ; ಒಂದು ಸ್ಥಳದಲ್ಲಿ ಮನ್ಮಥನ ಭ್ರಮರಶಿಂಜಿನಿಯಂ ಸಡಲಿಸಿ ನಿಲ್ಲಿಸಿದ ಧನುಸ್ಸುಗಳೋ ಎಂಬಂತೆ ನಿಡಿದಾದ ಜಡೆಗಳಿಂದೊಪ್ಪುತ್ತ ನಾನಾವಿಭೂಷಣಗಳಿಂ ಭೂಷಿತರಾಗಿ, ತಮ್ಮ ಬೆಡಗುಗಳಿಂ ಸಭಾಜನರಂ ಚಿತ್ರಾರ್ಪಿತಪ್ರತಿಮೆಗಳಂತೆ ಮಾಡುತ, ತಮ್ಮ ಕಡೆಗಣ್ಣುಗಳ ಕುಡಿನೋಟಗಳೇ ಮೂಱುಲೋಕಂಗಳಂ ಸೂಱೆಗೊಳ್ಳುವಲ್ಲಿ, ಮಾರನಿಗೆ ನಿಸ್ಸಾರವಾದ ಈ ಪುಷ್ಪಬಾಣಂಗಳಿಂ ಪ್ರಯೋಜನವೇನೆಂದು ಚೆಲ್ಲುವರೋ ಎಂಬಂತೆ ಪುಷ್ಪಾಂಜಲಿಗಳಂ ವಿರಚಿಸಿ, ಕಲಕಂಠದ ಕಂಠನಾದದ ಕಲೆಯನ್ನನುಸರಿಸಿ ಕಂಠದಲ್ಲಿ ಗಾನವಂ ಹಸ್ತಂಗಳಲ್ಲಿ ಅಭಿನಯವಂ ನೇತ್ರಂಗಳಲ್ಲಿ ಅನುರಾಗಮಂ ಪುರ್ಬುಗಳಲ್ಲಿ ವಕ್ರತೆಯಂ ಪಾದಂಗಳಲ್ಲಿ ತಾಳವನ್ನವಲಂಬಿಸಿ ಮದ್ದಳೆಯ ಮುದ್ದಾದ ಸದ್ದಿಗೆ ಸರಿಯಾಗಿ ಜತಿಶ್ರುತಿಗೂಡಿ ನಾಟ್ಯವಂ ಗೆಯ್ಯುವ ವೇಶ್ಯಾಂಗನೆಯರಿಂ ರಮಣೀಯವಾಗಿ; ಮುಂಭಾಗದಲ್ಲಿ ಸಂಭ್ರಮದಿಂ ಜಯವಿಜಯೀಭವ ಎಂದು ಬಿರುದು ಪದ್ಯಗಳಂ ಅಧಿಕಸ್ವರದಿಂ ತರವೆತ್ತಿ ಪೊಗಳುವ ಭಟರುಗಳ ಸಮೂಹದಿಂ ಭೂಷಿತವಾಗಿ ; ಮತ್ತು ಅನೇಕ ದೇಶಂಗಳಂ ಜಯಿಸಿ ಅಶ್ವ ರಥ ಗಜ ಪದಾತಿಗಳೆಂಬ ಚತುರಂಗ ಸೇನೆಯಿಂ ಕೂಡಿದ ಶೂರಾಗ್ರೇಸರರಾದ ಸೇನಾನಾಯಕರುಗಳಿಂ; ಇನ್ನು ಅನೇಕರಾದ ಹಾಸ್ಯಗಾಱರು ಸೇವಕಜನರು ಮೊದಲಾದವರಿಂ ಸುತ್ತಲೂ ಸುಂದರವಾಗಿರಲು—ಆ ದುಷ್ಯಂತರಾಯನು ಇಂತನಂತಸೌಭಾಗ್ಯ ಸಂಪೂರ್ಣವಾದ ಸಭಾಮಧ್ಯದಲ್ಲಿ ಕೋಟಿಸೂರ್ಯಪ್ರಕಾಶಮಾನವಾಗಿ ತೇಜೋರಾಶಿಯಂತೆ ರಾಜಿಸುತ್ತಿರುವ ರತ್ನಸಿಂಹಾಸನದಲ್ಲಿ ಕುಳಿತು ಹಿಂಭಾಗದಲ್ಲಿ ಸುರಸುಂದರಿಯರ ಸೊಬಗಂ ಸೂಱೆಗೆಯ್ಯುವ ಸಖಿಯರುಗಳು ಸಂಭ್ರಮಯುಕ್ತರಾಗಿ ಕರಕಂಕಣ

ಝಣತ್ಕಾರವಂ ಬೀಱುತ್ತ ಚಾಮರಂಗಳಂ ಪುಷ್ಪದ ಬೀಸಣಿಗೆಗಳಂ ಬೀಸುತ್ತಿರಲು ಮಂದಮಾರುತವನ್ನನುಭವಿಸುತ್ತ, ದೇಶಾಧೀಶ್ವರರು ತಂದ ಕಪ್ಪವನ್ನೊಪ್ಪಿಸಿಕೊಳ್ಳುತ್ತ, ಒಡ್ಡೋಲಗವಂ ಗೊಳ್ಳುತ್ತಿರಲು—

ಆರ್ಯಪಿಶುನನೆಂಬ ಆ ದುಷ್ಯಂತರಾಯನ ಮಂತ್ರಿಯು ರಾಯನ ಸಮೀಪವಂ ಸೇರಿ ಕರಗಳಂ ಮುಗಿದು, "ಎಲೈ ಸ್ವಾಮಿಯೆ! ಅರಣ್ಯದಲ್ಲಿ ದುಷ್ಟಮೃಗಂಗಳು ವೃದ್ಧಿಯಂ ಪೊಂದಿ ಅನೇಕಪ್ರಕಾರವಾಗಿ ಪ್ರಜೆಗಳಂ ಬಾಧಿಸುತ್ತಿರುವುದೆಂತಲೂ, ಮತ್ತು ದುಷ್ಟರಾಕ್ಷಸರುಗಳು ಪುಣ್ಯಾಶ್ರಮಗಳಲ್ಲಿ ವಾಸವಂಗೆಯ್ಯುತಿರುವ ಋಷಿಗಳು ಮಾಳ್ಪ ಯಜ್ಞಂಗಳಿಗೆ ವಿಘ್ನಂಗಳನ್ನುಂಟುಮಾಡುತ ಕಾಷಾಯಕಮಂಡಲುಗಳಂ ಭೇದಿಸುತ್ತ ಆ ಋಷಿಗಳಿಗೆ ಹಿಂಸೆಯನ್ನುಂಟುಮಾಡುವರೆಂತಲೂ, ಚಾರರು ಬಂದು ಪೇಳಿರುವುದಱಿಂ ವಿಜ್ಞಾಪನೆಯಂ ಗೈದಿರುವೆನು. ಪ್ರಭುಗಳಾದ ತಮ್ಮಿಂದ ಆಶ್ರಮವಾಸಿಗಳಾದ ಋಷಿಗಳೂ ಸಮಸ್ತ ಪ್ರಜೆಗಳೂ ಸಹ ನಿರ್ಭಯರಾಗಿ ಸೌಖ್ಯವಂ ಹೊಂದಬೇಕಾಗಿರುವುದಱಿಂ ಸ್ವಾಮಿಯವರ ಚಿತ್ತಕ್ಕೆ ವಿದಿತವಿರಲೆಂದು ವಿಜ್ಞಾಪಿಸಿರುವೆನು" ಎಂದು ಬಿನ್ನೈಸಲಾ ವಾಕ್ಯವಂ ಕೇಳ್ದ ರಾಯನು ರಾಕ್ಷಸರುಗಳಂ ದುಷ್ಟಮೃಗಂಗಳಂ ಸಹ ನಿಶ್ಶೇಷವಾಗಿ ನಿರ್ಮೂಲವಂ ಗೆಯ್ಯಬೇಕೆಂದು ಮನದಲ್ಲಾಲೋಚಿಸಿ,—"ಎಲೈ ಮಂತ್ರಿಯೆ, ಕೆಲವು ಸೇನಾಜನರು ಬೇಟೆಯ ಸಾಮಗ್ರಿಯಿಂ ಸನ್ನದ್ಧರಾಗಿ ನಾನು ಬರುವುದಕ್ಕೆ ಮೊದಲೇ ಪೋಗಿ ಮೃಗಸಮೂಹವಿರುವ ಅರಣ್ಯವನ್ನಾಕ್ರಮಿಸಿ ಮೃಗಂಗಳು ಚದರಿಪೋಗದಂತೆ ಜಾಗರೂಕರಾಗಿ ಕಾದುಕೊಂಡು ಇರಲಿ!" ಎಂದು ಅಪ್ಪಣೆಯನ್ನೀಯಲಾಮಂತ್ರಿಯು ಅದೇ ರೀತಿಯಿಂದಾಜ್ಞೆಯಂ ಕೊಡಲಾ ಸೇನಾಜನರು ಬಲೆಗಳು ಕಾಲುಕಣ್ಣೆ ಬೇಟೆನಾಯಿ ಭಲ್ಲೆ ತುಪಾಕಿ ಹರಿಗೆ ಶಕ್ತಿ ಕಠಾರಿ ಮೊದಲಾದ ಪದಾರ್ಥಂಗಳಂ ಸನ್ನಾಹ ಗೊಳಿಸಿಕೊಂಡು ಅರಣ್ಯಕ್ಕೆ ಹೋಗಲು—

ಅಷ್ಟಱಲ್ಲೀ ಆದುಷ್ಯಂತರಾಯನು ಜಯಭೇರಿ ಕಹಳೆ ಮೊದಲಾದ ವಾದ್ಯಧ್ವನಿಗಳು ಎಂಟು ದೆಸೆಯಂ ವ್ಯಾಪಿಸುತ್ತಿರಲು ಸಿಂಹಾಸನದಿಂದೆದ್ದು ಬೇಟೆಗೆ ಅನುಗುಣವಾದ ಆಯುಧಗಳಿಂದ ಆಭರಣವಸ್ತ್ರಂಗಳಿಂದಲಂಕೃತನಾಗಿ ವಾಯುವೇಗವಂ ವಂಚಿಸಿ ನಡೆಯುವ ಜಾತ್ಯಶ್ವಗಳಿಂದ ರಮ್ಯವಾಗಿ ರತ್ನಮಯ ಕಿಱುಗಂಟೆಗಳಿಂದಲೂ, ಉನ್ನತಧ್ವಜದಂಡದಿಂದಲೂ ಮಂಡಿತವಾದ ರಥವನ್ನೇಱಿ ಚತುರಂಗಬಲಸಮೇತನಾಗಿ ಅರಣ್ಯವಂ ಕುಱಿತು ತೆರಳುತಿರಲು—

ಆಪುರದೊಳಿರುವ ಸುಂದರಾಂಗಿಯರಾದ ಸ್ತ್ರೀಯರುಗಳು ಮನ್ಮಥಸಮಾನನಾದ ದುಷ್ಯಂತರಾಯನಂ ನೋಡುವೆವೆಂಬ ವೇಗದಿಂದ ಓಲೆಗಳಂ ಬೆರಳುಗಳಲ್ಲಿ ಒಡ್ಯಾಣವಂ ಕತ್ತಿನಲ್ಲಿ ಮುತ್ತಿನ ಸರವಂ ಮುಂಗೈಯಲ್ಲಿ ಪಾಡದ ಸರವಂ ಭುಜಂಗಳಲ್ಲಿ ಕಟ್ಟಾಣಿಯಂ ಪಾದಗಳಲ್ಲಿ ಉಂಗುರಗಳಂ ಮೂಗುಗಳಲ್ಲಿಡುತ್ತಾ, ವಾಯುವಿನಿಂ ಹಾಱಿ ಎಡೆಯಿಂ ಜಾಱಿದ ಸೀರೆಯ ಸೆಱಗುಗಳಂ ಸ್ಮರಿಸದೆ ಸಡಲಿದ ನೆಱಿಯಲ್ಲಿ ಜ್ಞಾನವಿಲ್ಲದೆ ಗುರುಹಿರಿಯರಂ ಸರಕುಮಾಡದೆ ಜಾಱಿದ ತುಱುಬುಗಳಂ ತೋರವಾದ ಕುಚಂಗಳಂ ಭಾರವಾದ ನಿತಂಬಂಗಳಂ ಹೊಱಲಾಱದೆ ವಾರಿಜಾಸನನಾದ ಬ್ರಹ್ಮನಂ ನಿಂದಿಸುತ್ತ ಬಂದು, ಕೆಲರು ಉನ್ನತವಾದ ಉಪ್ಪರಿಗೆಗಳನ್ನೇಱಿ ಗವಾಕ್ಷಂಗಳಂ ಸೇಱಿ ಕಾಲುಮಣೆಗಳಲ್ಲಿ ಪಾದಗಳನ್ನೂಱಿ ಕೆಲರು ಜನರ ಸಂದಣಿಯೊಳ್ ದೂರಿ ತಮ್ಮ ಕಡೆಗಣ್ಣ ಕುಡಿನೋಟಗಳಂ ಬೀಱಿ ಮಾರನಿಗೆ ಮನವಂ ಮಾಱಿ ಒಯ್ಯಾರದಿಂ ನಿಂತು ನೋಡುತ್ತಿರಲು—

ಆ ದುಷ್ಯಂತರಾಯನು ವೇಗದಿಂ ರಥದಿಂ ತೆರಳಿ ಪೋಗಿ ಮುಂಭಾಗದಲ್ಲಿ ಒತ್ತಾಗಿ ಬೆಳೆದಿರುವ ಅತ್ತಿ ಮತ್ತಿ ಮಗ್ಗಾರೆ ಬೇಲ ಆಲ ಅರಳಿ ಅರಟವಾಳ ಅಮ್ಮಟೆ ಕಂಚಿವಾಳ ಕಾರಜು ಕಗ್ಗಲಿ ಸುರಗಿ ಸುರಹೊನ್ನೆ ಒನ್ನಿ ಬಕುಳ ಬಾಗೆ ಶೀಗೆ ಶ್ರೀಗಂಧ ಹಲಸು ಮಾವು ನೇಱಿಲು ಎಲವ ಎಲಚಿ ಬಿದರು ಮೊದಲಾದ ವೃಕ್ಷಂಗಳ ತಂಪಿನಲ್ಲಿ ತಮ್ಮ ತಮ್ಮ ಮಱಿಗಳಿಂದೊಡಗೂಡಿರುವ ಕರಡಿ ಕಾಡ್ಗೋಣ ಪುಲಿ ಶಿವಂಗಿ ಶಿಂಗಲೀಕ ಹುಲ್ಲೆ ನರಿ ಮೊದಲಾದ ಮೃಗಗಣದಿಂದಲೂ, ಗರುಡ ಗಂಡಭೇರುಂಡ ಗಿಣಿ ಕೋಗಿಲೆ ಮೊದಲಾದ ಪಕ್ಷಿಸಮೂಹದಿಂದಲೂ, ವ್ಯಾಪ್ತವಾದ ಸ್ಥಾನವಂ ಕುಱಿತು ಬರಲು—ಅಲ್ಲಿರ್ದ ಸಮಸ್ತಸೇನಾಜನರು ತಮ್ಮಟೆ ಕೊಂಬು ಮೊದಲಾದ ವಾದ್ಯಧ್ವನಿಯಿಂದ ಮೃಗಂಗಳಂ ಬೆದಱಿಸಲಾರಾಯನು ಮುಂಬರಿದು ಬರುವ ಕೆಲವು ಮೃಗಗಳಂ ಖಡ್ಗದಿಂ, ಕೆಲವಂ ಭಲ್ಲೆಗಳಿಂ, ಕೆಲವಂ ಬಾಣಗಳಿಂ ಅನೇಕ ಮೃಗಗಳಂ ನಿರ್ಮೂಲವಂ ಗೆಯ್ಯುತ ಸಂತುಷ್ಟಹೃದಯನಾಗಿರ್ದನು.

ಎಂಬಲ್ಲಿಗೆ

ಗದ್ಯ—ಚಂಡಕರಮಂಡಲೋಚ್ಚಂಡ ತೇಜಃಪ್ರಕಾಂಡಕಾಂಡ ಷಂಡಖಂಡಿತಾಖಂಡ ಶೌರ್ಯ ಪರಿಮಂಡಿತ ಭಂಡನೋದ್ದಂಡಾರಿ ಮಂಡಲಕಂಡೂಲದೋರ್ದಂಡ ಪಾಂಡಿತ್ಯ ಪಾಂಡುರುಚಿಖಂಡಡಿಂಡೀರಪುಂಡರೀಕ ಪರಿಪಾಂಡುರಯಶಃ ಪಿಚಂಡಿಲ ಬ್ರಹ್ಮಾಂಡಭಾಂಡೋದ್ಭಟ ಕಾಲಕೂಟಪ್ರತಿಭಟ ಕಟುಕಪಟ ನಿಶಾಟಕೂಟ ಪಾಟನಲಂಪಟಸಟಿಲಪುಟಘಟಿತ ವಿಕಟ ಕೃಪೀಟಯೋನಿ ಕುಟಿಲಪೋಹಾಂ

ಧಕಾರ ಚ್ಛಟಾವಿಘಟನ ಪಟುನಟನ್ಮಹಾನಟಮಕುಟತಟಸಯ್ಯಟತ್ತಟಿನೀತಟಾಂತರಿಂಗದಭಂಗೋತ್ತುಂಗತರಂಗ ಸಂಗರಭಂಗಸಂಭ್ರಮೋಜ್ಜೃಂಭಮಾಣಗಂಭೀರವಾಗ್ಗುಂಭ ಸಂಭಾವಿತ ಗರಸಗರವರನಿಲಯ ಚಂದ್ರಚೂಡಚರಣಾರವಿಂದ ಸೇವಾಮರಂದ ನಿರಂತರನಿಷೇವಣ ಸ್ವಯಂವೃತಕವಿತಾವಧೂರತ್ನ ರಾಜಾಧಿರಾಜಮಹಾರಾಜ ಶ್ರೀಚಾಮರಾಜ ಪುತ್ರಾತ್ರೇಯಸಗೋತ್ರ ಪವಿತ್ರಚರಿತ್ರ ಶಂಖ ಚಕ್ರ ಮಕರ ಮತ್ಸ್ಯ ಶರಭಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ನರಪತಿಬಿರುದ ಶ್ರೀಚಾಮುಂಡಿಕಾವರಪ್ರಸಾದಲಬ್ಧ ಮಹೀಶೂರಮಹಾಸಂಸ್ಥಾನಮಧ್ಯದೇದೀಪ್ಯಮಾನಕುಲಕ್ರಮಾಗತ ದಿವ್ಯರತ್ನಸಿಂಹಾಸನಾರೂಢ ಶ್ರೀಕೃಷ್ಣರಾಜ ಕಂಠೀರವರು ಸರಸಜನಾನಂದಕರವಾಗಿ ಲೋಕೋಪಕಾರಾರ್ಥವಾಗಿ ನವರಸಭರಿತವಾಗಿ ಕರ್ನಾಟಕಭಾಷೆಯಿಂ ವಿರಚಿಸಿದ . ಕೃಷ್ಣರಾಜವಾಣೀವಿಲಾಸರತ್ನಾಕರವೆಂಬ ಶಾಕುಂತಳನಾಟಕದ ನವೀನ ಟೀಕಿನಲ್ಲಿ ದುಷ್ಯಂತರಾಯನು ಮೃಗಯಾರ್ಥವಾಗಿ ಅರಣ್ಯಕ್ಕೆ ಬಂದನೆಂಬ ಪ್ರಥಮಕಲ್ಲೋಲದಲ್ಲಿ ಪ್ರಥಮತರಂಗಂ.

ಪ್ರಥಮಕಲ್ಲೋಲದಲ್ಲಿ ದ್ವಿತೀಯತರಂಗ

ಅನಂತರದಲ್ಲಾ ದುಷ್ಯಂತರಾಯನು ರಥದೊಳು ಕುಳಿತು ಇನ್ನೂ ಅನೇಕ ಮೃಗಸಮೂಹವಂ ಸಂಹರಿಸುವೆನೆಂಬ ಇಚ್ಛೆಯಿಂ ಆ ಅರಣ್ಯದಲ್ಲಿ ಮೃಗಗಳಂ ಹುಡುಕುತ್ತಿರಲು—

ಅಷ್ಟರಲ್ಲೆ ಒಂದಾನೊಂದು ಗಂಡುಹುಲ್ಲೆಯು ಮುಂಭಾಗದಲ್ಲಿ ಸಂಚರಿಸಲಾ ದುಷ್ಯಂತರಾಯನಾ ಮೃಗವನ್ನನುಸರಿಸಿ ರಥವಂ ನಡೆಸುವಂತೆ ಸಾರಥಿಗೆ ಆಜ್ಞೆಯನ್ನೀಯಲಾ ಸಾರಥಿಯು ಸಮಸ್ತ ಸೇನೆಯು ಹಿಂದುಳಿಯುವಂತೆ ರಥವಂ ನಡೆಸುತ್ತ ರಥದಲ್ಲಿದ್ದ ರಾಯನಂ ಕುರಿತು ಓಡುತ್ತಿರುವ ಮೃಗವಂ ನೋಡಿ, "ಎಲೈ ಸ್ವಾಮಿಯೇ ಕೃಷ್ಣಸಾರಂಗದಲ್ಲಿಯೂ ನಾರಿಯಿಂ ಸೇರಿದ ಧನುಸ್ಸಂ ಧರಿಸಿರುವ ನಿನ್ನಲ್ಲಿಯೂ ಇರಿಸಲ್ಪಟ್ಟ ದೃಷ್ಟಿಯುಳ್ಳ ನಾನು ಪೂರ್ವದಲ್ಲಿ ಮೃಗರೂಪಿನ ರಾಕ್ಷಸನಂ ಅನುಸರಿಸಿ ಹೋಗುತಿರ್ದ ಪರಶಿವನನ್ನಾಗಿ ನಿನ್ನಂ ತಿಳಿಯುವೆನು." ಎಂದು ನುಡಿಯಲಾ ರಾಯನು—' ಎಲೈ ಸಾರಥಿಯೇ, ಈ ಮುಂಭಾಗದಲ್ಲಿ

ಓಡುವ ಹುಲ್ಲೆಯಿಂ ನಾವು ಬಹುದೂರವಾಗಿ ಬಂದೆವು. ಈಗಲು ಈ ಮೃಗವು ಕೊಂಕುಗೂಡಿದ ಕತ್ತಿನಿಂ ಮನೋಹರವಾಗಿ, ಬೆಂಬಿಡದೆ ಪೋಗುತ್ತಿರುವ ನಮ್ಮ ರಥವಂ ಬಾರಿಬಾರಿಗೂ ನೋಡುತ್ತ, ಎನ್ನ ಬಾಣಪತನದ ಭಯದಿಂ ತನ್ನ ಶರೀರದ ಮುಂಭಾಗವಂ ಹಿಂಭಾಗದಲ್ಲಿ ಅಡಗಿಸಿ, ಓಡುವ ಶ್ರಮದಿಂ ತೆರೆಯಲ್ಪಟ್ಟ ಬಾಯಿಂ ಅರ್ಧಚರ್ವಿತವಾಗಿ ಜಾರಿದ ದರ್ಭೆಯ ತೃಣದಿಂ ವ್ಯಾಪ್ತವಾದ ಮಾರ್ಗವುಳ್ಳುದಾಗಿ, ಅಧಿಕಲಂಘನೆಯಿಂದಾಕಾಶದಲ್ಲಿ ಬಹಳವಾಗಿ ಭೂಮಿಯಲ್ಲಿ ಸ್ವಲ್ಪವಾಗಿ ಓಡುತಿರುವುದಂ ನೋಡು. ಎನ್ನಯ ಪ್ರಯತ್ನವೂ ಈ ಮೃಗವನ್ನನುಸರಿಸಿ ಪೋಗುವುದಕ್ಕಲ್ಲಾದುದಲ್ಲದೆ ಸಂಹರಿಸುವುದಕ್ಕಲ್ಲಾಗಲಿಲ್ಲ'' ವೆಂದು ನುಡಿಯಲಾಸಾರಥಿಯು '' ಎಲೈ ಸ್ವಾಮಿಯೇ ಹಳ್ಳತಿಟ್ಟುಳ್ಳ ಭೂಮಿಯಾದುದರಿಂದ ನಾನು ಅಶ್ವರಜ್ಜುಗಳಂ ನಿರೋಧವಂ ಗೆಯ್ಯಲು ರಥವು ಜಾಗ್ರತೆಯಾಗಿ ಪೋಗದಾದುದರಿಂ ಮೃಗಕ್ಕೂ ನಮಗೂ ಬಹಳ ದೂರಮಾದುದು. ಈಗ ಸಮಪ್ರದೇಶಕ್ಕೆ ಬಂದಿರುವ ನಿನಗೆ ಈಮೃಗವು ಸುಲಭಸಾಧ್ಯವಾಗುವುದು.'' ಎಂದು ನುಡಿಯಲಾದುಷ್ಯಂತರಾಯನು ಜಾಗ್ರತೆಯಿಂದ ರಥವಂ ನಡೆಸುವಂತೆ ಅಜ್ಞೆಯನ್ನೀಯಲಾಸಾರಥಿಯು ಆ ರಾಯನ ಆಜ್ಞಾನುಸಾರವಾಗಿ ಅಧಿಕ ವೇಗದಿಂದ ರಥವಂ ನಡೆಸುತ್ತ ರಾಯನಂ ಕುರಿತು—''ಎಲೈ ಸ್ವಾಮಿಯೇ, ಈಅಶ್ವರಜ್ಜುಗಳಂ ಸಡಿಲವಂ ಗೆಯ್ಯಲಾಗಿ ಬಹುನೀಟವಾದ ಕಾಯಂಗಳಿಂ, ಶಿರಸ್ಸಿನಲ್ಲಿ ಕದಲದೆ ಒಪ್ಪುತ್ತಿರುವ ಚವರಿಯ ಕೊನೆಗಳಿಂ, ಚಂಚಲವಿಲ್ಲದೆ ಜತೆಗೊಳಿಸಿರುವ ನೀಟವಾದ ಕರ್ಣಂಗಳಿಂ ಯುಕ್ತವಾದ ರಥಾಶ್ವಂಗಳು ತಮ್ಮ ಖುರಪುಟದಿಂದೇಳ್ವ ಧೂಳುಗಳಿಂದಲೂ ದಾಟುವುದಕ್ಕೆ ಅಸಾಧ್ಯಂಗಳಾಗಿ ಮುಂಗಡೆಯಲ್ಲಿ ಪೋಗುವ ಮೃಗವೇಗವಂ ಸಹಿಸಲಾರವೋ ಎಂಬಂತೆ ಅತಿವೇಗದಿಂ ಪೋಗುತಿರುವುವು. ಅವಂ ನೋಡು '' ಎಂದು ನುಡಿಯಲಾವಾಕ್ಯವಂ ಕೇಳ್ದ ರಾಯನು '' ಎಲೈ ಸಾರಥಿಯೇ, ನೀನುಪೇಳ್ದವಾಕ್ಯವು ಯಥಾರ್ಥವೇ ಸರಿ. ಈಕುದುರೆಗಳು ಸೂರ್ಯ್ಯಾಶ್ವಂಗಳ ಮೀರಿದುವಾಗಿ ತೋರುವುವು. ಹೇಗೆಂದರೆ—ಯಾವ ಪದಾರ್ಥವು ದೂರದಲ್ಲಿ ಎನ್ನ ದೃಷ್ಟಿಗೆ ಸ್ವಲ್ಪವಾಗಿ ಕಾಣುವುದೋ ಅದು ಜಾಗ್ರತೆಯಾಗಿ ವಿಶಾಲವಾಗುವುದು. ಯಾವ ಮಾರ್ಗ ಮೊದಲಾದ ವಸ್ತುಗಳು ಅರ್ಧದಲ್ಲಿ ತುಂಡುಗೈದಂತೆ ತೋರುವುವೋ ಅವು ಒಂದು ನಿಮಿಷದಲ್ಲಿ ಕೂಡಿದಂತೆ ಕಾಣುವುವು. ಯಾವ ಪದಾರ್ಥವು ಸ್ವಭಾವವಾಗಿ ಡೊಂಕಾಗಿ ತೋರುವುದೋ ಅದು ಅಕ್ಷಣದಲ್ಲಿ ಸಮರೇಖೆಯುಳ್ಳುದಾಗಿ ತೋರುವುದು. ಈ ರಥದ ಅಧಿಕವೇಗದಿಂ ಎನಗೆ ದೂರವಾಗಿ ಒಂದು ವಸ್ತುವೂ ಇಲ್ಲದೆ ಪಾರ್ಶ್ವದಲ್ಲಿ

ಕಂಡ ಪದಾರ್ಥವಂ ಆಕ್ಷಣಕ್ಕೆ ಕಾಣದೆ ಇರುವುದು. ಮತ್ತು ಎಲೈ ಸಾರಥಿಯೇ! ಈಮೃಗವಂ ಸಂಹರಿಸುವೆನು'' ಎಂದು ಧನುರ್ಬಾಣದಿಂ ಯುಕ್ತಮಾದ ಹಸ್ತವನೆತ್ತಲು, ಆಸಾರಥಿಯು-''ಎಲೈಸ್ವಾಮಿಯೇ, ನಿನ್ನ ಬಾಣಕ್ಕೆ ಗುರಿಯಾಗಿರುವ ಈಹುಲ್ಲೆಯು ಪೋಗುವ ಮಾರ್ಗಮಧ್ಯದಲ್ಲಿ ಕೆಲವು ಋಷಿಗಳಿರುವಂತೆ ತೋರು ವುದು. ನೀನು ಪ್ರಯೋಗಿಸಿದ ಬಾಣವು ಆರುಷಿಗಳಂ ತಾಗಲು ಪ್ರಮಾದ ಬರು ವುದು'' ಎಂದು ಪೇಳಲಾರಾಯನು ಜಾಗರೂಕನಾಗಿ, "ಎಲೈ ಸಾರಥಿಯೇ! ಋಷಿಗಳಿರುವಲ್ಲಿ ರಥವಂ ನಡೆಸಬೇಡ'' ಎಂದು ನಿಲ್ಲಿಸುವಂತೆ ಮಾಡಲು—

ಅಷ್ಟರಲ್ಲೀ ವೈಖಾನಸನೆಂಬ ಋಷಿಯು ಈರ್ವರು ಶಿಷ್ಯರಿಂದೊಡಗೂಡಿ ಬರುತ್ತ ಆದುಷ್ಯಂತರಾಯನು ಆಮೃಗವಂ ಸಂಹರಿಸುವುದಂ ಕಂಡು ತ್ವರೆಯಿಂ ತನ್ನ ಹಸ್ತವನ್ನೆತ್ತಿ ರಾಯನಂ ಕುರಿತು-''ಎಲೈ ಮಹಾರಾಜನಾದ ದುಷ್ಯಂತರಾ ಯನೇ, ಈ ಮೃಗವು ನಮ್ಮ ತಪೋವನದಲ್ಲಿ ನಾವು ಸಾಕಿದ್ದಾದುದರಿಂ ಸಂಹರಿಸ ಲ್ಪಡಲಾಗದು. ಮತ್ತು ತರಗೆಲೆಯ ರಾಶಿಯಲ್ಲಿ ಬೆಂಕಿಯನ್ನಿಟ್ಟಂತೆ ಅತಿಮೃದುವಾದ ಈಮೃಗಶರೀರದಲ್ಲಿ ಬಾಣಪ್ರಯೋಗವು ಮಾಡತಕ್ಕುದಲ್ಲಾ! ಏಕೆಂದರೆ-ಈಹರಿಣ ಗಳ ಪ್ರಾಣಂಗಳು ಅತಿಸೂಕ್ಷ್ಮಂಗಳಾಗಿ ಚಂಚಲಂಗಳಾಗಿರುವುವು. ನಿನ್ನ ಬಾಣಂ ಗಳು ತೀಕ್ಷ್ಣಪ್ರಹಾರವಂ ಗೆಯ್ಯುವುದಕ್ಕೆ ಯೋಗ್ಯಂಗಳಾಗಿರುವುವು; ಮತ್ತು ನಿನ್ನ ಶಸ್ತ್ರಂಗಳು ಅನಾಥರಾದ ಜನರುಗಳಂ ಸಂರಕ್ಷಿಸುವುದಕ್ಕಲ್ಲದೆ ಅಪರಾಧವಿ ಲ್ಲದೆ ಇರುವವರಂ ಸಂಹರಿಸುವುದಕ್ಕಲ್ಲವಾದುದರಿಂ ಚೆನ್ನಾಗಿ ನಾರಿಯಲ್ಲಿ ಸೇರಿಸಿ ಕರ್ಣಾಂತವಾಗಿ ಸೆಳೆದಿರುವ ಬಾಣವಂ ಹಿಂದಿರುಗಿಸುವನಾಗು'' ಎಂದು ಪೇಳಲಾ ರಾಯನು ಆವೈಖಾನಸಋಷಿಯ ವಚನಾನುಸಾರಿಯಾಗಿ ಮೃಗಸಂಹಾರಕ್ಕೆ ಸಂಧಾ ನವಂ ಗೈದಿದ್ದ ಬಾಣವಂ ಹಿಂದಿರುಗಿಸಲು; ಆವೈಖಾನಸಋಷಿಯು ಸಂತುಷ್ಟಚಿತ್ತ ರೂಪನಾಗಿ—''ಎಲೈ ಮಹಾರಾಯನೇ, ಲೋಕಪ್ರಸಿದ್ಧವಾದ ಪುರುವಂಶಕ್ಕೆ ಅಲಂ ಕಾರನಾಗಿ ಆವಂಶದಲ್ಲಿ ಪುಟ್ಟಿರುವ ನಿನಗೆ ನಮ್ಮಂಥ ಋಷಿಗಳ ವಾಕ್ಯವಂ ಪರಿಪಾ ಲನೆಯಂ ಗೆಯ್ಯುವುದು ಯುಕ್ತವೇ ಸರಿ. ನೀನು ನಿನ್ನಂತೆ ಭುಜಬಲಪರಾಕ್ರಮಶಾಲಿ ಯಾಗಿ ಚಕ್ರವರ್ತಿಯಾಗುವ ಪುತ್ರನಂ ಪಡೆ'' ಎಂದು ಆಶೀರ್ವಾದವಂ ಗೆಯ್ಯಲು; ಅವನ ಇಬ್ಬರು ಶಿಷ್ಯರು ಆ ದುಷ್ಯಂತರಾಯನ ಮುಂಭಾಗದಲ್ಲಿ ಬಂದು ನಿಂತು ತಮ್ಮ ಹಸ್ತಗಳನ್ನೆತ್ತಿ ''ನಿಶ್ಚಯವಾಗಿ ಚಕ್ರವರ್ತಿಯಾಗುವ ಪುತ್ರನಂ ಪಡೆ'' ಎಂದು ಎರಡು ಬಾರಿ ಆಶೀರ್ವಾದವಂ ಗೆಯ್ಯಲು; ಆದುಷ್ಯಂತರಾಯನು ಆಋಷಿಗಳಂ ಕುರಿತು—''ಎಲೈ ಪೂಜ್ಯರಾದ ಋಷಿಗಳಿರಾ! ಬ್ರಾಹ್ಮಣಶ್ರೇಷ್ಠರಾದ ತಮ್ಮ

ವಚನವಂ ಶಿರಸಾ ವಹಿಸಿದೆನು. ಈಗ ತಾವು ಎಲ್ಲಿಗೆ ಬಿಜಯಂಗೆಯ್ಯುವಿರಿ. ಎನಗಿನ್ನೇನು ಆಜ್ಞೆಯನ್ನೀಯುವಿರಿ " ಎಂದು ನುಡಿಯಲಾವೈಖಾನಸಋಷಿಯು— " ಈಗ ನಾವು ಸಮಿತ್ತುದರ್ಭೆಗಳಂ ತರುವುದಕ್ಕೆ ಪೋಗುವೆವು. ಈ ಮುಂಭಾಗದಲ್ಲಿ ಮಾಲಿನಿಯೆಂಬ ನದಿಯ ತೀರದಲ್ಲಿ ನಮಗಧಿಪತಿಯಾದ ಕಶ್ಯಪಗೋತ್ರೋತ್ಪನ್ನನಾದ ಕಣ್ವಮುನೀಶ್ವರನ ಪುಣ್ಯಾಶ್ರಮವು ಕಾಣುವುದು. ನಿಮಗೆ ಅನ್ಯತ್ರ ಕಾರ್ಯವಿಲ್ಲದಿದ್ದರೆ ಆ ಆಶ್ರಮಪ್ರವೇಶವಂ ಗೈದು ಅಲ್ಲಿ ಮಾಡತಕ್ಕ ಅತಿಥಿಸತ್ಕಾರವಂ ಪರಿಗ್ರಹಿಸಬಹುದು. ಮತ್ತು ತಪಸ್ಸೇ ದ್ರವ್ಯಂಗಳಾಗಿರುವಂಥ ಋಷಿಗಳ ಧರ್ಮಕರಂಗಳಾಗಿ ವಿಘ್ನವಿಲ್ಲದೆ ಇರುವಂಥ ಸತ್ಕರ್ಮಗಳಂ ನೋಡಿ ಧನುಸ್ಸಿನ ನಾರಿಯ ಸಂಘರ್ಷಣೆಯಿಂ ಜಡ್ಡುಗಟ್ಟಿರುವ ಎನ್ನ ಭುಜವು ಸಮಸ್ತಋಷಿಗಳಂ ಧರ್ಮದಲ್ಲಿ ಸಂರಕ್ಷಿಸುವುದೆಂದು ನಿನ್ನ ಪರಿಯಂ ನೀನೇ ತಿಳಿಯುತ್ತಿರುವೆ" ಎಂದು ನುಡಿಯಲಾರಾಯನು ಆಋಷಿಯಂ ಕುರಿತು—"ಎಲೈ ಪೂಜ್ಯನಾದ ವೈಖಾನಸಋಷಿಶ್ರೇಷ್ಠನೇ, ನಿನಗಧಿಪತಿಯಾದ ಕಣ್ವಮಹಾಮುನಿಯು ನೀನು ಪೇಳ್ದ ಆತಪೋವನದಲ್ಲಿ ಇರುವನೋ ಇಲ್ಲವೋ " ಎಂದು ಬೆಸಗೊಳ್ಳಲು; ಆವೈಖಾನಸಋಷಿಯು–" ಎಲೈ ಮಹಾರಾಜನೇ, ಈಗ ತಾನೆ ತನ್ನ ಪುತ್ರಿಯಾದ ಶಕುಂತಲೆಗೆ ತನ್ನ ಆಶ್ರಮಕ್ಕೆ ಬಂದಂಥ ಜನರುಗಳಿಗೆ ಉಪಚಾರವಂಗೆಯ್ಯುವಂತೆ ಅಪ್ಪಣೆಯನ್ನಿತ್ತು ಆಶಕುಂತಲೆಗೆ ದೈವಸಂಘಟನೆಯಿಂದುಂಟಾಗುವ ಕಾರ್ಯವಂ ಮಾಡುವುದಕ್ಕೋಸುಗ ಸೋಮತೀರ್ಥವೆಂಬ ಸಿದ್ಧಾಶ್ರಮವಂ ಕುರಿತು ಪೋಗಿರುವರು. ನೀನು ಆ ತಪೋವನಕ್ಕೆ ಪೋದಲ್ಲಿ ಶಕುಂತಳೆಯು ನಿನಗೆ ಅನುರೂಪವಾದ ಸತ್ಕಾರವಂ ರಚಿಸುವಳು" ಎಂಬ ವಾಕ್ಯವಂ ಪೇಳಲಾರಾಯನು—"ಎಲೈ ಋಷಿಶ್ರೇಷ್ಠನೇ ನೀನು ಪೇಳಿದಂತೆ ಆ ತಪೋವನಕ್ಕೆ ಪೋಗಿ ಋಷಿಪುತ್ರಿಯಾದ ಶಕುಂತಲೆಯಂ ನೋಡುವೆನು. ಆಕಣ್ವಋಷೀಶ್ವರನು ಆ ಆಶ್ರಮದಲ್ಲಿ ಇಲ್ಲದೆ ಇದ್ದಲ್ಲಿಯೂ ಭಕ್ತಿಯುಕ್ತಳಾದ ಆಶಕುಂತಳೆಯು ನಾನು ಬಂದಿರ್ದ ವಾರ್ತೆಯನ್ನು ಋಷಿಯು ಬಂದ ಮೇಲೆ ಪೇಳುವಳು. ಆದ್ದರಿಂದಾತಪೋವನಕ್ಕೆ ಅಗತ್ಯವಾಗಿ ಪೋಗುವೆನು" ಎಂದು ನುಡಿದ ಆ ರಾಯನ ವಾಕ್ಯಕ್ಕೆ ವೈಖಾನಸಋಷಿಯು ತಾನು ಸಮಿತ್ತುದರ್ಭೆಗಳಂ ತರುವುದಕ್ಕೆ ಪೋಗುವನೆಂದು ರಾಜಾಜ್ಞೆಯಂ ಪಡೆದು ಶಿಷ್ಯರಿಂದೊಡಗೂಡಿ ಪೋಗಲು—

ಆ ರಾಯನು ಸಾರಥಿಯಂ ಕುರಿತು " ಎಲೈ ಸಾರಥಿಯೇ, ಕಣ್ವಮುನೀಶ್ವರನ ಪುಣ್ಯಾಶ್ರಮದ ಸಂದರ್ಶನದಿಂದೆನ್ನ ಶರೀರವಂ ಪಾಪರಹಿತವನ್ನಾಗಿ ಮಾಡು

ವೆನು, ಆ ಆಶ್ರಮವಂ ಕುಱಿತು ಅಶ್ವಗಳಂ ನಡೆಸೆಂದು ಅಪ್ಪಣೆಯನ್ನೀಯಲಾಸಾರಥಿಯು "ಆಯುಷ್ಮಂತನಾದ ನಿನ್ನಾಜ್ಞೆಯು ಎಂತಾಗುವುದೊ ಆರೀತಿಯಿಂ ನಡೆದುಕೊಳ್ಳುವೆ" ನೆಂದು ಆಕಣ್ವಾಶ್ರಮದ ಸಮೀಪಕ್ಕೆ ಮರಳಿ ರಥವಂ ನಡೆಸಲಾರಾಯನು ಆ ತಪೋವನದ ನಾಲ್ಕು ದಿಕ್ಕಿನಲ್ಲಿರುವ ರಮ್ಯವಾದ ಪ್ರದೇಶವಂ ನೋಡಿ "ಎಲೈ ಸಾರಥಿಯೇ, ಸುಂದರವಾದ ಈತಪೋವನದ ಮುಂಭಾಗದಲ್ಲಿ ಕಾಣುವ ವಿಸ್ತಾರವಾದ ಪ್ರದೇಶದ ಸೌಂದರ್ಯವು ಅನ್ಯರಿಂ ಪೇಳಲ್ಪಡದೆ ಇದ್ದರೂ ಚೆನ್ನಾಗಿ ತಿಳಿಯುತಿರುವು" ದೆಂದು ನುಡಿಯಲಾಸಾರಥಿಯು—"ಎಲೈ ಸ್ವಾಮಿಯೇ, ಯಾರೂ ಪೇಳದೆ ಈತಪೋವನದ ಸೌಂದರ್ಯವು ಎಂತು ಕಾಣುವುದು?" ಎನ್ನಲಾರಾಯನು "ಎಲೈ ಸಾರಥಿಯೇ, ನೀನು ನೋಡುವುದಿಲ್ಲವೋ ಏನು. ಇದೋ ಈಸ್ಥಳನಲ್ಲಿ ಹುಲ್ಲುಗಳಿಂ ಪುಟ್ಟಿದ ಧಾನ್ಯಗಳು ಶುಕಂಗಳನ್ನೊಳಕೊಂಡಿರುವ ಕೋಟರಂಗಳ ಮುಖದಿಂ ವೃಕ್ಷಗಳ ಬುಡಂಗಳಲ್ಲಿ ಬಿದ್ದುಚೆಲ್ಲಿರುವುವು. ಆದ್ದಱಿಂದಲೇ ಬೇಡರು ಮೊದಲಾದ ದುಷ್ಟಜನರ ಬಾಧೆಯಿಲ್ಲವೆಂದು ತೋಱುವುದು. ಒಂದು ಪ್ರದೇಶದಲ್ಲಿ ಇಂಗಳದ ಹಣ್ಣುಗಳಂ ಭೇದಿಸಿದ್ದಱಿಂದಲೇ ನುಣುಪಾಗಿರುವ ಶಿಲೆಗಳು ಈತ್ತೈಲವಂ ನೆತ್ತಿಗೆ ಹತ್ತಿಸಿಕೊಂಡು ಸ್ವಲ್ಪಹೊತ್ತಿನಲ್ಲಿ ಋಷಿಗಳು ಸ್ನಾನಾರ್ಥವಾಗಿ ನದೀತಟಾಕಸರೋವರಂಗಳಂ ಕುಱಿತು ಹೋಗಿರುವರೆಂಬ ಅಭಿಪ್ರಾಯವಂ ಸೂಚಿಸುತ್ತಿರುವುವು. ಹುಲ್ಲೆ ಸಾರಂಗ ಕರಡಿ ಕಾಡ್ಗೋಣ ಮೊದಲಾದ ಮೃಗಂಗಳು ಬಾಲ್ಯದಿಂ ಋಷಿಗಳಲ್ಲಿ ವಿಶ್ವಾಸವಂ ಪಡೆದಿರುವುದಱಿಂದಲೇ ನಮ್ಮ ರಥಧ್ವನಿಗಳಂ ಕೇಳಿ ಬೆದಱಿ ಓಡಿಹೋಗದೆ ಜಾತಿವೈರವಂ ಬಿಟ್ಟು ಭಯರಹಿತವಾಗಿ ಸಂಚರಿಸುತ್ತಿರುವುವು. ಸರೋವರ ಮೊದಲಾದ ಜಲಾಶಯಂಗಳ ಮಾರ್ಗಂಗಳು ನಾರುಮಡಿಯ ಅಂಚುಗಳಿಂ ಸುರಿವ ಜಲಧಾರೆಗಳ ರೇಖೆಗಳಿಂವಂಚಿತಂಗಳಾಗಿ ವಿರಾಜಿಸುತ್ತಿರುವುವು" ಎಂದು ನುಡಿಯಲು; ಆ ಸಾರಥಿಯು—ಸ್ವಾಮಿಯವರು ಅಪ್ಪಣೆಯನ್ನಿತ್ತುದು ಯುಕ್ತವೇ ಸರಿ, ಎಂದು ರಥವಂ ನಡೆಸುತ ಬರಲು ; ರಾಯನು ಕೆಲವು ದೂರ ಆ ತಪೋವನದಲ್ಲಿ ರಥದಲ್ಲಿ ಕುಳಿತು ಬಂದು—" ಎಲೈ ಸೂತನೇ, ಈ ವನವಾಸಿಗಳಾದ ಋಷಿಗಳಿಗೆ ನಾನು ರಥದೊಳ್ ಕುಳಿತು ಪೋಗುವುದಱಿಂ ಬಾಧೆಯುಂಟಾಗಬಾರದು. ಈಸ್ಥಳದಲ್ಲೇ ರಥವಂ ನಿಲ್ಲಿಸು " ಎಂದು ಪೇಳಿ, ಸಾರಥಿಯು ರಥವಂ ನಿಲ್ಲಿಸುವಂತೆ ಮಾಡಿ, ಆ ರಥವನ್ನಿಳಿದು, " ಎಲೈ ಸಾರಥಿಯೇ, ಈ ತಪೋವನವು ಸೌಮ್ಯಾಕಾರವುಳ್ಳವರಿಂ ಪ್ರವೇಶಿಸುವುದಕ್ಕೆ ಯೋಗ್ಯವಲ್ಲದೆ ಕ್ರೂರವೇಷಧಾರಿಗಳಿಂ ಹೊಗುವುದಕ್ಕೆ ಸಾಧ್ಯವಲ್ಲವಾಗಿರುವುದಾದ್ದಱಿಂದ ಈ ಆಯುಧಾಭರಣ ಮೊದಲಾದ ವಸ್ತುಗಳಂ

ತೆಗೆದುಕೊ'' ಎಂದು ನುಡಿದು, ತನ್ನ ಧನುರ್ಬಾಣ ಖಡ್ಗ ಮೊದಲಾದ ಆಯುಧಂ ಗಳಂ ವಿಶೇಷವಾಗಿ ಧರಿಸಿರ್ದ ಬಾಹುಪುರಿ ಮೊದಲಾದ ಆಭರಣಂಗಳಂ ಸಹ ತೆಗೆದು ಆ ಸಾರಥಿಯ ವಶಕ್ಕೆ ಕೊಟ್ಟು,-ನಾನು ಯಾವ ವರೆಗೆ ಈ ಆಶ್ರಮವಾಸಿಗಳಾದ ಋಷಿಗಳ ಸಂದರ್ಶನವಂ ಗೈದು ಬರುವೆನೋ ಆ ವರೆಗೂ ಈ ರಥಾಶ್ವಂಗಳಂ ತೃಣ ಜಲಂಗಳಿಂ ಸಂತುಷ್ಟಿಯಂ ಹೊಂದಿಸಿ ಮಾರ್ಗಶ್ರಮವು ಪೋಗುವಂತೆ ಈ ಅಶ್ವಂ ಗಳ ಹಿಂಭಾಗವಂ ಜಲದಿಂ ನನೆಯಿಸಿ ಸಲಹುತಿರುವುದೆಂದು ಆಜ್ಞಾಪಿಸಲು, ಆ ಸಾರಥಿಯು ರಾಯನಂ ಕುಱಿತು-ತಮ್ಮ ಅಪ್ಪಣೆಯಾದಂತೆ ನಡೆದುಕೊಳ್ಳುವೆನೆಂದು ರಾಯನ ಧನುರ್ಬಾಣ ಆಯುಧಗಳಂ ತೆಗೆದುಕೊಂಡು ರಥವಂ ಹಿಂದಿರಿಗಿಸಿ ಕೊಂಡು ಪೋಗಲು—

ಆದುಷ್ಯಂತರಾಯನೊಬ್ಬನೇ ಪಾದಚಾರಿಯಾಗಿ ಆ ತಪೋವನಾಭಿಮುಖ ನಾಗಿ ತಿರುಗಿ, ಎಲ್ಲಾ ಕಡೆಯಂ ನೋಡುತ ಬಂದು, ಆ ತಪೋವನದ ಬಾಗಿಲಂ ದಾಂಟಿ, ಒಳಕ್ಕೆ ಪೊಕ್ಕುಹೋಗುತ್ತ, ಶುಭಶಕುನವಾಗುವುದಂ ತಿಳಿದು, " ಈ ತಪೋವನವು ಶಾಂತಗುಣಾಶ್ರಯವಾಗಿರುವುದು, ಎನ್ನ ಬಲಭುಜವು ಹಾಱುತ್ತಿರುವುದು; ಈ ಶುಭಶಕುನಕ್ಕೆ ಇಲ್ಲಿ ಏನು ಫಲವುಂಟಾಗುವುದೊ ತಿಳಿಯದು. ಮತ್ತು ಎಲ್ಲಿಯಾ ದರೂ ಆಗತಕ್ಕಂಥ ಕಾರ್ಯಗಳು ಆಗುವುದಲ್ಲದೆ ನಿಲ್ಲಲಾಱವು'' ಎಂದು ಯೋಚ ನೆಯಂ ಗೆಯ್ಯುತ ಬರುತ್ತಿರಲು—

ಇತ್ತಲಾಕಣ್ವಮುನಿಪೋಷಿತ ಪುತ್ರಿಯಾದ ಶಕುಂತಲಾದೇವಿಯು ಅನ ಸೂಯಾಪ್ರಿಯಂವದೆಯರೆಂಬ ಈರ್ವ ಸಖಿಯರಿಂದೊಡಗೂಡಿ ಕ್ರೀಡಿಸುತ್ತ, ಆ ಸಖಿ ಯರಂ ಕುಱಿತು—ಎಲೌ ಸಖಿಯರುಗಳಿರಾ ! ಇತ್ತ ಬನ್ನಿರೆಂದು ಕರೆಯಲು ;

ಆ ರಾಯನು ಈ ಧ್ವನಿಯಂ ಕೇಳಿ—ಇದೇನೊ ದಕ್ಷಿಣದಿಕ್ಕಿನಲ್ಲಿರುವ ವೃಕ್ಷಂಗಳ ಸಾಲುಗಳಲ್ಲಿ ಸ್ತ್ರೀಯರುಗಳಾಡುವ ಸವಿನುಡಿಯು ಕೇಳಬರುವುದು, ಜಾಗ್ರತೆಯಿಂದಾಸ್ಥಳಕ್ಕೆ ಪೋಗುವೆನೆಂದು ಅಡಿಯಿಡುತ, ಮುಂದುವಾಯ್ದು ವಿನೋದದಿಂ ವಿಹಾರವಂ ಗೆಯ್ಯುತಿರುವ ಶಕುಂತಲೆ ಮೊದಲಾದ ಮೂಱು ಮಂದಿ ಸ್ತ್ರೀಯರಂ ಕಂಡು, ಸ್ವಲ್ಪದೂರದಲ್ಲಿ ತಿರುಗಿ ಆ ಸ್ತ್ರೀಯರಂ ನೋಡಿ-ಅದೋ ಋಷಿ ಕನ್ಯೆಯರುಗಳು ತಮ್ಮತಮ್ಮ ಬಲಕ್ಕೆ ಅನುಕೂಲವಾದ ನೀರನ್ನಿಱಿವ ಕುಂಭಂಗಳಂ ಪಿಡಿದು ಸಸಿಗಳಿಗೆ ಜಲವಂ ಪೊಯ್ಯುವುದಕ್ಕೋಸುಗ ಮೆಲ್ಲಮೆಲ್ಲನೆ ಪಲ್ಲವದಂತೆ ಮೃದುವಾದ ಹಜ್ಜೆಗಳನ್ನಿಡುತ ಇತ್ತಬನ್ನಿರೆಂದು ಸಖಿಯರಂ ಕರೆಯುತ್ತಲಿರುವ ರೆಂದು ಆ ಬಾಲೆಯರ ದೇಹಸೌಂದರ್ಯವಂ ನೋಡಿ ಸಂತುಷ್ಟನಾಗಿ, " ಸುಂದರಾ

ಕಾರರಾದ ಈ ಸುಂದರಿಯರ ಸಂದರ್ಶನವು ಹೃದಯಾನಂದವನ್ನುಂಟುಮಾಡುತ್ತಿರುವುದು ಆಶ್ಚರ್ಯವಾಗಿ ತೋರುವುದು. ಏಕೆಂದರೆ— ಈ ತಪೋವನದಲ್ಲಿ ಕಂದಮೂಲಂಗಳಂ ಭಕ್ಷಿಸಿಕೊಂಡು ವಾಸವಂ ಗೆಯ್ಯುವ ಈ ಸ್ತ್ರೀಯರುಗಳ ರೂಪಲಾವಣ್ಯ ಸೌಂದರ್ಯಾದಿಗುಣಗಳು ದೊರೆಯಾದ ಎನ್ನ ಅಂತಃಪುರದಲ್ಲಿರುವ ಸ್ತ್ರೀಯರುಗಳಿಗೂ ದುರ್ಲಭಂಗಳಾಗಿರುವುವು. ಇದಲ್ಲದೆ ಈ ವನದಲ್ಲಿ ವೃದ್ಧಿಯಂ ಪೊಂದಿರುವ ದುಂಡುಮಲ್ಲಿಗೆ ಜಾಜಿ ಸೇವಂತಿಗೆ ಮೊದಲಾದ ಲತೆಗಳು ಪುಷ್ಪಪರಿಮಳ ಮೊದಲಾದ ತಮ್ಮ ತಮ್ಮ ಗುಣಗಳಿಂ ಎನ್ನ ಉಪವನದಲ್ಲಿರುವ ಲತೆಗಳಂ ತಿರಸ್ಕಾರವಂ ಗೈಯ್ಯುತಿರುವುವು-ಎಂದು ತಿಳಿದು, ಆದರೂ ಈ ಸ್ತ್ರೀಯರುಗಳು ಮಾಡುವ ಚೇಷ್ಟೆಗಳಂ ಇವರ ಶೀಲಾದಿಗುಣಗಳಂ ಈ ವೃಕ್ಷದ ಮರೆಯನ್ನನುಸರಿಸಿ ತಿಳಿಯುವೆನೆಂದು ಸಂತುಷ್ಟನಾಗಿ ಬರುತಿರ್ದನು.

ಎಂಬಲ್ಲಿಗೆ

ಗದ್ಯ— ಚಂಡಕರಮಂಡಲೋಚ್ಚಂಡತೇಜಃಪ್ರಕಾಂಡಕಾಂಡಷಂಡಖಂಡಿತಾಖಂಡ ಶೌರ್ಯ ಪರಿಮಂಡಿತ ಭಂಡನೋದ್ದಂಡಾರಿ ಮಂಡಲಕಂಡೂಲದೋರ್ದಂಡಪಾಂಡಿತ್ಯ ಪಾಂಡುರುಚಿಖಂಡಡಿಂಡೀರಪುಂಡರೀಕ ಪರಿಪಾಂಡುರಯಶಃ ಪಿಚಂಡಿಲ ಬ್ರಂಹಾಂಡಭಾಂಡೋದ್ಭಟ ಕಾಲಕೂಟಪ್ರತಿಭಟ ಕಟುಕಪಟ ನಿಶಾಟಕೂಟ ಪಾಟನಲಂಪಟನಿಟಿಲಪುಟಘಟಿತ ವಿಕಟ ಕೃಪೀಟಯೋನಿ ಕುಟಿಲಮೋಹಾಂಧಕಾರಚ್ಛಟಾವಿಘಟನ ಪಟುನಟನ್ಮಹಾನಟ ಮುಕುಟತಟಪರ್ಯಟತ್ತಟನೀತಟಾಂತರಿಂಗದಭಂಗೋತ್ತುಂಗತರಂಗ ಸಂಗರಭಂಗಸಂಭ್ರಮೋಜ್ಜೃಂಭಮಾಣಗಂಭೀರವಾಗ್ಗುಂಭ ಸಂಭಾವಿತ ಗರನಗರ ವರನಿಲಯ ಚಂದ್ರಚೂಡಚರಣಾರವಿಂದ ಸೇವಾಮರಂದ ನಿರಂತರನಿಷೇವಣ ಸ್ವಯಂವೃತಕವಿತಾವಧೂರತ್ನ ರಾಜಾಧಿರಾಜಮಹಾರಾಜ ಶ್ರೀಚಾಮರಾಜ ಪುತ್ರಾತ್ರೇಯಸಗೋತ್ರ ಪವಿತ್ರಚರಿತ್ರ ಶಂಖಚಕ್ರ ಮಕರ ಮತ್ಸ್ಯ ಶರಭಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ನರಪತಿಬಿರುವ ಶ್ರೀಚಾಮುಂಡಿಕಾವರಪ್ರಸಾದಲಬ್ಧ ಮಹೀಶೂರಮಹಾಸಂಸ್ಥಾನದೇದೀಪ್ಯಮಾನಕುಲಕ್ರಮಾಗತದಿವ್ಯರತ್ನಸಿಂಹಾಸನಾರೂಢ ಶ್ರೀಕೃಷ್ಣರಾಜಕಂಠೀರವರು ಸರಸಜನಾನಂದಕರವಾಗಿ ಲೋಕೋಪಕಾರಾರ್ಥವಾಗಿ ನವರಸಭರಿತವಾಗಿ ಕರ್ಣಾಟಕಭಾಷೆಯಿಂ ವಿರಚಿಸಿದ ಕೃಷ್ಣರಾಜವಾಣೀವಿಲಾಸರತ್ನಾಕರವೆಂಬ ಶಾಕುಂತಳನಾಟಕದ ನವೀನ ಟೀಕಿನಲ್ಲಿ ದುಷ್ಯಂತರಾಯನು ಕಣ್ವಾಶ್ರಮವಂ ಪ್ರವೇಶಿಸಿ ಶಕುಂತಲೆ ಮೊದಲಾದವರ ವಿಲಾಸವಂ ನೋಡುತಿರ್ದನೆಂಬ ಪ್ರಥಮಕಲ್ಲೋಲದಲ್ಲಿ ದ್ವಿತೀಯತರಂಗಂ.

ಪ್ರಥಮಕಲ್ಲೋಲದ ತೃತೀಯತರಂಗ

ಅನಂತರದಲ್ಲಿ ಆ ಶಕುಂತಲೆಯು ತನ್ನ ಪ್ರಿಯಸಖಿಯರಾದ ಅನಸೂಯೆ ಪ್ರಿಯಂವದೆಯರಿಂದೊಡಗೂಡಿ ಸಂಪಿಗೆ ಪುನ್ನಾಗ ಮೊದಲಾದ ಲತೆಗಳಿಗೆ ನೀರನ್ನೆರೆ ಯುತ ಆ ಸಖಿಯರುಗಳಂ ಕರೆಯುತಿರಲು—

ಅನಸೂಯೆಯು—"ಎಲೆ ಶಕುಂತಳೆ! ಯಾವ ಕಾರಣದಿಂದೀಯಿರುವಂತಿಗೆ ಯ ಮಾಲೆಯಂತೆ ಮೃದುವಾದ ಶರೀರವುಳ್ಳ ನಿನ್ನಂ ಈ ವೃಕ್ಷಗಳ ಪಾತಿಗಳಿಗೆ ನೀರೆರೆಯುವಂತೆ ನಿನ್ನ ತಂದೆಯಾದ ಕಣ್ವಮುನಿಯು ನೇಮಿಸಿರುವನೋ ಅದರಿಂ ನಿನ್ನ ತಂದೆಗೆ ನಿನ್ನಮೇಲಣ ಪ್ರೀತಿಗಿಂತಲೂ ಈ ಆಶ್ರಮವೃಕ್ಷಂಗಳಲ್ಲಿ ಅಧಿಕಪ್ರೇಮ ವಿರುವುದೆಂದು ಊಹಿಸುತ್ತಿರುವೆನು" ಎನಲಾಶಕುಂತಲೆಯು–" ಎಲೆ ಅನಸೂಯೆ, ಎನ್ನ ತಂದೆಯ ಆಜ್ಞೆಮಾತ್ರವೆ ಮುಖ್ಯವಲ್ಲ, ಎನಗೂ ಈ ವೃಕ್ಷಂಗಳಲ್ಲಿ ಒಡ ಹುಟ್ಟುಗಳಲ್ಲಿರುವ ವಿಶ್ವಾಸವಿದುವುದರಿಂದಲೇ ಇಂತು ಸಂತೋಷದಿಂದೀ ಪಾತಿ ಗಳಿಗೆ ಜಲವನ್ನೆರೆಯುವೆ"ನೆಂದು ಪೇಳುತ್ತಿರಲು ;

ಆ ದುಷ್ಯಂತರಾಯನು ಶಕುಂತಲೆಯು ಸಖಿಯರಿಂದೊಡಗೂಡಿ ವೃಕ್ಷಂಗ ಳಿಗೆ ಜಲವನ್ನೆರೆಯುವ ವಿಲಾಸವಂ ನೋಡುತ್ತ—" ಇಂಥ ಸೌಂದರ್ಯಾತಿಶಯ ವುಳ್ಳ ಶಕುಂತಲೆಯು ಹೇಗೆ ಕಣ್ವಮುನೀಶ್ವರನ ಪುತ್ರಿಯಾಗುವಳು? ಆದರೂ ಈ ಋಷಿಯು ಮನೋಹರಾಂಗಿಯಾದ ಈ ಶಕುಂತಲೆಯನ್ನು ತಪೋವನಯೋಗ್ಯವಾದ ವೃಕ್ಷಂಗಳಿಗೆ ನೀರೆರೆಯುವ ಕಾರ್ಯದಲ್ಲಿ ನೇಮಿಸಿರುವನಾದ್ದರಿಂದ ಯುಕ್ತಾಯು ಕ್ತವಾದ ಕಾರ್ಯಂಗಳಂ ತಿಳಿದವನಲ್ಲವೆಂದು ತೋರುವುದು. ಮತ್ತು ರಾಜಯೋ ಗ್ಯವಾದ ವಸ್ತ್ರಾಭರಣಂಗಳೇನಿಲ್ಲದಿದ್ದರೂ ಮನವನ್ನಪಹರಿಸುವ ಈ ಶಕುಂತಲೆಯಂ ಯಾವ ಋಷಿಯು ತಪವಂ ಗೆಯ್ಯುವುದಕ್ಕೆ ಯೋಗ್ಯಳನ್ನಾಗಿ ಮಾಡಬೇಕೆಂದು ಇಚ್ಛೈಸುತ್ತಿರುವನೋ ಅವನ ಪ್ರಯತ್ನವು ಕನ್ನೈದಿಲೆಯ ದಳದಿಂದ ಚಂಚಲವಾಗಿ ಕಠಿನವಾಗಿರುವ ಮಿಂಚಿನ ಬಳ್ಳಿಯಂ ಛೇದಿಸಲಿಚ್ಛೈಸುವ ಮನುಜನ ಬುದ್ಧಿಯಂತೆ ತೋರುವುದು. ಆದರೂ ಈ ಶಕುಂತಲೆಯು ಸಖಿಯರಿಂದೊಡಗೂಡಿ ನಾನಾವಿಧ ವಿಲಾಸವಂ ಗೆಯ್ಯುತ್ತ ಸವಿನುಡಿಯಂ ನುಡಿಯುವುದಂ ನೋಡುವುದಕ್ಕೆ ಸದ್ದು ದೋರದಂತೆ ನಿಂತುಕೊಳ್ಳುವೆ" ನೆಂದು ಯೋಚಿಸುತ್ತಿರಲು—

ಅತ್ತ ಶಕುಂತಲೆಯು ಉಬ್ಬಿಬರುವ ಯೌವನಶಾಲಿಯಾಗಿ ಅನಸೂಯೆಯಂ ಕುಱಿತು—“ ಎಲೆ ಅನಸೂಯೆ, ಈ ಪ್ರಿಯಂವದೆಯು ಸ್ವಲ್ಪವಾದರೂ ದಯವಿಲ್ಲದೆ ನಾರ ಸೀರೆಯಿಂ ಎನ್ನ ಸ್ತನಂಗಳಂ ಕಟ್ಟಿ ಬಿಗಿದಿರುವಳು. ನೀನು ಜಾಗ್ರತೆಯಿಂ ಎನ್ನ ಎದೆಗಟ್ಟಂ ಸಡಿಲವಂ ಗೆಯ್ಯುವು”ದೆಂದು ನುಡಿಯಲಾಅನಸೂಯೆಯು-ಹಾಗೆ ಆಗಲೆಂದು, ಕುಟ್ಮಲಕುಚಕ್ಕೆ ಕಟ್ಟಿರುವ ನಾರ ಸೀರೆಯಂ ಸಡಿಲವಂಗೆಯ್ಯುತ್ತಿರಲಾ ಪ್ರಿಯಂವದೆಯು-“ ಎಲೆ ಶಕುಂತಲೆ, ನಿನ್ನ ವಕ್ಷಸ್ಸ್ಥಳದಲ್ಲಿ ಪ್ರತಿಕ್ಷಣದಲ್ಲಿಯೂ ಕುಚಂಗಳ ವಿಸ್ತಾರವಂ ಗೆಯ್ಯುತ್ತಿರುವ ಯೌವನವಂ ನಿಂದಿಸಬೇಕಲ್ಲದೆ ಪ್ರಿಯಂವದೆಯು ನಿರ್ದಯದಿಂ ಬಂಧಿಸಿದಳೆಂದು ಏಕೆ ಎನ್ನಂ ದೂರುತ್ತಿರುವೆ ” ಎಂದು ನುಡಿಯಲು—

ಇತ್ತಲಾದುಷ್ಯಂತರಾಯನು “ ಈ ಶಕುಂತಲೆಯು ಸ್ತನಂಗಳಲ್ಲಿ ಧರಿಸಿರುವ ನಾರ ಸೀರೆಯು ಇವಳಿಗೆ ಅಯೋಗ್ಯವಾಗಿ ತೋಱುವುದು. ಅದರೂ ಈ ನಾರಸೀರೆಯು ಈ ಶಕುಂತಲೆಗೆ ಅಲಂಕಾರವಾದ ಕಾಂತಿಯನ್ನುಂಟುಮಾಡುತ್ತಿರುವುದು. ಹೇಗೆಂದರೆ—ಕಮಲವು ಪಾಚಿಯಿಂ ಯುಕ್ತಮಾಗಿದ್ದರೂ ಹೇಗೆ ಸುಂದರವಾಗಿ ತೋಱುವುದೋ, ಗಗನದಲ್ಲಿ ಚಂದ್ರನು ಕಲಾಮಾತ್ರನಾಗಿ ಮಲಿನವಾಗಿದ್ದರೂ ಹೇಗೆ ಒಂದಾನೊಂದು ಕಾಂತಿಯಂ ಬೀಱುತ್ತಿರುವನೋ, ಅತ್ಯಂತಕೃಶಳಾದ ಈ ಶಕುಂತಲೆಯು ನಾರ ಸೀರೆಯಿಂ ಯುಕ್ತಳಾಗಿದ್ದರೂ ಹೇರಳವಾದ ಸೌಂದರ್ಯವನ್ನುಂಟುಮಾಡುವಳು. ಹಾಗೆಯೇ ಸರಿ ! ಲೋಕದಲ್ಲಿ ಸ್ವಭಾವವಾಗಿ ಸುಂದರಾಕಾರವಾದ ಆಕಾರವುಳ್ಳವರಿಗೆ ದಿವ್ಯವಾದ ವಸ್ತ್ರಾಭರಣಂಗಳು ಅಲಂಕಾರವನ್ನುಂಟುಮಾಡಲಾಱವು; ಅವರ ಆಕಾರವೇ ಮನೋಹರವಾಗಿರುವುದು ” ಎಂದು ಶಕುಂತಲೆಯ ಸರ್ವಾಂಗವಂ ನೋಡುತ್ತಿರಲು—

ಇತ್ತಲಾಶಕುಂತಲೆಯು “ ಎಲೌ ಸಖಿಯರುಗಳಿರಾ ! ಮುಂಭಾಗದಲ್ಲಿ ವಿರಾಜಿಸುತ್ತಿರುವ ಈ ಕೇಸರವೃಕ್ಷವು ವಾಯುವಿನಿಂದ ಚಲಿಸುತಿರುವ ತನ್ನ ಚಿಗುರುಗಳೆಂಬ ಬೆರಳುಗಳಿಂ ಎನ್ನಂ ಕರೆಯುವುದೋ ಎಂಬಂತೆ ತೋಱುವುದಾದ್ದಱಿಂದೀ ವೃಕ್ಷಕ್ಕೆ ಜಲವನೆಱೆದು ಸಂತೋಷವಂ ಪುಟ್ಟಿಸುತ್ತಿರುವೆ ” ನೆಂದು ಪೇಳುತ್ತಿರಲಾ ಪ್ರಿಯಂವದೆಯು-“ ಎಲೆ ಶಕುಂತಲೆಯೇ ! ನೀನು ಆ ಕೇಸರವೃಕ್ಷದ ಸಮೀಪಕ್ಕೆ ಹೋಗದೆ ಒಂದು ಮುಹೂರ್ತವಿಲ್ಲೇ ಇರು. ಏಕೆಂದರೆ-ಲತಾಂಗಿಯಾದ ನೀನು ಅದಱ ಸಮೀಪಕ್ಕೆ ಪೋಗಲಾಕೇಸರ ವೃಕ್ಷವು ಲತೆಯಿಂದೊಡಗೂಡಿದಂತೆ ತೋಱುವು ”ದೆಂದು ವಿನೋದವಾಕ್ಯವಂ ನುಡಿಯಲಾಶಕುಂತಲೆಯು—“ ಎಲೆ ಪ್ರಿಯಂ

ವದೆ, ಈಪ್ರಕಾರವಾಗಿ ಪ್ರಕೃತೋಚಿತವಾದ ವಾಕ್ಯವಂ ಪೇಳುವುದಱಿಂದಲೇ ಪ್ರಿಯಂವದೆಯೆಂಬ ಪೆಸರುಳ್ಳವಳಾದೆ'' ಎಂದು ಸರಸೋಕ್ತಿಯಂ ನುಡಿಯುತ್ತಿರಲು;

ಇತ್ತಲೀ ರಾಯನು-ಪ್ರಿಯಂವದೆಯು ಪ್ರಿಯವಾಕ್ಯವನ್ನಾದರೂ ಯಥಾರ್ಥವಾಗಿ ಪೇಳಿದಳು. ಹೇಗೆಂದರೆ—ಈ ಶಕುಂತಲೆಯ ಅಧರವು ಚಿಗುರಿನಂತೆ ಕೆಂಪಾಗಿ ತೋಱುವುದು. ಇವಳ ತೋಳುಗಳು ಮೃದುವಾದ ಕಲ್ಪವೃಕ್ಷದ ಕೊಂಬೆಗಳ ಚಂದವನ್ನನುಸರಿಸುತ್ತಿಗುವುವು. ಮತ್ತು ಮಕರಂದಭರಿತವಾದ ಪುಷ್ಪದಂತೆ ಆಶೆಯಂ ಪೊಂದಿಸುತಿರುವ ಯೌವನವು ಇವಳ ಸರ್ವಾಂಗದಲ್ಲಿ ಸಂಪೂರ್ಣವಾಗಿರುವುದೆಂದು, ಸಂತುಷ್ಟಹೃದಯನಾಗಿ ಆ ಶಕುಂತಲೆಯಂ ನೋಡುತ್ತಿರಲು—

ಇತ್ತಲಾ ಅನಸೂಯೆಯು ಆ ಶಕುಂತಳೆಯಂ ಕುಱಿತು- "ಎಲೆ ಶಕುಂತಳೆ, ಮುಂಭಾಗದಲ್ಲಿರುವ ಸೀಮಾವಿನ ಮರಕ್ಕೆ ವಿವಾಹಸ್ತ್ರೀಯಂತೆ ಮುಱಿಯುವ ವನಜ್ಯೋತ್ಸ್ನೆಯೆಂಬ ನಾಮವಂ ಪಡೆದಿರುವೀಯಿರುವಂತಿಗೆಯ ಲತೆಯಂ ನೀನು ಮಱಿತಿರುವಂತೆ ತೋಱುವು''ದೆನ್ನಲು ; ಶಕುಂತಳೆಯು-"ಎಲೆ ಅನುಸೂಯೆ, ನೀನು ಪೇಳಿದಂತೆ ಈ ಲತೆಯಂ ಮಱಿತವಳಾದರೆ ಎನ್ನ ದೇಹವಂ ಮಱಿಯುವುದಱಲ್ಲಿ ಸಂದೇಹವಿಲ್ಲ'' ಎಂದು ನುಡಿದು, ಆ ಇರುವಂತಿಗೆಯ ಬಳ್ಳಿಯ ಸಮೀಪವಂ ಸೇರಿ- "ಎಲೌ ಸಖಿಯರುಗಳಿರಾ, ಮನೋಹರವಾದ ಈ ವಸಂತಕಾಲದಲ್ಲಿ ಇರುವಂತಿಗೆಯ ಲತೆಗೂ ಈ ಸೀಮಾವಿನ ಮರಕ್ಕೂ ಸಂಬಂಧವು ಚೆನ್ನಾಗಿ ಉಂಟಾದುದು. ಮತ್ತು ನೂತನವಾದ ಪುಷ್ಪಗಳಿಂ ಭರಿತವಾಗಿ ಯೌವನಶಾಲಿನಿಯಾದ ಈ ವನಜ್ಯೋತ್ಸ್ನೆಯಂ ಅಧಿಕಪಲ್ಲವದಿಂ ಯುಕ್ತವಾದ ಈ ಸೀಮಾವಿನ ಮರವು ವಿಟಪುರುಷನಂತೆ ಅನುಭವಿಸುವುದಕ್ಕೆ ಯೋಗ್ಯವಾಗಿರುವುದು'' ಎಂದು ನುಡಿದು, ಆ ಮಾವಿನ ಮರಕ್ಕೆ ಸುತ್ತಿರುವ ಆ ಇರುವಂತಿಗೆಯ ಲತೆಯಂ ಅನುರಾಗದಿಂ ನೋಡುತ್ತಿರಲು; ಪ್ರಿಯಂವದೆಯು ಶಕುಂತಳೆಯಂ ನೋಡಿ, ಮುಗುಳುನಗೆಯಿಂ ಯುಕ್ತಳಾಗಿ ಅನಸೂಯೆಯಂ ಕುಱಿತು- "ಎಲೆ ಅನಸೂಯೆ, ಈ ಮಾವಿನ ಮರಕ್ಕೆ ಸುತ್ತಿರುವ ವನಜ್ಯೋತ್ಸ್ನೆ ಯೆಂಬ ಲತೆಯಂ ಪ್ರೇಮದಿಂ ನೋಡುವ ಈಶಕುಂತಳೆಯ ಅಭಿಪ್ರಾಯವಂ ತಿಳಿದೆಯೋ ಏನು?'' ಎಂದು ಕೇಳಲಾ ಅನುಸೂಯೆಯು-"ಎಲೆ ಪ್ರಿಯಂವದೆಯೇ ನಾನಱಿಯೆನು. ನೀನವಳ ಮನೋವೃತ್ತಿಯಂ ತಿಳಿದಿದ್ದಲ್ಲಿ ಪೇಳುವುದು'' ಎನ್ನಲಾ ಪ್ರಿಯಂವದೆಯು "ಎಲೆ ಅನಸೂಯೆ, ಕೇಳು. ಹೇಗೆ ಈ ವನಜ್ಯೋತ್ಸ್ನೆಯೆಂಬ ಲತೆಯು ತನಗೆ ಯೋಗ್ಯವಾದ ಸೀಮಾವಿನ ಮರದೊಡನೆ ಕೂಡಿರುವುದೊ ಹಾಗೆ ತಾನು ತನಗೆ ಅನುರೂಪ

ನಾದ ಪುರುಷನಂ ಪೊಂದಬೇಕೆಂಬ ಅಭಿಲಾಷೆಯಿಂದೀಶಕುಂತಳೆಯು ಆ ಬಳ್ಳಿಯಂ ಬಹಳವಾಗಿ ನೋಡುತಿರುವಳು'' ಎಂದು ನುಡಿಯಲಾವಾಕ್ಯಕ್ಕೆ ಶಕುಂತಳೆಯು—“ ಎಲೆ ಪ್ರಿಯಂವದೆ, ಎನ್ನ ಹೃದಯಗತವಾದ ಮನೋರಥವಂ ಯಥಾರ್ಥವಾಗಿ ಪೇಳಿರುವೆ'' ಎಂದು ನುಡಿದು, ಹಸ್ತದಲ್ಲಿರುವ ಕುಂಭದಿಂದಾವೃಕ್ಷಂಗಳಿಗೆ ಜಲವಂ ಪೊಯ್ಯುತ್ತಿರಲು—

ಇತ್ತಲಾ ದುಷ್ಯಂತರಾಯನು—ಈ ಶಕುಂತಳೆಯು ಋಷೀಶ್ವರನಾದ ಕಣ್ವಮುನೀಶ್ವರನಿಗೆ ಕ್ಷತ್ರಿಯ ಜಾತಿಯ ಪತ್ನಿಯಲ್ಲಿ ಪುಟ್ಟಿರುವಳೋ, ಬ್ರಾಹ್ಮಣ ಜಾತಿಯ ಪತ್ನಿಯಲ್ಲಿ ಪುಟ್ಟಿರುವಳೋ ತಿಳಿಯದು. ಎನ್ನ ಮನೋರಥವಿದ್ದಂತೆ ಈ ಶಕುಂತಳೆಯು ಕ್ಷತ್ರಿಯ ಜಾತಿಯ ಪತ್ನಿಯಲ್ಲೇ ಪುಟ್ಟಿದವಳಾದರೆ ಎನ್ನ ಸಂದೇಹದಿಂ ಪ್ರಯೋಜನವೇ ಇಲ್ಲವೆಂದು ಆಲೋಚನೆಯಂ ಗೆಯ್ಯುತ್ತ—ಇವಳು ಕ್ಷತ್ರಿಯ ಪುತ್ರಿಯೇ ಸರಿ. ಹೇಗೆಂದರೆ—ಯಾವ ಕಾರಣದಿಂದೀಶಕುಂತಳೆಯಲ್ಲಿ ಪೂಜ್ಯವಾದ ಎನ್ನ ಮನವು ಅಭಿಲಾಷೆಯುಳ್ಳದಾಗಿರುವುದೊ ಅದರಿಂದಿವಳು ಕ್ಷತ್ರಿಯ ಪುರುಷನಿಂ ವಿವಾಹ ಮಾಡಿಕೊಳ್ಳುವುದಕ್ಕೆ ಯೋಗ್ಯಳಾಗಿರುವಳು. ಹೇಗೆಂದರೆ—ಲೋಕದಲ್ಲಿ ಸತ್ಪುರುಷರಾದವರಿಗೆ ಪದಾರ್ಥಂಗಳಲ್ಲಿ ಸಂದೇಹವುಂಟಾಗುತಿರಲಾಗಿ ಅವರ ಮನೋವೃತ್ತಿಗಳೇ ಸಂದೇಹವಂ ಪರಿಹರಿಸುವುದರಲ್ಲಿ ಪ್ರಮಾಣಗಳಾಗಿರುವುವು, ಎಂದು ಊಹಿಸುತ್ತ, ಹೇಗಾದರೂ ಯಥಾರ್ಥವಾಗಿ ಈ ಶಕುಂತಳೆಯ ವೃತ್ತಾಂತವನ್ನು ತಿಳಿಯಬೇಕೆಂದು ಯೋಚಿಸುತ್ತಿರಲು—

ಆ ಬಳಿಕ ಶಕುಂತಳೆಯು ತ್ವರೆಯಿಂದೊಡಗೂಡಿ ಬಂದು—ಎಲೆ ಪ್ರಿಯಸಖಿಯರುಗಳಿರಾ! ಇರುವಂತಿಗೆಯ ಲತಗೆ ಜಲವನ್ನೆರೆಯಲು ಭ್ರಮರವು ಆ ಲತೆಯಂ ಬಿಟ್ಟು ಬೇಗದಿಂದೆನ್ನ ಮುಖಕ್ಕೆ ಎದುರಾಗಿ ಬರುವುದೆಂದು ನುಡಿದು ಆ ತುಂಬಿಯ ಬಾಧೆಗೆ ಭಯಪಡುತ್ತಿರಲು—

ಆ ದುಷ್ಯಂತರಾಯನು ಶಕುಂತಳೆಯ ವಾಕ್ಯವಂ ಕೇಳಿ, ಆ ಭ್ರಮರದ ಬಾಧೆಗೆ ಭಯಪಡುತ್ತಿರುವ ಶಕುಂತಳೆಯಂ ನೋಡಿ, ಅವಳ ಮುಖಕಮಲಕ್ಕೆ ಎರಗುತ್ತಿರುವ ತುಂಬಿಯಂ ಕುರಿತು—ಎಲೈ ತುಂಬಿಯೇ, ಚಂಚಲವಾದ ಕಡೆಗಣ್ಣ ನೋಟವುಂಟಾಗುವಂತೆ ನೇತ್ರಂಗಳಿಂ ನೋಡುತ್ತಿರುವ, ಭಯದಿಂ ನಡಗುತ್ತಿರುವ ಶಕುಂತಳೆಯಂ ಬಹಳವಾಗಿ ಸ್ಪರ್ಶನವಂ ಗೆಯ್ಯುತ್ತಿರುವೆ ; ಏಕಾಂತವಾಗಿ ಏನೋ ಒಂದು ವಾಕ್ಯವಂ ಪೇಳುವನಂತೆ ಅವಳ ಕರ್ಣಂಗಳ ಸಮೀಪದಲ್ಲಿ ಮೃದುವಾಗಿ ಸಂಚರಿಸುತ್ತಿರುವೆ; ಎರಡು ಕರಂಗಳಂ ಕೊಡುಹುತ್ತಿರುವ ಆ ಶಕುಂತಳೆಯ

ರತಿಗೆ ಮೂಲಧನವಾದ ಅಧರವಂ ಪಾನವಂ ಗೆಯ್ಯುತ್ತಿರುವೆ. ಇಂಥ ಮನೋಹರಳಾದ ಈ ಶಕುಂತಲೆಗೆ ನೊದಲು ಪೇಳಿದ ಕಾರ್ಯಂಗಳಂ ನಡೆಸಿ ಇರುವೆಯಾದ್ದರಿಂದ ನೀನು ಬುದ್ಧಿಶಾಲಿಯಾಗಿ ತೋಱುತಿರುವೆ. ನಾನು ಈ ಶಕುಂತಲೆಯು ಯಾವ ಜಾತಿಯವಳೆಂದು ಯಥಾರ್ಥವಂ ಹುಡುಕುವುದಱಿಂದಲೇ ವಂಚಿತನಾಗಿರುವೆನು, ಎಂದು ಆ ಭ್ರಮರವಂ ಸ್ತೋತ್ರವಂ ಗೈದು,- ಆ ತುಂಬಿಯಂತೆ ಎನಗೆ ಆ ಶಕುಂತಲೆಯು ಅಂಗಸಂಗವು ದೊರಕಲಿಲ್ಲವಲ್ಲಾ, ಎಂದು ಚಿಂತಿಸುತ್ತಿರಲು.

ಆ ಶಕುಂತಲೆಯು ಪದ್ಮಿನೀಜಾತಿ ಸ್ತ್ರೀಯಾದ್ದರಿಂದ ಭ್ರಮರವು ಕಮಲಗಂಧವುಳ್ಳ ಆ ಶಕುಂತಲೆಯ ಮುಖವನ್ನನುಸರಿಸಿ ಒರುತಿರಲು; ಆ ಶಕುಂತಲೆಯು "ಎಲೌ ಸಖಿಯರುಗಳಿರಾ, ದುಷ್ಟವಾದ ಈ ತುಂಬಿಯಿಂ ತಿರಸ್ಕಾರವಂ ಪಡೆದಿರುವ ಎನ್ನಂ ಸಂರಕ್ಷಿಸಿ ಸಂರಕ್ಷಿಸಿ " ಎಂದು ಅಧಿಕವಾಗಿ ಕೂಗಲು ; ಸಖಿಯರೀರ್ವರು ಆ ಶಕುಂತಲೆಯ ವಾಕ್ಯವಂ ಕೇಳಿ ಮುಗುಳ್ನಗೆಯಿಂದೊಡಗೂಡಿ-"ಎಲೆ ಶಕುಂತಲೆ, ನಿನ್ನಂ ಸಂರಕ್ಷಿಸುವುದಕ್ಕೆ ನಾವಾರು ? ಈ ತಪೋವನವಂ ದೊರೆಯಾದವನು ಸಂರಕ್ಷಿಸುವನಾದ್ದರಿಂದ ದುಷ್ಯಂತರಾಯನಂ ಕೂಗಿದಲ್ಲಿ ನಿನ್ನಂ ಸಂರಕ್ಷಿಸುವನು'' ಎಂದು ವಿನೋದವಂ ಗೆಯ್ಯಲು —

ಆ ದುಷ್ಯಂತರಾಯನಾವಾಕ್ಯವಂ ಕೇಳಿ,- ಎನ್ನ ಶರೀರವಂ ಈ ಸ್ತ್ರೀಯರಿಗೆ ತೋಱಿಸುವುದಕ್ಕೆ ಇದೇ ಸಮಯವು ಚೆನ್ನಾಗಿಯಿರುವುದೆಂದು ಮನದಲ್ಲಿ ತಿಳಿದು, ಮುಂಬರಿದು ಬಂದು, "ಎಲೌ ಇವನಾರು ಈ ಸ್ತ್ರೀಯರಲ್ಲಿ ದುರ್ವ್ಯಾಪಾರವಂ ಗೆಯ್ಯುವನು?'' ಎಂದು ಅರ್ಧವಚನವಂ ನುಡಿದು, ಅಷ್ಟಱಲ್ಲೇ ಯೋಚಿಸಿ, "ನಾನು ದೊರೆಯಾದ ದುಷ್ಯಂತರಾಯನೆಂಬುವುದು ಈ ಸ್ತ್ರೀಯರುಗಳಿಗೆ ತಿಳಿಯಗೊಡಬಾರದು. ಅದ್ದಱಿಂದ ಇನ್ನೊಂದು ಪ್ರಕಾರವಾದ ವಂಚನೆಯ ವಚನವಂ ನುಡಿಯುವೆನು'' ಎಂದು ಆಲೋಚನೆಯಂ ಗೆಯ್ಯುತ್ತಿರಲು—

ಶಕುಂತಳೆಯು ತನ್ನನ್ನೇ ಅನುಸರಿಸಿ ಬರುವ ಭ್ರಮರವಂ ಕಂಡು-"ಎಲೌ ಸಖಿಯರುಗಳಿರಾ! ಈ ದುಷ್ಟವಾದ ಭ್ರಮರವು ಎನ್ನಂ ಬಿಟ್ಟು ಪೋಗದೆ ಇರುವುದು. ಅದ್ದಱಿಂದ ಇನ್ನೊಂದು ಸ್ಥಳಕ್ಕೆ ಪೋಗುವೆನು''ಎಂದು ಕೆಲವು ಅಡಿಯಿಟ್ಟು ಹಿಂದಿರಿಗಿ ನೋಡಿ-" ಇಲ್ಲಿಗೂ ಈ ತುಂಬಿಯು ಎನ್ನಂ ಅನುಸರಿಸಿ ಬರುವುದು. ಏನು ಮಾಡಲಿ ?'' ಎಂದು ನುಡಿಯುತಿರಲು—

ದುಷ್ಯಂತರಾಯನು ಶಕುಂತಳೆ ಆಡಿದ ವಾಕ್ಯವಂ ಕೇಳಿ, ತಾನಿದ್ದ ವೃಕ್ಷದ ಮಱೆಯಂ ಬಿಟ್ಟು, ತ್ವರೆಯಿಂದೊಡಗೂಡಿ ಆ ಸ್ತ್ರೀಯರ ಮುಂಭಾಗದಲ್ಲಿ ಬಂದು ನಿಂದು

"ದುರ್ಮಾರ್ಗನಿರತರಾದ ಜನರುಗಳಿಗೆ ಶಿಕ್ಷಕನಾಗಿ ಪುರುವಂಶದಲ್ಲಿ ಪುಟ್ಟಿರುವ ದುಷ್ಯಂತರಾಯನು ಧರ್ಮದಿಂ ರಾಜ್ಯವಂ ಪರಿಪಾಲನೆಯಂ ಗೆಯ್ಯುವಲ್ಲಿ ಸುಂದರಾಕಾರರಾಗಿ ಏನನ್ನೂ ತಿಳಿಯದೆ ಇರುವ ಈ ಋಷಿಕನ್ನಿಕೆಯರುಗಳಲ್ಲಿ ದುಷ್ಟವ್ಯಾಪಾರವಂ ಗೆಯ್ಯುವನಾರು ?" ಎಂದು ಗರ್ಜಿಸಿ ನುಡಿಯಲು;

ಅನಸೂಯೆ ಪ್ರಿಯಂವದೆ ಶಕುಂತಲೆ ಈ ಮೂಱುಮಂದಿ ಸ್ತ್ರೀಯರೂ, ಶುಭಲಕ್ಷಣದಿಂ ಯುಕ್ತನಾದ ಆ ದುಷ್ಯಂತರಾಯನಂ ಕಂಡು ಭಯಭ್ರಾಂತರಾಗಿ, ಇವನಾರೆಂಬುದನಱಿಯದೆ, ನಿಂದಿರಲು ;

ಅಷ್ಟಱಲ್ಲಿ ಅನಸೂಯೆಯು ಧೈರ್ಯವಂ ತಂದು ರಾಯನಂ ಕುಱಿತು--"ಎಲೈ ಪೂಜ್ಯಾಕಾರನಾದ ಪುರುಷನೇ, ಸ್ತ್ರೀಯರಾದ ನಮಗೆ ಮತ್ತೇನು ಮಹತ್ತಾದ ಭಯವಿಲ್ಲ. ನಮ್ಮ ಪ್ರಿಯಸಖಿಯಾದ ಈ ಶಕುಂತಲೆಯು ಭ್ರಮರದಿಂ ಭಯಪಟ್ಟು ಕೂಗಿದಳು" ಎಂದು ರಾಯಂಗೆ ಆ ಶಕುಂತಲೆಯಂ ತೋಱಿಸಲಾ ರಾಯನು ಶಕುಂತಲೆಗೆ ಅಭಿಮುಖನಾಗಿ ನಿಂತು—"ಎಲೌ ಶಕುಂತಲೆಯೇ, ನಿನ್ನ ತಪಸ್ಸು ವಿಘ್ನವಿಲ್ಲದೆ ವೃದ್ಧಿಯಂ ಪೊಂದುತಿರುವುದೇ ?" ಎಂದು ನುಡಿಯಲಾ ಶಕುಂತಲೆಯು ಲಜ್ಜೆಯಿಂ ಪ್ರತ್ಯುತ್ತರವನ್ನೀಯದೆ, ಶಿರವಂ ಬಾಗಿಸಿ ನಿಲ್ಲಲಾ ಅನಸೂಯೆಯು ಆ ಶಕುಂತಳೆಯಂ ಕುಱಿತು—"ಎಲೆ ಶಕುಂತಲೆ, ಈಗ ನಮಗೆ ವಿಶೇಷವಾದ ಅತಿಥಿಲಾಭ ವುಂಟಾಗಿರುವುದು. ಇವನಂ ಪೂಜೆಯಂ ಗೆಯ್ಯುವುದಕ್ಕೋಸುಗ ನೀನು ಜಾಗ್ರತೆಯಾಗಿ ನಮ್ಮ ಪರ್ಣಶಾಲೆಗೆ ಪೋಗಿ ಫಲದಿಂದೊಡಗೂಡಿದ ಅರ್ಘ್ಯ ಜಲವಂ ತೆಗೆದುಕೊಂಡು ಬರುವುದು. ಇಲ್ಲಿರುವ ಜಲವು ಪಾದಗಳಂ ತೊಳೆಯುವುದಕ್ಕೆ ಯೋಗ್ಯವಾಗುವುದು" ಎಂದು ನುಡಿಯಲಾ ರಾಯನು-"ಎಲೌ ಕೋಮಲಾಂಗಿಯರುಗಳಿರಾ! ನಿಮ್ಮ ಸೊಗಸುಗೂಡಿದ ನುಡಿಗಳಿಂ ಎನಗೆ ಸತ್ಕಾರವು ಮಾಡಿದಂತಾದುದು. ಎನಗೋಸುಗ ಅಧಿಕಾಯಾಸವಂ ಪೊಂದಬೇಡಿ"ರೆಂದು ನುಡಿಯಲಾ ಅನಸೂಯೆಯು ಆ ದುಷ್ಯಂತರಾಯನಂ ಕುಱಿತು, "ಎಲೈ ಪೂಜ್ಯನಾದವನೇ, ನೀನು ಈ ಮುಂಭಾಗದಲ್ಲಿರುವ, ಅಧಿಕವಾದ ನೆರಳಿನಿಂ ಶೀತಳವಾದ ಏಱಿಲೆಯ ಬಾೞಿಲೆಯ ಗಿಡಂಗಳಿಂ ಬಳಸಿರುವ ಜಗಲಿಯಲ್ಲಿ ಕುಳಿತು ಮಾರ್ಗಾಯಾಸವು ಪೋಗುವಂತೆ ಮಾಡಬಹುದು" ಎಂದು ನುಡಿಯಲಾ ರಾಯನು ಸಂತುಷ್ಟಚಿತ್ತನಾಗಿ—"ಎಲೌ ಕೋಮಲಾಂಗಿಯರುಗಳಿರಾ! ನೀವು ವೃಕ್ಷಗಳಿಗೆ ಜಲಸೇಚನೆ ಮೊದಲಾದ ಅನೇಕ ಕಾರ್ಯಂಗಳಂ ಮಾಡಿ ಬಹಳವಾಗಿ ಬಳಲಿರುವಿರಾದ್ದಱಿಂದೀ ನೆರಳಿನಲ್ಲಿ ಕುಳಿತು ಆಯಾಸವಂ ಪರಿಹರಿಸಿಕೊಳ್ಳಬಹುದು" ಎಂದು ನುಡಿಯಲಾ ಅನಸೂಯೆಯು ಶಕುಂತಲೆಯಂ ಕುಱಿತು "ಎಲೆ ಸಖಿಯೇ

ಪೂಜ್ಯನಾದ ಈ ಪುರುಷನ ಸೇವೆಯಂ ಮಾಡುವುದು ಯುಕ್ತವಾಗಿರುವುದಾದ್ದ ಱಿಂದಿವನು ಪೇಳಿದಂತೆ ಎಲ್ಲರೂ ಈ ಮಲ್ಲಿಗೆಯ ಪುಷ್ಪಗಳ ವಾಸನೆಗೆಱಗುತಿರುವ ಭೃಂಗೀಸಂಗೀತದಿಂ ಸಂಗತವಾದ ಈ ವೇದಿಕೆಯಲ್ಲಿ ಕುಳಿತುಕೊಳ್ಳುವ '' ಎಂದು ರಾಯನು ಸಹಿತವಾಗಿ ಸಂತುಷ್ಟಚಿತ್ತರಾಗಿ ಕುಳಿತುಕೊಂಡು ಇದ್ದರು.

ಎಂಬಲ್ಲಿಗೆ

ಗದ್ಯ—ಚಂಡಕರಮಂಡಲೋಚ್ಚಂಡತೇಜಃಪ್ರಕಾಂಡಕಾಂಡಷಂಡಖಂಡಿತಾಖಂಡ ಶೌರ್ಯ ಪರಿಮಂಡಿತ ಭಂಡನೋದ್ದಂಡಾರಿ ಮಂಡಲಕಂಡೂಲದೋರ್ದಂಡಪಾಂಡಿತ್ಯ ಪಾಂಡುರುಚಿಖಂಡಡಿಂಡೀರಪುಂಡರೀಕ ಪರಿಪಾಂಡುರಯಶಃಪಿಚಂಡಿಲ ಬ್ರಂಹ್ಮಾಂಡಭಾಂಡೋದ್ಭಟ ಕಾಲಕೂಟಪ್ರತಿಭಟ ಕಟುಕಪಟ ನಿಶಾಟಕೂಟ ಪಾಟನಲಂಪಟನಿಟಿಲಪುಟಘಟಿತ ವಿಕಟ ಕೃಪೀಟಯೋನಿ ಕುಟಿಲಮೋಹಾಂಧಕಾರಚ್ಛಟಾವಿಘಟನ ಪಟುನಟನ್ಮಹಾನಟ ಮಕುಟತಟ ಪರ್ಯಟತ್ತಟನೀತಟಾಂತರಿಂಗದಭಂಗೋತ್ತುಂಗತರಂಗ ಸಂಗರಭಂಗಸಂಭ್ರಮೋಜ್ಜೃಂಭಮಾಣಗಂಭೀರವಾಗ್ಗುಂಭ ಸಂಭಾವಿತ ಗರನಗರ ವರಸಿಲಯ ಚಂದ್ರಚೂಡ ಚರಣಾರವಿಂದ ಸೇವಾಮರಂದ ನಿರಂಶರನಿಕ್ಷೇವಣ ಸ್ವಯಂವೃತಕವಿತಾ ವಧೂರತ್ನ ರಾಜಾಧಿರಾಜ ಮಹಾರಾಜ ಶ್ರೀಚಾಮರಾಜಪುತ್ರಾತ್ರೇಯಸಗೋತ್ರ ಪವಿತ್ರಚರಿತ್ರ ಶಂಖ ಚಕ್ರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ನರಪತಿಬಿರುದ ಶ್ರೀಚಾಮುಂಡಿಕಾವರಪ್ರಸಾದಲಬ್ಧ ಮಹೀಶೂರಮಹಾಸಂಸ್ಥಾನವೇದೀಪ್ಯಮಾನಕುಲಕ್ರಮಾಗತದಿವ್ಯರತ್ನಸಿಂಹಾಸನಾರೂಢ ಶ್ರೀಕೃಷ್ಣರಾಜಕಂಠೀರವರು ಸರಸಜನಾನಂದಕರವಾಗಿ ಲೋಕೋಪಕಾರಾರ್ಥವಾಗಿ ನವರಸಭರಿತವಾಗಿ ಕರ್ಣಾಟಕಭಾಷೆಯಿಂ ವಿರಚಿಸಿದ ಕೃಷ್ಣರಾಜವಾಣೀವಿಲಾಸರತ್ನಾಕರವೆಂಬ ಶಾಕುಂತಳನಾಟಕದ ನವೀನ ಟೀಕೆಯಲ್ಲಿ ದುಷ್ಯಂತರಾಯನು ಕಣ್ವಾಶ್ರಮದಲ್ಲಿ ಶಕುಂತಲೆ ಅನಸೂಯೆ ಪ್ರಿಯಂವದೆಯರಿಂ ಸಹಿತನಾಗಿ ಲತಾಮಂಟಪದಲ್ಲಿ ಸುಖದಿಂದಿರ್ದನೆಂಬ ಪ್ರಥಮಕಲ್ಲೋಲದಲ್ಲಿ ತೃತೀಯತರಂಗಂ.

REGISTRAR
OSMANIA UNIVERSITY

ಪ್ರಥಮಕಲ್ಲೋಲದ ಚತುರ್ಥ ತರಂಗ.

ಅನಂತರದಲ್ಲಿ ಆ ಶಕುಂತಲಾದೇವಿಯು ಮನ್ಮಥನಂತೆ ಅತಿಸುಂದರನಾದ ದುಷ್ಯಂತರಾಯನಂ ನೋಡಿ ಮನ್ಮಥವಿಕಾರವು ತಲೆದೋಱಿದುದಂ ತಿಳಿದು, "ಈ ಪುರುಷನಂ ನೋಡಿದ ನಾನು ಈ ತಪೋವನವಿರೋಧಿಯಾದ ಮನ್ಮಥವಿಕಾರಕ್ಕೆ ಪಾತ್ರಳಾದೆ" ನೆಂದು ಆಲೋಚನೆಯಂ ಗೆಯ್ಯುತ, ಆ ರಾಯನಲ್ಲಿ ಅಭಿಲಾಷೆಯು ಳ್ಳವಳಾಗುತಿರಲು; ಆರಾಯನು ಮುಂಭಾಗದಲ್ಲಿ ಕುಳಿತಿರುವ ಮೂಱುಮಂದಿ ಸ್ತ್ರೀಯರಂ ಕುಱಿತು–"ಎಲೌ ಸುಂದರಾಂಗಿಯರೇ! ಸಮಾನವಾದ ರೂಪಿನಿಂದಲೂ ಗುಣದಿಂದಲೂ ವಯಸ್ಸಿನಿಂದಲೂ ಯುಕ್ತವಾಗಿರುವ ನಿಮ್ಮ ಮಿತ್ರತ್ವವು ನೋಡು ವವರಮನವನ್ನಪಹರಿಸುತಿರುವುದು" ಎಂದು ನುಡಿಯುತಿರಲು;

ಆ ಪ್ರಿಯಂವದೆಯು ಅನಸೂಯೆಯಂ ಏಕಾಂತಕ್ಕೆ ಕರೆದು–"ಎಲೌ ಸಖಿಯೆ, ಜಾಣ್ಮೆಯಿಂ ಕೂಡಿದ ಗಂಭೀರವಾದ ಆಕಾರವುಳ್ಳ, ಇನ್ನೂ ಮ್ಮೆ ಕೇಳು ವೆನೆಂಬ ಇಚ್ಛೆಯನ್ನುಂಟುಮಾಡುತಿರುವ, ಪ್ರಿಯಕರವಾದ ವಾಕ್ಯವಂ ಹೇಳುತ್ತಿ ರುವ, ಎನ್ನ ಶರೀರವಂ ಅನುರಾಗದಿಂ ಅಧಿಕವಾದುದನ್ನಾಗಿ ಮಾಡುತ್ತಿರುವ ಈ ಪುರುಷನು ಯಾವನೋ ಪ್ರಭುವಿರಬಹುದು" ಎನಲು; ಆ ಅನಸೂಯೆಯು– "ಸಖಿ ಪ್ರಿಯಂವದೆ, ನಿನ್ನಂತೆ ಎನಗೂ ಈ ಪುರುಷನ ವೃತ್ತಾಂತವಂ ಕೇಳುವೆನೆಂಬ ಕುತೂಹಲವಿರುವುದಾದ್ದಱಿಂದದಂ ತಿಳಿಯುವುದಕ್ಕೋಸುಗ ಇವನಂ ಪ್ರಶ್ನೆಗೆ ಯ್ಯುವೆ"ನೆಂದು, ಏಕಾಂತವಂ ಬಿಟ್ಟು, ರಾಯನಂ ಕುಱಿತು–"ಎಲೈ ಪೂಜ್ಯನಾದ ಪುರುಷನೇ, ನಿನ್ನ ಮಧುರಾಲಾಪದಿಂದುಂಟಾದ ವಿಶ್ವಾಸವು ನಿನ್ನನ್ನು ಕೇಳುವಂತೆ ಎನ್ನನ್ನು ಪ್ರೇರಿಸುತಿರುವುದು. ನೀನು ಯಾವ ರಾಜಋಷಿಯ ವಂಶದಲ್ಲಿ ಪುಟ್ಟಿದ್ದ ಱಿಂದಾವಂಶವು ಅಲಂಕೃತವಾಗಿರುವುದು? ಯಾವ ದೇಶಕ್ಕೆ ಅಧೀಶ್ವರನಾಗಿರುವೆ? ಏನು ನಿಮಿತ್ತವಾಗಿ ನಿನ್ನ ಮೃದುವಾದ ಶರೀರವಂ ಈ ತಪೋವನದ ಸಂಚಾರ ದಿಂದುಂಟಾದ ಬಳಲಿಕೆಗೆ ಯೋಗ್ಯವನ್ನಾಗಿ ಮಾಡುತಿರುವೆ?" ಎಂದು ನುಡಿ ಯುತಿರಲು ;

ಅಷ್ಟಱಲ್ಲಿ ಶಕುಂತಲೆಯು, ರಾಯನಂ ಕುಱಿತು ಅನಸೂಯೆಯು ಪ್ರಶ್ನೆಯಂ ಗೈದ ವಾಕ್ಯವಂ ಕೇಳಿ ಸಂತುಷ್ಟಳಾಗಿ, ತನ್ನ ಮನವಂ ಕುಱಿತು–"ಎಲೈ ಮನವೇ, ಅಧಿಕವಾಗಿ ಬಳಲಬೇಡ, ಬಳಲಬೇಡ, ನೀನು ಈ ಪುರುಷನಂ ಕುಱಿತು ಏನ್ನು

ವಾಕ್ಯವಂ ಕೇಳಬೇಕೆಂದು ಯೋಚಿಸುತ್ತಿದ್ದೆಯೋ ಅದೇ ವಾಕ್ಯವಂ ಅನಸೂಯೆಯು ಕೇಳುತ್ತಿರುವಳು'' ಎಂದು ಅಂತರಂಗದಲ್ಲಿ ನುಡಿದುಕೊಳ್ಳುತ್ತಿರಲು;

ಆ ರಾಯನು ಅನಸೂಯೆಯು ಪ್ರಶ್ನೆಯಂ ಗೈದ ವಾಕ್ಯವಂ ಕೇಳಿ— "ಈಗ ನಾನು ದೊರೆಯೆಂಬ ಅರ್ಥವಂ ಹೇಗೆ ಪ್ರಕಾಶವಂ ಗೆಯ್ಯಲಿ, ಹೇಗೆತಾನೆ ಅರಸಲ್ಲವೆಂದು ಅನೃತವಂ ಪೇಳಲಿ ?'' ಎಂದು ತನ್ನೊಳು ತಾನು ಆಲೋಚನೆಯಂ ಗೈದು, "ಆದರೂ ಈಸ್ತ್ರೀಯರುಗಳಿಗೆ ಈಪ್ರಕಾರವಾಗಿ ಪೇಳುವೆ'' ನೆಂಬ ವಾಕ್ಯವಂ ನಿಶ್ಚೈಸಿ, ಅನಸೂಯೆಯಂ ಕುಱಿತು —"ಎಲೌ ಬಾಲೆಯೇ, ಪುರುವಂಶದಲ್ಲಿ ಪುಟ್ಟಿದ ಮಹಾರಾಯನಿಂ ನಾನು ಧರ್ಮಾಧಿಕಾರದಲ್ಲಿ ನಿಯುಕ್ತನಾಗಿ ಇಲ್ಲಿರುವ ಋಷಿಗಳಿಗೆ ದುಷ್ಟರಿಂದುಂಟಾಗುವ ವಿಘ್ನವಂ ಪರಿಹರಿಸುವುದಕ್ಕೋಸ್ಕರ ಈ ಧರ್ಮಾರಣ್ಯವಂ ಕುಱಿತು ಬಂದಿರುವೆನು '' ಎಂದು ನುಡಿಯಲಾ ಅನಸೂಯೆಯು– "ಎಲೈ ಪೂಜ್ಯನಾದವನೆ, ಈಗ ಧರ್ಮವಂ ಪರಿಪಾಲಿಸುವುದಕ್ಕೋಸುಗ ಸಂಚರಿಸುವ ನಿನ್ನಿಂದ ನಾವು ರಕ್ಷಕನಿಂದ ಯುಕ್ತರಾದೆವು'' ಎಂದು ಸರಸೋಕ್ತಿಯಂ ಪೇಳುತರಲು ;

ಶಕುಂತಲೆಯು ಓರೆನೋಟದಿಂ ರಾಯನಂ ಬಾರಿಬಾರಿಗೂ ನೋಡಿ ಮುಗುಳುನಗೆಯಿಂ ಲಜ್ಜೆಯಿಂ ಅನುರಾಗದಿಂ ಯುಕ್ತಳಾಗುತ್ತಿರಲು, ಆ ಅನಸೂಯೆಪ್ರಿಯಂವದೆಯರೀರ್ವರು ಶಕುಂತಲೆ ದುಷ್ಯಂತರಾಯರಿಬ್ಬರುಗಳಂ ನೋಡಿ ಅನುರಾಗಭರಿತವಾದ ಅನ್ಯೋನ್ಯವಾಗಿ ನೋಡುವ ಓರೆನೋಟಗಳಿಂದವರ ಇಂಗಿತವಂ ತಿಳಿದು, ಶಕುಂತಲೆಯ ಮನೋವೃತ್ತಿಯಂ ಪರೀಕ್ಷಿಸಬೇಕೆಂದು ಅವಳಂ ಕುಱಿತು–"ಎಲೆ ಶಕುಂತಲೆ, ಈಗ ನಿನ್ನ ತಂದೆಯಾದ ಕಣ್ವಮುನೀಶ್ವರನು ಇಲ್ಲಿಗೆ ಬಂದವನಾದರೆ ಹೇಗೆ! ''ಎಂದು ನುಡಿಯಲಾಶಕುಂತಳೆಯು ಕೋಪಯುಕ್ತಳಾಗಿ–"ಎಲೌ ಸಖಿಯರುಗಳಿರಾ, ಎನ್ನ ತಂದೆತಾನೇ ಬಂದರೇನಾಗುವುದು ? '' ಎನ್ನಲಾ ಸಖಿಯರೀರ್ವರು—"ಆ ಕಣ್ವಮಹಾಮುನಿಯೇ ಇಲ್ಲಿಗೆ ಬಂದವನಾದರೆ ತನ್ನ ಪ್ರಾಣರೂಪವಾದ ಸಮಸ್ತ ದ್ರವ್ಯದಿಂದೀಗ ಅತಿಥಿಯಾಗಿ ಬಂದಿರುವ ಈ ಪುರುಷನಂ ಕೃತಾರ್ಥನನ್ನಾಗಿ ಮಾಡುವನು '' ಎನಲಾಶಕುಂತಲೆಯು "ಈ ಸಖಿಯರೀರ್ವರೂ ಪ್ರಾಣರೂಪದ್ರವ್ಯವನ್ನೀಪುರುಷನಿಗೆ ಕೊಡುವನೆಂದು ನುಡಿದಿರುವರು. ಆಕಣ್ವಮುನೀಶ್ವರನಿಗೆ ನಾನೇ ಪ್ರಾಣರೂಪಳಾಗಿರುವೆನು. ಎನ್ನಂ ಕೊಡುವನೆಂಬ ವಾಕ್ಯವಂ ವ್ಯಕ್ತವಾಗಿ ಪೇಳದೆ ಗೂಢಮಾಗಿ ಪೇಳಿರುವರಾದ್ದಱಿಂದ ಇವರ ಮುಖವಚನದಿಂ ಚೆನ್ನಾಗಿ ಪೇಳಿಸುವೆ''ನೆಂದು ಮನದಲ್ಲಿ ಯೋಚಿಸಿ ಅವರಂ

ಕುರಿತು—“ಎಲೌ ಸಖಿಯರುಗಳಿರಾ, ನೀವಿಬ್ಬರೂ ಏನೋ ಒಂದು ಭಾವವಂ ಹೃದಯದಲ್ಲಿಟ್ಟುಕೊಂಡು ನಿಮ್ಮೊಳು ನೀವು ಮಾತನಾಡಿಕೊಳ್ಳುತಿರುವಿರಾದ್ದರಿಂದ ನಾನು ನಿಮ್ಮ ವಚನಂಗಳಂ ಕೇಳಲೊಲ್ಲೆನು” ಎಂದು ನುಡಿಯುತ್ತಿರಲು ;

ಅಷ್ಟರಲ್ಲಿ ರಾಯನು ಅವರೀರ್ವರ್ಸಖಿಯರಂ ಕುರಿತು—“ಎಲೌ ಸಖಿಯರುಗಳಿರಾ, ನಿಮಗೆ ಸ್ನೇಹಿತಳಾದ ಶಕುಂತಲೆಯ ವೃತ್ತಾಂತವಂ ನಾನು ಕೇಳಲಿಚ್ಛೈಸುತಿರುವೆ”ನೆಂದು ನುಡಿಯಲಾಸಖಿಯರೀರ್ವರು—“ಎಲೈ ಪೂಜ್ಯನೆ, ಈಗ ನೀನು ಅಪ್ಪಣೆಯನ್ನೀಯುವ ವಾಕ್ಯವು ಅನುಗ್ರಹರೂಪವಾಗಿರುವುದು. ಏನು ಕೇಳಿದರೂ ಅದಂ ಪೇಳುತ್ತಿರುವೆವು”ಎಂದು ನುಡಿಯಲಾ ರಾಯನು “ಎಲೌ ಬಾಲೆಯರುಗಳಿರಾ, ಪೂಜ್ಯನಾದ ಷಡ್ಗುಣೈಶ್ವರ್ಯಸಂಪನ್ನನಾದ ಕಣ್ವಮುನೀಶ್ವರನು ಶಾಶ್ವತವಾದ ಬ್ರಹ್ಮಧ್ಯಾನಾಸಕ್ತನಾಗಿರುವಲ್ಲಿ ಈ ನಿಮ್ಮ ಸ್ನೇಹಿತಳಾದ ಶಕುಂತಳೆಯು ಆ ಋಷಿಗೆ ಪುತ್ರಿಯೆಂತಾದಳು? ಅದಂ ಪೇಳಬೇಕು”ಎನ್ನಲು; ಅನಸೂಯೆಯು—“ಎಲೈ ಪೂಜ್ಯನೇ, ಕೇಳು ಪೇಳುವೆನು. ಮಹಾಪ್ರಭಾವಶಾಲಿಯಾದ ರಾಜಋಷಿಯಾದ ವಿಶ್ವಾಮಿತ್ರನೆಂಬ ನಾಮಧೇಯವುಳ್ಳವನೊಬ್ಬನಿದ್ದಾ”ನೆಂದು ನುಡಿಯಲಾ ರಾಯನು “ವಿಶ್ವಾಮಿತ್ರನೆಂಬ ಋಷಿಯು ಇರುವುದಂ ನಾನು ತಿಳಿದಿರುವೆನು”ಎನ್ನಲಾಸಖಿಯು ಎಲೈ ಪೂಜ್ಯನೇ “ಆ ಮಹಾಮಹಿಮನಾದ ವಿಶ್ವಾಮಿತ್ರಋಷಿಯಿಂದ ನಮ್ಮ ಪ್ರಿಯಸಖಿಯಾದ ಶಕುಂತಲೆಯು ಪುಟ್ಟಿದಳೆಂಬುವುದಂ ತಿಳಿಯತಕ್ಕದ್ದು. ಆ ವಿಶ್ವಾಮಿತ್ರನು ಈ ಶಕುಂತಲೆಯಂ ಬಿಟ್ಟು ಪೋಗಲಾಗಿ ನಮ್ಮ ಕಣ್ವಋಷೀಶ್ವರನು ಈಶಕುಂತಲೆಯಂ ಸಲಹಿದ್ದರಿಂದಿವಳಿಗೆ ತಂದೆಯಾದನು” ಎಂದು ನುಡಿಯಲಾರಾಯನು—“ಎಲೌ ಅನಸೂಯೆಯೇ, ಆ ವಿಶ್ವಾಮಿತ್ರನು ಇವಳಂ ಬಿಟ್ಟುಪೋದನೆಂದು ನುಡಿದ ವಾಕ್ಯವು ಎನಗೆ ಕುತೂಹಲವನ್ನುಂಟುಮಾಡಿರುವುದಾದ್ದರಿಂದೀ ಶಕುಂತಲೆಯು ಯಾವ ಸ್ತ್ರೀಗರ್ಭದಲ್ಲಿ ಪುಟ್ಟಿದಳು? ಏನು ನಿಮಿತ್ತದಿಂ ಬಿಟ್ಟು ಪೋದನು? ಆ ವೃತ್ತಾಂತವಂ ತುದಿಮೊದಲಾಗಿ ಕೇಳಲಿಚ್ಛೈಸುತ್ತಿರುವೆನು”ಎಂದು ಪೇಳಲು; ಆ ಅನಸೂಯೆಯು—“ಕೇಳೈ ಪೂಜ್ಯನೇ, ಪೂರ್ವದಲ್ಲಿ ದೇವತೆಗಳು ಕ್ರೂರವಾದ ತಪವಂ ಗೆಯ್ಯುತಿರುವ ವಿಶ್ವಾಮಿತ್ರಋಷಿಯಂ ನೋಡಿ ಈತಪಃಪ್ರಭಾವದಿಂದಿವನು ಬ್ರಹ್ಮರ್ಷಿಯಾಗುವನೆಂಬ ಸಂದೇಹದಿಂದವನ ತಪೋವಿಘ್ನವಂ ಗೆಯ್ಯುವುದಕ್ಕೋಸುಗ ಮೇನಕೆಯೆಂಬ ಅಪ್ಸರಸ್ತ್ರೀಯಂ ಕಳುಹಿಸಿದರು”ಎನಲಾರಾಯನು “ಎಲೌ ಅನಸೂಯೆಯೇ, ದೇವತೆಗಳಿಗೆ ಯಾರು ತಪಸ್ಸಂ ಗೆಯ್ಯುತಿರ್ದರೂ ಆತಪಃಪ್ರಭಾವದಿಂದವರು ತಮ್ಮ ಪದವಿಗೆ ಬರುವರೆಂಬ ಭೀತಿಯುಂಟಾಗುವುದು” ಎಂದು ನುಡಿಯಲಾ ಅನಸೂಯೆ

ಯು -‘‘ಎಲೆ ರಾಯನೇ, ಆಒಳಿಕ ವಿಶ್ವಾಮಿತ್ರಋಷಿಯು ಗಿಣಿ ಕೋಗಿಲೆ ಮೊದಲಾದ ಪಕ್ಷಿಗಳ ಕಲಕಲಧ್ವನಿಯಿಂದಲೂ, ಫಲಪುಷ್ಪಪಲ್ಲವಂಗಳಿಂದಲೂ, ಶೈತ್ಯಸೌರಭ್ಯಮಾಂದ್ಯಗೂಡಿದ ಮಾರುತದಿಂದಲೂ ಯುಕ್ತವಾದ ವಸಂತಕಾಲದಲ್ಲಿ ಆ ಜಗನ್ಮೋಹನಕರವಾದ ಆ ಮೇನಕೆಯ ರೂಪವಂ ನೋಡಿ-’’ ಎಂದು ಅರ್ಧೋಕ್ತಿಯಂ ನುಡಿದು, ಲಜ್ಜೆಯಿಂ ಮುಂದಣ ವಾಕ್ಯವಂ ಪೇಳದಿರಲಾರಾಯನು–‘‘ಎಲೌ ಅನಸೂಯೆಯೇ, ಇವಳು ಮೇನಕೆಯಲ್ಲಿ ಹುಟ್ಟಿದಳೆಂಬುವುದು ನಿನ್ನ ವಾಕ್ಯದಿಂದಲೇ ವ್ಯಕ್ತವಾಗಿ ತೋರುವುದು’’ ಎಂದು ನುಡಿಯಲಾ ಅನಸೂಯೆಯು–‘‘ಎಲೈ ಪೂಜ್ಯನೇ, ಆ ಮೇನಕೆಯು ವಿಶ್ವಾಮಿತ್ರನಿಂ ಗರ್ಭವಂ ಪಡೆದು ಈ ಶಕುಂತಲೆಯಂ ಪೆತ್ತು ಆ ಮುನಿಯು ಎನ್ನಂ ತಪಸ್ಸಿಗೆ ವಿಘ್ನವಂಗೈದವಳೆಂದು ಶಾಪವನ್ನೀಯುವನೆಂಬ ಭಯದಿಂ ಇವಳಂ ಹಿಮವತ್ಪರ್ವತದ ಸಮೀಪಾಶ್ರಮದಲ್ಲಿ ಬಿಟ್ಟು ಸ್ವರ್ಗವಂ ಕುರಿತು ಪೋಗಲು; ವಿಶ್ವಾಮಿತ್ರನೂ ಕೂಡ ಈ ಪುತ್ರಿಯಲ್ಲಿ ಮಮತೆಯಿಲ್ಲದೆ ಪೋಗಲು; ಇಂತಿರುವಲ್ಲಿ ಒಂದಾನೊಂದು ದಿನ ಋಷಿಶ್ರೇಷ್ಠನಾದ ಕಣ್ವಮುನಿಯು ಸ್ನಾನಾರ್ಥವಾಗಿ ಪೋಗಿ ಪಕ್ಷಿಗಳಿಂ ಪರಿಪಾಲಿತವಾಗುತಿರ್ದ ಈ ಶಕುಂತಲೆಯಂ ಕಂಡು ಪುತ್ರೀವ್ಯಾಮೋಹದಿಂ ತನ್ನಾಶ್ರಮಕ್ಕೆ ತೆಗೆದುಕೊಂಡು ಬಂದು, ಶಕುಂತಗಳಿಂ ಸಂರಕ್ಷಿತಳಾದ್ದರಿಂದ ಶಕುಂತಲೆಯೆಂಬ ನಾಮಾಂಕಿತವಂ ವಿರಚಿಸಿ, ಇದುವರೆಗೂ ಪರಿಪಾಲನೆಯಂ ಗೆಯ್ಯುತ್ತಿರುವನು’’ ಎಂದು ಬಿನ್ನೈಸಲಾರಾಯನು–‘‘ಎಲೌ ಅನಸೂಯೆಯೇ ಹಾಗಾದಲ್ಲಿ ಅವಳು ಅಪ್ಸರಸ್ತ್ರೀಗರ್ಭದಲ್ಲಿ ಪುಟ್ಟಿದವಳು ನಿಶ್ಚಯವೇ’’ ಎನ್ನಲಾ ಅನಸೂಯೆಯು–‘‘ಆ ವಾಕ್ಯಕ್ಕೆ ಸಂದೇಹವೇ ಇಲ್ಲ’’ ಎಂದು ನುಡಿಯಲಾರಾಯನು ‘‘ಎಲೌ ಕೋಮಲಾಂಗಿಯೇ’’ ನೀನು ಪೇಳಿದವಾಕ್ಯವು ನಿಶ್ಚಯವಾಗಿ ತೋರುವುದು. ಮನುಷ್ಯಸ್ತ್ರೀಯರಲ್ಲಿ ಈ ಶಕುಂತಳೆಯ ರೂಪಿನಂತೆ ರೂಪೋತ್ಪತ್ತಿಯು ಆಗಲಾಗದು. ಇಷ್ಟು ಸೌಂದರ್ಯಾತಿಶಯವು ದೇವಸ್ತ್ರೀಯರಲ್ಲೇ ಸರಿಯಾಗಿರುವುದು. ಹೇಗೆಂದರೆ–ಕಾಂತಿಗೂಡಿದ ಚಂಚಲವಾದ ಮಿಂಚಿನ ಬಳ್ಳಿಯು ಮೇಘದಿಂದಲ್ಲದೆ ಭೂಮಿಯಲ್ಲಿ ಹೇಗೆ ಪುಟ್ಟುವುದಿಲ್ಲವೋ, ಹಾಗೆ ಈ ಶಕುಂತಳೆಯ ರೂಪೋತ್ಪತ್ತಿಯು ದೇವಸ್ತ್ರೀಯರಲ್ಲಲ್ಲದೆ ಮನುಷ್ಯಸ್ತ್ರೀಯರಲ್ಲಿ ಪುಟ್ಟಲಾರದು’’ ಎಂದು ನುಡಿಯಲು ;

ಆ ವಾಕ್ಯವಂ ಕೇಳ್ದ ಶಕುಂತಳೆಯು ಲಜ್ಜೆಯಿಂದೊಡಗೂಡಿ ಶಿರವಂ ಬಾಗಿಸಿ ತನ್ನ ಅಂಗುಷ್ಠಾಗ್ರದಿಂ ಭೂಮಿಯಂ ಬರೆಯುತ್ತ ಕುಳಿತಿರಲು ;

ಆರಾಯನು, ರಾಜರ್ಷಿಯಾದ ವಿಶ್ವಾಮಿತ್ರನ ಪುತ್ರಿಯೆಂದು ಕೇಳಿದ್ದರಿಂದ

ಇವಳಲ್ಲಿ ಎನ್ನ ಮನವು ಅಭಿಲಾಷೆಯುಳ್ಳುದಾಗಿರುವುದು. ಆದರೂ ಈಶಕುಂತಳೆಯು ವನಜ್ಯೋತ್ಸ್ನೆಯೆಂಬ ಲತೆಯುಂ ನೋಡಿ ಈ ಲತೆಯು ತನಗೆ ಅನುರೂಪವಾದ ಸೀಮಾವಿನಮರದೊಡನೆ ಕೂಡಿ ಇರುವುದು; ಅದರಂತೆ ನಾನು ಯೋಗ್ಯನಾದ ಪುರುಷನಂ ಪಡೆಯುವೆನೆಂದು ಪೇಳಿದ ವಾಕ್ಯವು ನಿಜಮಾದುದೋ? ಅಲ್ಲದಿರೆ ವಿನೋದಕ್ಕೋಸ್ಕರ ನುಡಿದಿರುವಳೋ ತಿಳಿಯದೆಂದು ಎನ್ನಮನವು ಚಾಂಚಲ್ಯವಂ ಎರಡು ಪ್ರಕಾರವಾಗಿ ಪೊಂದುತಿರುವುದು'' ಎಂದು ಆಲೋಚನೆಯಂ ಗೈಯ್ಯುತ್ತಿರಲು.—

ಆಪ್ರಿಯಂವದೆಯು ಮುಗುಳುನಗೆಗೂಡಿ ಶಕುಂತಳೆಯ ಮುಖವಂ ನೋಡಿ ರಾಯನಿಗೆ ಅಭಿಮುಖಳಾಗಿ– '' ಎಲೈ ಪೂಜ್ಯನೇ, ನಿನ್ನಾಕಾರವಂ ನೋಡಲು ಮರಳಿ ಏನೋ ಒಂದು ವಾಕ್ಯವಂ ಪೇಳಲಿಚ್ಛೆಯುಳ್ಳವನಂತೆ ತೋರು ವುದು '' ಎನಲು;

ಆ ಶಕುಂತಲೆಯು ಅಂತರಂಗದಲ್ಲಿ ಸಂತೋಷವಿದ್ದರೂ ಪ್ರಿಯಂವದೆಯುಂ ತನ್ನ ಬೆರಳಂ ತೂಗಿ ಬೆದರಿಸುತ್ತಿರಲು;

ಆ ರಾಯನು–''ಎಲೌ ಪ್ರಿಯಂವದೆಯೇ, ಎನ್ನಭಿಪ್ರಾಯವಂ ಚೆನ್ನಾಗಿ ತಿಳಿದು ಪೇಳಿದೆ''ಎಂದು ಶ್ಲಾಘನೆಯಂ ಗೈದು,'' ಈ ಶಕುಂತಲೆಯ ಸಚ್ಚರಿತ್ರಶ್ರವಣವಂ ಗೆಯ್ಯಲಿಚ್ಛೆಯುಳ್ಳ ಎನಗೆ ಇನ್ನು ಕೇಳತಕ್ಕ ಕೆಲವು ಸಂದೇಹವಾಕ್ಯವಿರುವುದು'' ಎನಲು;

ಆ ಪ್ರಿಯಂವದೆಯು–''ಎಲೈ ಪೂಜ್ಯನಾದವನೇ, ಇದ ಕೇಳಬೇಕು ಕೇಳಬಾರದೆಂದು ಸಂದೇಹವೇ ಕೆಲಸವಿಲ್ಲ. ನಾವು ತಪಸ್ವಿಜನವಾದ್ದರಿಂದೇನು ಇಚ್ಛೆಯಿದ್ದರೂ ಅದಂ ಕೇಳಬೇಕು '' ಎಂದು ನುಡಿಯಲು;

ಆ ರಾಯನು–'' ಎಲೌ ಪ್ರಿಯಂವದೆಯೇ, ಹಾಗಾದಲ್ಲಿ ಪೂರ್ವದಲ್ಲಿ ಪೇಳಿದ ನಿಮ್ಮ ಸಖಿಯ ವೃತ್ತಾಂತವಂ ಕೇಳಲಿಚ್ಛೈಸುವುದೇನಂದರೆ–ಈ ನಿಮ್ಮ ಶಕುಂತಲೆಯು ವಿವಾಹವಂ ಗೆಯ್ಯುವವರೆಗೂ ಹಾವ ಭಾವ ವಿಲಾಸ ಭ್ರೂವಿಕ್ಷೇಪ ಮೊದಲಾದ ಮನ್ಮಥವ್ಯಾಪಾರಕ್ಕೆ ವಿರೋಧಿಯಾದ ಈ ಋಷಿಯ ಚರ್ಯದಲ್ಲಿರತಕ್ಕದ್ದೋ, ಹಾಗಿಲ್ಲದಿದ್ದರೆ ಮನೋಹರವಾಗಿ ಕರ್ಣಾಂತನೇತ್ರವುಳ್ಳ ಈ ಸ್ತ್ರೀಯು ವಿವಾಹವಿಲ್ಲದೆ ಹೆಣ್ಣುಹುಲ್ಲೆಗಳೊಡನಾಡಿಕೊಂಡು ಈ ಅರಣ್ಯದಲ್ಲಿರತಕ್ಕದ್ದೋ? ಏನು '' ಎಂದು ಪ್ರಶ್ನೆಯಂ ಗೆಯ್ಯಲು;

ಪ್ರಿಯಂವದೆಯು—'' ಎಲೈ ಪೂಜ್ಯನೇ, ಈ ಶಕುಂತಲೆ ಮೊದಲಾದ ನಾವು ಧರ್ಮಸಂಪಾದಕವಾದ ತಪಸ್ಸಂ ಗೆಯ್ಯುವ ಕಾರ್ಯದಲ್ಲಿಯೂ ಸ್ವಾತಂತ್ರ್ಯವಿ

ಲ್ಲದೆ ಇರುವೆವಾದ್ದಱಿಂದ ನೀನು ಪೇಳ್ದ ವಾಕ್ಯಕ್ಕೆ ಪ್ರತ್ಯುತ್ತರವಂ ಪೇಳಲಾಱೆವು. ಆದರೂ ಇವಳ ತಂದೆಯಾದ ಕಣ್ವಮುನಿಪತಿಯು ಇವಳಂ ಅನುರೂಪನಾದ ವರನಿಗಿತ್ತು ವಿವಾಹವಂ ಗೆಯ್ಯಬೇಕೆಂದು ಸಂಕಲ್ಪಿಸಿರುವನು'' ಎಂದು ನುಡಿಯಲು;

ಆರಾಯನು ಪ್ರಿಯಂವದೆಯ ವಾಕ್ಯವಂ ಕೇಳಿ—''ಈ ಶಕುಂತಲೆಯ ರೂಪಿಗೆ ಯೋಗ್ಯವಾದ ವರನು ಯಾವ ಲೋಕದಲ್ಲಿಯೂ ಇರಲಾಱನು. ಆದ್ದಱಿಂದ ಕಣ್ವಋಷಿಯ ಪ್ರಾರ್ಥನೆಯು ವ್ಯರ್ಥವಾಗುವುದೆಂದು ತೋಱುವುದು. ಮತ್ತು ಈ ಶಕುಂತಲೆಯು ಕ್ಷತ್ರಿಯ ಪುತ್ರಿಯಾದ್ದಱಿಂದಲೂ ಇವಳಿಗೆ ವಿವಾಹವಂ ವಿರಚಿಸಬೇಕೆಂದು ಋಷಿಗೆ ಸಂಕಲ್ಪವಿರುವುದೆಂದು ಅನುಸೂಯೆ ಪ್ರಿಯಂವದೆಯರು ಪೇಳಿದ್ದಱಿಂದಲೂ ಯಾವವನಾದರೂ ಒಬ್ಬ ಕ್ಷತ್ರಿಯನಿಗೆ ಕೊಟ್ಟು ವಿವಾಹವಂ ಗೆಯ್ಯುವನು. ಈಗ ನಾನು ಈ ಆಶ್ರಮಕ್ಕೆ ಬಂದಿರುವುದಱಿಂದಲೂ ಸಮಸ್ತ ಭೂಮಂಡಲಕ್ಕೆ ನಾನು ದೊರೆಯಾಗಿರುವುದಱಿಂದಲೂ ಎನಗೆ ಈ ತಪೋವನವಂ ಪ್ರವೇಶಿಸುವಾಗ ಶುಭಶಕುನಗಳಾಗಿರುವುದಱಿಂದಲೂ ಈ ಶಕುಂತಲೆಯಂ ಆ ಕಣ್ವಋಷಿಯು ಎನಗೆ ಕೊಟ್ಟು ವಿವಾಹವಂ ಗೆಯ್ಯುವನು. ಹಾಗಲ್ಲದಿದ್ದರೆ ಅನುರಾಗವಂ ಸಂಪಾದಿಸಿ ಗಾಂಧರ್ವವಿವಾಹವಂ ಗೆಯ್ಯುವುದಕ್ಕೂ ಯೋಗ್ಯಳಾಗಿ ಇರುವಳು'' ಎಂಬ ಸಂತೋಷದಿಂದ ತನ್ನ ಮನವಂ ಕುಱಿತು—''ಎಲೈ ಮನವೆ! ನೀನು ಯಾವ ವಸ್ತುವಂ ಕಂಡು ಬೆಂಕಿಯೆಂದು ಊಹಿಸುತಿರ್ದೆಯೋ ಅದೇ ವಸ್ತುವು ಮುಟ್ಟುವುದಕ್ಕೆ ಯೋಗ್ಯವಾದ ರತ್ನವಾದಂತೆ, ಈ ಶಕುಂತಲೆಯು ಯಾವ ಜಾತಿಯವಳೆಂತಲೂ ಇವಳು ವಿವಾಹವಾಗುವಳೋ ಇಲ್ಲವೋ ಎಂತಲೂ ಈಯೆರಡುಪ್ರಕಾರವಾದ ನಿನ್ನ ಸಂದೇಹವು ಈ ಸಖಿಯರೀರ್ವರು ಪೇಳ್ದ ವಾಕ್ಯದಿಂ ಪರಿಹಾರವಾದುದಱಿಂದ ನೀನು ಅಭಿಲಾಷಾಯುಕ್ತವಾಗಿರು'' ಎಂದು ತನ್ನೊಳು ತಾನು ಪೇಳುತಿರಲು;

ಆ ಶಕುಂತಲೆಯು ತನ್ನ ಹೃದಯದಲ್ಲಿದ್ದ ಕಾರ್ಯವಂ ಈಪ್ರಿಯಂವದೆಯು ಇನ್ನು ವ್ಯಕ್ತವಂ ಮಾಡುವಳೆಂದು ತಿಳಿದು, ಕಪಟಕೋಪವಂ ವಿರಚಿಸಿ—''ಎಲೆ ಅನಸೂಯೆ, ನಾನು ಪರ್ಣಶಾಲೆಯಂ ಕುಱಿತು ಪೋಗುವೆ'' ಎನಲಾಅನಸೂಯೆಯು ''ಎಲಾ ಸ್ನೇಹಿತಳಾದ ಶಕುಂತಲೆಯೇ, ಏನು ನಿಮಿತ್ತದಿಂದೀರಮ್ಯವಾದ ಸ್ಥಾನವಂ ಬಿಟ್ಟು ಪೋಗುವೆ?'' ಎನಲಾಶಕುಂತಲೆಯು ಹುಬ್ಬುಗಳಂ ಗಂಟಿಕ್ಕಿಕೊಂಡು ''ಈ ಪ್ರಿಯಂವದೆಯು ಒಂದಕ್ಕೊಂದು ಸಂದರ್ಭವಿಲ್ಲದ ವಾಕ್ಯವಂ ಮನಬಂದಂತೆ ನುಡಿಯುತ್ತಿರುವಳು. ಇವಳ ವೃತ್ತಾಂತವಂ ಪೂಜ್ಯಳಾದ ಕಣ್ವಮುನೀಶ್ವರನ ತಂಗಿ

ಯಾದ ಗೌತಮಿಗೆ ವಿಜ್ಞಾಪನೆಯಂ ಗೈದು ಇವಳಿಗೆ ತಕ್ಕ ಶಿಕ್ಷೆಯಂ ವಿರಚಿಸುವು ದಕ್ಕೋಸುಗ ಪೋಗುವೆನು'' ಎಂದು ನುಡಿದು, ಮೃದುವಾಗಿ ಕಮಲಗಳಿಗೆ ಕಾಂತಿಯನ್ನೀಯುತ್ತಿರುವ ಪಾದವನ್ನಿಡುತ, ಪೋಗುತ್ತಿರಲು ; ಆ ಅನಸೂಯೆಯು—"ಎಲೌ ಶಕುಂತಲೆ, ಈ ಆಶ್ರಮಕೆ ಬಂದಿರುವ ಈ ಅತಿಥಿಗೆ ಫಲ ಪುಷ್ಪ ಮೊದಲಾದ ವಸ್ತುವನ್ನಿತ್ತು ಸತ್ಕಾರವಂ ಗೆಯ್ಯದೆ ಮನಬಂದಂತೆ ಪೋಗುವುದು ಆಶ್ರಮವಾಸಿಯಾದ ನಿನಗೆ ಯುಕ್ತವಲ್ಲ'' ಎಂದು ಪೇಳಲಾ ಶಕುಂತಲೆಯು ಅನಸೂಯೆ ಪೇಳಿದ ವಾಕ್ಯವಂ ಮನಕ್ಕೆ ತಾರದೆ ಅವಳಿಗೆ ಪ್ರತ್ಯುತ್ತರವಂ ನುಡಿಯದೆ ಪೋಗುತ್ತಿರಲು;

ಆ ರಾಯನು—" ಈ ಶಕುಂತಲೆಯು ಪೋಗುವಳು. ಏನು, ಮಾಡಲಿ, ಅವಳಂ ಪಿಡಿಯುವೆನೆ ? " ಎಂದು ಇಚ್ಛೈಸಿ, ಅಷ್ಟರಲ್ಲಿ ತನ್ನ ಮನವಂ ದೃಢವಂ ಗೈದು—"ಲೋಕದಲ್ಲಿ ಕಾಮುಕರಾದ ಪುರುಷರುಗಳ ಮನೋವೃತ್ತಿಯು ಅವರು ಮಾಡುವ ಕಾರ್ಯಗಳಿಗೆ ಅನುಕೂಲವಾಗಿರುವುದು. ಹೇಗೆಂದರೆ:–ಈಗ ನಾನು ಪೋಗುತಿರುವ ಮುನಿಪುತ್ರಿಯಾದ ಶಕುಂತಲೆಯನ್ನನುಸರಿಸಿ ಪೋಗಲಿಚ್ಛೆಯುಳ್ಳವನಾಗಿ, ಜಾಗ್ರತೆಯಿಂ ಎನ್ನ ಸದ್ಗುಣಗಳಿಂ ತಡಮಲ್ಪಟ್ಟ ಮನೋವ್ಯಾಪಾರವುಳ್ಳವನಾಗಿ, ಇರುವ ಸ್ಥಾನದಿಂ ಚಲಿಸದೆ ಇದ್ದರೂ ಆ ಶಕುಂತಲೆಯೊಡನೆ ಪೋಗಿ ಮರಳಿ ಬಂದವನಂತೆ ಇರುವೆನು,, ಎಂದು ಮನದಲ್ಲಾಲೋಚನೆಯಂ ಗೈಯ್ಯುತ್ತಿರಲು;

ಆಪ್ರಿಯಂವದೆಯು ಪೋಗುತ್ತಿರುವ ಶಕುಂತಲೆಯಂ ತಡೆದು–"ಎಲೆ ಶಕುಂತಲೆ, ಈಗ ನೀನು ಪೊಗುವುದು ಯುಕ್ತವಲ್ಲ'' ಎನಲಾಶಕುಂತಲೆಯು ಅಧಿಕವಾದ ಕೃತ್ರಿಮಕೋಪದಿಂ ಕೊಂಕುಗೂಡಿದ ಪುರ್ಬುಗಳಿಂ ಯುಕ್ತಳಾಗಿ–"ಎಲೆ ಪ್ರಿಯಂವದೆಯೆ, ಏನು ನಿಮಿತ್ತದಿಂದೆನ್ನಂ ಪೋಗಬೇಡವೆಂದು ತಡೆಯುತ್ತಿರುವೆ ? '' ಎನ್ನಲಾಪ್ರಿಯಂವದೆಯು–"ಎಲೆ ಶಕುಂತಲೆಯೇ, ಈ ವೃಕ್ಷಲತೆಗಳು ಮೊದಲಾದವುಗಳಿಗೆ ಜಲವಂ ಪೊಯ್ಯುವ ಕಾರ್ಯದಲ್ಲಿ ಇನ್ನು ಎರಡು ವೃಕ್ಷಗಳಿಗೆ ನೀರೆರೆಯುವ ಕಾರ್ಯವು ಉಳಿದಿರುವಾಗ ನಮ್ಮಿಬ್ಬರಂ ಬಿಟ್ಟು ನಿನ್ನ ಶರೀರವಂ ತಪ್ಪಿಸಿಕೊಂಡು ಪೋಗುವೆನೆಂದರೆ ನಾನು ಬಿಡುವೆನೆ,, ಎಂದು ನುಡಿದು ಅವಳಂ ಬಲಾತ್ಕಾರದಿಂ ಹಿಂದಿರುಗಿಸಿ ಕಲಶವನ್ನು ಆ ಶಕುಂತಲೆಯ ಕರದಲ್ಲಿತ್ತು ವೃಕ್ಷಗಳಿಗೆ ನೀರೆರೆಯುವಂತೆ ಮಾಡಲು;

ಆ ರಾಯನು—"ಎಲೌ ಪ್ರಿಯಂವದೆ, ಗಿಡಮರಗಳಿಗೆ ಜಲಸೇಚನವಂ

ನೋಡುವೆನು. ಯಾವ ಶಕುಂತಲೆಯು ಪದ್ಮಿನೀಜಾತಿಸ್ತ್ರೀಯಾದ್ದರಿಂ ಸ್ವಲ್ಪವಾಗಿ ಬಗ್ಗಿರುವ ಬಾಹುಗಳು ಜಲಕುಂಭವನೆತ್ತಿದ್ದರಿಂ ಬಲುಕೆಂಪುವರ್ಣವುಳ್ಳ ಪ್ರದೇಶದಿಂದ ಯುಕ್ತವಾಗಿರುವುವೋ, ಯಾವಳ ಪ್ರಮಾಣವಂ ಮೀರಿ ಬರುವ ನಿಟ್ಟುಸಿರುಗಳು ಈಗಲೂ ಸ್ತನಕಂಪವನ್ನುಂಟುಮಾಡುತ್ತಿರುವುವೋ; ಯಾವಳ ಮುಖದಲ್ಲಿ ಮುತ್ತಿನಂತೆ ಮುದ್ದಾದ ಬೆವರ್ವನಿಗಳ ಸಮೂಹವು ಕರ್ಣದಲ್ಲಿರುವ ಬಾಗೆಯ ಪುಷ್ಪವಂ ವ್ಯಾಪಿಸುತ್ತಿರುವುದೋ; ಯಾವಳ ಬಲು ಕಪ್ಪಾಗಿ ಮೃದುವಾಗಿರುವ ಕೇಶಪಾಶವು ಒಂದು ಕೈಯ್ಯಿಂ ಕಟ್ಟುತಿರ್ದರೂ ಕೆದರಿದ ಎಣೆಗಂಟೆನಿಂ ಜಾರುತ್ತಿರುವುದೋ; ಯಾವಳನ್ನು ವೃಕ್ಷಂಗಳಿಗೆ ನೀರನ್ನೆರೆಯುವ ಸಾಲವಿರುವುದೆಂದು ನೀವು ನಿರೂಪಿಸುವಿರೋ ಆನಿಮ್ಮ ಸಖಿಯ ಋಣವನ್ನು ತೀರಿಸುವೆನು'' ಎಂದು ಹೇಳಿ, ಅನಸೂಯೆ ಪ್ರಿಯಂವದೆಯರೀರ್ವರಿಗೆ–''ಇವಳಿಂ ಜಲಸೇಚವನಂಗೈಸದೆ ಬಿಡಿ'' ಎಂದು ತನ್ನ ಮುದ್ರಿಕೆಯಂ ಕೊಡಲು—

ಆ ಈರ್ವರು ಆವುಂಗರದಲ್ಲಿ ದುಷ್ಯಂತರಾಯನೆಂದು ಕೆತ್ತಿರುವ ಅಕ್ಷರಂಗಳಂ ಓದಿ ಒಬ್ಬರೊಬ್ಬರು ಮುಖಗಳಂ ನೋಡಿಕೊಳ್ಳುತ್ತಿರಲು; ರಾಯನು ‹‹ ಈಸಖಿಯರುಗಳು ಉಂಗರದ ಅಕ್ಷರಗಳಿಂ ಎನ್ನಂ ದೊರೆಯಾದ ದುಷ್ಯಂತರಾಯನೆಂದು ತಿಳಿದಿರುವರು, ಈ ಸಂದೇಹವಂ ಪರಿಹರಿಸುವೆನು'' ಎಂದು ಆ ಸಖಿಯರಂ ಕುರಿತು ‹ ಎಲೌ ಸಖಿಯರುಗಳಿರಾ, ಎನ್ನಂ ಮತ್ತೊಂದು ಪ್ರಕಾರವಾಗಿ ತಿಳಿಯದಿರಿ. ಈ ವುಂಗರ ಮಾತ್ರ ರಾಯನು ಧರಿಸಿಕೊಳ್ಳುವುದಕ್ಕೆ ಯೋಗ್ಯವಾದುದು''ಎಂದು ನುಡಿಯಲು—

ಪ್ರಿಯಂವದೆಯು–''ಎಲೈ ಪೂಜ್ಯನೆ, ದೊರೆಗೆ ಯೋಗ್ಯವಾದ್ದರಿಂದೀವುಂಗರವು ನಿನ್ನ ಬೆರಳಂ ಬಿಟ್ಟು ಇರುವುದಕ್ಕೆ ಯೋಗ್ಯವಾಗಲಾರದು. ಈ ಶಕುಂತಲೆಯು ನಿನ್ನ ಪ್ರಿಯವಾದ ವಾಕ್ಯದಿಂದಲೇ ಋಣದಿಂ ವಿಮುಕ್ತಳಾದಳು'' ಎಂದು ಸ್ವಲ್ಪವಾಗಿ ಹಿಂದಿರುಗಿ ನಿಂದು–''ಎಲೆಶಕುಂತಲೇ,ದಯಾಶಾಲಿಯಾದ ಪೂಜ್ಯನಾದ ಮಹಾರಾಜನು ಈ ವೃಕ್ಷಗಳಿಗೆ ನೀರೆರೆಯುವ ಕಾರ್ಯದಿಂ ಬಿಡಿಸುವಂತೆ ಮಾಡಿದನು. ಆದ್ದರಿಂದ ನೀನು ತಡೆಯಿಲ್ಲದೆ ಪೋಗುವುದು'' ಎಂದು ನುಡಿದು ಆವುಂಗುರವಂ ರಾಯನ ಹಸ್ತಕ್ಕೆ ಕೊಡಲಾಶಕುಂತಲೆಯು–‹‹ಈ ರಾಯನಲ್ಲಿ ಎನ್ನ ಮನವು ಲೀನವಾಗಿರುವುದರಿಂದಡಿಯಿಟ್ಟು ಪೋಗುವುದಕ್ಕೆ ಸಮರ್ಥಳಾಗಲಾರೆನು'' ಎಂದು ತನ್ನ ಮನದಲ್ಲಾಲೋಚಿಸುತ್ತ ಪ್ರಿಯಂವದೆಯಂ ಕುರಿತು—''ಎಲೆ ಪ್ರಿಯಂವದೇ, ಎನ್ನಂ ಕುರಿತು ಪೋಗೆಂದು ಪೇಳುವುದಕ್ಕೂ ತಡೆಯುವುದಕ್ಕೂ ನೀನಾರು'' ಎಂದು ಕೋಪಿಸಿ ನುಡಿಯಲು—

ಆರಾಯನು "ಈ ಶಕುಂತಲೆಯು ನಾನು ಪೇಳ್ವ ಮಾತಿನೊಡನೆ ತನ್ನ ಮಾತಂ ಜತೆಗೊಳಿಸದೆ ಮಾತನಾಡುವಳು. ಅಭಿಮುಖನಾಗಿ ನಾನು ಮಾತನಾಡುತ್ತಿರಲು ಆ ವಚನವಂ ಕೇಳಲಿಚ್ಛೆಯಿಂ ಕಿವಿಗೊಡುವಳು. ಚೆನ್ನಾಗಿ ಎನ್ನ ಮುಖದೆದುರಿಗೆ ತನ್ನ ಮುಖವನ್ನಿತ್ತು ನಿಲ್ಲದೆ ಲಜ್ಜೆಯಿಂ ಹೊರಸಾರುವಳು. ಇವಳ ದೃಷ್ಟಿಯು ಒಂದು ಪದಾರ್ಥದಲ್ಲಿಯೂ ನಿಲ್ಲದೆ ಚಂಚಲವಾಗಿ ಎನ್ನ ದೃಷ್ಟಿಯಂ ವಂಚಿಸಿ ಓರೆನೋಟದಿಂ ಬಾರಿಬಾರಿಗೂ ನೋಡುವುದರಿಂ ನಾನು ಹೇಗೆ ಈ ಶಕುಂತಲೆಯಲ್ಲಿ ಅಭಿಲಾಷೆಯುಳ್ಳವನಾಗಿರುವೆನೋ ಹಾಗೆ ಅವಳು ಎನ್ನಲ್ಲಿ ಅಭಿಲಾಷೆಯುಳ್ಳವಳಾಗಿ ಇರುವಳೆಂದು ಇವಳು ಮಾಳ್ಪ ಚೇಷ್ಟೆಯಿಂದಲೇ ತಿಳಿಯುವುದು. ಆದ್ದರಿಂದೆನ್ನ ಪ್ರಾರ್ಥನೆಗೆ ಸ್ಥಳ ದೊರಕಿತು" ಎಂದು ತನ್ನ ಮನದೊಳಾಲೋಚಿಸುತ್ತಿರಲು—

ಅಷ್ಟರಲ್ಲೇ ಕೆಲವು ಋಷಿಗಳು ಬಂದು ಈ ತಪೋವನದಲ್ಲಿರುವ ಪ್ರಾಣಿಗಳಂ ಸಂರಕ್ಷಿಸುವುದಕ್ಕೋಸುಗ ಮಹಾರಾಜನಾದ ದುಷ್ಯಂತರಾಯನು ಬಂದಿರುವನೆಂದು ತಮ್ಮೊಳು ತಾವು ಮಾತನಾಡುತ್ತಿರುವಲ್ಲಿ ಅವರಲ್ಲೊರ್ವನು ಮಿಕ್ಕವರಂ ಕುರಿತು—"ಎಲೈ ಋಷಿಗಳಿರಾ, ಈ ದುಷ್ಯಂತರಾಯನ ಅಶ್ವಖುರಪುಟದಿಂದೆದ್ದ ಕೆಂದೂಳು ಪ್ರಾತಃಕಾಲದ ಅರುಣಕಾಂತಿಯಂತೆ ಪ್ರಕಾಶಮಾನವಾಗಿ, ವೃಕ್ಷಂಗಳ ಕೊಂಬೆಗಳಲ್ಲಿ ಕಟ್ಟಿರುವ ಜಲದಿಂ ನನೆಸಿರುವ ನಾರುಮಡಿಗಳಲ್ಲಿ ಬಿದ್ದು, ಈ ವೃಕ್ಷಂಗಳಲ್ಲಿ ರಕ್ತವರ್ಣವಾದ ಶಲಭಗಳ ಸಮೂಹಗಳಿರುವುವೋ ಎಂಬ ಸಂಶಯವನ್ನುಂಟುಮಾಡುತ್ತಿರುವುದು. ಮತ್ತು ಈ ರಾಯನ ಆನೆಯು ತೀವ್ರವಾದ ಪ್ರಹಾರವಂಗೈದುದರಿಂ ವೃಕ್ಷಗಳಲ್ಲಿ ತಗಲಿಕೊಂಡಿರುವುದೊಂದು ಕೊಂಬುಳ್ಳದ್ದಾಗಿ, ಎದೆಯಿಂದ ಅನೇಕವಾದ ಲತೆಗಳನ್ನೆಳೆದುಕೊಂಡು ಬರುವುದರಿಂ ತನ್ನಂ ಹಗ್ಗಗಳಿಂ ಸುತ್ತಿರುವರೋ ಎಂಬ ಭ್ರಾಂತಿಯನ್ನುಂಟುಮಾಡುತ್ತ, ತಾನು ಬರುವ ರಭಸಕ್ಕೆ ಅನೇಕ ಹುಲ್ಲೆಗಳಂ ಓಡಿಸುತ್ತ, ನಮ್ಮ ತಪಗಳಿಗೆ ಮೂರ್ತೀಭವಿಸಿರುವ ವಿಘ್ನವೋ ಎಂಬಂತೆ ಇರುತ್ತ, ಈ ರಾಯನ ರಥವಂ ನೋಡಿ ಭಯವಂ ಪೊಂದುತ್ತ, ಧರ್ಮಪ್ರಧಾನವಾದ ಈ ನಮ್ಮ ಆಶ್ರಮವಂ ಪ್ರವೇಶಗೆಯ್ಯುತಿರುವುದು" ಎಂದು ನುಡಿಯಲು—

ಆವಾಕ್ಯವಂ ಕೇಳಿ, ಆ ಸ್ತ್ರೀಯರುಗಳು ಇವನು ದುಷ್ಯಂತರಾಯನೆಂಬುವುದಂ ನಿಶ್ಚಯವಾಗಿ ತಿಳಿದು, ಮದ್ದಾನೆಯು ಬರುವುದೆಂಬ ನುಡಿಗೆ ಭಯಭ್ರಾಂತರಾಗುತ್ತಿರಲು; ಆ ರಾಯನು ಆ ಋಷಿಗಳ ವಾಕ್ಯವಂ ಕೇಳಿ, ನೀಚರಾದ ಸೇನಾಜ

ನರು ಎನ್ನಂ ಹುಡುಕುವುದಕ್ಕೋಸುಗ ಈ ತಪೋವನವನ್ನಾ ಕ್ರಮಿಸುತ್ತಿರುವರು, ಅವರಂ ಹಿಂದಿರುಗಿ ಪೋಗುವಂತೆ ಮಾಡುವೆನೆಂದು ಆಲೋಚಿಸುತ್ತಿರಲು—

ಅನಸೂಯೆಯು—“ ಎಲೈ ಮಹಾರಾಜನೇ, ಅರಣ್ಯಾಗಜವು ಬರುವುದೆಂದು ಋಷಿಗಳು ಪೇಳಿದ ವಾರ್ತೆಯಿಂ ನಾವೆಲ್ಲರೂ ಭಯದಿಂ ವ್ಯಾಕುಲರಾಗಿರುವೆ ವಾದ್ದಱಿಂ ಪರ್ಣಶಾಲೆಯಂ ಕುಱಿತು ಪೋಗುವಂತೆ ನಮಗೆ ಅಪ್ಪಣೆಯನ್ನೀಯ ಬೇಕು ” ಎಂದು ನುಡಿಯುಲಾ ರಾಯನು, ತನ್ನಂ ಬಿಟ್ಟು ಪೋಗುವರೆಂಬ ವ್ಯಸನ ದಿಂದಲೂ ಋಷಿಗಳು ಕಾಣುವರೆಂಬ ಭಯದಿಂದಲೂ ಯುಕ್ತನಾಗಿ ಆ ಸ್ತ್ರೀಯರಂ ಕುಱಿತು—“ ಎಲೌ ಕೋಮಲಾಂಗಿಯರುಗಳಿರಾ, ನೀವೆಲ್ಲಾ ಪರ್ಣಶಾಲೆಯಂ ಕುಱಿತು ಪೋಗುವುದು. ನಾನು ಈ ತಪೋವನಕ್ಕೆ ಎನ್ನ ಸೇನಾಜನದಿಂ ಬಾಧೆ ಯುಂಟಾಗದಂತೆ ಮಾಡುವೆನು ” ಎಂದು ಅಪ್ಪಣೆಯನ್ನೀಯಲು—

ಆ ಶಕುಂತಲೆ ಮೊದಲಾದ ಸ್ತ್ರೀಯರು ಆ ಮಾಧವೀಮಂಟಪದಿಂದೆದ್ದು ನಿಂತು, ಅನಸೂಯೆಪ್ರಿಯಂವದೆಯರೀರ್ವರು ರಾಯನಂ ಕುಱಿತು—“ ಎಲೈ ಮಹಾರಾಜನೇ, ಫಲಪುಷ್ಪಗಳಿಂದುಪಚಾರವಂ ಗೆಯ್ಯದೆ ಇರುವುದಱಿಂ ನಿನ್ನಂ ಮರಳಿ ನೋಡುವುದಕ್ಕೂ ಪರ್ಣಶಾಲೆಗೆ ಬರುವಂತೆ ವಿಜ್ಞಾಪನೆಯಂಗೆಯ್ಯುವ ದಕ್ಕೂ ನಮಗೆ ಲಜ್ಜೆಯುಂಟಾಗುವುದು.” ಎಂದು ನುಡಿಯಲು; ಆರಾಯನು— “ಎಲೌ ಸಖಿಯರುಗಳಿರಾ, ಈ ಪ್ರಕಾರವಾಗಿ ನೀವು ಪೇಳಲಾಗದು. ಮನೋಹರ ವಾದ ನಿಮ್ಮ ಸಂದರ್ಶನದಿಂದಲೇ ನಾನು ಸಮಸ್ತೋಪಚಾರವಂ ಗೈದಂತೆ ಸಂತು ಷ್ಟನಾದೆನು ” ಎಂದು ಪೇಳಲಾಶಕುಂತಲೆಯು ಆ ದುಷ್ಯಂತರಾಯನಂ ಬಿಟ್ಟು ಪೋಗಲಾಱದೆ ಸ್ವಲ್ಪ ಜಾಲವಂ ಗೈದು ಕಾಲವಂ ಕಳೆಯುತ್ತ, ಮುಂದಡಿಯಿಡಲಾ ಱದೆ ಏನೋ ಒಂದು ವಸ್ತುವಂ ಮಱೆತವಳಂತೆ ಹಿಂದಿರುಗಿ ಬಾಱಿಬಾಱಿಗೂ ರಾಯನಂ ನೋಡುತ, ಅತಿಪ್ರಯಾಸದಿಂದ ಸಖಿಯರಂದೊಡಗೂಡಿ ವಿಘ್ನಕಾರಿಗ ಳಾಗಿ ಬಂದರೆಂದಾಋಷಿಗಳಂ ಮನದಲ್ಲಿ ನಿಂದಿಸುತ್ತ, ಪರ್ಣಶಾಲೆಯಂ ಕುಱಿತು ಪೋಗಲು—

ಆ ರಾಯನು ಅತ್ಯಂತವ್ಯಸನಾತುರನಾಗಿ, “ ಈ ಶಕುಂತಲೆಯಂ ಬಿಟ್ಟು ಎನ್ನ ಪಟ್ಟಣಕ್ಕೆ ಪೋಗುವುದಕ್ಕೋಸುಗ ನಿರಾಶನಾಗಿರುವೆನು. ಈಗ ಎನ್ನಂ ಹುಡುಕುವುದಕ್ಕೆ ಬಂದಿರುವ ಎನ್ನ ಸೇನಾಜನವಂ ಒಡಗೊಂಡು ಈ ತಪೋವನದ ಸಮೀಪದಲ್ಲೇ ಕಟಕರಚನೆಯಂ ಗೆಯ್ಯುವೆನು. ಮತ್ತು ಆ ಶಕುಂತಲೆಯು ಸಖಿಯ ರಿಂದೊಡಗೂಡಿ ವೃಕ್ಷಂಗಳಿಗೆ ಜಲವಂ ಪೊಯ್ಯುತಿರ್ದ ಒಯ್ಯಾರವಂ ಸಖಿಯ

ರೊಡನೆ ಸರಸೋಕ್ತಿಯಂ ಪೇಳ್ದ ಸೊಗಸಂ ಬೆಡಗುಗೂಡಿ ಅಡಿಯಿಟ್ಟು ಪೋದ ಬಿತ್ತ ರವಂ-ಇವು ಮೊದಲಾದ ಅವಳ ವಿಲಾಸವಾದ ವ್ಯಾಪಾರದಲ್ಲಿ ತಗಲಿಕೊಂಡಿರುವ ಎನ್ನ ಬುದ್ಧಿಯಂ ಹಿಂದಿರುಗಿಸುವುದಕ್ಕೆ ಸಮರ್ಥನಾಗಲಾರೆನು. ಎದುರುಗಾಳಿಗೆ ತೆಗೆದುಕೊಂಡು ಪೋಗುವ ಧ್ವಜದಂಡವು ಮುಂದು ಸಾರಿ ಪೋಗುತ್ತ ಅದರಲ್ಲಿರುವ ನಯವಾದ ವಸ್ತ್ರವು ಹೇಗೆ ಹಿಂದು ಸಾರುವುದೋ, ಅದರಂತೆ ಧೈರ್ಯಶಾಲಿಯಾದ ಎನ್ನ ಮನವು ಅವಳಲ್ಲಿ ಪರಿಚಯವಿಲ್ಲದೆ ಇರ್ದರೂ ಆ ಶಕುಂತಲೆಯನ್ನನುಸರಿಸಿ ಹಿಂದಕ್ಕೆ ಓಡುತಿರುವುದು" ಎಂದು ತನ್ನೊಳು ತಾನು ಚಿಂತಿಸುತ್ತ ಸೇನಾಸಮೀಪವಂ ಕುರಿತು ಬರುತಿರ್ದನು.

ಎಂಬಲ್ಲಿಗೆ

ಗದ್ಯ — ಚಂಡಕರಮಂಡಲೋಚ್ಚಂಡತೇಜಃಪ್ರಕಾಂಡಕಾಂಡಷಂಡಖಂಡಿತಾಖಂಡಶೌರ್ಯ ಪರಿಮಂಡಿತ ಭಂಡನೋದ್ದಂಡಾರಿಮುಂಡಲ ಕಂಡೂಲಮೋದರ್ಂಡಪಾಂಡಿತ್ಯ ಪಾಂಡುರುಚಿಖಂಡಡಿಂಡೀರಪುಂಡರೀಕ ಪರಿಪಾಂಡುರಯಶಃಪಿಚಂಡಿಲ ಬ್ರಹ್ಮಾಂಡಭಾಂಡೋದ್ಭಟ ಕಾಲಕೂಟಪ್ರತಿಭಟ ಕಟುಕಪಟನಿಶಾಟಕೂಟ ಪಾಟನಲಂಪಟ ನಿಟಿಲಪುಟಘಟಿತ ವಿಕಟಕೃಪೀಟಯೋನಿ ಕುಟಿಲಮೋಹಾಂಧಕಾರಚ್ಛಟಾವಿಘಟನ ಪಟುನಟನ್ಮಹಾನಟ ಮಕುಟತಟ ಪರ್ಯಟತ್ತಟಿನೀತಟಾಂತರಿಂಗದಭಂಗೋತ್ತುಂಗತರಂಗ ಸಂಗರಭಂಗಸಂಭ್ರಮೋಜ್ಜೃಂಭಮಾಣ ಗಂಭೀರವಾಗ್ಗುಂಭಸಂಭಾವಿತ ಗರನಗರ ವರನಿಲಯ ಚಂದ್ರಚೂಡ ಚರಣಾರವಿಂದ ಸೇವಾತುರಂದ ನಿರಂತರನಿಷೇವಣ ಸ್ವಯಂವೃತಕವಿತಾವಧೂರತ್ನ ರಾಜಾಧಿರಾಜ ಮಹಾರಾಜ ಶ್ರೀಚಾಮರಾಜಪುತ್ರಾತ್ರೇಯಸಗೋತ್ರ ಪವಿತ್ರಚರಿತ್ರ ಶಂಖ ಚಕ್ರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ನರಪತಿಬಿರುದ ಶ್ರೀಚಾಮುಂಡಿಕಾವರಪ್ರಸಾದಲಬ್ಧ ಮಹೀಶೂರಮಹಾಸಂಸ್ಥಾನವೇದೀಪ್ಯಮಾನಕುಲಕ್ರಮಾಗತದಿವ್ಯರತ್ನಸಿಂಹಾಸನಾರೂಢಶ್ರೀಕೃಷ್ಣರಾಜಕಂಠೀರವರು ಸರಸಜನಾನಂದಕರವಾಗಿ ಲೋಕೋಪಕಾರಾರ್ಥವಾಗಿ ನವರಸಭರಿತವಾಗಿ ಕರ್ಣಾಟಕಭಾಷೆಯಿಂ ವಿರಚಿಸಿದ ಕೃಷ್ಣರಾಜವಾಣೀವಿಲಾಸರತ್ನಾಕರವೆಂಬ ಶಾಕುಂತಳನಾಟಕದ ನವೀನ ಟೀಕೆಯಲ್ಲಿ ದುಷ್ಯಂತರಾಯನು ತನ್ನ ಸೇನಾಸಮೀಪಕ್ಕೆ ಬರುತಿರ್ದನೆಂಬ ಪ್ರಥಮಕಲ್ಲೋಲದಲ್ಲಿ ಚತುರ್ಥ ತರಂಗಂ.

ಪ್ರಥಮಕಲ್ಲೋಲಂ ಸಮಾಪ್ತಂ

ದ್ವಿತೀಯ ಕಲ್ಲೋಲಂ

ಅನಂತರದಲ್ಲಿ ದುಷ್ಯಂತರಾಯನು ಕಣ್ವಾಶ್ರಮದಲ್ಲಿ ಶಕುಂತಲೆಯು ಪರ್ಣಶಾಲೆಯಂ ಕುಱಿತು ಪೋದಳೆಂಬ ಚಿಂತೆಯಿಂ ಯುಕ್ತನಾಗಿ ತನ್ನಂ ಹುಡುಕುವುದಕ್ಕೆ ಬಂದಸೇನೆಯ ಸಮೀಪವಂ ಸೇರಲು; /

ಅಷ್ಟಱಲ್ಲೇ ವಿದೂಷಕನು ಪ್ರತಿಷ್ಠಾನ ಪಟ್ಟಣದಿಂ ರಾಯನಂ ಅಱಸಿಕೊಂಡು ಆತಪೋವನಕ್ಕೆ ಬಂದು, ರಾಯನಂ ಕಾಣದೆ, ಅಧಿಕಾಯಾಸದಿಂ ಕೂಡಿದವನಾಗಿ, "ಆಃ ! ಬೇಟೆಯಲ್ಲಿ ಆಸಕ್ತನಾಗಿರುವ ಈ ದುಷ್ಯಂತರಾಯನ ಮಿತ್ರತ್ವದಿಂ ನಾನು ಹಾನಿಯಂ ಪೊಂದಿದೆನು. ಈಗಲೂ ಈ ರಾಯನೊಡನೆ–ಇದು ಹರಿಣವು, ಇದು ಕಾಡುಹಂದಿಯು, ಇದು ಹುಲಿಯು ಎಂದು ಗ್ರೀಷ್ಮಕಾಲದ ಮಧ್ಯಾಹ್ನದ ಬಿಸಲಿನಲ್ಲಿ ಸ್ವಲ್ಪ ನೆರಳುಳ್ಳ ವೃಕ್ಷರಾಜಿಗಳಲ್ಲಿ ತಿರುಗುತಿರುವೆನು. ಮತ್ತು ವೃಕ್ಷ ಲತೆ ಪರ್ಣಗಳ ಸಂಪರ್ಕದಿಂ ಕಷಾಯವಾಗಿ ಬೇಗೆಯ ಬಿಸಲಿನಿಂ ಸ್ವಲ್ಪ ಬಿಸಿಯಾಗಿ ಬೆಟ್ಟದಿಂ ಬೀಳುವ ನದೀಜಲವಂ ಪಾನವಂ ಗೆಯ್ಯುತ, ಶುಷ್ಕಮಾಂಸವಂ ಅಕಾಲದಲ್ಲಿ ಭಕ್ಷಿಸುತ್ತಿರುನೆನು. ಇದೂ ಅಲ್ಲದೆ ಈ ರಾಯನ ಕುದುರೆಯ ಮಾರ್ಗವನ್ನನುಸರಿಸಿ ಓಡಿದ್ದಱಿಂದ ವ್ಯಥೆಯಿಂ ಯುಕ್ತವಾದ ತೊಡೆಗಳ ಸಂದಿಗಳುಳ್ಳ ಎನಗೆ ರಾತ್ರಿಯಲ್ಲಿ ಮಲಗುವುದಕ್ಕೆ ಆಗಲಿಲ್ಲವಾದುದು. ಸ್ವಲ್ಪ ನಿದ್ರೆ ಬರುವುದಱಲ್ಲಿಯೇ ದಾಸೀಪುತ್ರರಾದ ಈಬೇಟೆಗಾಱರು ಪ್ರಾತಃಕಾಲದಲ್ಲಿ ಬೇಟೆನಾಯಿಗಳಲ್ಲಿ ಆಸೆಯುಳ್ಳವರಾಗಿ ಅರಣ್ಯವಂ ಮುತ್ತಿಗೆಯಂ ಗೆಯ್ಯುವೆವೆಂಬ ಕಲಕಲಧ್ವನಿಯಿಂದೆನ್ನಂ ಎಚ್ಚಱಂಗೈದರು. ಇನ್ನುಮೇಲಾದರೂ ಇವರ ಬಾಧೆಯಿಲ್ಲದೆ ಸುಖವಾಗಿರುವೆನೆಂದರೆ ಕಪೋಲದ ಕುರುವಿನಮೇಲೆ ಒಂದು ಹುಣ್ಣಾಗಿ ಎನ್ನಂ ವ್ಯಥೆಬಡಿಸುತ್ತಿರುವುದು. ನಿನ್ನೆ ದಿವಸ ನಾನು ಇಲ್ಲದವೇಳೆಯಲ್ಲಿ ರಾಯನು ಮೃಗವನ್ನನುಸರಿಸಿ ಈ ಋಷಿಗಳಾಶ್ರಮಕ್ಕೆ ಬಂದು ಎನ್ನ ದೌರ್ಭಾಗ್ಯದ ದೆಸೆಯಿಂದ ಋಷಿಪುತ್ರಿಯಾಗಿ ಅತಿಸುಂದರಳಾದ ಶಕುಂತಲೆಯೆಂಬ ಸ್ತ್ರೀಯಂ ಕಂಡನು ಎಂಬ ವರ್ತಮಾನವಂ ಕೇಳಿರುವೆನು. ಇನ್ನುಮೇಲೆ ಈ ರಾಯನು ತನ್ನ ಪಟ್ಟಣಕ್ಕೆ ಪೋಗುವೆನೆಂಬ ಕಥೆಯಂ ಸ್ಮರಿಸಲಾಱನೆಂದು ತೋಱುವುದು. ಆ ವಿಶೇಷವನ್ನೇ ಯೋಚಿಸುತ್ತಿರುವ ನನ್ನ ಕಣ್ಣುಗಳಿಗೆ ಈಗ ಪ್ರಭಾತವಾಯಿತು. ಮುಂದೆ ಏನು ಗತಿಯಾಗುವುದೋ

ತಿಳಿಯದು. ಆದರೂ ಈ ರಾಯಂಗೆ ಸಮಸ್ತೋಪಚಾರವಂಗೈದು ಎಲ್ಲಿ ಇದ್ದರೂ ಹುಡುಕಿ ಕರೆದು ಕೊಂಡು ಪಟ್ಟಣಕ್ಕೆ ಪೋಗುವೆನು' ಎಂದು ಬರುತ್ತ, ಹಿಂದಿರುಗಿ ನೋಡಿ «ಇದೊ! ರಾಯನು ಹಸ್ತದಲ್ಲಿ ಧರಿಸಿದ ಬಾಣಬತ್ತಲಿಕೆಯುಳ್ಳ ವನಪುಷ್ಪ ಮಾಲೆಗಳಂ ಧರಿಸಿರುವ ಬೇಡಸ್ತ್ರೀಯರುಗಳಿಂದಲೂ, ಮಿತಸೇನಾಜನರಿಂದಲೂ ಯುಕ್ತನಾಗಿ ಸಮೀಪದಲ್ಲೇ ಬರುವನು... ಅಷ್ಟರಲ್ಲೇ ನಾನು ಕೈಕಾಲುಗಳು ಮುರಿದಿರುವನಂತೆ ಇಲ್ಲೇ ಕುಳಿತು ಇದರಿಂದಲಾದರೂ ಬಳಲಿಕೆಯಂ ಪರಿಹರಿಸಿ ಕೊಳ್ಳುವೆನು '' ಎಂದು ಒಂದು ದೊಣ್ಣೆಯನ್ನೂರಿ ಕೊಂಡು ಇರುತ್ತಿರಲು,

ಇತ್ತಲು ರಾಯನು ಮಿತಸೇನೆಯಿಂದೊಡಗೂಡಿ ಬರುತ್ತಾ « ಪ್ರೀತಿಪಾತ್ರಳಾದ ಶಕುಂತಲೆಯು ಎನಗೆ ಅಭಿಲಾಷೆಯಿರುವಂತೆ ಸ್ವಲ್ಪಪ್ರಯತ್ನಕ್ಕೆ ಸಾಧ್ಯಳಾಗಲಾರಳು. ಎನ್ನ ಮನವಾದರೋ ಅವಳ ನಾನಾವಿಧಚೇಷ್ಟೆಯಂ ನೋಡಬೇಕೆಂದು ಆಯಾಸವಂ ಕೊಳ್ಳುವುದು. ಮನ್ಮಥನು ಆಲಿಂಗನಾದಿಗಳಿಂ ಕೃತಾರ್ಥನಾಗದಿರ್ದರೂ ನಮ್ಮಿಬ್ಬರ ಪ್ರಾರ್ಥನೆಯು ಒಂದಾನೊಂದು ಇಚ್ಛಾವಿಶೇಷವಂ ಪುಟ್ಟಿಸುತ್ತಿರುವನು '' ಎಂದು ಮನದಲ್ಲಿ ಒಂದು ಕ್ಷಣ ಯೋಚನೆಯಂ ಗೈದು, ತನ್ನೊಳು ತಾನು ನಸುನಕ್ಕು « ಲೋಕದಲ್ಲಿ ಯಾವ ಕಾಮಿಪುರುಷನು ಸುಂದರಳಾದ ಸ್ತ್ರೀಯು ಸ್ವಭಾವವಾಗಿ ವಿಲಾಸದಿಂ ಕಣ್ಣುಗಳಂ ತೇಲಿಸುತ್ತಾ, ಮನೋಹರವಾಗುವಂತೆ ನೋಡುವುದು ಯಾವುದುಂಟೋ, ನಿತಂಬಗಳ ಭಾರದಿಂದ ಮೆಲ್ಲನಡಿಯಿಡುತ ನಡೆಯುವುದು ಯಾವುದುಂಟೋ, ಪೋಗುತಿರುವಳಂ ಅವಳ ಒರಗೆಯ ಹೆಣ್ಣುಗಳು ತಡೆಯುವಲ್ಲಿ ಹುಬ್ಬುಗಳಂ ಗಂಟಿಕ್ಕಿಕೊಂಡು ಯಾವ ವಚನವಂ ನುಡಿಯುವಳೋ ಈಚೇಷ್ಟೆಗಳೆಲ್ಲವಂ ಎನಗೋಸುಗವೇ ಮಾಡಿದಳೆಂದೂ, ಎನಗೆ ಅಭಿಲಾಷೆ ಅವಳಲ್ಲಿರುವಂತೆ ಅವಳಿಗೂ ಎನ್ನಲ್ಲಿ ಅನುರಾಗವಿರುವುದೆಂದು ತಿಳಿದು ಆ ಸ್ತ್ರೀಯಂ ಪ್ರಾರ್ಥಿಸುವುದಕ್ಕೆ ಇಚ್ಛೈಸುತ್ತಿರುವನೋ, ಅವನು ಹಾಸ್ಯಾಸ್ಪದನಾಗುವನು. ಪ್ರಕೃತಕ್ಕೆ ಶಕುಂತಲೆಯು ಮಾಡಿದ ಶೃಂಗಾರಚೇಷ್ಟೆಗಳಂ ನೋಡಿ, ತಡೆದ ಸಖಿಯರೊಡನೆ ಅಸೂಯೋಕ್ತಿಗಳಂ ನುಡಿದಿರುವುದಂ ಕೇಳಿ, ಅವಳಿಗೆ ಎನ್ನಲ್ಲಿ ಅಭಿಲಾಷೆಯಿರುವುದೆಂದು ನಿಶ್ಚೈಸಿ ಹಾಸ್ಯಾಸ್ಪದನಾಗಿ ಹೋದೆನು'' ಎಂದು ಚಿಂತಿಸುತ್ತ ಬರುತ್ತಿರಲು,

ಇತ್ತಲು ವಿದೂಷಕನು ದೊಣ್ಣೆಯನ್ನೂರಿಕೊಂಡು ನಿಂತು ರಾಯನಂ ಕುರಿತು—ಎಲೈ ಸ್ನೆಹಿತನಾದ ಮಹಾರಾಯನೇ, ಎನ್ನ ಹಸ್ತಪಾದಗಳು ಚಲಿಸುವುದಕ್ಕಾಗದೆ ಇರುವುವಾದ್ದರಿಂ ವಾಙ್ಮಾತ್ರದಿಂದಲೇ ಜಯಳ್ಳವನಾಗೆಂದು ನುಡಿಯಲು-

ಆ ರಾಯನು ಮಂದಹಾಸವಂ ಗೆಯ್ಯುತ, ಅವನು ವಕ್ರಾಂಗನಾಗಿ ದಂಡವನ್ನವಲಂಬಿಸಿ ನಿಂದಿರುವುದಂ ಕಂಡು—“ ಎಲೈ ವಿದೂಷಕನೇ, ಯಾರಿಂದ ನಿನ್ನ ಶರೀರಕ್ಕೆ ಘಾತಿಯುಂಟಾದುದು?” ಎಂದು ಕೇಳಲಾವಿದೂಷಕನು—“ ಎಲೈ ಮಹಾರಾಜನೇ, ನೀನು ಎನ್ನ ಕಣ್ಣುಗಳಂ ಜುಚ್ಚಿ ಕಣ್ಣೀರುಬರುವುದಕ್ಕೆ ಕಾರಣವೇನೆಂದು ಏಕೆ ಕೇಳುತ್ತಿರುವೆಯೋ ತಿಳಿಯದು ?” ಎನಲು ಆ ರಾಯನು—“ಎಲೈ ವಿದೂಷಕನೇ, ನೀನು ಪೇಳುವ ವಾಕ್ಯಾಭಿಪ್ರಾಯವು ನನಗೆ ತಿಳಿಯದು” ಎನಲಾವಿದೂಷಕನು—“ ಎಲೈ ಮಿತ್ರನಾದ ರಾಜನೇ, ಕೇಳು ನದೀಮಧ್ಯದಲ್ಲಿರುವ ನೀರಂಜಿವೃಕ್ಷವು ತಲೆಯಂ ಒಗ್ಗಿ ತೊನೆಯುತ್ತ ಕುಬ್ಜಲೀಲೆಯಂ ವಿರಚಿಸುತಿರುವುದು—ಆ ವೃಕ್ಷವು ಬಗ್ಗಿತೊನೆಯುವುದು ತನ್ನ ಪ್ರಭಾವದಿಂದಲೋ, ಅಲ್ಲವಾದಲ್ಲಿ ನದೀವೇಗದಿಂದಲೋ ಪೇಳು” ಎನಲು ಆ ರಾಯನು ಆ ವೃಕ್ಷವು ಒಗ್ಗಿ ತೊನೆಯುವುದಕ್ಕೆ ನದಿವೇಗವೇ ಕಾರಣವಾಗಿರುವುದು ; ಎನಲು ಆ ವಿದೂಷಕನು “ಇಲ್ಲಿ ಎನ್ನ ಕೈ ಕಾಲುಗಳು ಘಾತಿಯಂ ಪೊಂದುವುದಕ್ಕೆ ನೀನೇ ಕಾರಣವು” ಎಂದು ನುಡಿಯಲು; ಆ ರಾಯನು—“ ಎಲೈ ಮಂದಮತಿಯೇ, ನಿನ್ನ ಅಂಗಘಾತಿಗೆ ನಾನೆಂತು ಕಾರಣನಾಗುವೆನು” ಎನ್ನಲಾವಿದೂಷಕನು “ ಯಾವ ಕಾರಣದಿಂ ನೀನು ಸಮಸ್ತವಾದ ರಾಜಕಾರ್ಯಂಗಳಂ ಬಿಟ್ಟು ಹಳ್ಳಗಳಿಂ ಪೋಗುವುದಕ್ಕಾಗದೆ ಇರುವ ಅರಣ್ಯಾಪ್ರದೇಶದಲ್ಲಿ ವನಚರರಾದ ಬೇಡರ ವೃತ್ತಿಯನ್ನಾಶ್ರಯಿಸಿ ಸಂಚರಿಸುತ್ತಿರುವೆಯೋ ಅದಱಿಂ ನಿನ್ನೊಡನೆ ನಿತ್ಯದಲ್ಲೂ ತಿರುಗುತ್ತ ದುಷ್ಟಮೃಗಗಳಂ ಓಡಿಸುತ್ತಿರುವುದಱಿಂದೆನ್ನ ಅಂಗಗಳ ಕೀಲುಗಳೆಲ್ಲಾ ಜರ್ಝರಿತವಾಗಲಾಗಿ ಪದಚಲನೆಯಂ ಗೈಯ್ಯುವುದಕ್ಕೂ ಶಕ್ತಿಯಿಲ್ಲದೆ ಇರುವೆನು. ಒಂದು ದಿವಸವಾದರೂ ಎನ್ನಂ ಬಿಟ್ಟು ಕಳುಹಿದೆಯಾದರೆ ಎನ್ನ ಶರೀರಕ್ಕೆ ಉಪಚಾರವಂ ಮಾಡಿಕೊಳ್ಳುವೆನು” ಎಂದು ನುಡಿಯಲು; ಆ ರಾಯನು-“ಆ ವಿದೂಷಕನು ಅರಣ್ಯವಂ ಸುತ್ತಲಾಱೆನೆಂದು ನುಡಿಯುತ್ತಿರುವನು, ಎನ್ನ ಮನವಾದರೋ ಆ ಋಷಿಪುತ್ರಿಯಾದ ಶಕುಂತಲೆಯಂ ಸ್ಮರಿಸಿಕೊಂಡು ಬೇಟೆಯಾಡುವುದಕ್ಕೂ ಮುಂದರಿದು ಪೋಗದೆ ವಿಮುಖವಾಗಿರುವುದು. ಮತ್ತಮಾಶಕುಂತಲೆಯೊಡನೆ ಸಹವಾಸವಂ ಗೆಯ್ಯುತ ಅವಳಿಗೆ ವಿಲಾಸವಾಗಿ ನೋಡುವುದಂ ಉಪದೇಶವಂ ಗೈದಿರುವುವೊ ಎಂಬಂತಿರುವ ಹುಲ್ಲೆಗಳ ಸಮೂಹದಲ್ಲಿಯೂ ನಾರಿಯಿಂ ಸೇರಿರುವ ಧನುಸ್ಸಂ ಎತ್ತಿ ಬಾಣವಂ ಬಿಡುವುದಕ್ಕೆ ಸಮರ್ಥನಾಗಲಾಱೆನು” ಎಂದು ತನ್ನ ಮನದಲ್ಲಾಲೋಚನೆಯಂ ಗೆಯ್ಯುತ್ತಿರಲಾವಿದೂಷಕನು ರಾಯನ ಮುಖವಂ ನೋಡಿ-“ ಎಲೈ ರಾಯನೇ, ನೀನು ಹೃದಯ

ದಲ್ಲಿ ಏನೋ ಒಂದು ಯೋಚನೆಯಂ ಗೆಯ್ಯುತ್ತಿರುವನಂತೆ ತೋಱುವೆ ನಾನು ನಿನ್ನೊಡನೆ ಪೇಳಿದ ವಾಕ್ಯವು ಅರಣ್ಯರೋದನವಂ ಗೆಯ್ದಂತಾದುದು '' ಎಂದ್ರು ನುಡಿಯಲು; ಆರಾಯನು ನಸುನಕ್ಕು ‹‹ಎಲೈ ವಿದೂಷಕನೇ ಮಿತ್ರನಾದ ನಿನ್ನ ವಚನವನ್ನತಿಕ್ರಮಿಸಿ ಪೋಗಬಾರದೆಂದು ನಿಂತಿರುವೆನು. ನೀನು ಮನಬಂದಂತೆ ವಚನವಂ ಪೇಳುತಿರುವೆ '' ಎನ್ನಲಾ ವಿದೂಷಕನು ‹ ಎಲೈ ಸ್ವಾಮಿಯೆ ನೀನು ಚಿರಂಜೀವಿಯಾಗಿ ಈ ಆಶ್ರಮದಲ್ಲಿ ಸೌಖ್ಯವಾಗಿರುವದು ; ಎನ್ನೊಡನೆ ವಿಶ್ವಾಸವಾಗಿ ಸಲ್ಲಾಪವಂಗೈಯ್ಯದೆ ಇರುವೆಯಾದ್ದರಿಂ ನಾನು ಪೋಗುವೆನೆನಲು '' ಆ ರಾಯನು ‹‹ ಎಲೈ ವಿಧೂಷಕನೆ ನಿಲ್ಲುನಿಲ್ಲು; ನಿನ್ನೊಡನೆ ಇನ್ನು ಕೆಲವು ಪೇಳತಕ್ಕದ್ದಿರುವದೆಂದು ಪೋಗುತ್ತಿರುವನಂತಡೆದು ನಿಲ್ಲಿಸಲಾವಿದೂಷಕನು, ‹‹ಎಲೈ ಸ್ವಾಮಿಯೆ ನಿನ್ನ ಹೃದಯಾಭಿಪ್ರಾಯವೇನಿರುವುದೊ ಅದಂ ಎನ್ನೊಡನೆ ಪೇಳಬಹುದು'' ಎನಲಾರಾಯನು, ‹‹ಎಲೈ ವಿದೂಷಕನೆ ಚನ್ನಾಗಿ ನೀನು ಜೇಶರಿಸಿಕೊಂಡು ಆಯಾಸವಿಲ್ಲದ ಕಾರ್ಯದಲ್ಲಿ ಎನಗೆ ಸಹಾಯವಂಗೈಯಬೇಕು'' ಎಂದು ಪೇಳಲಾವಿದೂಷಕನು ಪೂರ್ಣಗಡುಬಿನಲ್ಲಾದರೆ ಆಯಾಸವಿಲ್ಲದೆ ಇರುವದು ಅದರಲ್ಲಾದರೆ ಸಹಾಯವಂಗೈಯ್ಯುವೆನೆನಲಾರಾಯನು ಮುಗುಳ್ನಗೆಮಾಡಿ ‹‹ಎಲೈ ವಿದೂಷಕನೆ ನೀನು ಪೇಳಿದ ವಾಕ್ಯವದಂತಿರಲಿ, ಎನ್ನ ಮನದಲ್ಲಿರುವ ಸಮಸ್ತ ವೃತ್ತಾಂತವಂ ಪೇಳುವೆನು '' ಎಂದು ನುಡಿದು ಸ್ವಲ್ಪದೂರದಲ್ಲಿದ್ದ ಚಾರನಂಕರೆದು ‹‹ರೈವತಕನಾದ ಸೇನಾಪತಿಯಂ ಕರದುಕೊಂಡು ಬರುವದೆಂದಾಜ್ಞೆಯನ್ನೀಯಲಾಚಾರನು ರಾಜಾಜ್ಞೆಯಂ ಶಿರದೊಳಾಂತು ಸೇನಾಪತಿಯು ಸಮೀಪವಂಸಾರ್ದು ‹‹ಅಯ್ಯಾ ಸೇನಾಪತಿಯೆ ರಾಯನು ಏನೋ ಒಂದು ಕಾರ್ಯವಂ ಆಜ್ಞಾಪಿಸುವುದರಲ್ಲಿ ಅಭಿಲಾಷೆಯುಳ್ಳವನಾಗಿ ನೀನುಬರುವಮಾರ್ಗವಂ ಇದಿರುನೋಡುತ್ತಿರುವನಾದ್ದರಿಂ ಜಾಗ್ರತೆಯಿಂನಡೆ '' ಎಂದು ಪೇಳುತ ಅವನಂಕರದುಕೊಂಡು ಬರುತಿರಲಾಸೇನಾಪತಿಯು ಸ್ವಲ್ಪದೂರದಲ್ಲಿ ರಾಯನಂ ನೋಡಿ ಸ್ವಾಮಿಯಾದ ರಾಯನಲ್ಲಿ ದೋಷರಹಿತವಾದ ಮೃಗಯಾವ್ಯಾಪಾರವು ಹೇರಳವಾದ ಗುಣವುಳ್ಳದ್ದಾಗಿ ತೋರುವುದು ಈರಾಯನಶರೀರವು ನಿರಂತರದಲ್ಲಿಯೂ ಮೃಗಗಳಂ ಸಂಹಾರವಂಗೈಯ್ಯುವುದಕ್ಕೋಸುಗ ನಾರಿಯಂ ಸೆಳೆಯುವದ್ದರಿಂ ಕ್ರೂರವಾದ ಮುಂಭಾಗದಿಂ ಸೂರ್ಯಕಿರಣಂಗಳಂ ಸಹಿಸಿದ್ದರಿಂ ಬೆಮರ್ಬಿಂದುಗಳಿಂಯುಕ್ತವಾಗಿ ಅತಿಕೃಶವಾಗಿದ್ದರೂ ದೃಢವಾಗಿ ತೋರುತ ಪರ್ವತದಲ್ಲಿ ಸಂಚರಿಸುವ ಮದ್ದಾನೆಯಂತೆ ಪ್ರಾಣಸತ್ವವಂ ಧರಿಸಿರುವನೆಂದು ನುಡಿಯಲಾರಾಯನ ಸಮೀಪವಂ ಸೇರಿ ನಮಸ್ಕಾರವಂಗೈದು,

"ಎಲೈ ಸ್ವಾಮಿಯೇ, ನೀನು ಸರ್ವೋತ್ಕೃಷ್ಟನಾಗು; ನಿನ್ನಾಜ್ಞೆಯಿಂ ನಾನೀಪುರ ಣ್ಯವಂ ದುಷ್ಟಮೃಗರಹಿತವನ್ನಾಗಿ ಮಾಡಿರುವೆನು; ಸ್ವಾಮಿಯವರು ಏನು ಕಾರಣ ದಿಂದಿಲ್ಲಿಯೇ ಇರುವಿರಿ?" ಎಂದು ನುಡಿಯಲಾ ರಾಯನು–"ಬೇಟೆಯಾಡುವುದಂ ದೂಷಣೆಯಂ ಗೆಯ್ಯುತ್ತಿರುವ ಮಾಂಡವ್ಯನಾಮಕನಾದ ಈ ವಿದೂಷಕನಿಂ ಎನ್ನ ಮನೋರಥವೆಲ್ಲಾ ಭಗ್ನವಾಗಿ ಪೋದುದು" ಎಂದು ನುಡಿಯಲಾ ಸೇನಾಪತಿಯು ಪ್ರತ್ಯೇಕವಾಗಿ ವಿದೂಷಕನಂ ಕರೆದು–"ಅಯ್ಯಾ ಮಿತ್ರನಾದ ಮಾಂಡವ್ಯನೆ, ನಾನು ರಾಯನ ಚಿತ್ತವೃತ್ತಿಯನ್ನನುಸರಿಸುವುದಕ್ಕೋಸುಗ ಕೆಲವು ವಚನವಂ ಪೇಳು ವೆನು; ನೀನು ಸ್ಥಿರಹೃದಯನಾಗಿ ಮನೋವಿಕಾರವಂ ಪೊಂದಬೇಡ"ಎಂದು ಏಕಾಂ ತವಾಗಿ ನುಡಿದು, ರಾಯನ ಸಮ್ಮುಖಕ್ಕೆ ಬಂದು–"ಎಲೈಸ್ವಾಮಿಯೇ, ಈಮೂರ್ಖ ನಾದ ವಿದೂಷಕನು ಬೇಟೆಯಾಡುವುದು ಯುಕ್ತವಲ್ಲವೆಂದು ಬಾಯಿಗೆ ಬಂದಂತೆ ದುಷ್ಟವಾಕ್ಯವಂ ಪೇಳುತ್ತಿರಲಿ; ಈ ಮೃಗಯಾವ್ಯಾಪಾರವು ಅತ್ಯುತ್ತಮವಾದದ್ದು ಎಂಬುವುದಕ್ಕೆ ಸ್ವಾಮಿಯವರೇ ನಿದರ್ಶನವಾಗಿರುವಿರಿ: ಅದು ಹೇಗೆಂದರೆ:–ಬೇಟೆ ಯಾಡುವುದರಿಂದ ಉದರ ಪ್ರದೇಶದಲ್ಲಿರುವ ಮೇದಸ್ಸೆಂಬ ಧಾತುವಿನ ನಾಶದಿಂ ದೇಹವು ಕೃಶವಾಗಿ ಅಶ್ವಾರೋಹಣ ಮೊದಲಾದ ಕಾರ್ಯವಂ ಗೆಯ್ಯುವುದಕ್ಕೆ ಯೋಗ್ಯವಾಗುವುದು; ಮತ್ತು ಮೃಗಂಗಳು ಭಯದಿಂದಲೂ ಕ್ರೋಧದಿಂದಲೂ ಮಾಡತಕ್ಕ ಮನೋವಿಕಾರಗಳು ತಿಳಿಯುವುವು; ಬಾಣಂಗಳು ಚಲಿಸುತ್ತಿರುವ ಗುರಿಗೆ ತಗಲಿದುವಾದರೆ ಧನುರ್ಧಾರಿಗಳಾದ ಶೂರರ ಮಧ್ಯದಲ್ಲಿ ಬಹುಮಾನವುಂ ಟಾಗುವುದು: ಇಂತಿರುವಲ್ಲಿ ತಿಳಿಯದ ಜನರುಗಳು ಮೃಗಯಾವಿಹಾರವಂ ಸಪ್ತವ್ಯ ಸನದಲ್ಲಿ ಒಂದು ವ್ಯಸನವೆಂತಲೂ, ಅನೇಕ ವಿಪತ್ತಿಗೆ ಕಾರಣವೆಂತಲೂ, ಪೇಳುತಿರು ವರು. ಇಂಥ ವಿನೋದವು ಇನ್ನಾವ ವಸ್ತುಗಳಿಂದಲೂ ಆಗಲಾರದು" ಎಂದು ನುಡಿ ಯಲಾವಿದೂಷಕನು–"ಎಲೈ ಸೇನಾಪತಿಯೆ, ಕೇಳು. ಈಗ ನೀನು ರಾಯನ ಚಿತ್ತವೃ ತ್ತಿಯನ್ನನುಸರಿಸುವುದಕ್ಕೋಸುಗ ಅರಣ್ಯವೆಲ್ಲವಂ ಸುತ್ತುತ್ತಲಿರುವೆ. ಎಲ್ಲಾದರೂ ಮಾಂಸಾಪೇಕ್ಷೆಯಾದ ಮುದುಗರಡಿಯ ಬಾಯೊಳು ಬಿದ್ದು ಸಾಯುವುದರಲ್ಲಿ ಸಂದೇಹವೇ ಇಲ್ಲ" ಎಂದು ನುಡಿಯಲಾ ರಾಯನು-"ಎಲೈ ಸೇನಾಪತಿಯೇ, ಈ ವಿದೂಷಕನೊಡನೆ ಬಹಳ ಮಾತುಗಳಾಡಿದ್ದರಿಂ ಪ್ರಯೋಜನವಿಲ್ಲ; ಮಧ್ಯಾ ಹ್ನಕಾಲವಾದ್ದರಿಂದ ನೀನು ಸೇನೆಯುಂ ತಿರುಗಿಸು; ಈ ಆಶ್ರಮಸಮೀಪದಲ್ಲಿರುವ ಅರಣ್ಯದಲ್ಲಿ ಕಾಡ್ಕೋಣಗಳು ಕಟ್ಟೆಗಳ ತೀರವಂ ತಮ್ಮ ಕೊಂಬುಗಳಿಂದಗೆದು ಸ್ವೇ ಚ್ಛೆಯಿಂ ಜಲಪ್ರವೇಶವಂ ಗೆಯ್ಯಲಿ; ಹರಿಣ ಸಮೂಹಂಗಳು ವೃಕ್ಷಂಗಳ ನೆರಳುಗಳ

ಸೇರಿ ತಮ್ಮಿಚ್ಛೆಯಿಂ ಮೆಲಕುಗಳಂ ಮಾಡಲಿ; ಹಂದಿಗಳು ತಮ್ಮ ಮನಬಂದಂತೆ ಕಟ್ಟೆಗಳಲ್ಲಿರುವ ಕೊನ್ನಾರೆ ಗೆಡ್ಡೆಗಳಂ ತಮ್ಮ ಮುಖದಿಂದಗೆದು ಭಕ್ಷಿಸಲಿ; ನಾರಿಯೊಡನೆ ಸೇರಿರುವ ಎನ್ನ ಧನುಸ್ಸಂ ಒಂದು ಪ್ರದೇಶದಲ್ಲಿರಿಸಿ ವಿಶ್ರಮಿಸಿಕೊಳ್ಳುವಂತೆ ಮಾಡುವುದು" ಎನಲಾ ಸೇನಾಪತಿಯು "ಪ್ರಭುವಾದ ತಮ್ಮ ಚಿತ್ತಕ್ಕೆ ಹೇಗೆ ಯುಕ್ತವಾಗಿ ತೋಱುವುದೋ ಆ ಪ್ರಕಾರವಾಗಿ ಆಜ್ಞಾನುಸಾರವಾಗಿ ನಡೆದುಕೊಳ್ಳುವೆನು" ಎಂದು ನುಡಿಯಲಾ ರಾಯನು--"ಎಲೈ ಸೇನಾಪತಿಯೇ, ಮೊದಲು ಅರಣ್ಯವಂ ಮುತ್ತಿಗೆಯಂ ಗೆಯ್ಯುವುದಕ್ಕೋಸುಗ ಪೋಗಿದ್ದ ಸೇನಾಜನವೆಲ್ಲವಂ ಈ ತಪೋವನಕ್ಕೆ ದೂರವಾಗಿಯೇ ಹಿಂದಿರುಗಿ ಹೋಗುವಂತೆ ಮಾಡುವುದು; ಹಾಗಲ್ಲದೆ ಈ ತಪೋವನಕ್ಕೆ ಬಾಧೆಯಾದಲ್ಲಿ ಋಷಿಗಳು ಶಾಪವನ್ನೀಯುವರು; ಮತ್ತು ಈ ಋಷಿಗಳು ಶಾಂತಗುಣಪ್ರಧಾನರಾಗಿರ್ದರೂ ಇವರಲ್ಲಿ ಸಮಸ್ತ ಪ್ರಪಂಚಮಂ ದಹಿಸುವುದಕ್ಕೆ ಯೋಗ್ಯವಾದ ಒಂದಾನೊಂದು ತೇಜಸ್ಸು ಇರುವುದು; ಹೇಗೆಂದರೆ:- ಸೂರ್ಯಕಾಂತಶಿಲೆಗಳು ಮುಟ್ಟುವುದಕ್ಕೆ ಯೋಗ್ಯಂಗಳಾಗಿರ್ದರೂ ಅವುಗಳಮೇಲೆ ಸೂರ್ಯಕಿರಣಂಗಳು ಬೀಳಲು ಹೇಗೆ ಅಗ್ನಿಯನ್ನುಂಟುಮಾಡುತಿರುವುವೋ ಅದಱಂತೆ ಅನ್ಯರಿಂದ ಅಪಮಾನಂಗಳುಂಟಾದಲ್ಲಿ ಕೋಪದಿಂ ಶಾಪವನ್ನೀಯುವರಾದ್ದಱಿಂದ ನಮ್ಮ ಸೇನಾಜನಗಳು ವನಕ್ಕೆ ಬಾರದಂತೆ ಮಾಡುವುದು" ಎಂದು ಅಪ್ಪಣೆಯನ್ನಿತ್ತು ಕಳುಹಲು ;

ಆ ವಿದೂಷಕನು ಸೇನಾಪತಿಯು ಪೋಗುವುದಂ ನೋಡಿ, "ಬೇಟೆಯಾಡುವೆನೆಂಬ ಉತ್ಸಾಹವಾರ್ತೆಯಂ ಬಿಟ್ಟು ದಾಸೀಪುತ್ರನೇ ಪೋಗು" ಎಂದು ನುಡಿಯುತ್ತಿರಲು;

ಆ ರಾಯನು ಸುತ್ತಲೂ ಒತ್ತಿನಲ್ಲಿರ್ದ ಜನರಂ ನೋಡಿ-"ನೀವೆಲ್ಲಾ ಬೇಟೆಯಾಡುವುದಕ್ಕೆ ಧರಿಸಿರ್ದ ವೇಷವನ್ನಿಳುಹಿ ಅಲ್ಲಲ್ಲಿ ವೃಕ್ಷಂಗಳ ನೆಳಲಿನಲ್ಲಿ ವಿಶ್ರಮಿಸಿಕೊಳ್ಳುವುದು" ಎಂದು ಆಜ್ಞೆಯನ್ನಿತ್ತು ಸಮಸ್ತರಂ ಕಳುಹಲು;

ವಿದೂಷಕನು ರಾಯನಂ ಕುಱಿತು-"ಎಲೈ ರಾಯನೇ, ನೀನು ಒಂದು ಪ್ರಾಣಿಯಿಲ್ಲದಂತೆ ಎಲ್ಲರಂ ಕಳುಹಿಸಿದೆಯಾದ್ದಱಿಂ ಮುಂದೆ ಇಲ್ಲಿ ನಾನಾವಿಧವಾದ ಬಳ್ಳಿಗಳಿಂ ಸೂರ್ಯಕಿರಣಂಗಳಿಗೆ ಸ್ಥಳವನ್ನೀಯದಂತೆ ಸುತ್ತುವರಿದು ನೇತ್ರಾನಂದವನ್ನುಂಟುಮಾಡುತ್ತಲಿರುವ ಈ ಸಂಪಗೆಯ ವೃಕ್ಷದ ತಂಪಾದ ನೆರಳಿನಲ್ಲಿ ಕುಳಿತುಕೊಳ್ಳುವುದು; ನಾನು ನಿನ್ನೊಡನೆ ಸುಖದಿಂ ಕುಳಿತುಕೊಳ್ಳುವೆನು" ಎಂದು

ಪೇಳಿ, ರಾಯನಿಂದೊಡಗೊಂಡು ಬಂದಾವೃಕ್ಷಚ್ಛಾಯೆಯಲ್ಲಿ ರಾಯಸಹಿತನಾಗಿ ಕುಳಿತುಕೊಳ್ಳಲು;

ರಾಯನು ವಿದೂಷಕನಂ ಕುಱಿತು-“ಎಲೈ ಮಾಂಡವ್ಯನೇ, ನೀನು ನೋಡ ತಕ್ಕಂಥ ವಸ್ತುವಂ ನೋಡದಿರುವೆಯಾದ್ದಱಿಂ ಪಡೆಯದೆ ಇರುವ ನೇತ್ರಾನಂದವುಳ್ಳವನಾದೆ” ಎಂದು ನುಡಿಯಲು;

ಆ ವಿದೂಷಕನು-“ಎಲೈ ರಾಯನೇ, ಪೂಜ್ಯನಾದ ನೀನು ಎನ್ನ ಮುಂಭಾಗದಲ್ಲಿರುವಲ್ಲಿ ಎನಗೆ ನೇತ್ರಾನಂದವುಂಟಾಗಿಯೇ ಇರುವುದು” ಎನ್ನಲು;

ರಾಯನು-“ಲೋಕದಲ್ಲಿ ಸಮಸ್ತ ಜನರು ಸ್ವಕೀಯವಾದ ವಸ್ತುವನ್ನೇ ರಮಣೀಯವೆಂದು ತಿಳಿಯುವರು” ಎಂದು ನುಡಿದು, “ಎನ್ನಂ ಸ್ತೋತ್ರಂಗೆಯ್ಯುವ ವಾಕ್ಯವಂತಿರಲಿ; ನಾನು ಈ ಆಶ್ರಮಕ್ಕೆ ಅಲಂಕಾರಸ್ವರೂಪಳಾದ ಶಕುಂತಲೆಯಂ ಪೇಳುವೆನು” ಎನಲು;

ವಿದೂಷಕನು ಈದುಷ್ಯಂತರಾಯನು ಶಕುಂತಲೆಯ ವೃತ್ತಾಂತವಂಗೆಯ್ಯುವುದಕ್ಕೆ ಆಸ್ಪದವುಂಟಾಗದಂತೆ ಸಲ್ಲಾಪವಂ ಗೆಯ್ಯುವೆನೆಂದು ತನ್ನ ಮನದಲಾಲೋಚಿಸಿ,-“ಅಯ್ಯಾ, ಸ್ನೇಹಿತನಾದ ರಾಯನೇ, ಈಗ ಆತಾಪಸಕನ್ಯಕೆಯಾದ ಶಕುಂತಲೆಯನ್ನೂ ಕೂಡ ಎನಗೆ ಬೇಕೆಂದು ಕೇಳುವುದು ಯುಕ್ತವಾಗಿ ತೋಱುತ್ತದಲ್ಲವೆ!” ಎನ್ನಲು;

ರಾಯನು-“ಎಲೈ ಸ್ನೇಹಿತನೇ, ಪುರುವಂಶದಲ್ಲಿ ಪುಟ್ಟಿರುವ ನನ್ನ ಮನವು ಯೋಗ್ಯವಲ್ಲದ ವಸ್ತುವಿನಲ್ಲಿ ಮುಂಬರಿದು ಪೋಗಲಾಱದು. ಅವಳ ವೃತ್ತಾಂತವಂ ಪೇಳುವೆನು ಕೇಳು. ಪೂರ್ವದಲ್ಲಿ ಈಶಕುಂತಲೆಯು ಅಪ್ಸರಸ್ತ್ರೀಯಾದ ಮೇನಕೆಯ ಗರ್ಭದಲ್ಲಿ ರಾಜರ್ಷಿಯಾದ ವಿಶ್ವಾಮಿತ್ರನಿಂ ಪುಟ್ಟಲು, ಆಮೇನಕೆಯು ಅವಳಂ ಬಿಟ್ಟು ದೇವಲೋಕವಂ ಕುಱಿತು ಪೋದುದಱಿಂದೀಕಣ್ವಮುನಿಯು ಅವಳಂ ತೆಗೆದುಕೊಂಡು ಬಂದು ಸಂರಕ್ಷಿಸುವುದಱಿಂದಿವಳು ಎಕ್ಕದ ಗಿಡದ ಮೇಲೆ ಬಿದ್ದ ನೂತನವಾದ ಪುಷ್ಪಮಾಲೆಯಂತೆ ಆ ಋಷಿಗಳಾಶ್ರಮದಲ್ಲಿರುವಳು” ಎಂದು ಪೇಳಲು;

ವಿದೂಷಕನು ಗಹಗಹಿಸಿ ನಕ್ಕು-“ಎಲೈ ಮಿತ್ರನಾದ ರಾಯನೇ, ಪಿಂಡಖರ್ಜೂರದಲ್ಲಿ ಜುಗುಪ್ಸೆಯುಂಟಾದ ಪುರುಷನಿಗೆ ಹುಣಿಸೆಯ ಹಣ್ಣಿನಲ್ಲಿ ಸಹಜವಾಗಿ ಅಭಿಲಾಷೆಯುಂಟಾಗುವುದು. ಹಾಗೆ ಅಂಥ ಮನೋಹರರಾದ ಶ್ರೇಷ್ಠರಾದ ಸ್ತ್ರೀಯರುಗಳ ಸರಸದಲ್ಲಿಯೂ ಆಸೆಯಿಲ್ಲದಿರುವ ನಿನಗೆ ಈ ಶಕುಂತಲೆಯಂ ಪ್ರಾರ್ಥನೆಯಂ ಗೆಯ್ಯುವುದು ಏನು!” ಎಂದು ಪೇಳಲು;

ಆರಾಯನು—“ ಎಲೈ ವಿದೂಷಕನೇ, ನೀನಾಶಕುಂತಲೆಯಂ ನೋಡಿದ್ದೆಯಾದರೆ ಈ ಪ್ರಕಾರವಾದ ವಿರೋಧವಾಕ್ಯವಂ ಪೇಳುವುದಕ್ಕೆ ನಿನಗೆ ಮನಬಾರದೆ ಇರುವುದು ” ಎಂದು ನುಡಿಯಲು;

ವಿದೂಷಕನು—“ ಎಲೈ ಸ್ವಾಮಿಯೇ, ಅನೇಕ ಸುಂದರಸ್ತ್ರೀಯರಂ ನೋಡಿರುವ ನಿನಗೂ ಆಶ್ಚರ್ಯವನ್ನುಂಟುಮಾಡುತಿರುವಳಾದ್ದರಿಂ ಶಕುಂತಲೆಯು ಮನೋಹರವಾದ ರೂಪವುಳ್ಳವಳೆಂದು ತೋರುವಳು ” ಎನ್ನಲು;

ರಾಯನು—“ ಎಲೈ ಮಿತ್ರನೇ, ಆ ಶಕುಂತಲೆಯ ರೂಪರೇಖಾವಿಭ್ರಮ ಮೊದಲಾದ ಚರ್ಯವಂ ಪೇಳುವುದಕ್ಕಾಗದೆ ಇರುವುದು. ಆದರೂ ಸ್ವಲ್ಪವಾಗಿ ವಿವರಿಸುವೆನು, ಕೇಳು. ಬ್ರಹ್ಮನು ಮೊದಲು ಈ ಶಕುಂತಲೆಯ ಅವಯವಗಳಂ ಚಿತ್ರದಲ್ಲಿ ಬರೆದುಕೊಂಡು ಆ ಚಿತ್ರವಂ ನೋಡಿ ಸೃಷ್ಟಿಯಂ ವಿರಚಿಸಿ ಇರುವನೋ! ಹಾಗಲ್ಲದಿದ್ದರೆ ಜಗತ್ತಿನಲ್ಲಿ ಸೌಂದರ್ಯವೆಲ್ಲವಂ ಒಟ್ಟುಗೂಡಿಸಿ ನಿರ್ಮಾಣವಂ ಗೆಯ್ದಿರುವನೋ! ಅಂತುಮಲ್ಲದಿರೆ ಹಸ್ತದಿಂ ನಿರ್ಮಿಸಲು ಮೃದುವಾದ ಇವಳ ಶರೀರವು ಕಂದಿ ಪೋಗುವುದು, ಅಧಿಕ ರಮಣೀಯವಾಗಲಾರದೆಂದು ತನ್ನ ಮನಸ್ಸಿನಿಂದಲೇ ನಿರ್ಮಾಣವಂ ಗೆಯ್ದಿರುವನೋ ತಿಳಿಯದು. ರಂಭೆ, ಊರ್ವಶಿ ಮೊದಲಾದ ಸುಂದರಸ್ತ್ರೀಯರಂ ನಿರ್ಮಿಸಿರುವ ಬ್ರಹ್ಮನ ಸೃಷ್ಟಿಕ್ರಮವಂ ಲೋಕೋತ್ತಮವಾದ ಈ ಶಕುಂತಲೆಯ ದೇಹವಂ ನೋಡಿ ಊಹಿಸುತ್ತಿರುವ ಎನಗೆ ಸ್ತ್ರೀಯರಲ್ಲಿ ಶ್ರೇಷ್ಠಳಾದ ಈ ಶಕುಂತಲೆಯ ನಿರ್ಮಾಣವಮಂ ಇನ್ನೊಬ್ಬ ಬ್ರಹ್ಮನು ವಿರಚಿಸಿರುವಂತೆಯೇ ತೋರುವುದು ” ಎಂದು ನುಡಿಯಲು;

ವಿದೂಷಕನು—“ ಎಲೈ ಸ್ವಾಮಿಯೇ, ನೀನು ಪೇಳುವ ವಾಕ್ಯವಂ ಕೇಳುವಲ್ಲಿ ರೂಪವತಿಯರಾದ ಸ್ತ್ರೀಯರುಗಳನ್ನಾ ಶಕುಂತಲೆಯು ತನ್ನ ದೇಹಕಾಂತಿಯಿಂ ತಿರಸ್ಕಾರವಂ ಗೆಯ್ಯುವಂತೆ ತೋರುವುದು” ಎನ್ನಲು;

ಆ ರಾಯನು—“ ಎಲೈ ಮಿತ್ರನೇ, ಎನ್ನ ಮನದಲ್ಲಿ ತೋರುವ ರೀತಿಯಂ ಪೇಳುವೆನು, ಕೇಳು. ಈ ಶಕುಂತಲೆಯು ಭ್ರಮರ ಮೊದಲಾದುವರಿಂ ವಾಸನೆಗೊಳ್ಳದೆ ನೂತನವಾಗಿ ವಿಕಾಸವಾದ ಪುಷ್ಪದಂತೆ ಪರಿಮಳಭರಿತಳಾಗಿರುವುದರಿಂ ಪದ್ಮಿನೀಜಾತಿಸ್ತ್ರೀಯಾಗಿರುವಳೆಂತಲೂ, ಉಗುರುಗಳಿಂ ಚಿಗಟದೆ ಇರುವ ಚಿಗುರಿನಂತೆ ಕೋಮಲವಾಗಿದ್ದುದರಿಂ ಅತಿ ಮೃದುವಾದ ಅಂಗಗಳುಳ್ಳವಳಾಗಿರುವಳೆಂತಲೂ, ಸೂಜಿಯಿಂ ರಂಧ್ರವಂ ಗೆಯ್ಯದೆ ಇರುವ ಮುತ್ತಿನಂತೆ ಕಾಂತಿಯುಕ್ತಳಾಗಿರುವಳಾದ್ದರಿಂ ನೂತನ ಯೌವನಶಾಲಿಯಾಗಿ ರಾಜಿಸುವಳೆಂತಲೂ,

ಯಾವ ಜನರೂ ರುಚಿನೋಡದೆ ಇರುವ ಮದ್ಯದಂತಿರುವುದರಿಂ ನೋಡಿದಮಾತ್ರದಿಂದಲೇ ಸಮಸ್ತ ಕಾಮುಪುರುಷರಿಗೆ ಮದವನ್ನುಂಟುಮಾಡಿ ಮರುಳುಗೊಳಿಸುವಳೆಂತಲೂ, ಸಮಸ್ತ ಪುಣ್ಯಗಳಿಗೂ ಸಂಪೂರ್ಣಫಲಸ್ವರೂಪಳಾಗಿ ತೋರುವುದರಿಂ ಅನೇಕ ಸುಕೃತವಂ ಮಾಡಿದ ಪುರುಷನಿಗೆ ದೊರಕುವಳಲ್ಲದೆ ಸ್ವಲ್ಪ ಪುಣ್ಯವಂತನಿಗೆ ಸಿಕ್ಕಲಾರಳೆಂತಲೂ ತೋರುವುದು ಆದರೂ ಬ್ರಹ್ಮನು ಇವಳಂ ಅನುಭವಿಸುವುದಕ್ಕೆ ಯಾವ ಪುರುಷನಂ ನಿರ್ಮಾಣವಂ ಗೆಯ್ದಿರುವನೋ, ತಿಳಿಯದೆಂದು ಯೋಚನೆಯಂ ಗೆಯ್ಯುವೆನು '' ಎಂದು ನುಡಿಯುತಿರ್ದನು.

ಎಂಬಲ್ಲಿಗೆ

ಶ್ರೀಕೃಷ್ಣರಾಜಕಂಠೀರವರು ಲೋಕೋಪಕಾರಾರ್ಥವಾಗಿ ವಿರಚಿಸಿದ ಕೃಷ್ಣರಾಜವಾಣೀವಿಲಾಸರತ್ನಾಕರವೆಂಬ ಶಾಕುಂತಲನಾಟಕನವೀನಟೀಕಿನಲ್ಲಿ ದುಷ್ಯಂತರಾಯನು ವಿದೂಷಕನೊಡನೆ ಶಕುಂತಲೆಯ ಸೌಂದರ್ಯವರ್ಣನೆಯಂ ಗೆಯ್ಯುತಿರ್ದನೆಂಬ ದ್ವಿತೀಯಕಲ್ಲೋಲದಲ್ಲಿ ಪ್ರಥಮತರಂಗಂ ಸಂಪೂರ್ಣಂ.

ದ್ವಿತೀಯಕಲ್ಲೋಲದ ದ್ವಿತೀಯ ತರಂಗಂ

ಅನಂತರದಲ್ಲಿ ದುಷ್ಯಂತರಾಯನು ಪೇಳ್ದ ವಾಕ್ಯವಂ ಕೇಳ್ದ ವಿದೂಷಕನು ರಾಯನಂ ಕುಱಿತು-" ಎಲೈ ಸ್ವಾಮಿಯೇ, ನೀನು ಅಪ್ಪಣೆಯನ್ನಿತ್ತ ವಾಕ್ಯವಂ ಕೇಳಿ ಅಧಿಕಸಂತೋಷವುಂಟಾದುದು. ನೀನಾಶಕುಂತಲೆಯಂ ಜಾಗ್ರತೆಯಾಗಿ ಸ್ವಾಧೀನವಂ ಮಾಡಿಕೊಂಡು ಸಮಸ್ತ ಸೌಖ್ಯವಂ ಪಡಿಸುತ್ತ ಸಂರಕ್ಷಿಸುವುದು. ಅಲ್ಲದೆ ವಿಳಂಬವಂ ಗೆಯ್ದೆಯಾದರೆ ಯಾವನಾದರೂ ಒಬ್ಬ ಇಂಗಳದ ಎಣ್ಣೆಯಿಂ ಜಿಡ್ಡಾಗಿರುವ ತಲೆಯುಳ್ಳ ಋಷಿಯ ಹಸ್ತಕ್ಕೆ ಸಿಕ್ಕಿ ಪೋಗುವಳು " ಎಂದು ನುಡಿಯಲು;

ರಾಯನು—" ಎಲೈ ಮಿತ್ರನೇ, ನೀನು ಪೇಳಿದಂತೆ ಈ ಶಕುಂತಲೆಯಂ ಜಾಗ್ರತೆಯಾಗಿ ಸ್ವಾಧೀನವಂ ಮಾಡಿಕೊಂಡು ಸಲಹುವುದಕ್ಕೆ ತಪೋನಿಧಿಯಾದ ಕಣ್ವಋಷಿಯು ಈ ಆಶ್ರಮದಲ್ಲಿಲ್ಲದೆ ಸ್ನಾನಾರ್ಥವಾಗಿ ಪೋಗಿರುವನು" ಎನಲು;

ವಿದೂಷಕನು—"ಎಲೈ ಸ್ವಾಮಿಯೇ, ನಿನ್ನಲ್ಲಾ ಶಕುಂತಲೆಗೆ ಅನುರಾಗವು ಎಷ್ಟುಮಟ್ಟಾಗಿರುವುದು, ಅದಱ ಸಂಗತಿಯಂ ಪೇಳು " ಎಂದು ನುಡಿಯಲು ;

ರಾಯನು—" ಎಲೈ ವಿದೂಷಕನೇ, ಋಷಿಪುತ್ರಿಗಳಾದವರು ಉತ್ಪತ್ತಿ ಸಿದ್ಧವಾಗಿ ಮುಗ್ಧರಾಗಿ ಪಟ್ಟಣಸ್ತ್ರೀಯರಂತೆ ವಿಳಾಸಗಳಿಂ ತಮ್ಮ ಇಂಗಿತವಂ ಹೊಱದೋಱಿಸುವುದಕ್ಕೆ ಸಮರ್ಥರಲ್ಲವಾದ್ದಱಿಂದೆನ್ನಲ್ಲಿ ಅವಳಿಗೆ ಇಷ್ಟುಮಟ್ಟಾದ ವಿಶ್ವಾಸವಿರುವುದೆಂದು ಪೇಳುವುದಕ್ಕಾಗದೆ ಇರುವುದು. ಹಾಗಾದರೂ ಸ್ವಲ್ಪ ವಿಶೇಷವಿರುವುದು, ಪೇಳುವೆನು ಕೇಳು. ನಾನು ಆ ಶಕುಂತಲೆಗೆ ಅಭಿಮುಖನಾಗಲು, ಎನ್ನಂ ನೋಡುತಿರ್ದ ದೃಷ್ಟಿಯಂ ಲಜ್ಜೆಯಿಂ ಹೊಱತಟ್ಟುವಳು; ಎನಗೋಸುಗ ಬಂದ ನಗುವಂ ತಡೆದು ಸಖಿಯರ ಮುಖವಂ ನೋಡಿ ನಗುವಳು, ತನ್ನ ಸದ್ಗುಣಾದಿಗಳಿಂ ತಡೆಯಲ್ಪಟ್ಟ ಮನ್ಮಥವಿಕಾರವಂ ಹೊಱದೋಱಿಯೂ ತೋಱಿಸದಂತೆ ನಟಿಸುವಳು " ಎಂದು ನುಡಿಯಲು;

ವಿದೂಷಕನು—" ಎಲೈ ಸ್ವಾಮಿಯೇ, ಅರಣ್ಯವಾಸಿಯಾದ ಆ ಶಕುಂತಲೆಯು ನೀನು ನೋಡಿದಮಾತ್ರದಿಂದಲೇ ನಿನ್ನ ತೊಡೆಯನ್ನೇಱುವಳೆ ? " ಎನಲು;

ರಾಯನು—" ಎಲೈ ಮಿತ್ರನೇ ! ಪೂಜ್ಯಳಾದ ಆ ಶಕುಂತಳೆಯು ಸಖಿ

ಯರಿಂದೊಡಗೂಡಿ ಪರ್ಣಶಾಲೆಯಂ ಕುಱಿತು ಪೋಗುವ ಸಮಯದಲ್ಲಿ ವಿನಯ ದಿಂದೆನಗೆ ತನ್ನ ಮನದಲ್ಲಿರುವ ಅನುರಾಗವಂ ಪ್ರಕಟವಂಗೆಯ್ದಿರುವ ಪರಿಯಂ ವಿವ ರಿಸುವೆನು, ಕೇಳು. ಕೃಶಾಂಗಿಯಾದ ಆ ಶಕುಂತಲೆಯು ಸಮವಾದ ಭೂಮಿ ಯಲ್ಲಿ ನಾಲ್ಕಾಱಡಿಯಿಟ್ಟು ದರ್ಭಾಂಕುರದಿಂ ತನ್ನ ಚರಣವು ಗಾಯವಾದಂತೆ ನೆವವಿಲ್ಲದೆ ನಿಲ್ಲುವಳು; ಮತ್ತು ಅಲ್ಲಲ್ಲಿರುವ ವೃಕ್ಷಗಳ ಕೊಂಬೆಗಳಿಗೆ ತಾನುಟ್ಟಿ ರುವ ನಾರ ಸೀರೆಯು ತಗಲಿಕೊಳ್ಳದಿದ್ದರೂ ತಗಲಿಕೊಂಡಂತೆಯೂ, ಅದಂ ಬಿಡಿಸು ವಳಂತೆಯೂ ಮಾಡಿ, ಬಾರಿಬಾರಿಗೂ ಎನ್ನಂ ನೋಡುತ್ತ ಪೋದಳು'' ಎಂದು ನುಡಿ ಯಲು,

ವಿದೂಷಕನು— "ಎಲೈ ಸ್ವಾಮಿಯೇ, ಈಗ ನೀನು ಪೇಳಿದಂತೆ ಆ ಶಕುಂತಲೆಯು ವಿಲಾಸವಾದ ಚೇಷ್ಟೆಗಳಂ ಗೆಯ್ದುದು ಯಥಾರ್ಥವಾದಲ್ಲಿ ಅವಳು ನಿನ್ನ ಸ್ವಾಧೀನಳಾಗುವುದಱಲ್ಲಿ ಸಂದೇಹವೇ ಇಲ್ಲ. ನೀನು ಗ್ರಹಿಸಲ್ಪಟ್ಟ ಅನುರಾ ಗದ ಬುತ್ತಿಯುಳ್ಳವನಾದೆ. ಈ ತಪೋವನವನ್ನೇ ಕ್ರೀಡಾಯೋಗ್ಯವಾದ ಉಪ ವನವಂ ಮಾಡುವನಂತೆ ತೋಱುವೆ'' ಎಂದು ನುಡಿಯಲು;

ರಾಯನು—"ಎಲೈ ವಿದೂಷಕನೇ, ಋಷಿಗಳು ಎನ್ನಂ ಕಂಡರೂ ಭಯ ವಿಲ್ಲದೆ ಈ ತಪೋವನವಂ ಕುಱಿತು ಪೋಗುವುದಕ್ಕೆ ಕಾರಣವಂ ಯೋಚನೆಯಂ ಗೆಯ್ದು ಪೇಳು '' ಎಂದು ನುಡಿಯಲು;

ವಿದೂಷಕನು—"ಎಲೈ ರಾಯನೇ, ಉಪಾಯವಂ ಚಿಂತಿಸತಕ್ಕುದೇನಿರು ವುದು ? ಋಷಿಗಳು ನಿನ್ನಿಂದ ಸಂರಕ್ಷಿತರಾದಕಾರಣ ಈ ತಪೋವನದಲ್ಲಿ ಪುಟ್ಟಿದ ಧಾನ್ಯದ ಆಱು ಭಾಗದಲ್ಲೊಂದು ಭಾಗವು ದೊರೆಯಾದ ನಿನಗೆ ಸಲ್ಲತಕ್ಕುದು ಯುಕ್ತವಾಗಿರುವುದಱಿಂದಾಧಾನ್ಯಭಾಗವನ್ನಾ ಋಷಿಗಳಂ ಕೇಳುವುದಕ್ಕೆ ಪೋಗ ಬಹುದು '' ಎನ್ನಲು;

ಆ ವಾಕ್ಯವಂ ಕೇಳ್ದ ರಾಯನು—"ಎಲೈ ಮೂರ್ಖನಾದ ವಿದೂಷಕನೇ, ಈ ಋಷಿಗಳ ಸಮಸ್ತ ವಿಘ್ನವಂ ಪರಿಹರಿಸುತ್ತಿರುವುದಱಿಂ ಅವರು ಮಾಡುವ ತಪ ಸ್ಸಿನ ಷಡ್ಭಾಗವು ಎನಗೆ ಬರತಕ್ಕುದಿರುವುದು. ಆ ರತ್ನರಾಶಿಗಿಂತಲೂ ಅಧಿಕವಾದ ಬೆಲೆಯುಳ್ಳ ತಪೋಭಾಗವಂ ಕೇಳುವುದಂ ಬಿಟ್ಟು ತೃಣಧಾನ್ಯವಂ ಕೇಳಿ ಸಂತೋಷವಂ ಪೊಂದುವೆನೆ ? ಮತ್ತು ದೊರೆಯಾದವನಿಗೆ ಸಮಸ್ತಜಾತಿಯಂ ಸಂರಕ್ಷಿಸುವುದಱಿಂ ದುಂಟಾಗುವ ಫಲವು ನಾಶವಂ ಪೊಂದುವುದು, ಅರಣ್ಯವಾಸಿಗಳಾದ ಈ ಋಷಿ ಗಳ ಸಂರಕ್ಷಣೆಯಂ ಗೆಯ್ಯುವುದಱಿಂ ಇವರು ಮಾಳ್ಪ ತಪದಲ್ಲಿ ಆಱು ಭಾಗವು

ನಾಶರಹಿತವಾದ ಸಮಸ್ತ ಶ್ರೇಯಸ್ಸನ್ನುಂಟುಮಾಡುತಿರುವುದು '' ಎಂದು ವಿದೂಷಕನೊಡನೆ ಸರಸಾಲಾಪವಂ ಗೆಯ್ಯುತ್ತಿರುವಷ್ಟರಲ್ಲಿ—

ಒಬ್ಬ ಚಾರನು ಬಂದು ರಾಯಂಗೆ ನಮಸ್ಕಾರವಂ ಗೆಯ್ದು—'' ಇಬ್ಬರು ಋಷಿಕುಮಾರರು ನೀವು ಕುಳಿತಿರುವಸ್ಥಳವಂ ಕುರಿತು ಬರುವರು'' ಎಂದು ಬಿನ್ನೈಸಲು, ರಾಯನು-''ಎಲೈ ಚಾರನೇ, ಜಾಗ್ರತೆಯಿಂ ನೀನಾಋಷಿಕುಮಾರರನ್ನಿಲ್ಲಿಗೆ ಬರುವಂತೆ ಮಾಡುವುದು'' ಎನಲಾಚಾರನು ರಾಜಾಜ್ಞೆಯಂ ಶಿರದೊಳಾಂತು ಋಷಿಕುಮಾರರೀರ್ವರಂ ಕರೆದುಕೊಂಡು ಬರಲು-

ಋಷಿಕುಮಾರರೀರ್ವರು ಆ ದುಷ್ಯಂತರಾಯನಂ ನೋಡಿ, ಅವರಲ್ಲೊರ್ವನು '' ಮಹಾರಾಜನಾದ ಈ ರಾಜನು ತನ್ನ ರಾಜತೇಜದಿಂ ನೋಡುವುದಕ್ಕೆ ಭಯಂಕರನಾದರೂ ಶಾಂತನಾಗಿ ವಿಶ್ವಾಸಯೋಗ್ಯನಾಗಿ ತೋರುವನು. ಋಷಿಗಳಾದ ನಮಗೂ ಈ ರಾಯಂಗೂ ಸ್ವಲ್ಪ ಭೇದವಿರುವುದು. ಹೇಗೆಂದರೆ:—ಸಮಸ್ತ ಪ್ರಾಣಿಗಳ ಪ್ರವೇಶಕ್ಕೆ ಸುಲಭವಾಗಿ ಇರುವ ಈ ತಪೋವನದಲ್ಲಿ ಈಗ ವಾಸವಂ ಗೆಯ್ಯುತಿರುವನು. ವರ್ಣಸಾಂಕರ್ಯವುಂಟಾಗದಂತೆ ಸಮಸ್ತ ಪ್ರಾಣಿಗಳಂ ಸಲಹುವುದೆಂಬ ತಪಸ್ಸಂ ನಿತ್ಯದಲ್ಲೂ ಆಚರಿಸುತಿರುವನು. ಮತ್ತು ಇಂದ್ರಿಯನಿಗ್ರಹಶಾಲಿಯಾದ ಇವನ ಪುಣ್ಯಾಕರವಾದ ಕೀರ್ತಿಯು ಗಂಧರ್ವಚಾರಣ ಮೊದಲಾದವರಿಂ ಗಾನವಂ ಗೆಯ್ಯಲ್ಪಟ್ಟಂಥದಾಗಿ ಸ್ವರ್ಗವಂ ವ್ಯಾಪಿಸುವುದಾದ್ದರಿಂದ ರಾಜಶಬ್ದವೊಂದೇ ಹೆಚ್ಚಾಗಿರುವುದಲ್ಲದೆ ಈ ವನಚರ್ಯವೆಲ್ಲಾ ಋಷಿಚರ್ಯವಾಗಿರುವುದು'' ಎಂದು ನುಡಿಯಲು;

ಮತ್ತೊರ್ವನು ಆ ವಚನಕ್ಕೆ ಸಂದೇಹವೇ ಇಲ್ಲವೆಂದು ನುಡಿದು,—'' ಈ ರಾಯನ ಮಾಹಾತ್ಮ್ಯವಂ ಪೇಳುವೆನು ಕೇಳು. ಪುರದ್ವಾರದ ಲಾಳಮುಂಡಿಗೆಯಂತೆ ಅತಿ ದೀರ್ಘವಾದ ಬಾಹುಗಳುಳ್ಳ ಇವನು ಸಮಸ್ತಭೂಮಂಡಲವಂ ಧರ್ಮದಿಂ ಪರಿಪಾಲನೆಯಂ ಗೆಯ್ಯುತ್ತಿರುವನೆಂಬುವುದಾಶ್ಚರ್ಯವಲ್ಲ. ಸ್ವರ್ಗದಲ್ಲಿ ದೇವತಾಸ್ತ್ರೀಯರುಗಳು ದೇವತೆಗಳಿಗೂ ರಾಕ್ಷಸರುಗಳಿಗೂ ಯುದ್ಧವುಂಟಾಗುವ ಸಮಯದಲ್ಲಿ ನಾರಿಯಿಂ ಸೇರಿದ ಈ ದುಷ್ಯಂತರಾಯನ ಧನುಸ್ಸಿನಲ್ಲಿಯೂ ಇಂದ್ರಸಂಬಂಧಿಯಾದ ವಜ್ರಾಯುಧದಲ್ಲಿಯೂ ಜಯವುಂಟಾಗಲೆಂದು ದೇವತಾಪ್ರಾರ್ಥನೆಯಂ ಗೆಯ್ಯುತಿರುವರು. ರಾಕ್ಷಸರುಗಳಿಂ ಇಂದ್ರನಿಗೆ ಬಾಧೆಯುಂಟಾದರೆ ಈ ರಾಯನು ಸ್ವರ್ಗಕ್ಕೆ ಪೋಗಿ ಆ ರಾಕ್ಷಸನಿಗ್ರಹವಂ ಮಾಡುತಿರುವನಾದ್ದರಿಂ ಈ ಭೂಮಿಯಂ ಸಂರಕ್ಷಿಸುವುದು ಆಶ್ಚರ್ಯವಲ್ಲವೆಂದು ನುಡಿದೆನು. ''

ಎಂದು ರಾಯನ ಸಮೀಪವಂ ಸೇರಿ ಇಬ್ಬರು—“ ಎಲೈ ಮಹಾರಾಜನಾದ ದುಷ್ಯಂತನೇ, ಜಯವಂತನಾಗು ! ” ಎಂದು ವೇದೋಕ್ತವಾದ ಆಶೀರ್ವಾದವಂ ಗೆಯ್ಯಲಾ ರಾಯನು ತಾನು ಕುಳಿತಿರ್ದ ಸ್ಥಾನದಿಂದೆದ್ದು, ಆ ಋಷಿಕುಮಾರರ ಚರಣಗಳಿಗೆರಗಿ, ಅವರು ಆಶೀರ್ವಾದವಂ ಗೆಯ್ದು ತಂದಿತ್ತ ಫಲವಂ ತೆಗೆದುಕೊಂಡು, “ ಎಲೈ ಪೂಜ್ಯರಾದ ಋಷಿಕುಮಾರರುಗಳಿರಾ, ಎನಗೆ ಏನು ಅಪ್ಪಣೆಯನ್ನೀಯಲಿಚ್ಛೆಯಿಂದಿಲ್ಲಿಗೆ ಬಿಜಯಂಗೆಯ್ದಿರಿ ? ” ಎನಲಾ ಋಷಿಕುಮಾರರು—“ ಎಲೈ ಪೂಜ್ಯನಾದ ಮಹಾರಾಯನೇ, ಇಲ್ಲಿ ನೀನಿರುವ ವಾರ್ತೆಯಂ ಈಆಶ್ರಮವಾಸಿಗಳಾದ ಋಷಿಗಳು ತಿಳಿದಿರುವರಾದ್ದರಿಂ ನಿನ್ನಂ ಪ್ರಾರ್ಥನೆಯಂ ಗೆಯ್ಯುವರು ” ಎಂದು ನುಡಿದ ವಾಕ್ಯಕ್ಕೆ ರಾಯನು—“ಎಲೈ ಪೂಜ್ಯರುಗಳಿರಾ, ಏನೆಂದು ಆಜ್ಞಾಪಿಸುವರು? ಏನು ಕಾರ್ಯವನ್ನೀಯುವುದಕ್ಕೆ ಆಜ್ಞೆಯಂ ಗೆಯ್ಯುವರು?” ಎನಲಾ ಋಷಿಗಳು—“ಪೂಜ್ಯನಾದ ಕಣ್ವಋಷೀಶ್ವರನು ಆಶ್ರಮದಲ್ಲಿಲ್ಲದೆ ಇರುವುದರಿಂ ರಾಕ್ಷಸರುಗಳು ಯಜ್ಞಕ್ಕೆ ವಿಘ್ನಗಳನ್ನುಂಟುಮಾಡಲಿಚ್ಛೈಸುತ್ತಿರುವರಾದ್ದರಿಂದ ಸಾಯುಧನಾದ ನೀನು ಸಾರಥಿ ಸಮೇತನಾಗಿ ಬಂದು ಕೆಲವು ರಾತ್ರೆ ನಮ್ಮ ಆಶ್ರಮದಲ್ಲಿರ್ದು ಆ ರಾಕ್ಷಸರ ಬಾಧೆಯಂ ಪರಿಹರಿಸಬೇಕೆಂದು ಸಮಸ್ತ ಋಷಿಗಳು ಪ್ರಾರ್ಥನೆಯಂ ಗೆಯ್ಯುತ್ತಿರುವರು ” ಎನಲಾರಾಯನು—“ ನೀವಪ್ಪಣೆಯನ್ನಿತ್ತಂತೆ ನಡೆದುಕೊಳ್ಳುವೆನು ” ಎಂದು ನುಡಿಯಲು ;

ವಿದೂಷಕನು ರಾಯನು ಕೇಳದಂತೆ ತನ್ನೊಳು ತಾನು—“ಈರಾಯನು ಒಂದು ಕಾರ್ಯವಂ ಯೋಚಿಸುತಿರ್ದನು ; ಇದೊಂದು ಕಾರ್ಯವು ಬಂದುದು! ” ಎಂದು ನುಡಿಯುತ್ತಿರಲು ;

ರಾಯನು ದ್ವಾರಪಾಲಕನಂ ಕುರಿತು—“ ಎಲೈ ರೈವತಕನೆ, ನೀನು ಜಾಗ್ರತೆಯಿಂ ಪೋಗಿ ಧನುರ್ಬಾಣದಿಂ ಯುಕ್ತವಾದ ರಥವಂ ತೆಗೆದುಕೊಂಡು ಬರುವುದೆಂಬ ನನ್ನಾಜ್ಞೆಯಂ ಸಾರಥಿಗೆ ಪೇಳುವುದು ” ಎನಲಾ ರೈವತಕನು—“ ಅಪ್ಪಣೆಯಾದಂತೆ ನಡೆದುಕೊಳ್ಳುವೆನು ” ಎಂದು ರಥವಂ ತಿರಿಗಿಸಿಕೊಂಡು ಬರುವುದಕ್ಕೆ ಪೋಗಲು ;

ಆ ಋಷಿಗಳೀರ್ವರು ಅಧಿಕಹರ್ಷದಿಂ ಯುಕ್ತರಾಗಿ—“ ಎಲೈ ರಾಯನೇ ಪುರುವಂಶದಲ್ಲಿ ಪುಟ್ಟಿದವರು ವಿಪತ್ತನ್ನು ಪೊಂದಿರುವ ಜನರುಗಳಿಗೆ ಅಭಯಪ್ರದಾನವಂ ಗೆಯ್ಯುವುದೆಂಬ ಯಜ್ಞದಲ್ಲಿ ದೀಕ್ಷೆಯಂ ಕೈಕೊಂಡಿರುವರು. ಆ ಪೂರ್ವಿಕರ ನಡತೆಯನ್ನೇ ಅನುಸರಿಸುವ ನೀನು ನಮ್ಮಂಥ ಋಷಿಗಳು ಪೇಳಿದ ಕಾರ್ಯವಂ

ನಡೆಸುವುದು ಯುಕ್ತವೇ ಸರಿ'' ಎಂದು ಪೇಳಲು ; ರಾಯನು—" ಎಲೈ ಋಷಿ ಕುಮಾರರುಗಳಿರಾ, ನೀವಿಬ್ಬರು ಮುಂದುಗಡೆಯಲ್ಲಿ ಪೋಗತಕ್ಕದ್ದು, ನಾನು ನಿಮ್ಮ ಅನುಸರಿಸಿಯೇ ಬರುವೆನು '' ಎಂದು ನುಡಿಯಲಾವಾಕ್ಯಕ್ಕೆ ಆ ಋಷಿಗಳು ಸಂತುಷ್ಟರಾಗಿ, "ನೀನು ಜಯಶೀಲನಾಗು!'' ಎಂದು ಆಶೀರ್ವಾದವಂ ಗೆಯ್ದು ಆಶ್ರಮಮಂ ಕುಱಿತವರೀರ್ವರು ತೆರಳಲು ;

ಆರಾಯನು ವಿದೂಷಕನಂ ಕುಱಿತು,—" ಎಲೈ ಸ್ನೇಹಿತನಾದ ವಿದೂಷಕನೇ, ಶಕುಂತಲೆಯಂ ನೋಡಬೇಕೆಂಬ ಕುತೂಹಲವಿರುವುದೆ ಏನು ?'' ಎಂದು ನುಡಿಯಲು ;

ವಿದೂಷಕನು—" ಎಲೈರಾಯನೇ, ಮೊದಲು ಆ ಶಕುಂತಲೆಯಂ ನೋಡ್ಪುವೆನೆಂಬ ಅಭಿಲಾಷೆಯೆಂಬ ತಟಾಕವು ಕೋಡಿಬಿದ್ದು ಹರಿಯುತ್ತಿರ್ದುದು. ಈಗ ಈ ಋಷಿಗಳು ಪೇಳ್ದ ರಾಕ್ಷಸವೃತ್ತಾಂತದಿಂ ಒಂದು ಹನಿಯೂ ಇಲ್ಲದಂತೆ ಒಣಗಿ ಪೋದುದು '' ಎಂದು ನುಡಿಯಲು ;

ರಾಯನು—" ಎಲೈ ವಿದೂಷಕನೇ, ಬೆಗಱದಿರು, ನೀನು ಎನ್ನ ಸಮೀಪದಲ್ಲಿರುವೆಯಷ್ಟೆ '' ಎನಲು ;

ಆವಾಕ್ಯಕ್ಕೆ ವಿದೂಷಕನು—" ಅಯ್ಯಾ ರಾಯನೇ, ನಿನ್ನ ಸಮೀಪದಲ್ಲಿರ್ದ ಮಾತ್ರದಿಂದಲೇ ನಾನು ರಾಕ್ಷಸಬಾಧೆಯಿಂ ಸಂರಕ್ಷಿಸಲ್ಪಟ್ಟೆನೋ ಏನು ?'' ಎಂದು ನುಡಿಯಲು;

ಅಷ್ಟಱಲ್ಲೇ ರೈವತಕನೆಂಬ ದ್ವಾರಪಾಲಕನು ಬಂದು—"ಎಲೈಸ್ವಾಮಿಯೇ, ರಥವು ಸನ್ನದ್ಧವಾಗಿ ಬಂದಿರುವುದು. ಸ್ವಾಮಿಯವರು ವಿಜಯಪ್ರಯಾಣವಂ ಗೆಯ್ಯಬಹುದು. ಇದಲ್ಲದೆ ಪುರದಿಂದ ತಮ್ಮ ಮಾತುಶ್ರೀಯವರ ಆಜ್ಞೆಯಂ ತೆಗೆದುಕೊಂಡು ಕರಭಕನೆಂಬ ಚಾರನು ಬಂದಿರುವನು '' ಎಂದು ನುಡಿಯಲು ;

ರಾಯನು—" ಎಲೈ ದ್ವಾರಪಾಲಕನೇ, ನಮ್ಮ ತಾಯಿಯವರು ಕಳುಹಿಸಿರುವರೇ!'' ಎಂದ ವಾಕ್ಯಕ್ಕೆ, " ಯಥಾರ್ಥವಾಗಿ ದೇವಿಯವರು ಕಳುಹಿಸಿರುವರು '' ಎಂಬ ದ್ವಾರಪಾಲಕನ ವಚನವಂ ಕೇಳಿ, "ಅವನು ಎನ್ನ ಸಮೀಪಕ್ಕೆ ಬರುವಂತೆ ಮಾಡುವುದು'' ಎಂದು ಅಪ್ಪಣೆಯನ್ನೀಯ್ಯಲು;

ಆ ದ್ವಾರಪಾಲಕನು ಆರ್ದೆ ರೀತಿಯಿಂ ಪುರದಿಂ ಬಂದಿರ್ದ ಕರಭಕನಂ ಕರೆದುಕೊಂಡು ಬಂದು, " ಎಲೈ ಸ್ವಾಮಿಯೇ, ಇವನೇ ಕರಭಕನೆಂಬ ನಾಮವುಳ್ಳವನು'' ಎಂದು ತೋಱಿಸಲು ;

ಆ ಕರಭಕನು ಸಮೀಪಗತನಾಗಿ, ರಾಯಂಗೆ ಪ್ರಣಾಮವಂ ವಿರಚಿಸಿ, "ಎಲೈ ಸ್ವಾಮಿಯೇ, ಬರುವ ಚತುರ್ಥಿಯ ದಿವಸ ವ್ರತಸಮಾಪ್ತಿಯಾಗಿ ಪಾರಣೆಯ ದಿವಸವಾದ್ದರಿಂ ಆಯುಷ್ಮಂತರಾದ ಸ್ವಾಮಿಯವರು ಪುರಕ್ಕೆ ಬರುವಂತೆ ದೇವಿಯರು ಅಪ್ಪಣೆಯಂ ಇತ್ತಿರುವರು" ಎಂದು ವಿಜ್ಞಾಪನೆಯಂ ಗೆಯ್ಯಲು ;

ರಾಯನು—"ಎಲೈ ವಿದೂಷಕನೇ, ಇತ್ತಲು ಋಷಿಗಳ ಕಾರ್ಯವಿರುವುದು, ಅತ್ತಲು ಮಾತೃವಿನ ಆಜ್ಞೆಯಾಗಿರುವುದು. ಈ ಎರಡುಕಾರ್ಯಗಳೂ ಮೀಱುವುದಕ್ಕೆ ಆಗದೆ ಇರುವುವು. ಈ ಎರಡಱಲ್ಲಿ ಯಾವ ಕಾರ್ಯವಂ ಮಾಡತಕ್ಕುದು ಯಾವ ಕಾರ್ಯವಂ ಬಿಡತಕ್ಕುದು ಪೇಳು ?" ಎನಲು ;

ವಿದೂಷಕನು—"ರಾಯನೇ ನೀನು ತ್ರಿಶಂಕುರಾಯನಂತೆ ಭೂಮ್ಯಂತರಿಕ್ಷಗಳೆರಡಂ ಬಿಟ್ಟು ಮಧ್ಯದಲ್ಲಿ ನಿಲ್ಲು" ಎಂದು ಹಾಸ್ಯವಂ ಗೆಯ್ಯಲು;

ರಾಯನು—"ಎಲೈ ವಿದೂಷಕನೇ ಈಸಮಯದಲ್ಲಿ ಹಾಸ್ಯದಿಂಪ್ರಯೋಜನವಿಲ್ಲ. ನಿಶ್ಚಯವಾಗಿ ತಾನು ಚಿಂತೆಯುಳ್ಳವನಾಗಿರುವೆನು: ಹೇಗೆಂದರೆ—ನದೀಪ್ರವಾಹವು ಪರ್ವತವಂ ತಗಲಿ ಎರಡು ಭಾಗವಾಗುವಂತೆ ಈ ಕಾರ್ಯಗಳೆರಡೂ ಆಗತ್ಯವಾಗಿ ಮಾಡತಕ್ಕುದಾದ್ದಱಿಂದ ಎನ್ನ ಮನವು ಯಾವುದಱಲ್ಲಿ ಪ್ರವರ್ತಿಸುವುದೆಂಬ ಚಿಂತೆಯಿಂದಿರುವುದು" ಎಂದು ನುಡಿದು, ಒಂದು ಕ್ಷಣ ತನ್ನೊಳು ತಾನು ಯೋಚನೆಯಂ ಗೆಯ್ದು, "ಎಲೈ ವಿದೂಷಕನೇ, ನಮ್ಮ ತಾಯಿಯು ನಿನ್ನಂ ಪುತ್ರನಂತೆ ಸಂರಕ್ಷಿಸಿರುವಳಾದ್ದಱಿಂ ಈತಪೋವನವಂ ಬಿಟ್ಟು ಪ್ರತಿಷ್ಠಾನಪುರವಂ ಕುಱಿತು ಪೋಗಿ, 'ದುಷ್ಯಂತರಾಯನು ಬಂದನೇ' ಎಂದು ಕೇಳಲು, 'ಋಷಿಗಳು ಮಾಳ್ಪ ಯಜ್ಞಕ್ಕೆ ರಾಕ್ಷಸರ ಬಾಧೆಯುಂಟಾಗಿರುವುದಂ ಪರಿಹರಿಸುವುದಕ್ಕೆ ಪೋಗಿರುವನೆಂಬೀವೃತ್ತಾಂತವಂ ವಿಸ್ತಾರವಾಗಿ ನನ್ನ ಮಾತೃಸನ್ನಿಧಿಯಲ್ಲಿ ವಿಜ್ಞಾಪನೆಯಂ ಗೆಯ್ದು ನಾನು ಒಂದು ಮಾಳ್ಪ ಕೃತ್ಯವಂ ನೀನು ನೆರವೇರಿಸುವುದು" ಎಂದು ನುಡಿಯಲು;

ವಿದೂಷಕನು—"ಎಲೈ ರಾಯನೇ, ರಾಕ್ಷಸರ ವೃತ್ತಾಂತವಂ ಕೇಳಿದ್ದಱಿಂದ ಭಯಯುಕ್ತನಾಗಿರುವೆನೆಂದು ನೀನು ಎನ್ನಂ ಪಟ್ಟಣಪ್ರಯಾಣವಂ ಮಾಡೆಂದು ಪೇಳುತ್ತಿರುವೆಯೋ ?" ಎನಲು ;

ಆ ವಾಕ್ಯಕ್ಕೆ ರಾಯನು ನಸುನಗುತ, "ಎಲೈ ವಿದೂಷಕನೇ, ನಾನೊಂದು ಪ್ರಕಾರವಾಗಿ ಪೇಳಲಾ ವಾಕ್ಯವಂ ನೀನೊಂದು ಪ್ರಕಾರವಾಗಿ ತಿಳಿದುಕೊಳ್ಳುವೆ!" ಎಂದು ನುಡಿಯಲು ;

ವಿದೂಷಕನು—“ ಎಲೈ ಮಹಾರಾಯನೇ, ನಿನ್ನಾಜ್ಞೆಯಾದಂತೆ ಪೋಗಬೇಕಾದಲ್ಲಿ ಈಗ ಬಂದಿರುವ ಕರಭಕನೊಡನೆ ಪೋಗುವೆನಾದ್ದಱಿಂ ನಾನು ಯುವರಾಜನಾದೆನು! ” ಎಂದು ತನ್ನೊಳು ತಾನು ಸಂತೋಷವಂ ಪೊಂದುತ್ತಿರಲು ;

ರಾಯನು ತನ್ನಮನದೊಳು, “ ಈ ವಟುವು ಮಹಾಚಪಲನಾಗಿ ಇರುವನು. ಈಗ ನಾನು ಶಕುಂತಲೆಯಂ ಕುಱಿತು ಪ್ರಾರ್ಥನೆಯಂ ಗೆಯ್ಯುತ್ತ ವಿಷಾದವಂ ಪೊಂದುತಿರ್ದುದಂ ಅಂತಃಪುರಸ್ತ್ರೀಯರೊಡನೆ ಪೇಳದೆ ಇರನು. ಆದ್ದಱಿಂದಿನ್ನೊಂದು ಪ್ರಕಾರವಾದ ವಂಚನೆಯ ವಾಕ್ಯವಂ ಇವನೊಡನೆ ನುಡಿಯುವೆನು ’ ಎಂದಾಲೋಚಿಸಿ, ಆ ವಿದೂಷಕನಂ ತನ್ನ ಕರದಲ್ಲಿ ಪಿಡಿದು, “ ಎಲೈ ಸ್ನೇಹಿತನೇ, ನಾನು ಪೂಜ್ಯರಾದ ಋಷಿಗಳ ಸಂದರ್ಶನಕ್ಕೋಸುಗ ಈಕಣ್ವಾಶ್ರಮಕ್ಕೆ ಪೋಗುವೆನಲ್ಲದೆ ನಿಶ್ಚಯವಾಗಿ ಆಋಷಿಪುತ್ರಿಯಾದ ಶಕುಂತಲೆಯಲ್ಲಿ ಅಭಿಲಾಷೆಯಿಲ್ಲ. ನೀನೇ ಈಗ ನೋಡು ಹುಲ್ಲೆಗಳ ಮಱಿಗಳೊಡನೆ ವೃದ್ಧಿಯಂ ಪೊಂದಿ ಮನ್ಮಥವಿಕಾರವನ್ನಱಿಯದೆ ಇರುವ ಈಶಕುಂತಲೆಯು ಎಲ್ಲಿ ! ಸದ್ಗುಣಭರಿತನಾದ ನಾನೆಲ್ಲಿ! ಇಂತು ಒಂದಕ್ಕೊಂದು ವಿಗಡವಾಗಿರುವುದು. ನಿನ್ನೊಡನೆ ವಿನೋದಕ್ಕೋಸುಗ ಆಶಕುಂತಲೆಯ ವೃತ್ತಾಂತವಂ ಪೇಳಿದೆನಲ್ಲದೆ ನಿಶ್ಚಯವಾದ ವಾಕ್ಯವೆಂದು ತಿಳಿಯದಿರು ” ಎನಲು;

ವಿದೂಷಕನು ರಾಯನು ಪೇಳ್ದುದೆಲ್ಲವು ಯಥಾರ್ಥವೆಂದು ತಿಳಿದು ಪುರವಂ ಕುಱಿತು ತೆರಳಲು;

ರಾಯನು ರಥಾರೂಢನಾಗಿ ಕಣ್ವಾಶ್ರಮವಂ ಕುಱಿತು ತೆರಳಲಿಚ್ಛೈಸಿದನು.

ಎಂಬಲ್ಲಿಗೆ

ಕೃಷ್ಣರಾಜವಾಣೀವಿಲಾಸ ರತ್ನಾಕರವೆಂಬ ಶಾಕುಂತಲನಾಟಕ ನವೀನಟೀಕಿನಲ್ಲಿ ದುಷ್ಯಂತರಾಯನು ವಿದೂಷಕನಂ ಪುರಕ್ಕೆ ಕಳುಹಿ ತಾನು ಕಣ್ವಾಶ್ರಮಕ್ಕೆ ಪೋದನೆಂಬ ದ್ವಿತೀಯ ಕಲ್ಲೋಲದಲ್ಲಿ ದ್ವಿತೀಯತರಂಗಂ ಸಂಪೂರ್ಣಂ.

REGISTRAR
OSMANIA UNIVERSITY

ದ್ವಿತೀಯಕಲ್ಲೋಲದ ತೃತೀಯತರಂಗಂ

ಅನಂತರದಲ್ಲಿ ವಿದೂಷಕನು ಪ್ರತಿಷ್ಠಾನನಗರವಂ ಕುಱಿತು ಬಂದು, ರಾಯನ ಅಂತಃಪುರವಂ ಪ್ರವೇಶಿಸಿ, ದುಷ್ಯಂತರಾಯನ ಮಾತೃಸನ್ನಿಧಿಯಂ ಸೇರಿ, ರಾಯನು ಮೃಗಯಾವಿಹಾರವಂ ಗೆಯ್ದು ಅನೇಕ ದುಷ್ಟಮೃಗವಂ ಸಂಹರಿಸಿದ ರೀತಿಯಂ, ಋಷಿಗಳು ಬಂದು,—ಯಜ್ಞಸಂರಕ್ಷಣೆಯಂ ಗೆಯ್ದು ರಾಕ್ಷಸನಿಗ್ರಹವಂ ಮಾಳ್ಪುದೆಂದು ತಮ್ಮಾಶ್ರಮಕ್ಕೆ ರಾಯನಂ ಕರೆದುಕೊಂಡು ಹೋದ ಸಂಗತಿಯನ್ನೆಲ್ಲವಂ ವಿಸ್ತಾರವಾಗಿ ಶಕುಂತಲೆಯ ವೃತ್ತಾಂತ ಹೊಱತು ಬಿನ್ನೈಸುತಿರಲು;

ಇತ್ತಲಾದುಷ್ಯಂತರಾಯನು ಆರಾತ್ರಿಯಲ್ಲಿ ತಾನಿರ್ದ ಸ್ಥಾನದಲ್ಲೇ ಇರ್ದು ಪ್ರಾತಃಕಾಲವಾಗಲು ನಿತ್ಯಕರ್ಮಾನುಷ್ಠಾನವಂ ಗೆಯ್ದು ರಥಾರೂಢನಾಗಿ ಕಣ್ವಾಶ್ರಮಕ್ಕೆ ಪೋಗಲು;

ಕಣ್ವಮುನೀಶ್ವರನ ಶಿಷ್ಯರುಗಳು ರಾಯನಂ ಕಂಡು ಸಂತೋಷಭರಿತರಾಗಿ, "ಅಧಿಕ ಮಾಹಾತ್ಮ್ಯಯುಳ್ಳ ಈ ದುಷ್ಯಂತರಾಯನು ನಮ್ಮಾಶ್ರಮವಂ ಪ್ರವೇಶವಂಗೆಯ್ದ ಮಾತ್ರದಿಂದಲೇ ನಾವು ಮಾಡುವ ಯಜ್ಞಾದಿಕಾರ್ಯಂಗಳು ವಿಘ್ನರಹಿತಂಗಳ ದುವು. ಹೀಗಿರುವಲ್ಲಿ ರಾಯನು ಧನುಸ್ಸಿನಲ್ಲಿ ಬಾಣವಂ ಪೂಡಿ, ಶಿಂಜಿನೀಧ್ವನಿಯಂ ಗೆಯ್ದವನಾದರೆ ಪೇಳತಕ್ಕುದೇನು!" ಎಂದು ಹರ್ಷಾಲಾಪವಂಗೆಯ್ಯುತ, ರಥವನ್ನಿಳಿದು ಪಾದಚಾರಿಯಾಗಿ ಬಂದ ರಾಯಂಗೆ ರಮ್ಯವಾದ ಸ್ಥಾನದಲ್ಲಿ ಪೀಠವನ್ನಿತ್ತು, ಮಧುಪರ್ಕಾದಿಗಳಿಂದುಪಚರಿಸುತ್ತಿರಲು;

ಅವರಲ್ಲಿ ಯಜ್ಞಕಾರ್ಯವಂ ವಿರಚನೆಯಂ ಗೆಯ್ಯುವುದಱಲ್ಲಿ ಉದ್ಯುಕ್ತನಾದೊರ್ವ ಋಷಿಪುತ್ರನು ದರ್ಭೆಗಳಂ ತರುವುದಕ್ಕೋಸುಗ ಪೊಱಸಾರಿ ಬಂದು, "ಪ್ರಿಯಂವದೆಯೇ, ಲಾಮಂಚದ ಗಂಧವಂ ದಂಟಿನೊಡಗೂಡಿದ ತಾವರೆಯೆಲೆಗಳಂ ಯಾತಕ್ಕೋಸುಗ ತೆಗೆದುಕೊಂಡು ಪೋಗುವೆ ? " ಎನ್ನಲು;

ಪ್ರಿಯಂವದೆಯು—"ಎಲೈ ಸ್ವಾಮಿಯೇ, ನಮ್ಮ ಶಕುಂತಲೆಯು ಈ ಬೇಸಿಗೆಯ ಬಿಸಿಲನ್ನು ಸಹಿಸಲಾಱದೆ ಬಲವಾಗಿ ಸಂತಾಪವಂ ಹೊಂದುತಿರುವಳಾದ್ದಱಿಂ ಶೀತೋಪಚಾರವಂ ಗೆಯ್ದು ಅವಳ ಶರೀರದ ಸಂತಾಪವು ಪೋಗುವಂತೆ ಮಾಡಲೋಸುಗ ಇವಂ ತೆಗೆದುಕೊಂಡು ಪೋಗುವೆನು " ಎನ್ನಲು;

"ಹಾಗಾದಲ್ಲಿ ಜಾಗ್ರತೆಯಿಂ ಪೋಗಿ ಅವಳ ಸಂತಾಪವಂ ಪರಿಹರಿಸುವುದು. ಮತ್ತಾಶಕುಂತಲೆಯು ಷಡ್ಗುಣೈಶ್ವರ್ಯಸಂಪನ್ನನಾದ ಕಣ್ವಮುನೀಶ್ವರನಿಗೆ ಪ್ರಾಣರೂಪಳಾಗಿರುವಳು. ನಾನು ಯಜ್ಞಸಂಬಂಧವಾದ ಮಂತ್ರಜಲವಂ ತಂದು ಆಶಕುಂತಲೆಗೆ ಪ್ರೋಕ್ಷಣೆಯಂ ಗೆಯ್ಯುವಂತೆ ಕಣ್ವಮುನೀಶ್ವರನ ತಂಗಿಯಾದ ಗೌತಮೀದೇವಿಯ ಹಸ್ತಕ್ಕೆ ಕೊಡುವೆನು" ಎಂದು ನುಡಿದು ಅವಳಂ ಕಳುಹಲು ;

ದುಷ್ಯಂತರಾಯನು—ಶಕುಂತಲೆಯು ಸಂತಾಪಯುಕ್ತಳಾಗಿರುವಳೆಂದು ಪ್ರಿಯಂವದೆಯು ನುಡಿದ ವಾಕ್ಯವಂ ಕೇಳಿದಾಕ್ಷಣದಲ್ಲಿ ಕಾಮಬಾಣಪೀಡಿತನಾಗಿ, ನಿಟ್ಟುಸಿರುಗಳಂ ಬಿಡುತ, ವನದಲ್ಲಿ ಧ್ವನಿಗೆಯ್ಯುವ ಶುಕಪಿಕಂಗಳ ಶಬ್ದವಂ ಕರ್ಣಶೂಲದಂತೆ ತಿಳಿಯುತ—"ಆಶಕುಂತಲೆಯು ಕಣ್ವಋಷಿಯ ಅಂಕೆಯಲ್ಲಿ ಸಿಕ್ಕಿರುವುದಂ ಬಲ್ಲೆನು, ಹಾಗಾದರೂ ಅವಳ ಸೌಂದರ್ಯದಲ್ಲಿ ತಗಲಿ ಕೊಂಡಿರುವ ಎನ್ನ ಮನವಂ ಹಿಂದಿರುಗಿಸುವುದಕ್ಕೆ ಸಮರ್ಥನಾಗಲಾರೆನು" ಎಂದು, ತನ್ನೊಳು ತಾನೇ ಆಲೋಚನೆಯಂಗೆಯ್ಯುತ, ಅಧಿಕ ವ್ಯಥೆಯಂ ಸಹಿಸಲಾರದೆ ರಾತ್ರಿಯಲ್ಲುಂಟಾದ ಚಂದ್ರಕಿರಣದ ಸಂತಾಪವಂ ಸ್ಮರಿಸಿಕೊಂಡು, ಮನ್ಮಥಚಂದ್ರರಂ ಕುರಿತು,—" ಎಲೈ ಮನ್ಮಥಚಂದ್ರರುಗಳಿರಾ, ನೀವಿಬ್ಬರೂ ನನ್ನಿಂದ ವಿರಹಿಜನರುಗಳ ವಿಶ್ವಾಸಕ್ಕೆ ಯೋಗ್ಯರಂತೆ ನಟಿಸುತಿರುವಿರಿ: ಹೇಗೆಂದರೆ—ನೀನು ಪುಷ್ಪಬಾಣನೆಂಬುವುದೂ, ಆಚಂದ್ರನು ಶೀತಕಿರಣನೆಂಬುವುದೂ ನನ್ನಂಥ ವಿರಹಿಗಳಲ್ಲಿ ಅಪದ್ಧವಾಗಿ ತೋರುವುದು. ಏಕೆಂದರೆ:—ಚಂದ್ರನು ರಾತ್ರಿಯಲ್ಲಿ ಹಿಮಮಯವಾದ ತನ್ನ ಕಿರಣಗಳಿಂದ ಅಗ್ನಿಯಂ ಸುರಿಸುತ್ತಿರುವನು. ನೀನು ಪುಷ್ಪಬಾಣಗಳಂ ವಜ್ರಾಯುಧದಂತೆ ತೀಕ್ಷ್ಣಂಗಳಂ ಮಾಡಿ ಎನ್ನಂ ಬಾಧಿಸುತಿರುವೆ" ಎಂದು ಹೇಳಿ, ಋಷಿಗಳು ಮಾಡಿದ ಯಜ್ಞಕಾರ್ಯಂಗಳು ಪರಿಸಮಾಪ್ತವಾದಮೇಲೆ ಇವರಿಂದಪ್ಪಣೆಯಂ ಕೈಕೊಂಡು, ಮನ್ಮಥನಿಂ ತಪ್ತನಾಗಿರುವ ಎನ್ನ ಶರೀರದ ಬಳಲಿಕೆಯಂ ಯಾವ ಸ್ಥಳಕ್ಕೆ ಪೋಗಿ ಪರಿಹರಿಸಲೆಂದು ಅಡಿಗಡಿಗೆ ನಿಟ್ಟುಸಿರಂ ಬಿಡುತ, ಇನ್ನುಮೇಲೆ ಎನ್ನ ಪ್ರಿಯಳಾದ ಶಕುಂತಲೆಯ ಸಂದರ್ಶನವೊಂದಲ್ಲದೆ ಇನ್ನೊಬ್ಬರೂ ಎನ್ನ ಶರೀರವಂ ರಕ್ಷಿಸಲಾರರೆಂದು ಮನದಂದು, ಚಂಡಕಿರಣನಾಗಿ ಮಧ್ಯಾಹ್ನಕಾಲದಲ್ಲಿ ಪ್ರಜ್ವಲಿಸುತಿರುವ ಸೂರ್ಯನಂ ನೋಡಿ,—ಈಸಮಯದಲ್ಲಿ ಶಕುಂತಲೆಯು ತನ್ನ ಸಖಿಯರಿಂದೊಡಗೂಡಿ ಮಾಲಿನಿಯೆಂಬ ನದೀತೀರದಲ್ಲಿರುವ ಲತಾಮಂಟಪದಲ್ಲಿ ಕ್ರೂರವಾದ ಬಿಸಲುಗಾಲವಂ ಕಳೆಯುತ್ತ ಇರುವಳಾದ್ದರಿಂ ನಾನೂ ಆ ನದೀತೀರಕ್ಕೆ ಪೋಗಿ ಅವಳಂ ಕಂಡು ಎನ್ನ ಹೃದಯಸಂತಾಪವಂ ಪೋಗಲಾಡಿಸುವೆನೆಂದು ಮನದಲ್ಲಿ ನಿಶ್ಚಯವಂ ಗೆಯ್ದು, ಋಷಿ

ಗಳಿಂದ ಪುರಕ್ಕೆ ಪೋಗುವೆನೆಂದು ಅಪ್ಪಣೆಯಂ ಕೈಕೊಂಡು, ರಥವಂ ಬಿಟ್ಟು, ಒಬ್ಬನೇ ಪಾದಚಾರಿಯಾಗಿ ಒತ್ತಿನಲ್ಲಿರುವ ಆ ಮಾಲಿನಿಯೆಂಬ ನದೀತೀರಕ್ಕೆ ಬರುತ, ಅಲ್ಲಿರುವ ಕಮಲಷಂಡಗಳಲ್ಲಿ ಮಂಡಿತಂಗಳಾಗಿ ಸಂಚರಿಸುತಿರುವ ರಾಜಹಂಸೆಗಳ ಹಿಂಡುಗಳಿಂದಲೂ, ಮೊಲ್ಲೆ ಮಲ್ಲಿಗೆ ಜಾಜಿ ಸೇವಂತಿಗೆ ಮೊದಲಾದ ಕುಸುಮುಗಳ ಮಕರಂದಪಾನವಂ ಗೆಯ್ದು ಝೇಂಕಾರವಂ ಗೆಯ್ಯುತಿರುವ ಭೃಂಗೀಸಂಗದಿಂ ಸಂಗತವಾದ ಲತಾವಿತಾನಗಳಿಂದಲೂ, ಚಕ್ರವಾಕ ಪಾರಾವತ ಶುಕ ಪಿಕ ಮೊದಲಾದ ಪಕ್ಷಿಗಳ ಕಲಕಲಧ್ವನಿಯಿಂದಲೂ ರಮಣೀಯವಾಗಿರುವ ಆ ಮಾಲಿನೀ ನದೀತೀರವಂ ನೋಡಿ,—"ಈ ನದೀತೀರವು ಎನ್ನ ಕಂಗಳಿಗೆ ಮಂಗಳವನ್ನುಂಟುಮಾಡುತ್ತಿರುವುದು" ಎಂದು ಶೈತ್ಯ ಸೌರಭ್ಯಮಾಂದ್ಯದಿಂದೊಡಗೂಡಿ ಬರುವಂಥ ಗಾಳಿಗೆ ಮೈಗೊಟ್ಟು ಕಮಲಗಂಧದಿಂ ಯುಕ್ತವಾಗಿ, ಮಾಲಿನೀನದಿಯ ತುಂತುರ್ವನಿಗಳಂ ತೆಗೆದುಕೊಂಡು ಮೃದುವಾಗಿ ಸಂಚರಿಸುತ್ತಿರುವ ಈ ವಾಯುವು ಮನ್ಮಥಬಾಣದಿಂ ವ್ಯಥೆಯಂ ಹೊಂದಿರುವ ಎನ್ನಂಥ ವಿರಹಿಗಳಿಗೆ ಅಗ್ನಿಜ್ವಾಲೆಯಂತಿದ್ದರೂ ಅಂಗಗಳಿಂದಾಲಿಂಗನವಂ ಗೆಯ್ಯುವುದಕ್ಕೆ ಯೋಗ್ಯವಾಗಿ ಬೀಸುತಿರುವುದು" ಎಂದು ಆ ವಾಯುವಂ ಸ್ತೋತ್ರವಂ ಗೆಯ್ಯುತ, ಒಂದು ಕ್ಷಣ ವಿರಹವ್ಯಥೆಯಿಂ ನಿಂದಿಸುತ್ತ ಬಂದು,—"ಮುಂದೆಡೆಯಲ್ಲಿ ತಂಪಿಗೆ ತವರ್ಮನೆಯಾಗಿರುವ ಲತಾಗೃಹದಲ್ಲಿ ಸಂತೋಪಯುಕ್ತಳಾದ ಶಕುಂತಲೆಯು ಇರುವಂತೆ ತೋರುವುದು. ಹೇಗೆಂದರೆ– ಈ ಲತಾಗೃಹದ ಮುಂಭಾಗದಲ್ಲಿ ಶುಭ್ರವಾಗಿರುವ ಮರಳಿನಲ್ಲಿ ಆ ಶಕುಂತಲೆಯ ಹೆಜ್ಜೆಗಳ ಸಾಲುಗಳು ಮುಂಗಡೆ ಎತ್ತರವಾಗಿ ಹಿಂಭಾಗವು ಜಘನಭಾರದಿಂ ತಗ್ಗಾಗಿ ಈಗ ತಾನೇ ಅಡಿಯಿಟ್ಟು ಪೋದಂತೆ ತೋರುವುದಾದ್ದರಿಂದೀವೃಕ್ಷದ ಮರೆಯಂ ಸೇರಿ, ಕಾಣದಂತೆ ನಿಂತು ಆ ಶಕುಂತಲೆಯು ಮಾಡುವ ಚೇಷ್ಟೆಗಳಂ ನೋಡುವೆನೆಂದು ಮುಂದಡಿಯಿಟ್ಟು ಪೋಗಿ, ಮರದ ಮರೆಯಸೇರಿ, ಮುಂಭಾಗದಲ್ಲಿರುವ ಶಕುಂತಲೆಯಂ ನೋಡಿ, ಅಧಿಕಾನಂದದಿಂ ರೋಮಾಂಚದಿಂಯುಕ್ತನಾಗಿ, ಇದೋ ಎನ್ನ ಮನೋರಥವಿದ್ದಂತೆ ಪ್ರೇಮಾಸ್ಪದಳಾದ ಶಕುಂತಲೆಯು ನಯವಾದ ಚಂದ್ರಕಾಂತ ಶಿಲೆಯ ಮೇಲೆ ವಿರಚಿಸಿರುವ ಹೂವಿನ ಹಾಸಿಗೆಯಲ್ಲಿ ಶಯನವಂ ಗೆಯ್ದು ಸಖಿಯರೀರ್ವರಿಂದುಪಚರಿಸಿಕೊಳ್ಳುತ್ತಲಿರುವಳು. ಅವಳು ತನ್ನ ಸಖಿಯರುಗಳೊಡನೆ ವಿಶ್ವಾಸಪೂರ್ವಕವಾಗಿ ಸಲ್ಲಾಪವಂ ಗೆಯ್ಯುವುದಂ ಕೇಳುವೆನು" ಎಂದಿರುತ್ತಿರಲು ;

ಇತ್ತಲಾ ಅನುಸೂಯೆ ಪ್ರಿಯಂವದೆಯರೆಂಬ ಸಖಿಯರೀರ್ವರು ತಾವರೆಯೆಲೆಯ ಬೀಸಣಿಗೆಯಂ ಬೀಸುತ, "ಎಲೆ ಶಕುಂತಲೇ, ನಾವು ಬೀಸುವ ಈ ತಾವರೆ

ಯೆಲೆಯು ಬೀಸಣಿಗೆಯ ಗಾಳಿಯು ಸೌಖ್ಯವನ್ನುಂಟುಮಾಡುವುದೋ ಏನು ?'' ಎಂದು ಕೇಳಲಾಶಕುಂತಲೆಯು ಅತ್ಯಧಿಕಸಂತಾಪದಿಂ ಯುಕ್ತಳಾಗಿ, "ಎಲೌ ಸಖಿಯರುಗಳಿರಾ, ಏನು ಸುಖವುಂಟಾಗುವುದೊ ಎನಗೆ ತಿಳಿಯದು. ನೀವು ಬೀಸಣಿಗೆಯುಂ ಬೀಸುತ್ತಿರುವಿರಾ?'' ಎಂದು ಕೇಳಿ, ಚೆನ್ನಾಗಿ ಪ್ರತ್ಯುತ್ತರವನ್ನೀಯದಿರಲಾ ಸಖಿಯರೀರ್ವರು ಅಧಿಕ ವಿಷಾದವಂ ಪೊಂದಿ ಒಬ್ಬರೊಬ್ಬರ ಮುಖವಂ ನೋಡಿಕೊಳ್ಳುತ್ತಿರಲು;

ಇತ್ತಲಾ ರಾಯನು—"ಈ ಶಕುಂತಲೆಯು ಅಧಿಕ ಆಯಾಸವುಳ್ಳವಳಾಗಿ ತೋರುವಳು. ಈ ಸಂತಾಪವು ಬೆಸಗೆಯ ಬಿಸಲಿನಿಂದುಂಟಾದುದೋ ಅಲ್ಲವೆ ಮನ್ಮಥನಿಂದುಂಟಾದುದೋ ತಿಳಿಯದು. ಎನ್ನ ಮನದಲ್ಲಿ ಎರಡು ಪ್ರಕಾರವಾಗಿ ಸಂದೇಹವಿರುವುದು'' ಎಂದು ತನ್ನೊಳು ತಾನು ಊಹಿಸಿ, "ಇನ್ನು ಸಂದೇಹದಿಂ ಪ್ರಯೋಜನವಿಲ್ಲ. ಹೇಗೆಂದರೆ-ಈ ಶಕುಂತಲೆಯು ಸ್ತನದಲ್ಲಿ ಲೇಪವಂ ಗೆಯ್ದಿರುವ ಲಾಮಂಚದ ಗಂಧವುಳ್ಳವಳಾಗಿ, ತಾಪದಿಂ ಕೃಶವಾದ ಹಸ್ತದಿಂ ಜಾರುತ್ತಿರುವ ತಾವರೆದಂಟಿನದೊಂದುತೋಳ್ಬಳೆಯುಳ್ಳವಳಾಗಿ, ಅಧಿಕಸಂತಾಪದಿಂ ಯುಕ್ತಳಾಗಿರ್ದರೂ ಇವಳ ಶರೀರವು ಏನೋ ಒಂದು ಕಾಂತಿಯಂ ಬೀರುತ್ತ ಮನೋಹರವಾಗಿ ಇರುವುದು. ಮತ್ತು ಕೋಮಲವಾದ ಸ್ತ್ರೀಯರುಗಳಲ್ಲಿ ಮನ್ಮಥನು ವಿರಚಿಸುವ ಸಂತಾಪವು ಬೇಸಗೆಯ ಬಿಸಲಿನಿಂದುಂಟಾಗುವ ವ್ಯಥೆಯು ಇವೆರಡೂ ಸಮವಾಗಿರ್ದರೂ ಮದನಬಾಧೆಯಿಂ ಒಂದಾನೊಂದು ಮನೋಹರವಾದ ಕಾಂತಿಯುಂಟಾಗುವಂತೆ ಗ್ರೀಷ್ಮಕಾಲದಿಂದಾಗಲಾರದು. ಆದ್ದರಿಂದೀಶಕುಂತಲೆಗೆ ಮದನಜ್ವರವೇ ಸರಿ'' ಎಂದು ತನ್ನ ಮನದಲ್ಲಿ ನಿಶ್ಚೈಸುತ್ತಿರಲು;

ಪ್ರಿಯಂವದೆಯು ಅನಸೂಯೆಯಂ ಏಕಾಂತಕ್ಕೆ ಕರೆದು,-"ಎಲೌಸಖಿಯೇ, ಈ ಶಕುಂತಲೆಯು ಮಹಾನುಭಾವನಾದ ರಾಜರ್ಷಿಯಾದ ಆದುಷ್ಯಂತರಾಯನಂ ನೋಡಿದ್ದು ಮೊದಲಾಗಿ ಅಧಿಕಾಯಾಸದಿಂ ಯುಕ್ತಳಾಗಿ ಏನೋ ಒಂದು ವಿಪತ್ತಂ ಪೊಂದಿದವಳಂತೆ ಮರುಳುಗೊಂಡಿರುವಳು. ಇವಳ ವ್ಯಥೆಯು ಆ ಮಹಾರಾಜನಂ ನೋಡಿದರಿಂದಲೇ ಪುಟ್ಟಿತೆಂದು ಎನ್ನಮನದಲ್ಲಿ ನಿಶ್ಚಯಿಸುತ್ತಿರುವೆನು'' ಎನ್ನಲಾ ಅನಸೂಯೆಯು—"ಎಲೌ ಪ್ರಿಯಂವದೆ, ಎನ್ನ ಮನದಲ್ಲಿಯೂ ನೀನು ಪೇಳ್ದ ಸಂದೇಹವಿರುವುದಾದ್ದರಿಂದೀಶಕುಂತಲೆಯನ್ನೇ ಕೇಳುವ'' ಎಂದು ಆವಳಂ ಕುರಿತು-"ಎಲೆ ಶಕುಂತಲೆಯೇ, ಈಗ ನಿನ್ನಂ ಕೆಲವು ವಾಕ್ಯವಂ ಕೇಳಬೇಕಾಗಿರುವುದು. ಏನೆಂದರೆ:-ನಿನಗೆ ಸಂತಾಪವಾದರೋ ಬಹಳ ಬಲವಾಗಿರುವುದು. ಏನು ನಿಮಿತ್ತವೊ

ತಿಳಿಯದು'' ಎನಲಾಶಕುಂತಲೆಯು ಆ ಹೂವಿನ ಹಾಸಿಗೆಯಿಂ ತನ್ನ ಮುಂಭಾಗ ವನ್ನೆತ್ತಿ ಮೊಳಕೆಯ್ಯನೂರಿ ಕೊಂಡು, ''ಸಖಿಯೇ, ಈಗ ಏನೋಬಂದು ವಾಕ್ಯವಂ ಪೇಳಿರುವೆ, ಅದಂ ವ್ಯಕ್ತವಾಗಿ ನಿನ್ನಮನದಲ್ಲಿರುವಂತೆ ನುಡಿಯುವುದು'' ಎಂದು ಬೆಸಗೊಳ್ಳಲಾ ಅನಸೂಯೆಯು—''ಎಲೌ ಶಕುಂತಲೆಯೇ, ಋಷಿಪುತ್ರಿಯರಾಗಿ ಈತಪೋವನದಲ್ಲಿ ವಾಸವಂ ಗೆಯ್ಯುತ್ತಿರುವ ನಾವು ಮನ್ಮಥವ್ಯಾಪಾರಕ್ಕೆ ಯೋಗ್ಯರಲ್ಲ. ಆದರೂ ಅನೇಕವಾದ ಪುರಾಣಂಗಳಲ್ಲಿ ಕಾಮಿಗಳಾದ ಜನಗಳಿಗೆ ಯಾವ ಪ್ರಕಾರವಾದ ಮನ್ಮಥವಿಕಾರಗಳು ಪೇಳಿರುವುವೋ ಈಗ ನೀನು ಆ ಪ್ರಕಾರವಾದ ಮದನತಾಪವುಳ್ಳವಳೆಂದು ತೋರುತ್ತಿರುವೆ. ಯಾವ ನಿಮಿತ್ತದಿಂ ನಿನಗಿಂತು ಸಂತಾಪವುಂಟಾಗಿರುವುದೋ ಅದಂ ಪೇಳು. ಏಕೆಂದರೆ:—ನಿನ್ನ ವ್ಯಥೆಯು ಇಂಥಕಾರಣದಿಂದುಂಟಾದುದೆಂದು ನಿಶ್ಚಯವಾಗಿ ತಿಳಿಯದೆ ಇದ್ದರೆ ನಿನ್ನ ಶರೀರತಾಪಕ್ಕೆ ತಕ್ಕ ಉಪಚಾರವಂ ಗೆಯ್ಯುವುದಕ್ಕಾಗದೆ ಇರುವುದು. ಲೋಕದಲ್ಲಿ ರೋಗನಿದಾನವಂ ತಿಳಿಯದೆ ಔಷಧವಂ ಕೊಡಲು, ದೇಹೋಪದ್ರವಕಾರಣವಾಗುವುದಾದ್ದರಿಂ ಯಥಾರ್ಥವಾಗಿ ನಿನ್ನ ಮನೋಗತವಂ ಪೇಳು '' ಎನ್ನಲು ;

ರಾಯನು ಆ ಅನಸೂಯಾವಾಕ್ಯವಂ ಕೇಳಿ—'' ಈ ಶಕುಂತಲೆಗೆ ಉಂಟಾಗಿರುವ ಸಂತಾಪವು ಯಾವ ನಿಮಿತ್ತದಿಂದಾದುದೋ ಎಂದು ನಾನು ಸಂಶಯವಂ ಪೊಂದುವಂತೆ ಅನಸೂಯೆಗೂ ಎನ್ನಂತೆ ಸಂಶಯ ಪುಟ್ಟಿ ಶಕುಂತಲೆಯಂ ಕೇಳುತಿರುವಳು. ಯಾವ ಕಾರ್ಯಗಳಾದರೂ ಅಪ್ತಜನವಾಕ್ಯದಿಂ ನಿಶ್ಚಯಿಸಲ್ಪಡಬೇಕಲ್ಲದೆ ತನ್ನಬುದ್ಧಿಯೊಂದರಿಂದಲೇ ಧೃಡವಂ ಹೊಂದಲಾರವು'' ಎಂದು ತಿಳಿಯುತ್ತಿರಲು;

ಶಕುಂತಲೆಯು ಅನಸೂಯೆ ಕೇಳಿದ ಪ್ರಶ್ನೆಗೆ ತನ್ನ ಮನದಲ್ಲಿ, '' ಎನಗಾದರೋ ಅನುರಾಗವು ಹೃದಯದಲ್ಲಿ ಬಹಳ ಬಲವಾಗಿರುವುದು. ಇವರಿಗೆ ಎನ್ನ ಅಂತರಂಗವಂ ಪೇಳುವುದಕ್ಕೆ ಲಜ್ಜೆಯಿಂ ಸಮರ್ಥಳಾಗಲಾರೆನು'' ಎಂದು ಯೋಚನೆಯಂ ಗೆಯ್ಯುತ್ತಿರಲು ;

ಪ್ರಿಯಂವದೆಯು ಶಕುಂತಲೆಯಂ ನೋಡಿ—'' ಎಲೆ ಶಕುಂತಲೆ, ಈ ಅನಸೂಯೆಯು ನೀತಿವಾಕ್ಯವಂ ಚೆನ್ನಾಗಿ ಪೇಳುತ್ತಿರುವಳು. ನೀನು ನಿನ್ನ ದೇಹದಲ್ಲಿರುವ ಸಂತಾಪವಂ ಪೇಳದೆ ಉಪೇಕ್ಷೆಯಂ ಗೆಯ್ದೆಯಾದರೆ ದಿನದಿನದಲ್ಲೂ ಸರ್ವಾಂಗಗಳಿಂದಲೂ ಕೃಶಳಾಗುತ್ತಿರುವೆ. ಆದರೂ ನಿನ್ನ ಲಾವಣ್ಯಮಯವಾದ ಒಂದಾನೊಂದು ಕಾಂತಿಮಾತ್ರ ಅಗಲಿಪೋಗದೆ ಇರುವುದು '' ಎನಲು ;

ಆ ರಾಯನು–“ ಪ್ರಿಯಂವದೆಯು ನಿಶ್ಚಯವಾಕ್ಯವಂ ಪೇಳಿರುವಳು. ಹೇಗೆಂದರೆ:—ಈ ಶಕುಂತಲೆಯ ಮುಖವು ಅಧಿಕಸಂತಾಪದಿಂ ಹೇರಳವಾಗಿ ಕೃಶಂಗಳಾದ ಕಪೋಲಂಗಳಿಂ ಯುಕ್ತವಾಗಿರುವುದು. ಇವಳ ವಕ್ಷಸ್ಸ್ಥಳವು ಕ್ರೂರನಾದ ಮಾರನ ತಾಪದಿಂ ಸ್ವಲ್ಪ ಮೃದುವಾದ ಸ್ತನಗಳಿಂದಿಂಬುಗೊಂಡಿರುವುದು. ಇವಳ ನಡುವು ಅತ್ಯಂತ ಕೃಶವಾಗಿ ಪೆರ್ಮೊಲೆಗಳ ಭಾರವಂ ಪೊಱಲಾಱದೆ ಇರುವುದು. ಇವಳ ಭುಜಂಗಳು ಮೊದಲು ಸ್ತನಗಳ ಭಾರಕ್ಕೆ ಬಗ್ಗಿರ್ದರೂ ಈಗ ತಾಪದಿಂ ಬಲಹೀನಂಗಳಾಗಿರುವುದಱಿಂ ಬಹಳವಾಗಿ ಬಗ್ಗಿರುವುವು. ಮತ್ತು ಎಲೆಗಳನ್ನು ಉದುರಿಸುವ ವಾಯುಸ್ಪರ್ಶವಂ ಪಡೆದಿರುವ ದುಂಡುಮಲ್ಲಿಗೆಯ ಬಳ್ಳಿಯಂತೆ ಒಂದಾನೊಂದು ಬಿಳ್ಪೇಱಿದ ಕಾಂತಿಯಿಂ ಯುಕ್ತಳಾಗಿ, ಮನ್ಮಥನಿಂ ತಾಪಯುಕ್ತಳಾಗಿ, ದುಃಖಪಡಿಸುವಳಂತೆಯೂ ಮನೋಹರಳಾಗಿಯೂ ತೋಱುವಳು” ಎಂದು ತನ್ನೊಳು ತಾನು ನುಡಿದುಕೊಳ್ಳುತ್ತಿರಲು ;

ಶಕುಂತಲೆಯು—“ ಎಲೌ ಸಖಿಯರುಗಳಿರಾ, ನಿಮ್ಮನ್ನುಳಿದು ಅನ್ಯರಾದ ಯಾರಿಗೆ ನಾನು ಎನ್ನ ಸಂತಾಪವನ್ನುಸಿರುವೆನು. ಆದರೂ ತಾಪವನ್ನುಂಟು ಮಾಡುವಳಾಗುವೆನು ಎಂದು ಎನ್ನಂತರಂಗದ ವೃತ್ತಾಂತವಂ ಪೇಳದೆ ಇರುವೆನು” ಎನಲಾಸಖಿಯರೀರ್ವರು—“ ಎಲೆ ಶಕುಂತಲೆ, ನೀನು ತಾಪಕ್ಕೆ ಕಾರಣವಂ ಪೇಳದೆ ಇರುವುದಱಿಂದಲೇ ಇಂತು ಸಂಕಟವನ್ನನುಭವಿಸುತ್ತಿರುವೆ. ಅದಲ್ಲದೆ ನಿನ್ನ ಹೃದಯದಲ್ಲಿರುವುದಂ ಬಹಿರಂಗಕ್ಕೆ ಪ್ರಕಾಶವಂ ಗೆಯ್ದುಯಾದೊಡೆ ಸ್ವಲ್ಪ ಪರಿಹಾರವಾಗಿ ಸಹಿಸತಕ್ಕ ತಾಪವುಳ್ಳವಳಾಗುವೆ” ಎಂದು ನುಡಿಯಲು ;

ರಾಯನು ಆಸಖಿಯರೀರ್ವರು ಶಕುಂತಲೆಯೊಡನೆ ಸಲ್ಲಾಪವಂ ಗೆಯ್ಯುವುದಂ ಕೇಳಿ, “ ಸಮಾನಸುಖದುಃಖವುಳ್ಳ ಅನಸೂಯೆ ಪ್ರಿಯಂವದೆಯರು ಬಾಲೆಯಾದ ಶಕುಂತಲೆಯಿಂ ತಾಪಕಾರಣವಂ ಕೇಳುತ್ತಿರುವರು. ಅವಳು ತನ್ನ ಮನೋವ್ಯಥೆಗೆ ಕಾರಣಂ ಸಂದೇಹವಿಲ್ಲದೆ ಅವರೊಡನೆ ಪೇಳುವಳು. ನಾನಾದರೋ ಆ ಶಕುಂತಲೆಯಿಂ ಅಭಿಲಾಷೆಯು ಯುಕ್ತವಾಗಿರುವಂತೆ ಹಿಂದಿರುಗಿ ನೋಡಲ್ಪಟ್ಟಿರುವೆನು. ಆದರೂ ಅಷ್ಟಱಲ್ಲೇ ಎನ್ನಲ್ಲಿ ಅಭಿಲಾಷೆಯಿರುವುದೆಂದು ಪೇಳುವಳೋ ಎಂಬ ವಾಕ್ಯವಂ ಕೇಳಲಿಚ್ಛೆಯುಳ್ಳ ಕಿವಿಗಳಿಂ ಕುತೂಹಲಿಯಾಗಿರುವೆನು” ಎಂದು ತಿಳಿಯುತ್ತಿರಲು ;

ಆ ಶಕುಂತಲೆಯು ಲಜ್ಜೆಯಿಂ ಯುಕ್ತಳಾಗಿ,—“ ಪ್ರಾಣಪ್ರಿಯರಾದ ಸಖಿಯರುಗಳಿರಾ, ಈ ತಪೋವನವಂ ಸಂರಕ್ಷಿಸುವೆನೆಂದು ಬಂದ ರಾಜರ್ಷಿ

ಯಾದ ರಾಯನು ಯಾವಾಗ ಎನ್ನ ನೇತ್ರಮಾರ್ಗವಂ ಪೊಂದಿದನೋ ಅದು ಮೊದಲಾಗಿ ಅವನಲ್ಲಿ ಅಧಿಕವಾದ ಅಭಿಲಾಷೆಯುಳ್ಳವಳಾಗಿ ಈ ಅವಸ್ಥೆಗೆ ಗುಱಿಯಾಗಿರುವೆನು " ಎನಲು ;

ಆ ದುಷ್ಯಂತರಾಯನಾಶಕುಂತಲೆಯ ವಾಕ್ಯವಂ ಕೇಳಿ, ಅತ್ಯಂತ ಸಂತೋಷ ಭರಿತನಾಗಿ,— " ಈ ಶಕುಂತಲೆಗೆ ಎನ್ನಲ್ಲಿ ಅನುರಾಗವಿರುವುದಂ ಇವಳ ವಚನದಿಂ ಕೇಳತಕ್ಕುದಾಗಿರ್ದುದಂ ಕೇಳಿದೆನು. ಮನ್ಮಥನು ಎನಗೆ ಸಂತಾಪವಂ ಪುಟ್ಟಿಸುವುದಕ್ಕೂ ಕಾರಣನಾಗಿ ಈಗ ಆ ಸಂತಾಪಪರಿಹಾರಕ್ಕೂ ಅವನೇ ಯೋಗ್ಯ ನಾದನು. ಹೇಗೆಂದರೆ:—ವರ್ಷೋನ್ಮುಖಮಾದ ಮೇಘದಿಂ ಕಪ್ಪಾದ ಗ್ರೀಷ್ಮ ಕಾಲದ ಹಗಲು ಸಮಸ್ತ ಪ್ರಾಣಿಗಳಿಗೂ ಸಂತಾಪಕಾರಣನಾಗಿ, ಅಷ್ಟಱಲ್ಲೇ ಮಳೆಯುಂಟಾಗುವುದಱಿಂದಾತಾಪಪರಿಹಾರವಂ ಮಾಳ್ಪಂತಾದುದು " ಎಂದು ಸಂತುಷ್ಟನಾಗುತ್ತಿರಲು ;

ಆ ಶಕುಂತಲೆಯು ಮರಳಿ ಆ ಸಖಿಯರಂ ಕುಱಿತು—"ಪ್ರಾಣಪ್ರಿಯರು ಗಳಿರಾ, ರಾಜಶ್ರೇಷ್ಠನಾದ ಆ ದುಷ್ಯಂತರಾಯನ ದಯಕ್ಕೆ ನಾನು ಹೇಗೆ ಪಾತ್ರಳಾಗಬೇಕೋ ಆ ಪ್ರಕಾರಕ್ಕೆ ಯತ್ನವಂ ಮಾಡಬಹುದು. ಇದಱಮೇಲೆ ನಿಮ್ಮಭಿಮತವಿದ್ದಂತೆ ಕಾರ್ಯವಂ ನಡೆಸಬಹುದು. ನಾನು ಪೇಳಿದಂತೆ ಕಾರ್ಯವು ನಡೆಯದೆ ಇದ್ದಲ್ಲಿ ಈ ಮನ್ಮಥಬಾಧೆಯಂ ಸಹಿಸಲಾಱೆನು. ಎನ್ನ ಹೃದಯದಲ್ಲಿ ಜಲಸೇಚನವಂ ಗೆಯ್ಯುವುದು" ಎನಲು ;

ಇತ್ತಲು ಆ ರಾಯನು-" ಶಕುಂತಲೆಯು ಪೇಳ್ದ ವಾಕ್ಯದಿಂ ಎನ್ನ ಸಂದೇಹವು ನಿರ್ಮಲವಾಗಿ ಪೋಗುತ್ತದೆ " ಎಂದು ತಿಳಿಯುತ್ತಿರಲು ;

ಆ ಪ್ರಿಯಂವದೆಯು ಏಕಾಂತವಾಗಿ ಅನಸೂಯೆಯಂ ಕುಱಿತು—"ಎಲೆ ಅನಸೂಯೆ, ಈ ಶಕುಂತಲೆಯು ಅತ್ಯಂತವಾದ ಮನ್ಮಥಬಾಧೆಯಿಂ ಯುಕ್ತಳಾಗಿ ಇರುವಳು. ಇನ್ನು ನಾವು ಕಾಲಹರಣವಂ ಗೆಯ್ವಲು ಈ ಕ್ರೂರವಾದ ಸಂತಾಪವಂ ಸಹಿಸುವುದಕ್ಕೆ ಯೋಗ್ಯಳಾಗಲಾಱಳು. ಮತ್ತು ಯಾವ ದುಷ್ಯಂತರಾಯನಲ್ಲಿ ಅನುರಾಗಯುಕ್ತಳಾಗಿರುವಳೋ ಆ ಮಹಾರಾಜನು ಪ್ರಸಿದ್ಧವಾದ ಪುರುವಂಶಕ್ಕೆ ಅಲಂಕಾರರೂಪನಾಗಿ, ರೂಪಿನಲ್ಲಿ ಮನ್ಮಥನಿಗೆ ಮನ್ಮಥನಾಗಿರುವನಾದ್ದಱಿಂ, ಈ ಶಕುಂತಲೆಯು ಆ ರಾಯನಲ್ಲಿ ಅಭಿಲಾಷೆಯಂ ವಿರಚಿಸಿರುವುದು ಯುಕ್ತವಾಗಿರುವುದು " ಎಂದು ನುಡಿಯಲಾ ಅನಸೂಯೆಯು ಶಕುಂತಲೆಯಂ ಕುಱಿತು—"ಎಲೌ ಶಕುಂತಲೆಯೇ, ಮಹಾರಾಜನಾದ ದುಷ್ಯಂತರಾಯನಲ್ಲಿ

ನಿನಗೆ ಅನುರಾಗವು ದೈವವಶದಿಂದುಂಟಾಗಿರುವುದು ನಮಗೆಲ್ಲರಿಗೂ ಸಮ್ಮತ
ವಾಗಿರುವುದು. ಲೋಕದಲ್ಲಿ ಮಹಾನದಿಗಳು ಸಮುದ್ರವಂ ಬಿಟ್ಟು ಇನ್ನೊಂ
ದರಲ್ಲಿ ಹೇಗೆ ಸಂಗಮವಂ ಪೊಂದಲಾಱವೋ, ದುಂಡುಮಲ್ಲಿಗೆಯ ಬಳ್ಳಿಯು
ಸಿಹಿಮಾವಿನ ಮರವಂ ಬಿಟ್ಟು ಇನ್ನೊಂದು ಗಿಡಕ್ಕೆ ಸುತ್ತಿಕೊಂಡು ಹೇಗೆ ಚೆನ್ನಾಗಿ
ಪುಷ್ಪಗಳಂ ಬಿಡಲಾಱದೋ—ಹಾಗೆ ನೀನು ನಿನ್ನ ರೂಪಿಗೆ ಗುಣಕ್ಕೆ ತಕ್ಕಂತೆ
ಆ ಮಹಾರಾಜನಾದ ದುಷ್ಯಂತರಾಯನಲ್ಲಿ ಅನುರಕ್ತಳಾದೆ'' ಎಂದು ಶ್ಲಾಘನೆಯಂ
ಗೆಯ್ಯಲು ;

ಆ ರಾಯನು—''ವಿಶಾಖಾನಕ್ಷತ್ರಂಗಳೆರಡೂ ಚಂದ್ರಲೇಖೆಯನ್ನನುಸರಿಸು
ವಂತೆ ಈ ಅನಸೂಯೆ ಪ್ರಿಯಂವದೆಯರೀರ್ವರು ಶಕುಂತಲೆಯನ್ನನುಸರಿಸಿ ಮಧು
ರೋಕ್ತಿಗಳನ್ನಾಡುತ ಎಡಬಿಡದೆ ಇರುವುದು ಯುಕ್ತವೇ ಸರಿ'' ಎಂದು ನುಡಿಯು
ತ್ತಿರಲು ;

ಆ ಅನಸೂಯೆಯು—'ಈ ಶಕುಂತಲೆಯ ಮನೋಭಿಪ್ರಾಯವಂ ಗೋಪ್ಯವಾಗಿ
ಯಾದರೂ ಸಂಪೂರ್ತಿಯಂ ವಿರಚಿಸುವುಪಾಯಮಂ ಕಾಣೆನು'' ಎಂದು ನುಡಿಯಲಾ
ಪ್ರಿಯಂವದೆಯು—''ಎಲೆ ಅನಸೂಯೆಯೇ, ಈಗ ಈ ಕಾರ್ಯವು ಸಾವಕಾಶ
ವೆಂದರೆ ಅಧಿಕಚಿಂತೆಯುಂಟಾಗುವುದು ಶೀಘ್ರವಾಗಿ ಆಗುವುದೆಂದರೆ ಸಂತೋಷವು
ತೋಱುವುದು'' ಎನಲಾ ಅನಸೂಯೆಯು—'' ಎಲೆ ಪ್ರಿಯಂವದೆ, ಜಾಗ್ರತೆಯಾಗಿ
ಆಗುವ ಉಪಾಯವು ಹೇಗೆ ತೋಱುವುದು?'' ಎನಲಾ ಪ್ರಿಯಂವದೆಯು—''ಎಲೆ
ಅನಸೂಯೆ, ಕೇಳು. ಮೊದಲೇ ಆ ರಾಜಶ್ರೇಷ್ಠನಾದ ದುಷ್ಯಂತರಾಯನು ನಮ್ಮ
ಶಕುಂತಲೆಯನ್ನನುರಾಗಪೂರಿತಮಾದ ದೃಷ್ಟಿಯಿಂ ನೋಡಿ ತನ್ನ ಮನದಲ್ಲಿರ್ದ
ಅನುರಾಗವಂ ಹೊಱಸೂಸುವಂತೆ ಮಾಡಿರುವನು. ಇಷ್ಟು ದಿವಸದವರೆಗೆ ಆ
ರಾಯನು ವಿರಹದಿಂ ಕೃಶನಾಗಿ ಇರಬಹುದು'' ಎನಲು;

ಆ ಪ್ರಿಯಂವದೆಯಾಡಿದ ವಾಕ್ಯವಂ ಕೇಳಿ, ''ಅವಳು ಪೇಳಿದಂತೆ ನಾನು
ಸಂತಾಪದಿಂದತ್ಯಂತಕೃಶನಾಗಿ ಇರುವೆನು. ಹೇಗೆಂದರೆ:—ಎನ್ನ ಕರದಲ್ಲಿರುವ ರತ್ನ
ಖಚಿತವಾದ ಸುವರ್ಣದ ಕಡಗವು—ಈ ಶಕುಂತಲೆಯ ವಿರಹದಿಂದುಂಟಾದ ಹೃದ
ಯದಲ್ಲಿರುವ ಮನ್ಮಥನ ಸಂತಾಪದಿಂದಧಿಕವಾಗಿ ಬಿಸಿಯಾಗಿ, ರಾತ್ರಿಯ ಕಾಲದಲ್ಲಿ
ಮಲಗುವಾಗ ಕಡೆಗಣ್ಣುಗಳಿಂ ಜಾರಿದ, ಕಣ್ಣೀರುಗಳಿಂ—ವರ್ಣಹೀನಂಗಳಾದ ರತ್ನ
ಗಳುಳ್ಳದಾಗಿ, ಬಹಳವಾಗಿ ಧನುಸ್ಸಿನ ನಾರಿಯ ಘಾತಿಯಿಂ ಗುಱುತುಳ್ಳದಾದ

ಎಷ್ಟು ಪ್ರಕಾರವಾಗಿ ಮೇಲಕ್ಕೆ ಸೇರಿಸುತಿರ್ದರೂ ಮೊಳಕೆಯ್ಯಿಂ ಜಾರಿ ಬೀಳುತ್ತಿರುವುದಾದ್ದರಿಂದ ಅತಿಕೃಶನಾದೆನು '' ಎಂದು ನುಡಿದು ಕುಳಿತಿರಲು;

ಆ ಪ್ರಿಯಂವದೆಯು ಒಂದುಗಳಿಗೆ ಯೋಚನೆಯಂ ಗೆಯ್ದು ಅನಸೂಯೆಯಂ ಕುರಿತು—''ಎಲೆ ಅನಸೂಯೆಯೇ, ಈಗೊಂದುಪಾಯವಂ ಯೋಚಿಸಿರುವೆನು. ಅದೇನೆಂದರೆ:—ಈ ಶಕುಂತಲೆಯು ತನ್ನ ಮನದಭಿಪ್ರಾಯವಂ ಒಂದು ಪತ್ರಿಕೆಯಲ್ಲಿ ಬರೆದುಕೊಟ್ಟಲ್ಲಿ ಆ ಮನ್ಮಥ ಪತ್ರಿಕೆಯನ್ನು ಪುಷ್ಪಮಾಲೆಗಳಲ್ಲಡಗಿಸಿ ಇದು ದೇವತಾಪ್ರಸಾದವೆಂಬ ನೆವದಿಂದಾ ದುಷ್ಯಂತರಾಯನ ಕೆಯ್ಯಲ್ಲಿ ಕೊಡುವೆನು'' ಎನಲಾ ಅನಸೂಯೆಯು—''ಎಲೆ ಪ್ರಿಯಂವದೆ, ನೀನು ಪೇಳ್ದ ಉಪಾಯವು ಎನಗೆ ಬಹು ಚೆನ್ನಾಗಿ ತೋರುವುದು. ಇದಕ್ಕೆ ಶಕುಂತಲೆಯು ಏನೆಂದು ನುಡಿಯುತ್ತಿರುವಳೋ ತಿಳಿಯದು'' ಎನಲಾ ವಾಕ್ಯಕ್ಕೆ ಶಕುಂತಲೆಯು—''ಎಲೌ ಸಖಿಯರುಗಳಿರಾ, ನೀವು ಪೇಳಿದ ವಾಕ್ಯವಂ ಯಾವುದಂ ಮೀರಿರುವೆನು'' ಎಂದು ನುಡಿಯಲಾ ಪ್ರಿಯಂವದೆಯು—''ಹಾಗಾದಲ್ಲಿ ನಿನ್ನ ಹೃದಯದ ಅಭಿಪ್ರಾಯಪೂರ್ವಕವಾದ ಮೃದುವಾದ ಪದಸಂದರ್ಭವುಳ್ಳ ಒಂದಾನೊಂದು ಶ್ಲೋಕವಂ ಯೋಜಿಸಿ ಬರೆಯುವುದು'' ಎನಲಾ ಶಕುಂತಲೆಯು—''ಸಖಿಯೇ, ನೀನು ಪೇಳಿದಂತೆ ಯೋಚನೆಯಂ ಗೆಯ್ದು ಪತ್ರಿಕೆಯಂ ಬರೆಯುವೆನು. ಆದರೆ ನಾನು ಬರೆದ ಪತ್ರಿಕೆಗೆ ಆ ರಾಯನು ಒಡಂಬಡದೆ ಎಲ್ಲಿ ಅವಮಾನವಂ ಗೆಯ್ಯುವನೋ ಎಂಬ [illegible] ಹೃದಯವು ನಡುಗುವುದು'' ಎನಲು;

UNIVERSITY

ಆ ವಾಕ್ಯವಂ ಕೇಳಿ ರಾಯನು—''ಎಲೆ ಶಕುಂತಲೆ, ಕಾಮಬಾಣಪೀಡಿತನಾದ ನಾನು ಯಾವಾಗ ನಿನ್ನ ಅಂಗಸಂಗವು ದೊರಕುವುದೋ ಎಂದು ಸಿದ್ಧವಾಗಿ ಕಾದುಕೊಂಡಿರುವೆನು. ನೀನು ಎನ್ನಿಂದ ಅಪಮಾನವುಂಟಾಗುವುದೋ ಎಂದು ಯಾತಕ್ಕೋಸುಗ ಭಯಪಡುತ್ತಿರುವೆ. ಲೋಕದಲ್ಲಿ ಐಶ್ವರ್ಯವಂತನಾಗಬೇಕೆಂದು ಲಕ್ಷ್ಮಿಯಂ ಪ್ರಾರ್ಥಿಸುವ ಪುರುಷನು ಒಂದಾನೊಂದು ಕಾಲದಲ್ಲಿ ಲಕ್ಷ್ಮಿಯಂ ಪಡೆಯುವನೋ ಇಲ್ಲವೋ ಸಂದೇಹವಾಗಿ ತೋರುವುದು. ಆ ಲಕ್ಷ್ಮಿಯೇ ತಾನಾಗಿ ಬರಲಿಚ್ಛೈಸಿದರೆ ಯಾವ ಪುರುಷನು ತಾನೇ ಒಲ್ಲೆನೆಂದು ವಿಮುಖವಾಗುವನು'' ಎಂದು ನುಡಿದುಕೊಳ್ಳುತಿರಲು;

ಆ ಪ್ರಿಯಂವದೆಯು ಶಕುಂತಲೆಯಂ ಕುರಿತು—''ನಿನ್ನ ಗುಣಕ್ಕೆ ನೀನೇ ಅಪಮಾನವಂ ಗೆಯ್ಯುತಿರುವ ಶಕುಂತಲೆಯೇ, ಕೇಳು. ಲೋಕದಲ್ಲಿ ಯಾವ ಪುರುಷನಾಗಲಿ ತನ್ನ ಶರೀರಕ್ಕೆ ಅಧಿಕಾನಂದನ್ನುಂಟುಮಾಡುತಿರುವ ಶರತ್ಕಾಲದ ಬೆಳದಿಂ

ಗಳನ್ನು ತನ್ನ ಮೇಲೆ ಬೀಳದಂತೆ ಒಟ್ಟಿಯು ಕೆಯ್ಯಿಂ ಮಱೆಗೆಯ್ಯುವನೇ ಪೇಳು. ಸುಂದರಾಕಾರಳಾದ ನೀನು ಪುರುಷನನ್ನಪೇಕ್ಷಿಸಿ ಪೋದೆಯಾದರೆ ಯಾವವನು ತಾನೇ ಒಲ್ಲೆನೆಂದು ನುಡಿಯುವನು ಪೇಳು'' ಎಂದು ನುಡಿಯಲಾ ಶಕುಂತಳೆಯು ಮುಗುಳ್ನಗೆಯುಳ್ಳವಳಾಗಿ,—"ಹಾಗಾದರೆ ಶ್ಲೋಕವಂ ಕೂಡಿಸುವೆನು'' ಎಂದು ಪುಷ್ಪಶಯ್ಯೆಯಲ್ಲಿ ಚೆನ್ನಾಗಿ ಕುಳಿತು, ಶ್ಲೋಕವಂ ವಿರಚಿಸುವುದಕ್ಕೆ ಯೋಚನೆಯಂ ಗೆಯ್ಯುತಿರ್ದಳು.

ಎಂಬಲ್ಲಿಗೆ

ಕೃಷ್ಣರಾಜವಾಣೀವಿಲಾಸ ರತ್ನಾಕರವೆಂಬ ಶಾಕುಂತಲನಾಟಕ ನವೀನಟೀಕಿನಲ್ಲಿ ಶಕುಂತಲೆಯು ವಿರಹಾತುರಳಾಗಿ ದುಷ್ಯಂತರಾಯಂಗೆ ಕಳುಹಿಸಲೋಸುಗ ಶ್ಲೋಕ ರಚನೆಯಂ ಗೆಯ್ಯುತಿರ್ದಳೆಂಬ ದ್ವಿತೀಯ ಕಲ್ಲೋಲದಲ್ಲಿ ತೃತೀಯತರಂಗಂ ಸಂಪೂರ್ಣಂ.

REGISTRAR
OSMANIA UNIVERS

ದ್ವಿತೀಯಕಲ್ಲೋಲದ ಚತುರ್ಥತರಂಗಂ

ಅನಂತರದಲ್ಲಾ ಶಕುಂತಲೆಯು ರೆಪ್ಪೆಯನ್ನಿಕ್ಕದೆ, ರಾಯನ ಬಳಿಗೆ ಶ್ಲೋಕವಂ ಬರೆದು ಕಳುಹಿಸುವೆನೆಂಬ ಕುತೂಹಲದಿಂ, ಪದಾನ್ವೇಷಣೆಯಂ ಗೆಯ್ಯುತ್ತಿರಲು,

ರಾಯನು ಆ ಶಕುಂತಲೆಯ ಮುಖವಂ ಚೆನ್ನಾಗಿ ನೋಡಿ, "ಪದರಚನೆಯಂ ಗೆಯ್ಯುತ್ತಿರುವ ಈ ಶಕುಂತಲೆಯ ಮುಖವು ಎತ್ತಿರುವುದೊಂದು ಹುಬ್ಬಿನಿಂ ಯುಕ್ತವಾಗಿ ರೋಮಾಂಚದಿಂ ಯುಕ್ತವಾದ ಒಂದು ಕಪೋಲಮುಳ್ಳದ್ದಾಗಿ ಇರುವುದಱಿಂದ, ಎನ್ನಲ್ಲಿ ಇವಳಿಗೆ ಸಂಪೂರ್ಣಾನುರಾಗವಿರುವುದು ವ್ಯಕ್ತವಾಗುತ್ತಿರುವುದು'' ಎಂದು ಯೋಚಿಸುತ್ತಿರಲು;

ಆ ಶಕುಂತಲೆಯು,—"ಎಲೌ ಸಖಿಯರುಗಳಿರಾ, ನಾನು ಶ್ಲೋಕವಂ ಯೋಜಿಸಿರುವೆನು; ಆ ಶ್ಲೋಕವಂ ಬರೆಯುವುದಕ್ಕೆ ಕಾಗದ ಕಡ್ಡಿ ಮೊದಲಾದ ಸಾಧನಂಗಳು ಎನ್ನ ಸಮೀಪದಲ್ಲಿಲ್ಲ'' ಎಂದು ನುಡಿಯಲಾಪ್ರಿಯಂವದೆಯು, "ಗಿಣಿಯ ಹೊಟ್ಟೆಯಂತೆ ಮೃದುವಾದ ಈ ತಾವರೆಯ ಹೂವಿನ ದಳದಲ್ಲಿ ನಿನ್ನ ಉಗುರುಗೊನೆಯಿಂದಾಶ್ಲೋಕವಂ ಬರೆ'' ಯೆಂದು ನುಡಿಯಲಾ ಶಕುಂತಲೆಯು ಅದೇ ರೀತಿಯಿಂದಾತಾವರೆಯ ದಳದಲ್ಲಿ ಶ್ಲೋಕವಂ ಬರೆದು,—"ಎಲೌ ಸಖಿಯರುಗಳಿರಾ,

ಈಶ್ಲೋಕಾರ್ಥವು ಸಂಗತವಾಗಿರುವುದೋ ಅಸಂಗತವಾಗಿರುವುದೋ ಈ ಶ್ಲೋಕವನ್ನೋದುವೆನು ಕೇಳಿ," ಎನ್ನಲಾವಾಕ್ಯಕೆ ಅವರೀರ್ವರು ನಿಶ್ಚಲರಾಗಿ ಕೇಳುತ್ತಿರಲಾಶಕುಂತಲೆಯು ಆ ತಾವರೆಯ ದಳವಂ ಕರದಲ್ಲಿ ಪಿಡಿದು ಅದರಲ್ಲಿ ಬರೆದಿರುವ ಶ್ಲೋಕವನ್ನೋದುತಿರ್ದಳು. ಅದೆಂತೆನೆ:—

ಆರ್ಯೇ—"ತುಜ್ಝಣ ಆಣೇ ಹಿಅಯಂ ಮಹಉಣ ಮಯಣೋ ದಿವಾವಿರತ್ತಿಂ ವಿ| ಣಿಗ್ಘಿಣತವೇಯಿ ಬಳಿಯಂತುಯಿ ಜುತ್ತ ಮಣೋಹರಾಯಿ ಅಂಗಾಯಿ ||"

(ಟೀಕು)—" ಎಲೈ ರಾಯನೇ, ನಿನ್ನ ಅಭಿಪ್ರಾಯವು ಎಂತಿರುವುದೋ ಅದಂ ನಾನರಿಯೆನು. ಮನ್ಮಥನಾದರೋ ದಯಾಶೂನ್ಯನಾಗಿ ಹಗಲೂರಾತ್ರಿಗಳಲ್ಲಿ ನಿನ್ನಾಲಿಂಗನಕ್ಕೆ ಯೋಗ್ಯಂಗಳಾದ ಎನ್ನ ಸರ್ವಾಂಗಗಳಂ ತಪಿಸುತ್ತಿರುವನು" ಎಂಬ ಶ್ಲೋಕಾರ್ಥವನ್ನೋದಲು;

ರಾಜನು ಜಾಗ್ರುತೆಯಾಗಿ ಸಮೀಪಕ್ಕೆ ಬಂದು, ಶಕುಂತಲೆಯಂ ಕುರಿತು, "ಎಲೌ ಕೃಶಾಂಗಿಯಾದ ಶಕುಂತಲೆಯೇ, ದಿವಸವು ಚಂದ್ರನಂ ಹೇಗೆ ಕಾಂತಿಹೀನನನ್ನಾಗಿ ಮಾಡುತ್ತಿರುವುದೋ ಹಾಗೆ ಕನ್ನೆಯ್ದಿಲೆಯ ದಳವಂ ಬಳಲಿಸದು. ಮನ್ಮಥನು ಸ್ತ್ರೀಯಾದ್ದರಿಂ ನಿನ್ನಂ ಸಂತಾಪವಂ ಪಡಿಸುವನು, ಎನ್ನಂ ಶರೀರವುನಿಲ್ಲದಂತೆ ದಹಿಸುತ್ತಿರುವನು" ಎಂದು ತನ್ನೊಳುತಾನು ನುಡಿದುಕೊಳ್ಳುತ್ತಿರಲು;

ಅತ್ತಲಾ ಸಖಿಯರೀರ್ವರು ಶಕುಂತಲೆಯು ಓದಿದ ಶ್ಲೋಕಾರ್ಥವಂ ಕೇಳಿ ಅಧಿಕಸಂತೋಷಯುಕ್ತರಾಗಿ, "ಎಲೌ ಶಕುಂತಲೆಯೇ, ನಿನ್ನ ಅಭಿಲಾಷೆಯು ಕ್ಷೇಮವುಳ್ಳದಾಗಿ ಜಾಗ್ರತೆಯಿಂ ಫಲಿಸುವುದು" ಎನಲು;

ಆ ವಚನಕ್ಕೆ ಶಕುಂತಲೆಯು ಹೇರಳವಾದ ಸಂತೋಷವುಳ್ಳವಳಾಗಿ, ಆ ಪುಷ್ಪದ ಹಾಸಿಗೆಯಿಂದ ಮೇಲಕ್ಕೆ ಏಳುವುದಕ್ಕೆ ಇಚ್ಛೈಸುತಿರುವಷ್ಟರಲ್ಲೇ—

ರಾಯನು ಮನ್ಮಥತಾಪವಂ ಸಹಿಸಲಾರದೆ, ಇದೇ ಸಮಯವೆಂದು ಆವೃಕ್ಷದ ಮರೆಯಂ ಬಿಟ್ಟು, ಆಸ್ತ್ರೀಯರುಗಳಿಗಿದುರಾಗಿ ಬಂದು, ಆ ಹೂವಿನಹಾಸಿಗೆಯಿಂದೇಳುತ್ತಿರುವ ಶಕುಂತಲೆಯಂ ಕುರಿತು.—" ಎಲೌ ಪ್ರಾಣಪ್ರಿಯಳೆ, ನೀನು ಆಯಾಸವಂ ಕೊಳ್ಳುವುದು ಯುಕ್ತವಲ್ಲ. ಹೂವಿನ ಹಾಸಿಗೆಯಲ್ಲಿ ತಗಲಿ ಕೊಂಡಿರುವ ಬಿಳ್ಪಾದ ತಾವರೆಯ ದಂಟಿನ ಒಡವೆಗಳಿಂದ ಪರಿಮಳಭರಿತವಾಗಿ ಬಹಳವಾಗಿ ಬಳಲಿರುವ ನಿನ್ನ ಅಂಗಗಳು ಎನಗೆ ಇದಿರೆದ್ದು ಉಪಚಾರವಂ ವಿರಚಿಸುವುದಕ್ಕೆ ಯೋಗ್ಯಂಗಳಾಗಲಾರವು"ಎಂದು ಪೇಳುತ್ತ ಸಮೀಪಕ್ಕೆ ಬರಲು;

ಆ ಸಖಿಯರುಗಳೀರ್ವರು ರಾಯನಂ ಕಂಡು ಹರ್ಷಭರಿತರಾಗಿ,—"ಎಲೈ ಮಹಾರಾಯನೆ, ಈ ಶಿಲಾತಲದಲ್ಲಿರುವ ಹೂವಿನ ಹಾಸಿಗೆಯಲ್ಲಿ ಕುಳಿತುಕೊಳ್ಳುವುದು" ಎಂದುಪಚಾರೋಕ್ತಿಗಳಂ ಪೇಳಲು;

ಆ ರಾಯನು ಅದೇರೀತಿಯಿಂದಾಶಕುಂತಲೆಯ ಸಮೀಪದಲ್ಲಿ ಕುಳಿತುಕೊಳ್ಳಲು;

ಆ ಶಕುಂತಲೆಯು ಲಜ್ಜೆಯಿಂದಲೂ ಹರ್ಷದಿಂದಲೂ ರೋಮಾಂಚದಿಂದಲೂ ಕಂಪನಿಯಿಂದಲೂ ಯುಕ್ತಳಾಗಿ, ಶಿರವಂ ಬಾಗಿ, ಕುಳಿತುಕೊಂಡಿರಲು ;

ಪ್ರಿಯಂವದೆಯು—"ಎಲೈ ಮಹಾರಾಜನೇ, ನಿಮ್ಮೀರ್ವರ ಹೃದಯಾನುರಾಗವು ಈಗ ಪ್ರತ್ಯಕ್ಷವಾದುದು. ಆದರೆ ನಿಮಗೆ ನಮ್ಮ ಶಕುಂತಲೆಯಲ್ಲಿರುವ ಅನುರಾಗವು ಎನ್ನಂ ಕೆಲವು ಸಂಕೇತವಾಕ್ಯವಂ ಪೇಳುವಂತೆ ಮಾಡುವುದು" ಎನಲು;

ಆ ರಾಯನು—"ಎಲೌ ಶೋಭನಾಂಗಿಯಾದ ಪ್ರಿಯಂವದೆಯೇ, ಏನು ಕೇಳಬೇಕೆಂದು ನಿನ್ನ ಮನದಲ್ಲಿರುವುದೋ ಆ ವಾಕ್ಯವಂ ಕೇಳದೆ ಸುಮ್ಮನಿರಬಾರದು. ಏಕೆಂದರೆ:—ಪ್ರಕೃತಕ್ಕೆ ಪೇಳಬೇಕೆಂಬ ವಚನವಂ ಪೇಳದೆ ವಿಳಂಬವಂ ಮಾಡಿದರೆ ಏನೋ ಒಂದು ಸಂತಾಪವುಂಟಾಗುವುದು." ಎಂದು ನುಡಿಯಲು;

ಪ್ರಿಯಂವದೆಯು—"ಎಲೈ ರಾಯನೇ, ರಾಜ್ಯದಲ್ಲಿ ದರಿದ್ರರಾದ ಜನಗಳ ದುಃಖವಂ ಪರಿಹರಿಸುವನಾದ ದೊರೆಯು ಲೋಕದಲ್ಲಿ ಪುಟ್ಟಬೇಕೆಂದು ಪ್ರಾರ್ಥಿಸುವುದು ಮುಖ್ಯವಾದ ಧರ್ಮ" ವೆನಲು;

ಆ ರಾಯನು—"ನೀನು ಪೇಳುವ ವಾಕ್ಯವು ಯುಕ್ತವೇ ಸರಿ" ಎನಲು;

ಪ್ರಿಯಂವದೆಯು—"ನೀನು ಅದೇರೀತಿಯಿಂದ ಸಮಸ್ತರ ದುಃಖವಂ ಪರಿಹರಿಸುತ್ತ ದಯಾದಾಕ್ಷಿಣ್ಯಾದಿ ಸದ್ಗುಣಸಂಪೂರ್ಣನಾದ್ದರಿಂ ನಮ್ಮ ಪ್ರಿಯಸಖಿಯಾದ ಶಕುಂತಳೆಯು ನಿನ್ನುದ್ದಿಶ್ಯವಾಗಿ ಮನ್ಮಥನಿಂ ನಾನಾವಿಧ ತಾಪವನ್ನನುಭವಿಸಿರುವಳು. ಆದ್ದರಿಂ ನೀನು ಅಧಿಕದಯದಿಂ ಕಾಲವಿಳಂಬವಂ ಮಾಡದೆ ಇವಳ ಪ್ರಾಣಸಂರಕ್ಷಣೆಯಂ ಗೆಯ್ಯಬೇಕು" ಎನಲು;

ಆ ವಾಕ್ಯಕ್ಕೆ ರಾಯನು-"ಎಲೌ ಪ್ರಿಯಂವದೆಯೇ, ಇವಳಂ ನೀನು ಪೇಳಿದಂತೆ ಸಲಹುವುದು ವಿಶ್ವಾಸಕ್ಕೆ ಯೋಗ್ಯವಾದ ಕಾರ್ಯವು" ಎಂದು ನುಡಿಯಲು;

ಶಕುಂತಲೆಯು ಪ್ರಿಯಂವದೆಯ ಮುಖವಂ ನೋಡಿ.—"ಎಲೆ ಪ್ರಿಯಂವದೆ, ಪುರದಲ್ಲಿರುವ ಅಂತಃಪುರಸ್ತ್ರೀಯರ ವಿರಹದಿಂ ದುಃಖಿತನಾಗಿ ಸಂತಾಪಯುಕ್ತನಾಗಿರುವ ರಾಜಶ್ರೇಷ್ಠನಾದ ಈದುಷ್ಯಂತರಾಯನಂ ಈಪ್ರಕಾರವಾಗಿ ನಡೆಸಬೇಕೆಂದುಬಲಾತ್ಕಾರವಂಗೆಯ್ಯುವುದರಿಂ ಪ್ರಯೋಜನವಿಲ್ಲವು" ಎಂದು ನುಡಿಯಲು;

ಆ ವಾಕ್ಯಕ್ಕೆ ರಾಯನು—"ಎನ್ನ ಹೃದಯದಲ್ಲಿ ವಾಸವಂ ಗೆಯ್ಯುತ್ತಿರುವ ಶಕುಂತಳೆಯೆ, ಕೇಳು. ನಿನ್ನಂತೆ ನಂಬಿಕೊಂಡಿರುವ ಎನ್ನ ಮನಸಂ ಇನ್ನೊಬ್ಬಸ್ತ್ರೀಯಲ್ಲಿ ಆಸಕ್ತಿಯುಳ್ಳದನ್ನಾಗಿ ನಿಶ್ಚಯಂ ಗೆಯ್ದೆಯಾದರೆ, ಎಲೆ ಮನೋ

ಹರನೇತ್ರವುಳ್ಳವಳೇ, ಮೊದಲೆ ಮನ್ಮಥನಿಂ ಬಹಳವಾಗಿ ಪಟ್ಟು ಬಿದ್ದಿರುವೆನು, ಮರಳಿ ನಿನ್ನ ವಾಕ್ಯದಿಂ ಅಧಿಕತಾಪವುಳ್ಳವನಾಗುವೆನು '' ಎನಲು ;

ಆ ಅನಸೂಯೆಯು—" ಎಲೈ ಮಿತ್ರನಾದ ಮಹಾರಾಯನೇ, ದೊರೆಗಳಾದವರು ಬಹುಜನ ಸ್ತ್ರೀಯರುಳ್ಳವರೆಂಬುದು ಲೋಕಪ್ರಸಿದ್ಧವಾಗಿರುವುದಾದ್ದಱಿಂ ದೀಶಕುಂತಲೆಯಂ ನಮಗೂ ಕಣ್ವಋಷಿ ಮೊದಲಾದ ಬಂಧುಗಳಿಗೂ ವ್ಯಸನವುಂಟಾಗದಂತೆ ಸಂರಕ್ಷಿಸಬೇಕು '' ಎನಲು ;

ಆರಾಯನು—"ಎಲೌ ಅನುಸೂಯೆಯೇ, ಬಹಳವಾಕ್ಯಂಗಳಂ ಪೇಳಿದ್ದಱಿಂ ಫಲವಿಲ್ಲ. ಎನಗೆ ಬಹುಜನ ಪತ್ನಿಯರಿದ್ದರೂ ಎನ್ನ ಕುಲಪ್ರತಿಷ್ಠೆಗೆ ಕಾರಣವಾದವಳು ಈ ಶಕುಂತಳೆಯೊಬ್ಬಳು ಸಮುದ್ರವೇ ಒಡ್ಯಾಣವಾಗಿರುವ ಭೂಮಿಯೊಂದು, ಇವು ಎರಡಲ್ಲದೆ ಇನ್ನಾವುದೂ ಎನಗೆ ಪ್ರೀತಿಕರವಾದುದು ಇಲ್ಲ '' ಎಂದು ನುಡಿಯಲು ;

ಆ ಸಖಿಯರೀರ್ವರು ರಾಯನಾಡಿದ ವಾಕ್ಯಕ್ಕೆ ಸಂತೋಷಯುಕ್ತರಾಗುತ್ತಿರಲು;

ಅಷ್ಟಱಲ್ಲೇ ಪ್ರಿಯಂವದೆಯು ಅನಸೂಯೆಯಂ ಕುಱಿತು, ನಾವಿಲ್ಲಿರಬಾರದೆಂದು ಕಣ್ಣುಸನ್ನೆಯಂ ಮಾಡಿ,—"ಎಲೆ ಅನಸೂಯೆ, ಈಮುಂಭಾಗದಲ್ಲಿ ಹುಲ್ಲೆಮಱಿಯು ತನ್ನ ತಾಯಂ ಕಾಣದೆ ನಾಲ್ಕುದಿಕ್ಕಂ ನೋಡುತ ವ್ಯಥೆಯಂ ಪೊಂದುತಿರುವುದು. ನಾವೀರ್ವರು ಪೋಗಿ ಅದನ್ನು ಅದಱ ತಾಯೊಡನೆ ಕೂಡಿಸಿ ಬರುವೆವು ನಡ '' ಎಂದು ಪೋಗುವುದಕ್ಕೆ ಉದ್ಯುಕ್ತರಾಗಲು;

ಶಕುಂತಲೆಯು ಪೋಗುತ್ತಿರುವ ಸಖಿಯರುಗಳಂ ಕುಱಿತು—" ಎಲಾ ಸಖಿಯರುಗಳಿರಾ, ನಾನು ರಕ್ಷಕರಿಲ್ಲದವಳಾದೆನು. ನಿಮ್ಮಿಬ್ಬರಲ್ಲಿ ಒಬ್ಬಳಾದರೂ ನಾನಿರುವ ಸ್ಥಾನಕ್ಕೆ ಬನ್ನಿರಿ '' ಎಂದು ಕರೆಯಲು ;

ಆ ಸಖಿಯರೀರ್ವರು ನಸುನಗುತ, " ಎಲೆ ಶಕುಂತಲೆ, ಪೃಥವೀಪತಿಯಾದ ದುಷ್ಯಂತರಾಯನೇ ನಿನ್ನ ಸಮೀಪದಲ್ಲಿರುವಲ್ಲಿ ನೀನು ರಕ್ಷಕರಿಲ್ಲವೆಂದು ಪೇಳುವ ವಾಕ್ಯವು ಯುಕ್ತವಲ್ಲ '' ಎಂದು ನುಡಿದು, ಶಕುಂತಲೆಯಿರುವ ಲತಾಗೃಹವಂ ಬಿಟ್ಟು ಪೋಗಲು;

ಶಕುಂತಲೆಯು, "ಮನದಲ್ಲನುರಾಗವಿದ್ದರೂ ಎನ್ನ ಸಖಿಯರು ಎನ್ನ ವಚನವನ್ನತಿಕ್ರಮಿಸಿ ಪೋಗುತ್ತಿರುವರು. ಅವರೊಡನೆ ನಾನೂ ಪೋಗುವೆನು'' ಎಂದು ಭ

ಯಪಟ್ಟು ಪೊಱಮಟ್ಟು ಪೋಗಲಿಚ್ಛೈಸಲಾರಾಯನು—“ಎಲೆ ಕೋಮಲಾಂಗಿಯೇ, ಸಮಸ್ತ ಪ್ರಕಾರವಾಗಿ ಉಪಚಾರವಂ ಗೆಯ್ಯುವ ನಾನು ನಿನ್ನ ಸಮೀಪದಲ್ಲಿರುವಾಗ್ಗೆ ಸಖಿಯರು ಪೋದರೆಂದು ವ್ಯಸನವಂ ಪೊಂದಬೇಡ. ಮತ್ತು ಶೀತಳವಾಗಿ ಸಮಸ್ತಾಯಾಸವಂ ಪರಿಹರಿಸುತ್ತಿರುವ ತಾವರೆದಳಗಳಿಂದಲೂ ತಾಳೆಗಱಿಗಳಿಂದಲೂ ರಚಿಸಿರುವ ಬೀಸಣಿಗೆಯಂಬೀಸುತ್ತ ತಂಗಾಳಿಯನ್ನುಂಟುಮಾಡುವೆನು. ಮತ್ತು ಎಲೆ ಕರಭೋರುವಾದ ಶಕುಂತಳೆಯೇ, ಎನ್ನ ತೊಡೆಗಳ ಮೇಲಿರಿಸಿಕೊಂಡು ತಾವರೆಯ ಪುಷ್ಪದಂತೆ ಕೆಂಪಾಗಿರುವ ನಿನ್ನ ಚರಣಂಗಳಂ ನನ್ನ ಕೈಗಳಿಂದೊತ್ತುವೆನು.” ಎಂದು ಸರಸೋಕ್ತಿಗಳಂ ನುಡಿಯಲಾಶಕುಂತಳೆಯು—“ಎಲೈ ಸ್ವಾಮಿಯೇ, ಈಗ ನೀವು ಪೇಳಿದ ಕಾರ್ಯಕ್ಕೆ ಒಡಂಬಟ್ಟು ಪೂಜ್ಯರಾದ ನಿಮ್ಮಲ್ಲಿ ಎನ್ನ ಶರೀರವಂ ಅಪರಾಧವುಳ್ಳದ್ದಾಗಿ ಮಾಡಲಾಱೆನು” ಎಂದು ನುಡಿದಾಪುಷ್ಪಶಯನದಿಂದೆದ್ದು ಪೋಗುತ್ತಿರಲಾರಾಯನು—“ಎಲೆ ಸುಂದರಾಂಗಿಯೇ, ಈಗ ಒಳ್ಳೇ ಮಧ್ಯಾಹ್ನಕಾಲವಾಗಿರುವುದು, ಸೂರ್ಯನು ತಪಿಸುತ್ತಿರುವನು. ಈವೇಳೆಯಲ್ಲಿ ಪೋಗಲಿಲಿಚ್ಛೈಸುತ್ತಿರುವ ನಿನ್ನವಸ್ಥೆಯನ್ನೇನೆಂದು ಪೇಳಲಿ? ಮೃದುವಾಗಿ ಶೀತಳವಾಗಿರುವ ಹೂವಿನ ಹಾಸಿಗೆಯಂ ಬಿಟ್ಟು, ಕಮಲದಳಗಳಿಂ ಮಾಡಿರುವ ಕುಚಗಳ ಹೊದಿಕೆಯಂ ಬಿಸುಟು, ಮನ್ಮಥಬಾಧೆಯಿಂ ಕೃಶಂಗಳಾದ ಅಂಗಂಗಳಿಂ ಯುಕ್ತಳಾಗಿ, ಸುಡುತ್ತಲಿರುವ ಬೇಸಗೆಯ ಬಿಸಲಿನಲ್ಲಿ ಹೇಗೆ ಪೋಗುವೆ?” ಎಂದು ನುಡಿದು, ಬಲಾತ್ಕಾರದಿಂ ಶಕುಂತಳೆಯಂ ಹಿಂದಿರುಗಿಸಲು; ಶಕುಂತಳೆಯು ರಾಯನಂ ಕುಱಿತು—“ಎಲೈ ಪುರುವಂಶೋತ್ಪನ್ನನಾದ ದುಷ್ಯಂತರಾಯನೇ, ನಿನ್ನ ಸೌಶೀಲ್ಯಾದಿಗುಣವಂ ಕೆಡಿಸದೆ ಸಂರಕ್ಷಣೆಯಂ ಮಾಡು. ತಂದೆಯಾದ ಕಣ್ವಋಷಿಯ ಅಜ್ಞೆಗೆ ಅಧೀನವಾದ ಎನ್ನ ಶರೀರಕ್ಕೆ ನಾನು ಭಾಧ್ಯಳಲ್ಲದೆ ಇರುವೆನು. ಬಲಾತ್ಕಾರವಂ ಗೆಯ್ಯುವುದು ಯುಕ್ತವಲ್ಲ” ಎಂದು ನುಡಿಯಲಾರಾಯನು—“ಎಲೆ ಕೋಮಲಾಂಗಿ, ನೀನು ಸಂಶಯವಂ ಪೊಂದುವುದಱಿಂ ಪ್ರಯೋಜನವಿಲ್ಲ. ಸಕಲಧರ್ಮವಂ ತಿಳಿದಿರುವ ನಿನ್ನ ತಂದೆಯಾದ ಕಣ್ವಋಷಿಯು ನಾವಿಬ್ಬರೂ ಅನುಕೂಲರಾಗಿರುವುದಂ ಕೇಡಾಗ್ಗೂ ಎನಗೆ ತಿಳಿಯದಂತೆ ಸಕಲಕಾರ್ಯಂಗಳಂ ನಡೆಸಿದರೆಂದು ದೋಷಗಣನೆಯಂ ನಮ್ಮಲ್ಲಿ ಮಾಡಲಾಱನು. ಮತ್ತು ಲೋಕದಲ್ಲಿ ಅನೇಕರಾದ ರಾಜಪುತ್ರಿಯರು ತಮ್ಮತಮ್ಮ ತಂದೆಗಳಿಗೆ ತಿಳಿಸದೆ ತಮಗೆ ಅನುರೂಪವಾದ ಪುರುಷರೊಡನೆ ಗಾಂಧರ್ವವಿವಾಹಿತರಾಗಿ ಆಮೇಲೆ ಅವರವರ ತಂದೆಗಳಿಂ ಬಹುಮಾನಯುಕ್ತರಾಗಿರುವರಾದ್ದಱಿಂದೀಗ ನೀನು ಎನಗೆ ಗಾಂಧರ್ವವಿವಾಹದಿಂ

ಪತ್ನಿಯಾದಲ್ಲಿ ಇದಂ ತಿಳಿದ ಕಣ್ವಋಷೀಶ್ವರನು ಅಧಿಕಸಂತುಷ್ಟಚಿತ್ತನಾಗುವನು'' ಎಂದು ಪೇಳಲಾಶಕುಂತಳೆಯು ಹೃದಯದಲ್ಲಿ ಅಧಿಕಸಂತೋಷವಿದ್ದರೂ ನೂತನ ಯೌವನವತಿಯುಳಾದ್ದರಿಂ ಲಜ್ಜೆಯಿಂ ಯುಕ್ತಳಾಗಿ, ''ಎಲೈ ಸ್ವಾಮಿಯೇ, ಎನ್ನಂ ಬಿಟ್ಟು ಕಳುಹು. ನಮ್ಮ ಸಖಿಯರನ್ನೋಡಬೇಕು'' ಎಂದು ನುಡಿಯಲಾ ರಾಯನು– ''ಎಲೆ ಕೃಶಾಂಗಿಯೇ, ಭ್ರಮರವು ನೂತನವಾದ ಪುಷ್ಪಮಕರಂದವಂ ಪಾನವಂಗೆ ಯ್ಯುವಂತೆ ಅತಿಕೋಮಲವಾದ ನಿನ್ನ ಅಧರಸುಧೆಯಂ ದಯದಿ ಯುಕ್ತನಾಗಿ ಪಾನ ವಂ ಗೆಯ್ದ ಮೇಲೆ ಬಿಡುವೆನು. ಮತ್ತು ನಿನ್ನಂ ಆಶ್ರಯಿಸಿ ಬಂದಿರುವ ನನ್ನಂ ನಿರಾಕ ರಿಸುವುದು ನೀತಿವಂತಳಾದ ನಿನಗೆ ಯುಕ್ತಮಲ್ಲ'' ಎಂದು ದೀನೋಕ್ತಿಗಳಂ ಪೇಳಲಾ ಶಕುಂತಳೆಯು ರಾಜಪುತ್ರಿಯಾಗಿ ಅಧಿಕಬುದ್ಧಿಶಾಲಿಯಾದ್ದರಿಂ ಮನದಲ್ಲೊಂ ದಾಲೋಚನೆಯಂಗೆಯ್ದು ಆರಾಯನಂ ಕುರಿತು–''ಎಲೈಮಹಾರಾಜನೇ, ಕೇಳು. ನೀನು ಅಪ್ಪಣೆಯನ್ನಿತ್ತಂತೆ ನಾನು ನಡೆದುಕೊಳ್ಳುವೆನು. ಆದರೆ ಎನ್ನ ಗರ್ಭದಲ್ಲಿ ಪುಟ್ಟಿದ ಪುತ್ರನಿಗೆ ಸಮಸ್ತರಾಜ್ಯಕ್ಕೂ ದೊರೆಯಾಗುವಂತೆ ಪಟ್ಟಾಭಿಷೇಕವಂ ಗೆಯ್ಯುವೆನೆಂದು ನಂಬುಗೆಯನ್ನಿತ್ತೆಯಾದರೆ ಎನ್ನ ತಂದೆಯಾದ ಕಣ್ವಮುನೀಶ್ವರನಿಗೆ ತಿಳಿಸದೆ ಗಾಂಧರ್ವವಿವಾಹಕ್ಕೆ ಒಡಂಬಡುವೆನು'' ಎನ್ನಲಾರಾಯನು ಅತಿಸಂತೋಷ ಯುಕ್ತನಾಗಿ ಆ ಶಕುಂತಲೆಯು ಪೇಳಿದಂತೆ, ಅಷ್ಟದಿಕ್ಪಾಲಕರು, ಸೂರ್ಯ ಚಂದ್ರರು, ಪಂಚಭೂತಗಳು ಮೊದಲಾದ ದೇವತೆಗಳಂ ಸಾಕ್ಷಿಗೆಯ್ದು, ಪ್ರಮಾ ಣವಂ ಮಾಡಿಕೊಟ್ಟು, ತನ್ನ ಸೇನಾಕಟಕದಲ್ಲಿರ್ದ ಪುರೋಹಿತನಂ ಕರೆಸಿ, ವಿಧಿ ಪೂರ್ವಕವಾಗಿ ಗಾಂಧರ್ವವಿವಾಹಮಂ ವಿರಚಿಸಿ, ಆ ಲತಾಗೃಹದ ಪುಷ್ಪದ ಹಾಸಿಗೆಯಲ್ಲಿ ಸುಖರತಿಯಂ ಗೆಯ್ದು ಸಂತುಷ್ಟನಾಗಿರುವಲ್ಲಿ–

ಅಷ್ಟರಲ್ಲೇ ಕಣ್ವಮುನೀಶ್ವರನ ತಂಗಿಯಾದ ಗೌತಮಿಯೆಂಬುವಳು, ಶಕುಂತಳೆಯು ಆಯಾಸದಿಂದಿರುವಳೆಂಬ ವಾರ್ತೆಯಂ ಕೇಳಿ, ಅವಳಂ ನೋಡುವೆ ನೆಂದು ಬರುತ್ತಿರಲು, ಸಖಿಯರೀರ್ವರವಳಂ ಕಂಡು—''ಎಲೆ ಚಕ್ರವಾಕಸ್ತ್ರೀಯೇ, ರಾತ್ರೆ ಬರುವುದು, ನೀನು ನಿನ್ನ ಪ್ರಿಯನಂ ಮುಂತೆಯಾಗಿ ಕರೆದುಕೊಳ್ಳುವು ದು'' ಎಂದು ನುಡಿಯಲು;

ಶಕುಂತಲೆಯು ತನ್ನ ಸಖಿಯರು ಪೇಳ್ವ ಸಂಕೇತವಚನವಂ ಕೇಳಿ, ''ಎಲೈ ಪುರುವಂಶೋತ್ಪನ್ನನಾದ ಮಹಾರಾಯನೇ, ಎನ್ನ ಶರೀರಕ್ಕೆ ಬಹಳ ಸಂತಾ ಪವುಂಟಾದ ವಾರ್ತೆಯಂ ಪೂಜ್ಯಳಾದ ಗೌತಮಿಯು ತಿಳಿದು ಎನ್ನ ದೇಹಸ್ಥಿ

ತಿಯುಂ ವಿಚಾರಿಸುವುದಕ್ಕೆ ಬರುವಂತೆ ತೋಱುವುದು. ನೀನು ಜಾಗ್ರತೆಯಾಗಿ ಒತ್ತಿನಲ್ಲಿರುವ ವೃಕ್ಷಂಗಳ ಮಱೆಯುಂ ಸೇರುವುದು'' ಎಂದು ನುಡಿಯಲಾ ವಾಕ್ಯಕ್ಕೆ ರಾಜನು ಅದೇ ರೀತಿಯಿಂದಾಸ್ಥಳದಿಂದೆದ್ದು ಅತಿಖೇದಾನ್ವಿತನಾಗಿ ವೃಕ್ಷಗಳ ಮಱೆಯಂ ಸೇರುತಿರುವಷ್ಟಱಲ್ಲಿ ;

ಗೌತಮಿಯು ಹಸ್ತದಲ್ಲಿ ಜಲಪಾತ್ರೆಯಂ ಪಿಡಿದು ಸಖಿಯರಿಂದೊಡ ಗೂಡಿ ಶಕುಂತಲೆಯು ಇರುವ ಲತಾಗೃಹವಂ ಪ್ರವೇಶವಂ ಗೆಯ್ದು, ಅವಳ ಸಮೀಪವಂ ಸೇರಿ,—'' ಎಲೆ ಪುತ್ರಿ, ಶಕುಂತಲೆ, ನಿನ್ನ ಶರೀರವು ತಾಪರಹಿತ ಮಾಗಿರುವುದೆ ? '' ಎಂದು ಕೇಳಲು;

ಶಕುಂತಳೆಯು ''ಎಲೌ ಪೂಜ್ಯಳಾದ ಗೌತಮಿಯೇ, ಇನ್ನೂ ಸಂತಾ ಪವಿರುವುದು '' ಎಂದು ನುಡಿಯಲು;

ಗೌತಮಿಯು—''ಎಲೆ ಪುತ್ರಿ, ಈಗ ನಾನು ತಂದಿರುವ ಶಾಂತಿಕರವಾದ ಈ ದರ್ಭೋದಕದಿಂ ನಿನ್ನ ಸಮಸ್ತ ಸಂತಾಪವು ಪರಿಹರವಾಗುವುದು'' ಎಂದು ನುಡಿದು, ಕುಶೋದಕವನ್ನಾ ಶಕುಂತಳೆಯ ಶಿರಸ್ಸಿನಲ್ಲಿ ಪ್ರೋಕ್ಷಣೆಯಂ ಗೆಯ್ದು, ''ಎಲೌ ಬಾಲೆ ಯೇ, ಈಗ ಸಾಯಂಕಾಲವಾದುದು, ನಮ್ಮ ಪರ್ಣಶಾಲೆಗೆ ಪೋಗುವ ನಡೆ'' ಎಂದು ನುಡಿದು, ಆ ಸ್ಥಳದಿಂದೆದ್ದು ಮುಂದಡಿಯಿಡಲು, ಶಕುಂತಲೆಯು ಖಿನ್ನಹೃದಯ ಳಾಗಿ ತನ್ನ ಮನವಂ ಕುಱಿತು—'' ಎಲೈ ಮನವೇ, ಮೊದಲೇ ನಿನ್ನ ಬಯಕೆಯು ಆಯಾಸಮಿಲ್ಲದಂತೆ ಕೈಗೂಡಿರ್ದರೂ ಇನ್ನೂ ಚಾಪಲ್ಯವಂ ಪೊಂದುತ್ತಿರುವೆ. ಈಗ ಗೌತಮಿಯು ಬಂದಿದ್ದುದಱಿಂದುಂಟಾದ ರಾಯನಗಲಿಕೆಯು ಚಿಂತೆಯಂ ಕೂಡಿರುವ ನಿನಗೆ ಮರಳಿಯಾದುಷ್ಯಂತರಾಯನ ಸಂಗದಿಂ ತಾಪಪರಿಹಾರವು ಎಲ್ಲಿ ಉಂಟಾದೀತು '' ಎಂದು ತನ್ನೊಳು ನುಡಿದುಕೊಂಡು, ತಾನಿರ್ದ ಲತಾ ಗೃಹದ ಬಳ್ಳಿಗಳ ಸಮೂಹವಂ ನೆವಗೆಯ್ದು, '' ಸಂತಾಪಪರಿಹಾರಕವಾದ ಲತಾ ವಲಯವೇ, ಮರಳಿ ನಿನ್ನಂ ಯಾವಾಗ ನೋಡುವೆನೋ ಎಂದು ಇಚ್ಛೈಸುವೆನು'' ಎಂದು ಮರದ ಮಱೆಯಲ್ಲಿರ್ದ ರಾಯುಂಗೆ ತಾನು ಪೋಗುವ ತನ್ನಭಿಪ್ರಾಯುವಂ ಸೂಚಿಸಿ, ಆಸ್ಥಾನವಂ ಬಿಟ್ಟು ಪೋಗಲಾಱದೆ, ಅಧಿಕದುಃಖದಿಂ ಕಂಬನಿಯಂ ತುಂಬಿ, ಅನಸೂಯೆ ಪ್ರಿಯಂವದೆಯರಿಂದೊಡಗೂಡಿ ಗೌತಮಿಯನ್ನನುಸರಿಸಿ ಪೋಗಲು ;

ರಾಯನು ಅತ್ಯಂತ ವ್ಯಸನಾತುರನಾಗಿ, ಸರ್ವಸ್ವವಂ ಪೋಗಲಾಡಿಸಿಕೊಂಡ ಪುರುಷನಂತೆ ದಿಗ್ಭ್ರಾಂತಿಯಂ ಪೊಂದಿ, ಆ ಶಕುಂತಳೆಯೊಡನೆ ರತಿಗೆಯ್ದ ಸ್ಥಾನಕ್ಕೆ ಬಂದು, ತನ್ನ ಮನದ ಒಯಕೆಗಳೆಲ್ಲವು ವಿಘ್ನವುಳ್ಳವಾದುವೆಂದು ನಿಟ್ಟುಸಿರಂ ಬಿಟ್ಟು, ತನ್ನ ಬೆರಳುಗಳಂ ಬಾರಿಬಾರಿಗೂ ಮರೆಗೆಯ್ಯುತ್ತಿರುವ ತುಟಿಯುಳ್ಳ, ಒಲ್ಲೆಂಬ ತೊದಲುನುಡಿಯಿಂ ಮನೋಹರವಾಗಿ, ಮರಳಿಮರಳಿ ತನ್ನ ಭುಜಗಳಿಂ ಮರೆಗೆಯ್ಯುತ್ತಿರುವ, ಆ ಮನೋಹರನೇತ್ರೆಯಾದ ಆ ಶಕುಂತಲೆಯ ಮುಖವಂ ಅತ್ಯಂತಪ್ರಯಾಸದಿಂದೆತ್ತಿದೆನು. ಚೆನ್ನಾಗಿ ಬಾರಿಬಾರಿಗೂ ಚುಂಬನವಂ ಗೆಯ್ಯದೆ ಹೋದೆನು '' ಎಂದು ವ್ಯಸನಪರನಾಗಿ, "ಈಗ ನಾನು ಎಲ್ಲಿ ಪೋಗುವೆನು ? ಎನ್ನ ಮನೋವ್ಯಥೆಯನ್ನಾರು ಪರಿಹರಿಸುವರು ?'' ಎಂದು ನುಡಿದು, "ಆ ಶಕುಂತಲೆಯಿಂದನುಭವಿಸಲ್ಪಟ್ಟ ಈವಾಧವೀಮಂಟಪದಲ್ಲೇ ಒಂದುಮುಹೂರ್ತವಿರುವೆನು'' ಎಂದು ಸುತ್ತಲೂ ನೋಡಿ,–"ಎನ್ನ ಪ್ರಾಣಪ್ರಿಯಳಾದ ಶಕುಂತಲೆಯು ರಮಣೀಯವಾದ ಚಂದ್ರಕಾಂತಶಿಲೆಯ ಮೇಲೆ ವಿರಚಿತವಾಗಿ ಮನ್ಮಥತಾಪದಿಂ ಎನ್ನ ಕಾಂತೆಯು ಶರೀರವಂ ಹೊರಳಿಸಿದ್ದರಿಂ ಕೆಸರಿರುವ ಪುಷ್ಪಶಯ್ಯೆಯನ್ನೂ, ಎನ್ನ ಬಳಿಗೆ ಕಳುಹಿಸಲೋಸುಗ ತಾವರೆಯ ದಳದಲ್ಲಿ ತನ್ನುಗುರುಗೊನೆಯಿಂ ಬರೆದಿರುವ ಮನ್ಮಥಲೇಖನಪತ್ರಿಕೆಯನ್ನೂ, ಸುರತಕಾಲದಲ್ಲಿ ಕೋಮಲವಾದ ಅವಳ ಕೈಯಿಂ ಜಾರಿಬಿದ್ದಿರುವ ತಾವರೆದಂಟಿನ ತೋಳ್ವಳೆಯನ್ನೂ ನೋಡುತ್ತಿರುವ ಎನಗೆ ಅಧಿಕಾನಂದವುಂಟಾಗುತ್ತಿರುವುದಾದ್ದರಿಂ ಎಲೆಲತಾಗೃಹವು ಶಕುಂತಲೆಯಿಂ ವಿರಹಿತವಾಗಿದ್ದರೂ ಇದಂ ಬಿಟ್ಟು ಜಾಗ್ರತೆಯಾಗಿ ಪೋಗುವೆನೆಂದರೆ ಕೈಕಾಲುಗಳು ಒಳಲಿಬೆಂಡಾಗುವುದರಿಂ ಸಮರ್ಥನಾಗಲಾರೆನು'' ಎಂದು ಹೇರಳವಾದ ಆಯಾಸವಂ ಪೊಂದುತ್ತಿರಲು ;

ಅಷ್ಟರಲ್ಲೇ ಋಷಿಗಳು ಸಾಯಂಕಾಲದ ಯಜ್ಞಕಾರ್ಯವು ಸಮಾಪ್ತಿಯಂ ಪೊಂದುತ್ತಿರುವಲ್ಲಿಯೇ ಯಜ್ಞಶಾಲೆಯಲ್ಲಿರುವ ಜಗಲಿಯ ಸುತ್ತಲೂ ಅತಿ ಭಯವನ್ನುಂಟುಮಾಡುತ ಸಂಧ್ಯಾಕಾಲದ ಮೇಘದಂತೆ ಹೊಗೆಯ ಬಣ್ಣವುಳ್ಳ ರಾಕ್ಷಸರುಗಳ ಛಾಯೆಯು ಬೀಳುವುವೆಂದು ಕೂಗಲು;

ರಾಯನು ಆ ಶಬ್ದವಂ ಕೇಳಿ, "ಆ ರಾಕ್ಷಸರಂ ಸಂಹರಿಸಿ ಋಷಿಗಳಿಗೆ ಸುಖವನ್ನುಂಟುಮಾಡಿ ಪುರವಂ ಕುರಿತು ಪೋಗುವೆನು'' ಎಂದಾತಪೋವನಕೆ ಪೋಗಲಿಚ್ಛೈಸುತ್ತಿರ್ದನು.

ಎಂಬಲ್ಲಿಗೆ

ಗದ್ಯ—ಚಂಡಕರಮಂಡಲೋಚ್ಚಂಡತೇಜಃಪ್ರಕಾಂಡಕಾಂಡಷಂಡಖಂಡಿತಾಖಂಡ ಶೌರ್ಯ ಪರಿಮಂಡಿತ ಭಂಡನೋದ್ದಂಡಾರಿಮಂಡಲಕಂಡೂಲದೋರ್ದಂಡಪಾಂಡಿತ್ಯ ಪಾಂಡುರುಚಿಖಂಡಡಿಂಡೀರಪುಂಡರೀಕಪರಿಪಾಂಡುರಯಶಃಪಿಚಂಡಿಲ ಬ್ರಹ್ಮಾಂಡಭಾಂಡೋದ್ಘಟ ಕಾಲಕೂಟ ಪ್ರತಿಭಟ ಕಟುಕಪಟ ನಿಶಾಟಕೂಟ ಪಾಟನಲಂಪಟನಿಟಿಲಪುಟಘಟಿತ ವಿಕಟ ಕೃಪೀಟಯೋನಿ ಕುಟಿಲಮೋಹಾಂಧಕಾರಚ್ಛಟಾವಿಘಟನ ಪಟುನಟನ ಮಹಾನಟ ಮುಕುಟತಟ ಪರ್ಯಟತ್ತಟಿನೀತಟಾಂತರಿಂಗದಭಂಗೋತ್ತುಂಗತರಂಗ ಸಂಗರಭಂಗಸಂಭ್ರಮೋಜ್ಜೃಂಭಮಾಣ ಗಂಭೀರವಾಗ್ಗುಂಭ ಸಂಭಾವಿತ ಗರನಗರ ವರನಿಲಯ ಚಂದ್ರಚೂಡ ಚರಣಾರವಿಂದ ಸೇವಾಮರಂದ ನಿರಂತರನಿಷೇವಣ ಸ್ವಯಂವೃತಕವಿತಾವಧೂರತ್ನ ರಾಜಾಧಿರಾಜ ಮಹಾರಾಜ ಶ್ರೀಚಾಮರಾಜಪುತ್ರಾತ್ರೇಯಸಗೋತ್ರ ಪವಿತ್ರಚರಿತ್ರ ಶಂಖ ಚಕ್ರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ನರಪತಿಬಿರುದ ಶ್ರೀಚಾಮುಂಡಿಕಾವರಪ್ರಸಾದಲಬ್ಧ ಮಹೀಶೂರಮಹಾಸಂಸ್ಥಾನದೇದೀಪ್ಯಮಾನಕುಲಕ್ರಮಾಗತದಿವ್ಯರತ್ನಸಿಂಹಾಸನಾರೂಢಶ್ರೀಕೃಷ್ಣರಾಜಕಂಠೀರವರು ಸರಸಜನಾನಂದಕರವಾಗಿ ಲೋಕೋಪಕಾರಾರ್ಥವಾಗಿ ನವರಸಭರಿತವಾಗಿ ಕರ್ಣಾಟಕಭಾಷೆಯಿಂ ವಿರಚಿಸಿದ ಕೃಷ್ಣರಾಜವಾಣೀವಿಲಾಸ ರತ್ನಾಕರವೆಂಬ ಶಾಕುಂತಲನಾಟಕದ ನವೀನ ಟೀಕೆಯಲ್ಲಿ ದುಷ್ಯಂತರಾಯನು ಶಕುಂತಲೆಯಂ ಗಾಂಧರ್ವವಿವಾಹದಿಂ ವಿವಾಹಿತಳಂ ಮಾಡಿಕೊಂಡು ಅವಳನ್ನಗಲಿ ಚಿಂತೆಯೊಡಗೂಡಿ ತಪೋವನಕ್ಕೆ ರಾಕ್ಷಸನಿಗ್ರಹಾರ್ಥವಾಗಿ ಪೋಗಲಿಚ್ಛೈಸುತ್ತಿರ್ದನೆಂಬ ದ್ವಿತೀಯಕಲ್ಲೋಲದಲ್ಲಿ ಚತುರ್ಥತರಂಗಂ ಸಮಾಪ್ತಂ

—ದ್ವಿತೀಯಕಲ್ಲೋಲಂ ಸಂಪೂರ್ಣಂ—

ತೃತೀಯಕಲ್ಲೋಲಂ

ಅನಂತರದಲ್ಲಾ ಮಹಾರಾಜನಾದ ದುಷ್ಯಂತರಾಜನು ಆ ತಪೋವನವಂ ಪ್ರವೇಶಿಸಿ, ಯಜ್ಞವಿಘಾತಕರಾದ ರಾಕ್ಷಸರಂ ನಿಗ್ರಹಿಸಿ, ಆ ಆಶ್ರಮವಾಸಿಗಳಾದ ಋಷಿಗಳ ಆಶೀರ್ವಾದವಂ ಕೈಕೊಂಡು, ಚತುರಂಗಬಲದೊಡಗೂಡು, ಮಣಿಮಯರಥಾರೂಢನಾಗಿ, ತನ್ನ ಪ್ರತಿಷ್ಠಾನನಗರವಂ ಕುರಿತು ಬರುತ, ಶಕುಂತಲೆಯಂ ಹೃದಯದಲ್ಲಿ ಸ್ಮರಿಸುತ, ತಾನು ಆ ಶಕುಂತಲೆಯೊಡನೆ ರತಿಗೆಯ್ದುದನ್ನಾ ಮುನೀಶ್ವರನು ಜ್ಞಾನದೃಷ್ಟಿಯಿಂ ತಿಳಿದು ಸಂತುಷ್ಟನಾಗುವನೋ ಕೋಪಾನ್ವಿತನಾಗಿ ಶಾಪವನ್ನೀಯ್ಯುವನೋ ತಿಳಿಯದೆಂದು ಮನದಲ್ಲಿ ಕಳವಳಬಡುತ, ಆ ಪುರವಂ ಪ್ರವೇಶಿಸಿ, ಸಮಸ್ತ ಸಾಮಾಜಿಕರುಗಳಿಗೆ ತಮ್ಮತಮ್ಮ ನಿವಾಸಂಗಳಿಗೆ ಅಪ್ಪಣೆಯನ್ನಿತ್ತು, ಅಂತಃಪುರವಂ ಪೊಕ್ಕು, ತನ್ನ ತಾಯಿಯ ಚರಣಪಂಕಜಕ್ಕೆ ನಮಸ್ಕಾರವಂ ಗೆಯ್ದು, ವಿನಯಾನ್ವಿತನಾಗಿ ಮಧುರಾಲಾಪವಂ ವಿರಚಿಸುತ್ತಿರಲು—

ಇತ್ತಲಾ ಶಕುಂತಲೆಯು ಪೂಜ್ಯಳಾದ ಗೌತಮಿಯೊಡನೆ ಕಣ್ವಮುನೀಶ್ವರನ ಪರ್ಣಶಾಲೆಯಂ ಸೇರಲು ;

ಅನಸೂಯೆ ಪ್ರಿಯಂವದೆಯರೀರ್ವರು ಪರ್ಣಶಾಲೆಯ ಸಮೀಪದಲ್ಲಿರುವ ವನಕ್ಕೆ ದೇವತಾರ್ಚನೆಗೋಸುಗ ಪುಷ್ಪವಂ ಕೊಯ್ಯುತ್ತ, ಅನಸೂಯೆಯು ಪ್ರಿಯಂವದೆಯಂ ಕುರಿತು “ ಎಲೆ ಪ್ರಿಯಂವದೆಯೇ, ನಮ್ಮ ಶಕುಂತಲೆಯು ಗಾಂಧರ್ವವಿವಾಹವಿಧಾನದಿಂ ಮದುವೆಯಾಗಿ ಅನುರೂಪನಾದ ಮಹಾರಾಜನಂ ಪೊಂದಿದಳೆಂದು ಎನ್ನ ಮನವು ಅತಿ ಸಂತುಷ್ಟವಾಗಿರುವುದು. ಹಾಗಾದರೂ ಒಂದು ಕಾರ್ಯಮಾತ್ರ ಯೋಚಿಸತಕ್ಕುದಿರುವುದು ” ಎನಲು;

ಪ್ರಿಯಂವದೆಯು “ ಎಲೆ ಸಖೀ, ಆ ಯೋಚಿಸತಕ್ಕ ಕಾರ್ಯವೇನು ? ” ಎಂದು ಕೇಳಲು;

ಆ ವಾಕ್ಯಕ್ಕೆ ಅನಸೂಯೆಯು “ ಈಗ ಆ ರಾಜಶ್ರೇಷ್ಠನಾದ ದುಷ್ಯಂತರಾಯನು ರಾಕ್ಷಸರಂ ನಿಗ್ರಹಿಸಿ, ಯಜ್ಞಸಂಪೂರ್ತಿಯಂ ಗೆಯ್ದು, ಋಷಿಗಳಾಜ್ಞೆಯಂ ಪಡೆದು, ತನ್ನ ಪುರವಂ ಪ್ರವೇಶಂಗೆಯ್ದು, ಅಂತಃಪುರವಂ ಸೇರಿದವನಾಗಿ, ಇಲ್ಲಿ ನಮ್ಮ ಶಕುಂತಲೆಯೊಡಗೂಡಿದ ವೃತ್ತಾಂತವಂ ಸ್ಮರಿಸುವನೋ ತನ್ನ ಸ್ತ್ರೀಯರುಗಳಂ ಬೆರೆದು ಇವಳಂ ಮರೆಯುವನೋ ತಿಳಿಯದು ” ಎನಲು;

ಪ್ರಿಯಂವದೆಯು—" ಎಲೆ ಸಖಿಯೇ, ನೀನು ಚಂಚಳಾಗಬೇಡ. ಮಹಾರಾಜನಾದ ಆ ದುಷ್ಯಂತರಾಜನ ಆಕಾರವಿಶೇಷವು ಪರಿಭಾವಿಸಿ ನೋಡಿದ್ದಲ್ಲಿ ಗುಣಕ್ಕೆ ವಿರೋಧವಂ ಮಾಡಲಾಱದಾಗಿ ತೋಱುವುದು. ಆದರೆ ತಂದೆಯಾದ ಕಣ್ವ ಮುನೀಶ್ವರನು ಈ ಗಾಂಧರ್ವವಿವಾಹದ ವೃತ್ತಾಂತವಂ ಕೇಳಿ ಏನು ಮಾಡುವನೋ ತಿಳಿಯದು " ಎಂದು ನುಡಿಯಲು;

ಅನಸೂಯೆಯು—" ಎಲೆ ಪ್ರಿಯಂವದೆ, ನಮ್ಮ ಶಕುಂತಲೆಗೆ ಗಾಂಧರ್ವವಿವಾಹವಾದುದು ನಮಗೆ ಹೇಗೆ ಸಮ್ಮತವೋ ಹಾಗೆ ಆ ಕಣ್ವಮುನೀಶ್ವರನಿಗೂ ಸಮ್ಮತವಾಗಿರುವುದು " ಎನಲು;

ಪ್ರಿಯಂವದೆಯು—"ನಮಗೆ ಸಮ್ಮತವಾದರೆ ಆ ಋಷಿಗೆ ಎಂತು ಸಮ್ಮತವಾಗುವುದು ? ಪೇಳು " ಎನಲು;

ಅನಸೂಯೆಯು—" ಎಲೆ ಪ್ರಿಯಂವದೆ, ಸದ್ಗುಣಶಾಲಿಯಾದ ಸತ್ಕುಲದಲ್ಲಿ ಪುಟ್ಟಿ ರೂಪಯೌವನಶಾಲಿಯಾದ ವರನಿಗೆ ಈ ಶಕುಂತಲೆಯಂ ಕೊಟ್ಟು ವಿವಾಹವಂ ಗೆಯ್ಯಬೇಕೆಂದು ಮೊದಲೇ ತಂದೆಯಾದ ಕಣ್ವಋಷಿಗೆ ಸಂಕಲ್ಪವಿರ್ದುದಷ್ಟೆ. ಅವನ ಮನದಲ್ಲಿರ್ದ ಕಾರ್ಯವಂ ದೈವವೇ ಮಾಡಿದುದಾದ್ದಱಿಂದ ಪ್ರಯಾಸವಿಲ್ಲದೆ ಆ ಮುನಿಯು ಕೃತಾರ್ಥನಾದನು "ಎಂದು ನುಡಿಯಲು;

ಆ ವಾಕ್ಯವಂ ಕೇಳಿ ಪ್ರಿಯಂವದೆಯು—" ಎಲೆ ಸಖಿಯೆ, ಅದಂತಿರಲಿ. ಈಗ ಪೂಜಾಕಾರ್ಯಕ್ಕೋಸುಗ ಪುಷ್ಪಗಳಂ ಕೊಯ್ದಿರುವೆಯೋ ಏನು ? " ಎಂದು ಕೇಳಲು;

ಆ ಅನಸೂಯೆಯು— " ಎಲೆ ಪ್ರಿಯಂವದೆಯೇ, ಈಗ ಕೊಯ್ದಿರುವ ಪುಷ್ಪಗಳಿಂದಾಶಕುಂತಲೆಯು ಅನುರೂಪನಾದ ಪುರುಷನು ದೊರಕಲೆಂದು ಪೂಜಿಸುತಿರ್ದ ಸೌಭಾಗ್ಯಗೌರಿಯಂ ಪೂಜಿಸಬೇಕು " ಎನ್ನಲು;

ಆ ವಾಕ್ಯಕ್ಕೆ ಪ್ರಿಯಂವದೆಯು ಗೌರಿಯ ಪೂಜೆಯಂ ಗೆಯ್ಯುವುದು ಸ್ತ್ರೀಯರಿಗೆ ಮುಖ್ಯವಾದ ಕಾರ್ಯವೆಂದು, ಅನುಮತಿಸಿ, ಸರಸಾಲಾಪವಂ ಗೆಯ್ಯುತ್ತಿರಲು—

ಅಷ್ಟಱಲ್ಲೀ ಏನೋ ಒಂದು ಶಬ್ದವುಂಟಾಗಲಾಅನಸೂಯೆಯು ಕಿವಿಗೊಟ್ಟಾ ಶಬ್ದವಂ ಕೇಳಿ, " ಎಲೆ ಪ್ರಿಯಂವದೆಯೇ, ಯಾರೋ ಕೆಲವು ಅತಿಥಿಗಳು ನಮ್ಮಾಶ್ರಮಕ್ಕೆ ಬಂದಂತೆ ತೋಱುವುದು. ನಮ್ಮ ಶಕುಂತಲೆಯು ಪರ್ಣಶಾಲೆಯಲ್ಲಿ ಶರೀರದಿಂದಿರುವಳಲ್ಲದೆ ತನ್ನ ಮನದಿಂ ಕೂಡಿರಳಾದ್ದಱಿಂ ಬಂದ ಅತಿಥಿಗೆ ಸತ್ಕಾರವಂ ಮಾಡುವಳೋ ವ್ಯಸನದಿಂ ಸುಮ್ಮನಿರುವಳೋ ತಿಳಿಯದು. ಈಗ

ನಾವು ಕೊಯ್ದಿರುವ ಪುಷ್ಪಗಳೇ ಸಾಕು, ನಡೆ'' ಎಂದು ನುಡಿದು, ಪೊಱಮಟ್ಟು ಬರುತ್ತಿರಲು;

ಅಷ್ಟಱಲ್ಲೇ ದುರ್ವಾಸಋಷೀಶ್ವರನು-''ಎಲೆ ಅತಿಥಿಗಳಿಗೆ ಅಪಮಾನವಂ ಗೆಯ್ಯುವ ಶಕುಂತಲೆಯೇ, ನೀನು ಯಾವ ಪದಾರ್ಥದಲ್ಲಿಯೂ ಮನವನ್ನಿರಿಸದೆ, ಬಂದಿರುವ ತಪಸ್ವೀ ದ್ರವ್ಯವಾಗುಳ್ಳ ನಮ್ಮಂ ತಿಳಿಯದೆ, ಏಕಾಗ್ರಚಿತ್ತಳಾಗಿ ಯಾವ ಪುರುಷನಂ ಮನದಲ್ಲಿ ಚಿಂತಿಸುತ್ತಿರುವೆಯೋ, ಮದ್ಯಪಾನದಿಂದ ಮತ್ತನಾದ ಪುರುಷನು ಪೂರ್ವದಲ್ಲಿ ನಡೆದ ವೃತ್ತಾಂತವಂ ಹೇಗೆ ಮಱೆಯುವನೋ, ಹಾಗೆ ಆ ಪುರುಷನು ಎಷ್ಟುಪ್ರಕಾರವಾಗಿ ಮೊದಲು ನಡೆದ ಗುಱುತಿನ ವಾಕ್ಯವಂ ನೀನು ಪೇಳಿದಾಗ್ಯೂ ನಿನ್ನಂ ಮಱೆಯಲಿ!'' ಎಂದು ಶಾಪವಂ ಈಯಲು;

ಆ ಕರ್ಣಶೂಲದಂತಿರುವ ವಾಕ್ಯವಂ ಕೇಳ್ದು ಅನಸೂಯೆಯು ಹಾಹಾಕಾರವಂ ಗೆಯ್ದು, ''ಅತಿ ಕಷ್ಟಕಾರ್ಯವು ಬಂದುದು! ನಾನು ಯೋಚಿಸುತಿರ್ದಂತಾದುದು! ಪೂಜಾಯೋಗ್ಯನಾದ ಯಾವ ಮಹಾಪುರುಷನು, ಸತ್ಕಾರವಂ ಮಾಡದೆ ಅಪರಾಧವಂ ಗೆಯ್ದುದಱಿಂದ, ಈ ರೀತಿಯಿಂ ಶಪಿಸಿದನೊ?'' ಎಂದು ನುಡಿಯುತ್ತಾ ಬಂದು, ಮುಂಗಡೆಯಲ್ಲಿ ಅತಿಕೋಪಾಕ್ರಾಂತನಾಗಿ ಪೋಗುತ್ತಿರುವ ದುರ್ವಾಸಋಷಿಯಂ ನೋಡಿ, ''ಯಾವ ಪುರುಷನಲ್ಲಿ ಅಪರಾಧವಂ ಗೆಯ್ದಳೋ ಎನುತಿರ್ದೆನು. ಇವನು ಶೀಘ್ರಕೋಪಿಯಾದ ದುರ್ವಾಸಋಷಿಯಾಗಿರುವನು. ಸಮಸ್ತರಿಗೂ ಭಯಂಕರವಾಗುವ ಶಾಪವನ್ನಿತ್ತು ಅತಿವೇಗದಿಂ ತಡೆಯುವುದಕ್ಕಾಗದ ಗತಿಯಿಂ ಪೋಗುತ್ತಿರುವನು. ಯಾವ ಪುರುಷನಾಗಲಿ ಬೆಂಕಿಯು ದೆಸೆಯಿಂ ತನ್ನ ದೇಹವಂ ದಹಿಸಿಕೊಳ್ಳುವುದಕ್ಕೆ ಹೇಗೆ ಯೋಗ್ಯನಾಗಲಾಱನೋ ಆರೀತಿಯಿಂ ಅಗ್ನಿಯಂತಿರುವ ದುರ್ವಾಸನಂ ಸೇರುವುದಕ್ಕೆ ಯಾವನೂ ಸಮರ್ಥನಾಗಲಾಱನು'' ಎಂದು ನುಡಿಯಲು:

ಪ್ರಿಯಂವದೆಯು-''ಎಲೆ ಅನಸೂಯೆಯೇ, ಈಸಮಯದಲ್ಲಿ ನಾವು ಭಯಾತುರರಾಗಿ ಹಿಂದೆಗೆದೆವಾದರೆ ನಮ್ಮ ಶಕುಂತಲೆಯು ಅಧಿಕ ದುಃಖಕ್ಕೆ ಪಾತ್ರಳಾಗುವುದಱಿಂ ನೀನು ಪೋಗಿ ಚಂಡಕೋಪಿಯಾದ ಆ ಋಷಿಯ ಚರಣಕ್ಕೆ ದಂಡವತ್ಪ್ರಣಾಮವಂ ಗೆಯ್ದು ಉಪಚಾರೋಕ್ತಿಗಳಂ ನುಡಿದು ಹಿಂದಿರುಗಿಸಿ ಈ ಶಾಪವನೀಯದಂತೆ ಮಾಡು. ನಾನು ಈ ಋಷಿಗಳಿಗೆ ಅರ್ಘ್ಯಪಾದ್ಯಂಗಳನ್ನೀಯುವುದಕ್ಕೆ ಜಲ ಮೊದಲಾದ ಪೂಜಾದ್ರವ್ಯವಂ ತೆಗೆದುಕೊಂಡು ಬರುವೆನು'' ಎಂದು ನುಡಿದು, ತ್ವರೆಯಿಂದ ಕಂದ ಮೂಲ ಪುಷ್ಪ ಮೊದಲಾದ ಪೂಜಾದ್ರವ್ಯಂಗಳಂ

ತೆಗೆದುಕೊಂಡು, ಆ ದುರ್ವಾಸಋುಷಿಯ ಸಾನ್ನಿಧ್ಯಕ್ಕೆ ಪೋಗಲು;

ಅನಸೂಯೆಯು, ಜಾಗ್ರತೆಯಿಂ ಪೋಗುವೆನೆಂದು ಎಡಹಿ ಹಸ್ತದಲ್ಲಿದ್ದ ಪುಷ್ಪಪಾತ್ರೆಯು ಬಿದ್ದುದಂ ನೋಡಿ, ದೇವತಾಪೂಜೆಗೋಸುಗ ಕೊಯ್ದಿದ್ದ ಪುಷ್ಪಗಳೆಲ್ಲಾ ಪೋದುವಲ್ಲಾ ಎಂದು ವ್ಯಸನಾತುರಳಾಗಿ, ಆ ಕುಸುಮಗಳಂ ನೋಡುತ್ತ ನಿಂದಿರಲು;

ಪ್ರಿಯಂವದೆಯು ಆ ದುರ್ವಾಸಋುಷಿಯ ಪಾದಪೂಜೆಯಂ ಗೆಯ್ದು ಹಿಂದಿರುಗಿ ಬಂದು ಅನಸೂಯೆಯಂ ಕುಱಿತು—"ಎಲೆ ಅನಸೂಯೆ, ಆ ದುರ್ವಾಸಋುಷಿಯು ಸ್ವಭಾವವಾಗಿ ವಕ್ರನಾಗಿ ನಾನೆಷ್ಟು ಪ್ರಕಾರವಾಗಿ ಉಚಿತೋಪಚಾರವಾಕ್ಯವಂ ಪೇಳಿದಾಗ್ಯೂ ಆ ವಾಕ್ಯವಂ ಕೇಳದೆ ಹೋದನು. ಆದರೂ ನಾನು ಚಮತ್ಕಾರವಾಕ್ಯಗಳಂ ನುಡಿದು ಆ ಋುಷಿಯು ದಯಾಶಾಲಿಯಾಗುವಂತೆ ಮಾಡಿದೆನು" ಎನ್ನಲು;

ಆ ಅನಸೂಯೆಯು ಅಧಿಕಾಶ್ಚರ್ಯದಿಂ ಯುಕ್ತಳಾಗಿ—"ಎಲೆ ಪ್ರಿಯಂವದೆಯೇ, ಒಂದು ಕ್ಷಣದಲ್ಲಿ ಆ ಋುಷಿಯು ದಯಾಶಾಲಿಯಾದನೆಂಬುವುದು ಆಶ್ಚರ್ಯವಾಗಿ ತೋಱುವುದು. ಆದರೂ ಆ ಋುಷಿಯು ಅಪ್ಪಣೆಯೇನಿತ್ತಿರುವನು? ಅದನ್ನು ಪೇಳು" ಎಂದು ನುಡಿಯಲು;

ಪ್ರಿಯಂವದೆಯು—"ಎಲೆ ಸಖಿಯೇ, ಕೇಳು, ಆ ದುರ್ವಾಸಋುಷಿಯು ಎಷ್ಟು ದೀನೋಕ್ತಿಗಳಂ ಪೇಳಿದರೂ ಹಿಂದಿರುಗಿ ಬರುವುದಕ್ಕೆ ಇಚ್ಛೈಸದೆ ಪೋದನು. ಆಗ ನಾನು ಅಧಿಕವಾಗಿ ವಿಜ್ಞಾಪನೆಯಂ ಗೆಯ್ದೆನು: ಹೇಗೆಂದರೆ—ಎಲೈ ಷಡ್ಗುಣೈಶ್ವರ್ಯಸಂಪನ್ನನಾದ ಮಹಾಋುಷಿಯೇ, ಆ ಶಕುಂತಲೆಯು ವಿವಾಹಕ್ಕೆ ಮೊದಲು ನಿನ್ನಲ್ಲಿ ಮಾಡಿದ ಭಕ್ತಿಯನ್ನು ನೋಡಿಯಾದರೂ ನಿನ್ನ ತಪೋಮಾಹಾತ್ಮ್ಯವನ್ನಱಿಯದೆ ಇರುವ ಎನ್ನ ತಂಗಿಯ ಇದೊಂದು ಅಪರಾಧವಂ ಕ್ಷಮಿಸಿ, ಅವಳಂ ಸಲಹಬೇಕೆಂದು ಬಹಳವಾಗಿ ಭಯಭಕ್ತಿಯಿಂ ಪ್ರಾರ್ಥನೆಯಂ ಗೆಯ್ಯಲು, ಅನಂತರದಲ್ಲಿ ಆ ಮಹಾಋುಷಿಯು ದಯಾನ್ವಿತನಾಗಿ—'ಎಲೆ ಬಾಲೇ, ನಾನು ಪೇಳಿದ ವಾಕ್ಯವು ಒಂದು ಕಾಲಕ್ಕೂ ವ್ಯರ್ಥವಾಗಲಾಱದು. ಆದರೂ ನೀನು ಅಧಿಕವಾಗಿ ಬೇಡಿಕೊಂಡಿದ್ದಱಿಂ ಪೇಳುವೆನು, ಕೇಳು. ನಿಮ್ಮ ಈ ಶಕುಂತಲೆಯು ಆ ದುಷ್ಯಂತರಾಯನು ಕೊಟ್ಟಿರ್ದುದೇನಾದರೂ ಒಂದು ಗುಱುತಿನ ಆಭರಣವಿದ್ದಲ್ಲಿ ಅದಂ ಆ ರಾಯಂಗೆ ತೋಱಿಸಲಾಕ್ಷಣದಲ್ಲಿ ಎನ್ನ ಶಾಪವು ಪರಿಹರವಾಗಿ, ಆ ರಾಯನು ನಿಮ್ಮ ಶಕುಂತಲೆಯಂ ಸ್ಮರಿಸುವನು' ಎಂದು ನುಡಿದು

ಅಂತರ್ಧಾನವಾದನು" ಎಂದು ನುಡಿಯಲು,

ಆ ಅನಸೂಯೆಯು—" ಎಲೆ ಪ್ರಿಯಂವದೆಯೇ, ನೀನು ಪೇಳಿದಂತೆಯಾದರೆ ನಮ್ಮ ಶಕುಂತಲೆಯಂ ಸಂತೋಷಗೊಳಿಸಬಹುದು. ಹೇಗೆಂದರೆ— ರಾಯನು ತಾನು ಪೋಗುವಾಗ ತನ್ನ ನಾಮಧೇಯಾಂಕಿತವಾದ ಮುದ್ರೆಯುಂಗರವಂ ಎನ್ನ ಸ್ಮರಣೆಗೆ ಕಾರಣವಾಗಿರಲೆಂದು ಆ ಶಕುಂತಲೆಯ ಬೆರಳಲ್ಲಿಟ್ಟು ಪೋಗಿರುವುದನ್ನಾ ಶಕುಂತಲೆಯು ನಮ್ಮ ವಶಕ್ಕೆ ಕೊಟ್ಟಿರುವಳಷ್ಟೆ. ಅದರಿಂ ನಮ್ಮ ಶಕುಂತಲೆಯು ಸಾಧಿಸುವುದಕ್ಕೆ ಯೋಗ್ಯವಾದ ಉಪಾಯಮುಳ್ಳವಳಾಗಿ ಜೀವಿಸುವಳು" ಎಂದು ನುಡಿಯಲು;

ಆ ಪ್ರಿಯಂವದೆಯು—"ಎಲೆ ಅನಸೂಯೆ, ನಮ್ಮ ಶಕುಂತಲೆಗೆ ಸೌಭಾಗ್ಯಪ್ರದಳಾದ ಗೌರಿಯ ಪೂಜೆಯಂ ಚೆನ್ನಾಗಿ ವಿರಚಿಸುವ, ನಡೆ" ಎಂದು ಅವಳಂ ಕರೆದುಕೊಂಡು ಬರುತ, ತಿರುಗಿನೋಡಿ ಪರ್ಣಶಾಲೆಯಲ್ಲಿ ಕುಳಿತಿರುವ ಶಕುಂತಲೆಯಂ ಕಂಡು—" ಎಲೆ ಅನಸೂಯೆ, ನಮ್ಮ ಪ್ರಿಯಸಖಿಯಾದ ಶಕುಂತಲೆಯಂ ನೋಡು, ಎಡಗೆಯ್ಯಲ್ಲಿರಿಸಿದ ವದನವುಳ್ಳವಳಾಗಿ, ಚಿತ್ರದಲ್ಲಿ ಬರೆದಿರುವಳಂತೆ, ತನ್ನ ಪತಿಯಾದ ದುಷ್ಯಂತರಾಯನಂ ಪೊಂದಿದ ಚಿಂತೆಯಿಂ, ತನ್ನ ಶರೀರದಲ್ಲಿ ಜ್ಞಾನವಿಲ್ಲದೆ ಇರುವಳು. ಹೀಗಿರುವಲ್ಲಿ ಅತಿಥಿಯಾಗಿ ಬಂದ ದುರ್ವಾಸಋಷಿಗೆ ಸತ್ಕಾರವಂ ಮಾಡದೆ ಪೋದಳೆಂಬುವುದು ಕೇಳತಕ್ಕುದೇನು? " ಎಂದು ನುಡಿಯಲು;

ಆ ಅನಸೂಯೆಯು—" ಎಲೆ ಪ್ರಿಯಂವದೆಯೇ, ದುರ್ವಾಸಋಷಿಯಿತ್ತ ಶಾಪವೃತ್ತಾಂತವು ನಮ್ಮಿಬ್ಬರ ಮುಖದಲ್ಲಿರತಕ್ಕುದೇ ಹೊರತು ಅನ್ಯರಿಗೆ ಪೇಳತಕ್ಕುದಲ್ಲಾ, ನಮ್ಮಿಬ್ಬರಿಂ ಸಕಲ ಪ್ರಯತ್ನದಿಂದಲೂ ಸ್ವಭಾವವಾಗಿ ಮೃದುವಾದ ಶರೀರವುಳ್ಳ ಶಕುಂತಲೆಯು ಸಂರಕ್ಷಿತಳಾಗತಕ್ಕವಳು " ಎಂದು ಪೇಳಲು;

ಆ ಪ್ರಿಯಂವದೆಯು—" ಎಲೆ ಸಖಿಯೇ, ಕೇಳು. ಈಗ ಬಿಸಿನೀರಿನಿಂದ ಇರುವಂತಿಗೆಬಳ್ಳಿಯಂ ನನೆಯಿಸುವಂತೆ ಈ ಕ್ರೂರವಾದ ಶಾಪವೃತ್ತಾಂತವಂ ನುಡಿದು ಕೋಮಲಾಂಗಿಯಾದ ಶಕುಂತಲೆಯಂ ಬಳಲಿಸುವುದಕ್ಕೆ ಯಾರುತಾನೇ ಇಚ್ಛೈಸುತ್ತಿರುವರು ? " ಎಂದು ನುಡಿಯುತ್ತ, ಗೌರೀಪೂಜೆಯಂ ಗೆಯ್ಯುವುದಕೆ ಪೋಗಲು;

ಅನಿತರೊಳು ಸಾಯಂಕಾಲವಾಗಲು;

ಇತ್ತಲು ಕಣ್ವಋಷಿಯ ಶಿಷ್ಯನೊರ್ವನು ಮಲಗಿರ್ದು ಎದ್ದು, " ಮಣಿತೀರ್ಥದಿಂ ಹಿಂದಿರುಗಿ ಬರುತ್ತಿರುವ ಗುರುವಾದ ಕಣ್ವಋಷಿಯಿಂದ ರಾತ್ರಿಯು

ಎಷ್ಟು ಕಳೆದು ಪ್ರಾತಃಕಾಲಕ್ಕೆ ಇನ್ನೆಷ್ಟು ಪೊತ್ತಿರುವುದು ನೋಡೆಂದು ಆಜ್ಞಾಪಿಸಲ್ಪಟ್ಟು ಬಂದೆನು'' ಎಂದು ದಿಕ್ಕು ಎರಡಂ ನೋಡಿ, ಅರುಣೋದಯವಂ ಅಸ್ತಂಗತನಾಗುವ ಚಂದ್ರನಂ ಕಂಡು, ದಿಗಿಲಿನಿಂದೊಡಗೂಡಿ, "ಅಯ್ಯೋ! ಆಗಲೇ ಬೆಳಗಾಗಿ ಮಹಾ ಕಷ್ಟ ಬಂದುದು! ಒಂದು ಕಡೆಯಲ್ಲಿ ಸಮಸ್ತ ಗಿಡ ಬಳ್ಳಿ ಮೊದಲಾದ ಔಷಧಗಳಿಗೆ ಪತಿಯಾದ ಚಂದ್ರನು ಅಸ್ತಗಿರಿಯ ಶಿಖರವಂ ಕುರಿತು ಪೋಗುತ್ತಿರುವನು. ಒಂದು ಕಡೆಯಲ್ಲಿ ಸೂರ್ಯನು ಅರುಣನೆಂಬ ಸಾರಥಿಯಂ ಮುಂದಿಟ್ಟುಕೊಂಡು ಪ್ರಕಾಶಮಾನನಾಗುತ್ತಿರುವನು. ಮತ್ತು ಉದಯಾಸ್ತವಂ ಪೊಂದುತ್ತಿರುವ ಈ ಸೂರ್ಯಚಂದ್ರರುಗಳ ವೃದ್ಧಿಕ್ಷಯಾಶ್ರಿತವಾದ ಕಾಂತಿಗಳಂ ನೋಡಲು ಸಮಸ್ತ ಜನಗಳು ತಮ್ಮತಮ್ಮ ಸುಖದುಃಖಗಳಿಂದಿದೇ ರೀತಿಯಿಂ ಕಟ್ಟುಬೀಳುವರೆಂಬದಾಗಿ ತೋರುವುದು. ಅಲ್ಲದೆ ಚಂದ್ರನು ಪ್ರಕಾಶಮಾನನಾಗಿರುವಾಗ್ಗೆ ಯಾವ ಕನ್ನೈದಿಲೆಯ ಲತೆಯು ಅರಳಿದ ಪುಷ್ಪಗಳಿಂ ಮನೋಹರವಾಗಿ ನೇತ್ರಾನಂದವನ್ನುಂಟುಮಾಡುತಿರ್ದುದೋ, ಅದೇ ಕನ್ನೈದಿಲೆಯ ಬಳ್ಳಿಯು ಪ್ರಿಯಕರನಾದ ಚಂದ್ರನು ಮರೆಯಾಗಲು ಈಗ ನೆನಪಿಗೆ ಯೋಗ್ಯವಾದ ಕಾಂತಿಯುಳ್ಳದಾಗಿ ಮೊದಲಿನಂತೆ ಎನ್ನ ನೇತ್ರಗಳಂ ಸಂತೋಷಗೊಳಿಸಲಾರದೋ, ಹಾಗೆ ಲೋಕದಲ್ಲಿ ಮನಸ್ಸಿಗೆ ಆನಂದವನ್ನುಂಟುಮಾಡುತಿರ್ದ ಪುರುಷನು ಅಗಲಿ ಪೋದುದರಿಂದುಂಟಾದ ಸ್ತ್ರೀಯರುಗಳ ದುಃಖಂಗಳು ಸಹಿಸುವುದಕ್ಕಾಗದೆ ಇರುವುವು'' ಎಂದು ನುಡಿಯಲು;

ಆ ವಾಕ್ಯವಂ ಕೇಳಿದ ಅನಸೂಯೆಯು ಭಿನ್ನಹೃದಯಳಾಗಿ,—"ಗಂಧ ತಾಂಬೂಲ ಪುಷ್ಪ ಮೊದಲಾದ ವಿಷಯಗಳಲ್ಲಿ ಪರಾಙ್ಮುಖಳಾದ ಶಕುಂತಲೆಯು ಪ್ರಿಯನ ಅಗಲಿಕೆಯಿಂದುಂಟಾದ ದುಃಖವನ್ನು ಒಂದು ಬಾರಿಯಾದರೂ ತಿಳಿದವಳಲ್ಲಾ! ಈ ಪ್ರಕಾರಳಾದ ಶಕುಂತಲೆಯಲ್ಲಿ ಆ ದುಷ್ಯಂತರಾಯನು ನಾನಾ ಪ್ರಕಾರವಾದ ಚಮತ್ಕಾರ ವಾಕ್ಯಂಗಳಂ ನುಡಿದು, ಅನ್ಯಾಯವಾದ ಕಾರ್ಯಗಳಂ ವಿರಚಿಸಿ ಪೋಗಿರುವನು. ಹಾಗಾದರೂ ಎಲ್ಲಾ ವೃತ್ತಾಂತವಂ ತಿಳಿದ ನಾನು ಈಗ ಮಾಡತಕ್ಕುದೇನು!'' ಎಂದು ಬಹಳವಾದ ಆಯಾಸಮಂ ಪೊಂದುತ್ತಿರಲು;

ಆ ಕಣ್ವಋಷಿಯ ಶಿಷ್ಯನು—"ಹೋಮಕಾಲಸಂಪ್ರಾಪ್ತವಾಗಿರುವುದಂ ಗುರುವಾದ ಕಣ್ವಮುನಿಗೆ ವಿಜ್ಞಾಪನೆಯಂ ಗೆಯ್ಯುವೆ''ನೆಂದು ಪೋಗಲು;

ಆ ಅನಸೂಯೆಯು ಚಿಂತಾಕ್ರಾಂತಳಾಗಿ,—"ಉಚಿತವಾಗಿ ಮಾಡತಕ್ಕಂಥ ಕಾರ್ಯಗಳಂ ಮಾಡುವೆನೆಂದರೆ ಅದಕ್ಕೆ ಸಾಧನಂಗಳಿಲ್ಲದೆ ಇರುವುದರಿಂದ ಎನ್ನ

ಕೈಕಾಲುಗಳು ಚಲಿಸುವುದಕ್ಕೆ ಆಗದೆ ಇರುವುವು. ಯಾವ ಮನ್ಮಥನಿಂದ ನಮ್ಮ ಸಖಿಯಾದ ಶಕುಂತಲೆಯು ಸತ್ವವಂತನಲ್ಲದ ಪೂರ್ವಸಂಬಂಧವು ಸ್ವಲ್ಪವೂ ಇಲ್ಲದೆ ಇದ್ದ ದುಷ್ಯಂತರಾಯನಲ್ಲಿ ಅನುರಾಗಯುಕ್ತಳಾಗಿ ಶೂನ್ಯಹೃದಯಳಾಗಿ ಮಹಾ ದುಃಖಾನುಭವಕ್ಕೆ ಯೋಗ್ಯಳಾದಳೋ, ಆ ಮನ್ಮಥನು ಸಂಪೂರ್ಣವಾದ ಮನೋರಥವುಳ್ಳವನಾಗಲಿ!'' ಎಂದು ನಿಂದಿಸಿ ನುಡಿದು, ಒಂದು ಕ್ಷಣ ಯೋಚನೆಯಂ ಗೆಯ್ದು,''ಆ ದುಷ್ಯಂತರಾಯನು ತನ್ನ ಅಂತಃಪುರಸ್ತ್ರೀಯರ ಮೇಲಣ ಪ್ರೀತಿಯಿಂದ ಈ ಶಕುಂತಲೆಯಂ ಮಱೆದಿರುವನೋ? ಹಾಗಲ್ಲದಿರೆ ದುರ್ವಾಸಮಹಾಮುನಿಯಿತ್ತ ಶಾಪದಿಂ ವಿಸ್ಮೃತಿಯಂ ಪಡೆದಿರುವನೋ? ಇವು ಎರಡುಕಾರಣವಿಲ್ಲದಿರ್ದರೆ, ಇಷ್ಟುಜನ ಸ್ತ್ರೀಯರೆನಗಾಗಿರ್ದರೂ ಈ ಶಕುಂತಲೆಯೇ ಪ್ರಾಣಪ್ರಿಯಳೆಂತಲೂ ಇವಳ ಗರ್ಭದಲ್ಲಿ ಹುಟ್ಟಿದ ಪುತ್ರನಿಗೆ ಸಮಸ್ತರಾಜ್ಯದ ದೊರೆತನವನ್ನೀಯುವೆನೆಂತಲೂ ಇನ್ನೂ ನಾನಾಪ್ರಕಾರವಾದ ಪ್ರತಿಜ್ಞಾವಾಕ್ಯಗಳಂ ನುಡಿದು ಪುರವಂ ಕುಱಿತು ಪೋದ ಆ ದುಷ್ಯಂತರಾಯನು ಯೋಗಕ್ಷೇಮಕ್ಕಾದರೂ ಒಂದು ಪತ್ರಿಕೆಯನ್ನಾದರೂ ಕಳುಹಿಸದೆ ಇರನು. ಈಗ ಆ ರಾಯನು ನಮ್ಮ ಶಕುಂತಲೆಯಂ ಮಱೆತಾಗ್ಯೂ ಅವನಿಗೆ ಸ್ಮರಣೆ ಬರಲೆಂದು ಅವನಿತ್ತು ಪೋಗಿರುವ ಉಂಗರವಂ ಕಳುಹಿಸಿದಲ್ಲಿ ಆ ಉಂಗುರವಂ ತೆಗೆದುಕೊಳ್ಳುವನೋ ಇಲ್ಲದಿದ್ದರೆ ಅರಣ್ಯದಲ್ಲಿ ಸ್ವಭಾವಿಕವಾಗಿಯೇ ದುಃಖವಂ ಪೊಂದುವ ಋಷಿಪುತ್ರಿಯರು ಕಳುಹಿಸಿದ್ದು ಎಂದು ಉಪೇಕ್ಷೆಯಂ ಗೆಯ್ಯುವನೋ ತಿಳಿಯದು. ಅದಂತಿರಲಿ. ಸ್ನಾನಾರ್ಥವಾಗಿ ಪೋಗಿರುವ ತಂದೆಯಾದ ಕಣ್ವಮುನಿಗೆ ನಮ್ಮ ಶಕುಂತಲೆಯು ಗಾಂಧರ್ವವಿವಾಹದಿಂ ವಿವಾಹಿತಳಾಗಿ, ಆ ದುಷ್ಯಂತರಾಯನೊಡನೆ ಸಂಭೋಗಾದಿಗಳಂ ಗೆಯ್ದು ಈಗ ಗರ್ಭಿಣಿಯಾಗಿರುವ ಸಂಗತಿಯಂ ನಾನು ಪೇಳಿದವಳಾದರೆ ನೀನೂ ಪ್ರಿಯಂವದೆಯರೀರ್ವರೂ ಸೇರಿ ನಮ್ಮ ಶಕುಂತಲೆಗೆ ದುರ್ವ್ಯಾಪಾರವಂ ಕಲಿಸಿದರೆಂದು ನಮ್ಮೀರ್ವರಂ ಶಿಕ್ಷಿಸದೆ ಇರನು. ಮತ್ತು ನಮ್ಮ ಶಕುಂತಲೆಯು ನಮ್ಮ ದುಷ್ಯಂತರಾಯನ ಸಂಗದಿಂ ಗರ್ಭವಂ ತಾಳಿದಳು, ದುರ್ವಾಸಋಷಿಯು ಕ್ರೂರವಾದ ಶಾಪವನ್ನಿತ್ತಿರುವನು—ಈಪ್ರಕಾರವಾಗಿ ಕಾರ್ಯಂಗಳೆಲ್ಲಾ ಮುಂಚಿ ಹೋಗಿರುವುವು. ಇನ್ನುಮೇಲೆ ನಾನುತಾನೇ ಮಾಡತಕ್ಕದ್ದೇನು? ಮುಂದೆ ಎಂತಾಗುವುದೊ? ತಿಳಿಯದು'' ಎಂದು ಅಧಿಕವ್ಯಸನಾತುರಳಾಗಿ, ಒಂದು ವೃಕ್ಷಚ್ಛಾಯೆಯಲ್ಲಿ ತನ್ನೊಳುತಾನೇ ಆಲೋಚನೆಯಂ ಗೆಯ್ಯುತ್ತಾ ಕುಳಿತಿರಲು;

ಅಷ್ಟಱಲ್ಲೇ ಪ್ರಿಯಂವದೆಯು ಅತ್ಯಂತ ಸಂತುಷ್ಟಳಾಗಿ - ಮುಗಳ್ನಗೆಯಿಂ

ದೊಡಗೂಡಿ ಅನಸೂಯೆಯು ಇರುವ ಸ್ಥಳಕ್ಕೆ ಬಂದು-"ಎಲೆ ಅನಸೂಯೆ, ನಮ್ಮ ಶಕುಂತಲೆಯು ದುಷ್ಯಂತರಾಯನ ಪ್ರತಿಷ್ಠಾನಪುರವಂ ಕುಱಿತು ಪೋಗುವ ಳಾದ್ದಱಿಂದವಳ ಸಂಗಡ ಕೆಲವುದೂರ ಪೋಗಿ ಬರುವೆವು, ನೀನು ಜಾಗ್ರತೆಯಿಂದ ನಡೆ ನಡೆ'' ಎಂದು ತ್ವರೆಪಡಿಸಲು;

ಆ ಪ್ರಿಯಂವದೆಯಂ ಕುಱಿತು ಅನಸೂಯೆಯು-"ಎಲೆ ಸಖಿಯೇ, ನಮ್ಮ ಶಕುಂತಲೆಯು ಹೇಗೆ ಹೋಗುವಳು? ಅವಳಂ ಎಂತು ಕಳುಹಿಸುವರು? ಆದಱ ಸಂಗತಿಯಂ ವಿಸ್ತಾರವಾಗಿ ವಿವರಿಸು'' ಎನಲು;

ಆ ಪ್ರಿಯಂವದೆಯು-"ಎಲೆ ಸಖಿಯೇ ಕೇಳು ಆ ಶಕುಂತಲೆಯ ಯೋಗ ಕ್ಷೇಮವಂ ಕೇಳಲಿಚ್ಛೆಯುಳ್ಳ ನಾನು ಅವಳ ಸಮೀಪವಂ ಕುಱಿತು ಪೋದೆನು'' ಎನಲು;

ಆ ಅನಸೂಯೆಯು—"ಆಮೇಲೆ ಏನುನಡೆದುದು ?'' ಎನಲು:

ಪ್ರಿಯಂವದೆಯು—" ಎಲೆ ಸಖಿಯೇ, ಕೇಳು. ನಮ್ಮ ಶಕುಂತಲೆಯು ಲಜ್ಜೆಯಿಂದಲೂ, ಕಣ್ವಮಹಾಮುನಿಯು, ಈವಾರ್ತೆಯಂ ಕೇಳಿ ಏನೆಂದು ನುಡಿಯುವನೋ ಎಂಬ ಭಯದಿಂದಲೂ ಯುಕ್ತಳಾಗಿ ತಲೆಯಂ ಬಗ್ಗಿಸಿ ಕುಳಿತಿರಲು; ಆ ಕಣ್ವಮುನೀಶ್ವರನು ಬಂದು ಅತಿ ಸಂತೋಷದಿಂದಾಶಕುಂತಲೆಯಂ ಮುದ್ದುಗೆಯ್ದು ಸಂತುಷ್ಟಹೃದಯನಾಗಿ ಒಂದಾನೊಂದು ವಾಕ್ಯವಂ ಪೇಳಿದನು. ಅದೆಂತೆನೆ:—' ಎಲೆ ಪುತ್ರಿಯಾದ ಶಕುಂತಲೆಯೇ, ಕೇಳು. ಯಜ್ಞವಂ ಗೆಯ್ಯುವ ಯಜಮಾನನು ಹೊಗೆಯಿಂ ಕಣ್ಣುಕಾಣದೆ ಆಹುತಿಯಂ ಮಾಡಿದರೂ ಆ ಆಹುತಿಯು ದೈವಯೋಗದಿಂ ಅಗ್ನಿಯ ಹಸ್ತದಲ್ಲಿ ಬಿದ್ದಂತೆಯೂ, ಬುದ್ಧಿಶಾಲಿಯಾದ ಶಿಷ್ಯನಿಗೆ ಪೇಳಿದ ವಿದ್ಯದಂತೆಯೂ, ನೀನು ಎನಗೆ ತಿಳಿಸದೆ ಇರ್ದರೂ ಧರ್ಮಮಾರ್ಗಕ್ಕೆ ಅನುಕೂಲವಾದ ಗಾಂಧರ್ವವಿವಾಹದಿಂ ಮಹಾರಾಜನಾದ ದುಷ್ಯಂತರಾಜಂಗೆ ಪತ್ನಿಯಾದುದಱಿಂ ಸಂತೋಷಕ್ಕೆ ಕಾರಣಳಾದೆ. ಈಗ ಎನ್ನ ಶಿಷ್ಯರ ಸಹಾಯವಂ ಗೆಯ್ದು ನಿನ್ನಂ ಪತಿಯಾದ ದುಷ್ಯಂತರಾನ ಸಮೀಪಕ್ಕೆ ಕಳುಹಿಸುವೆನು' ಎಂದು ನುಡಿದು ಅತಿ ಸಂತೋಷಯುಕ್ತನಾಗಿರುವನು'' ಎಂದು ನುಡಿಯಲು;

ಅನಸೂಯೆಯು ಈ ವೃತ್ತಾಂತನೆಲ್ಲವಂ ಕೇಳಿ, " ಯಾರು ನಮ್ಮ ಕಣ್ವಋಷಿಗೆ ವಿಜ್ಞಾಪನೆಯಂ ಗೆಯ್ದರೆಂದು ಕೇಳಲಾಪ್ರಿಯಂವದೆಯು-" ಎಲೆ ಸಖಿಯೇ, ಆ ಕಣ್ವಋಷಿಯು ಔಪಾಸನೆಯ ಗೃಹವಂ ಕುಱಿತು ಪೋಗಲು ಅಲ್ಲಿ ಅಶರೀರವಾಣಿ ಆದುದು'' ಎನಲು;

ಅಧಿಕಾಶ್ಚರ್ಯಯುಕ್ತಳಾಗಿ—“ಎಲೆ ಸಖಿಯೇ, ಆ ಅಶರೀರವಾಕ್ಯವು ಏನೆಂದಾಡಿದುದು? ಅದಂ ಜಾಗ್ರತೆಯಾಗಿ ಪೇಳು” ಎಂದು ನುಡಿಯಲು;

ಪ್ರಿಯಂವದೆಯು—“ಎಲೆ ಸಖಿಯೇ, ಅದಱ ವೃತ್ತಾಂತವಂ ಪೇಳುವೆನು, ಕೇಳು ಆ ಕಣ್ವಋಷಿಯುಂ ಕುಱಿತು–‘ಬ್ರಹ್ಮವಿದ್ಯಾಪಾರಗನಾದ ಕಣ್ವಮುನಿಯೇ’ ಹೇಗೆ ಬನ್ನಿಯವೃಕ್ಷವು ಗರ್ಭದಲ್ಲಿ ಅಗ್ನಿಯಂ ಧರಿಸಿಕೊಂಡಿರುವುದೋ, ಅದಱಂತೆ ನಿನ್ನಮಗಳಾದ ಶಕುಂತಲೆಯು ಭೂಮಿಯ ಐಶ್ವರ್ಯಕ್ಕೋಸುಗ ದುಷ್ಯಂತರಾಯನಿಂದಿರಿಸಲ್ಪಟ್ಟ ವೀರ್ಯವಂ ಧರಿಸಿರುವಳು. ಇದಂ ತಿಳಿ’ ಎಂದು ನುಡಿದ ಅಶರೀರವಾಕ್ಯವನ್ನಾಋಷಿಯು ಕೇಳಿ—‘ಎನ್ನ ಪುತ್ರಿಯ ಗರ್ಭದಲ್ಲಿ ಸಮಸ್ತ ಭೂಮಿಗೂ ದೊರೆಯಾಗುವ ಮಹಾಪುರುಷನು ಪುಟ್ಟುವನೆಂತಲೂ ಇವಳಿಗೆ ಮಹಾರಾಜನಾದ ದುಷ್ಯಂತರಾಯನು ಪತಿಯಾದನೆಂತಲೂ ತಿಳಿದು ಸಂತೋಷಭರಿತನಾದನು” ಎಂದು ನುಡಿಯಲು;

ಅನಸೂಯೆಯು ಅಧಿಕಹರ್ಷಾನ್ವಿತಳಾಗಿ ಆ ಪ್ರಿಯಂವದೆಯನಾಲಿಂಗಿಸಿ, “ನಮಗೆ ಬಹಳ ಸಂತೋಷವುಂಟಾದುದು. ಆದರೂ ನಮ್ಮ ಶಕುಂತಲೆಯು ಈಗಲೇ ಪ್ರತಿಷ್ಠಾನನಗರಕ್ಕೆ ಕರೆದುಕೊಂಡು ಹೋಗುವರಾದರೆ ನಾವೀರ್ವರು ಪೋಗಿ ಅವಳಿಗೆ ಮಾಡತಕ್ಕ ಉಪಚಾರವಂ ಮಾಡಿ, ದೀನಳಾದ ಅವಳಿಗೆ ಸಂತೋಷವಂ ಪುಟ್ಟಿಸಿ, ನಮ್ಮ ಅಭಿಲಾಷೆಗೆ ಯೋಗ್ಯವಾದ ಸಂತೋಷವನ್ನನುಭವಿಸುವುದಕ್ಕೆ ಅವಳ ಸಮೀಪವಂ ಕುಱಿತು ಪೋಗಬೇಕು. ಮತ್ತು ಆ ಶಕುಂತಲೆಯ ಅಲಂಕಾರನಿಮಿತ್ತವಾಗಿ ಕೇಸರ ಪುಷ್ಪಮಾಲೆಯಂ ಕಟ್ಟಿ ಸೀಮಾವಿನ ಮರದ ಕೊನೆಯಲ್ಲಿರುವ ತೆಂಗಿನ ಗಱಿಯ ಹುವ್ವಿನ ಕುಕ್ಕೆಯಲ್ಲಿರಿಸಿರುವೆನು. ಆ ಮಾಲೆಯು ಕಾಲವಿಳಂಬಮಾದಲ್ಲಿ ಕಂದಿಪೋಗುವುದು. ನೀನು ಅದಂ ಜಾಗ್ರತೆಯಾಗಿ ಶಕುಂತಲೆಯ ಹಸ್ತಕ್ಕೆ ತಂದುಕೊಡು. ನಾನು ಅವಳ ಅಲಂಕಾರಕ್ಕೋಸುಗ ಗೋರೋಜನವಂ, ತೀರ್ಥಮೃತ್ತಿಕೆಯಂ ನವೀನದೂರ್ವಾದಳ ಮೊದಲಾದ ಮಂಗಳಕರವಾದ ಅಲಂಕಾರಸಾಮಗ್ರಿಯಂ ತೆಗೆದುಕೊಂಡು ಬರುವೆನು” ಎನ್ನಲು; ಆ ವಾಕ್ಯಕ್ಕೆ ಜಾಗ್ರತೆಯಿಂ ಪೋಗೆಂದವಳಂ ಕಳುಹಿಸಿದ ಪ್ರಿಯಂವದೆಯು ಕೇಸರಮಾಲಿಕಾಪೂರ್ಣಮಾದ ಕುಕ್ಕೆಯಂ ತೆಗೆದುಕೊಂಡು ಬರಲು;

ಅಷ್ಟಱಲ್ಲಿ ಕಣ್ವಮುನಿಯು ಗೌತಮಿಯಂ ಕುಱಿತು—“ಎಲೆ ತಂಗಿಯಾದ ಗೌತಮಿಯೇ, ನೀನು ಶಾರ್ಙ್ಗರವಮಿಶ್ರನೆಂಬ ಶಿಷ್ಯನಂ ಶಕುಂತಳೆಯೊಡನೆ ಪೋಗುವಂತೆ ನೇಮಕಮಾಡು” ಎಂದು ಆಜ್ಞೆಯನ್ನೀಯಲು;

ಆ ವಾಕ್ಯವಂ ಕೇಳಿದ ಪ್ರಿಯಂವದೆಯು ಪೋಗುತ್ತಿರ್ದ ಅನಸೂಯೆಯಂ ಕುಱಿತು—“ ಎಲೆ ಅನಸೂಯೆಯೇ, ನೀನು ಜಾಗ್ರತೆಯಾಗಿ ಬರುವುದು. ನಮ್ಮ ಋಷಿಶಿಷ್ಯರುಗಳು ಪ್ರತಿಷ್ಠಾನಪುರಕ್ಕೆ ಪೋಗುವುದಕ್ಕೆ ಧ್ವನಿಗೈಯ್ಯುತ್ತಿರುವರು.” ಎಂದು ನುಡಿಯಲು;

ಅನಸೂಯೆಯು ಅತಿ ತ್ವರೆಯಿಂ ಪೋಗಿ ಅಲಂಕಾರಸಾಮಗ್ರಿಯಂ ತೆಗೆದುಕೊಂಡು ಬಂದು—“ಎಲೆ ಪ್ರಿಯಂವದೆಯೇ, ನಮ್ಮ ಶಕುಂತಳೆಯ ಸಮೀಪಕ್ಕೆ ಪೋಗುವ, ನಡೆ” ಎಂದು ನುಡಿದು ಅವಳಿಂದೊಡಗೂಡಿ ಬರುತ್ತಿರಲು;

ಅಷ್ಟಱಲ್ಲೆ ಮುಂಬಾಗದಲ್ಲಿ ಋಷಿಪತ್ನಿಯರಿಂ ಸುತ್ತುವರಿಯಲ್ಪಟ್ಟ ಶಕುಂತಲೆಯಂ ಕಂಡು, ಪ್ರಿಯಂವದೆಯು—“ ಎಲೆ ಸಖಿಯೇ, ನಮ್ಮ ಶಕುಂತಲೆಯಂ ತೃಣಧಾನ್ಯಗಳ ಶುಭ್ರವಾದ ಅಕ್ಷತೆಗಳಂ ಹಸ್ತಗಳಲ್ಲಿ ಪಿಡಿದು ಸ್ವಸ್ತಿವಾಚನೆಯಂ ಪೇಳುತ್ತಿರುವ ಋಷಿಪತ್ನಿಗಳಿಂ ಮಂತ್ರಜಲದಿಂ ಶಿರದಲ್ಲಿ ಪ್ರೋಕ್ಷಣೆಯಂ ಗೆಯ್ಯಿಸಿಕೊಳ್ಳುತ್ತ ಸಂತುಷ್ಟಳಾಗಿ ಮುಂಬಾಗದಲ್ಲಿ ಕುಳಿತಿರುವಳು. ಈ ಶಕುಂತಲೆಯ ಸಮೀಪಕ್ಕೆ ಪೋಗುವ” ಎಂದು ಪೇಳುತ್ತ ಬರುತ್ತಿರಲು;

ಇತ್ತಲು ಶಕುಂತಳೆಯ ಸುತ್ತಲೂ ಇರುವ ಋಷಿಪತ್ನಿಯರಲ್ಲೊಬ್ಬಳು ಶಕುಂತಳೆಯಂ ಕುಱಿತು—“ ಎಲೆ ಮಂಗಳಾಂಗಿಯೇ, ನಿನ್ನ ಪತಿಯಾದ ದುಷ್ಯಂತರಾಯನಿಗೆ ಬಹುಮಾನಸೂಚಕವಾದ ಮಹಾದೇವಿಯೆಂಬ ನಾಮಧೇಯವಂ ಪಡೆ” ಎಂದು ನುಡಿಯಲು ಮತ್ತೊರ್ವಳು—“ಎಲೆ ಶಕುಂತಳೆಯೇ, ನೀನು ಶೂರಾಗ್ರೇಸರನಾದ ಪುತ್ರನಂ ಪಡೆ” ಎಂದು ಪೇಳಲು, ಇನ್ನೊರ್ವಳು—“ಎಲೈ ಕೋಮಲಾಂಗಿಯಾದ ಶಕುಂತಲೆಯೇ, ನಿನ್ನ ಪತಿಯಾದ ದುಷ್ಯಂತರಾಯಂಗೆ ಸಮ್ಮತಳಾಗು” ಎನ್ನಲು—ಈ ಪ್ರಕಾರವಾಗೆಲ್ಲರೂ ಆಶಕುಂತಳೆಗೆ ಆಶೀರ್ವಾದವಂ ಗೆಯ್ದು ಗೌತಮಿಯನ್ನವಳ ಸಮೀಪದಲ್ಲಿ ಬಿಟ್ಟು, ತಮ್ಮತಮ್ಮ ಪರ್ಣಶಾಲೆಯಂ ಕುಱಿತು ಪೋಗಲು;

ಆ ಅನಸೂಯೆ ಪ್ರಿಯಂವದೆಯರೀರ್ವರು ಆಶಕುಂತಲೆಯ ಸಮೀಪವಂ ಸಾರ್ದು—“ ಎಲೈ ಪ್ರಾಣಪ್ರಿಯಳೇ, ನಿನಗೆ ಮಂಗಳಸ್ನಾನವಾದುದೆ? ” ಎಂದು ನುಡಿಯಲು;

ಆಶಕುಂತಳೆಯು ಸಂತುಷ್ಟಚಿತ್ತಳಾಗಿ–“ಎಲೌ ಸಖಿಯರುಗಳಿರಾ, ನಿಮಗೆ ಕ್ಷೇಮವೆ? ಬನ್ನಿ ಕುಳ್ಳಿರಿ” ಎಂದು ತನ್ನ ಸಮೀಪಕ್ಕೆ ಕರೆಯಲು;

ಅವರೀರ್ವರು ತಾವುತೆಗೆದುಕೊಂಡು ಬಂದಿರ್ದ ಮಂಗಳದ್ರವ್ಯದಿಂ ತುಂಬಿ

ಇರುವ ತಟ್ಟೆಗಳಂ ಪಿಡಿದು ಕುಳಿತುಕೊಂಡು-"ಎಲೆ ಶಕುಂತಳೆಯೇ, ನಾವೀರ್ವರು ಎಣ್ಣೆಯುನ್ನೊತ್ತಿ ಮಂಗಳಾಭ್ಯಂಗಸವಂ ಮಾಡಿಸುವೆವು. ನೀನು ಸನ್ನಾಹವುಳ್ಳವಳಾಗು" ಎಂದು ಪೇಳಲಾ ಶಕುಂತಳೆಯು—"ಎಲೌ ಸಖಿಯರುಗಳಿರಾ, ನಾನು ಸನ್ನದ್ಧಳಾಗಿ ನೀವು ಪೇಳಿದ ವಾಕ್ಯವಂ ಅನುಮತಿಸುವೆನು. ಇನ್ನುಮೇಲೆ ಎನಗೆ ನೀವು ಮಾಡುವ ಉಪಚಾರವು ಅಲಂಕಾರವು ಸಹ ದುರ್ಲಭವಾಗುವುವು. ಏನು ಅಲಂಕಾರ ಮಾಡಬೇಕಾದರೂ ಈಗಲೇಮಾಡಿ" ಎಂದು ಅಧಿಕದುಃಖದಿಂ ಕಣ್ಣೀರಂ ಬಿಡುತ್ತಿರಲವರೀರ್ವರು-"ಎಲೆಪ್ರಿಯ ಸಖಿಯೇ, ಕೇಳು. ಮಂಗಳಕಾಲದಲ್ಲಿ ರೋದನವಂಗೆಯ್ಯುವುದು ಯುಕ್ತವಲ್ಲ" ಎಂದು ತಮ್ಮ ಸೀರೆಯುಸೆರಗಿನಿಂದವಳ ಕಂಬನಿಗಳಂ ಒರಸಿ, ದುಃಖಸಮಾಧಾನವಾಗುವಂತೆ ಮಾಡಲಾ ಪ್ರಿಯಂವದೆಯು-"ಎಲೆ ಅನಸೂಯೇ, ನಮ್ಮ ಶಕುಂತಳೆಯ ಸೌಂದರ್ಯವು ದಿವ್ಯಮಾದ ನವರತ್ನಾಭರಣಕ್ಕೆ ಉಚಿತಮಾಗಿರುವುದು. ಹೀಗಿರುವಲ್ಲಿ ನಮ್ಮ ಋಷಿಗಳಿಗೆ ಯೋಗ್ಯವಾದ ನಾರಸೀರೆ, ದೂರ್ವಾದಳ, ತೀರ್ಥಮೃತ್ತಿಕೆ ಮೊದಲಾದ ಈ ವಸ್ತುಗಳಿಂದಿವಳನ್ನಲಂಕರಿಸಿ ವಿಕಾರವಂಗೆಯ್ಯಬಾರದು. ಇವಳಿಗೆ ಯೋಗ್ಯಮಾದ ಆಭರಣಗಳಿಲ್ಲ" ಎಂದು ಯೋಚಿಸುತ್ತಿರಲು ;

ಅಷ್ಟರಲ್ಲೀ ಇಬ್ಬರು ಋಷಿಕುಮಾರರು ಆಭರಣವಂ ಹಸ್ತಗಳಲ್ಲಿ ಪಿಡಿದುಕೊಂಡು ಶಕುಂತಲೆಯಿರುವ ಬಳಿಗೆ ಬಂದು, ಗೌತಮಿಯಂ ಕುರಿತು, "ಎಲೌ ತಾಯೇ, ಈಗ ನಾವು ತಂದಿರುವ ಆಭರಣಗಳಂ ತೆಗೆದುಕೊಂಡು ಪೂಜ್ಯಳಾದ ಶಕುಂತಳೆಗೆ ಅಲಂಕಾರವಂ ಮಾಡುವುದು" ಎಂದು ಆಭರಣಗಳಂ ಅವಳ ಮುಂದಿರಿಸಲು;

ಎಲ್ಲರೂ ಆ ಮನೋಹರಮಾದ ಆಭರಣಗಳಂ ನೋಡಿ ಅತ್ಯಾಶ್ಚರ್ಯದಿಂ ಯುಕ್ತರಾಗಲು;

ಗೌತಮಿಯು ಆ ಆಭರಣಗಳಂ ತಂದ ನಾರದನೆಂಬ ಋಷಿಕುಮಾರನಂ ಕುರಿತು-"ಎಲೈ ನಾರದನೇ, ಈ ಆಭರಣಗಳು ಎಲ್ಲಿಂದ ಬಂದುವು? ಯಾರು ನಿನಗೆ ಕೊಟ್ಟರು?" ಎನಲು;

ನಾರದನು—"ಎಲೌ ಪೂಜ್ಯಳೇ, ನಮ್ಮ ಗುರುವಾದ ಕಣ್ವಋಷಿಯ ಪ್ರಭಾವದಿಂದುಂಟಾದುವು" ಎನಲು ;

ಆ ಗೌತಮಿಯು—"ಎಲೈ ಬಾಲಕನೇ, ನಮ್ಮ ಋಷೀಶ್ವರನು ತನ್ನ ಮನಸ್ಸಿನಿಂದಲೇ ಈ ಒಡವೆಗಳಂ ನಿರ್ಮಾಣವಂ ಗೈದನೋ ಏನು ?" ಎಂದು ಬೆಸಗೊಳ್ಳಲು ;

ಇನ್ನೊರ್ವ ಋಷಿಕುಮಾರನು—"ಎಲೌ ಪೂಜ್ಯಳಾದ ಗೌತಮಿಯೇ, ಈ ಆಭರಣಂಗಳು ಬಂದ ಸಂಗತಿಯಂ ಪೇಳುವೆನು, ಕೇಳು. ನಮ್ಮ ಋಷಿಯು ನಮ್ಮಿಬ್ಬರಂ ಕುಱಿತು—"ಎಲೈ ಬಾಲಕರುಗಳಿರಾ ! ನಮ್ಮ ಶಕುಂತಲೆಯು ತನ್ನ ಪತಿಗೃಹವಂ ಕುಱಿತು ಪೋಗುವಳು, ಅವಳಿಗೆ ಅಲಂಕಾರವಂ ಗೆಯ್ಯುವುದಕ್ಕೋಸುಗ ನಮ್ಮಾಶ್ರಮದಲ್ಲಿರುವ ಸಮಸ್ತ ವೃಕ್ಷಂಗಳ ದೆಸೆಯಿಂದ ಪುಷ್ಪಗಳಂ ಕೊಯ್ದುಕೊಂಡು ಬರುವುದು," ಎಂದು ಅಪ್ಪಣೆಯನ್ನೀಯಲಾಬಳಿಕ ನಾವೀರ್ವರು ಪುಷ್ಪಗಳಂ ಕೊಯ್ಯುವುದಕ್ಕೋಸುಗ ಆ ವೃಕ್ಷಗಳ ಸಮೀಪಕ್ಕೆ ಪೋಗಲು—ಆ ವೃಕ್ಷಗಳಲ್ಲಿ ಒಂದು ವೃಕ್ಷವು ಚಂದ್ರನೋಪಾದಿಯಲ್ಲಿ ಶುಭ್ರವಾದ ಸೀರೆಯನ್ನಿತ್ತುದು; ಇನ್ನೊಂದು ಸೌಭಾಗ್ಯವೃದ್ಧಿಕರಮಾದ ಭೂಷಣವಂ ಕೊಟ್ಟಿತು; ಪಾದಂಗಳಿಗೆ ಲೇಪನವಂ ಗೆಯ್ಯುವುದಕ್ಕೆ ಯೋಗ್ಯಮಾದ ಅಲತಿಗೆಯ ರಸವಂ ಮತ್ತೊಂದು ವೃಕ್ಷವಿತ್ತುದು. ಇದಲ್ಲದೆ ವನದೇವತೆಯು ಮತ್ತೆ ಕೆಲವು ವೃಕ್ಷಗಳ ಸಂದಿಗಳಲ್ಲಿ ಪುಟ್ಟಿದ ಹಸ್ತಂಗಳಿಂದ ಅನೇಕ ಪ್ರಕಾರಮಾದ ರತ್ನಾಭರಣಗಳಂ ಆಯಾಯ ವೃಕ್ಷಗಳಿಂ ತೆಗೆದುಕೊಟ್ಟಿರುವಳಾದ್ದಱಿಂದೀಯಾಭರಣಗಳಂ ತೆಗೆದುಕೊಂಡು ಬಂದೆವು" ಎನಲು;

ಆ ಪ್ರಿಯಂವದೆಯು ಶಕುಂತಲೆಯ ಮುಖವಂ ನೋಡಿ—"ಎಲೆ ಶಕುಂತಲೆಯೇ, ವೃಕ್ಷಂಗಳೆಲ್ಲವೂ ಅಪ್ರಾರ್ಥಿತವಾಗಿ ಸಮಸ್ತಾಭರಣವಂ ಕೊಟ್ಟುವು. ನೀನು ನಿನ್ನ ಪತಿಯಾದ ದುಷ್ಯಂತರಾಯನ ಗೃಹದಲ್ಲಿ ಸಮಸ್ತವಾದ ರಾಜಲಕ್ಷ್ಮಿಯನ್ನನುಭವಿಸುವುದಕ್ಕೆ ಇದೇ ಶುಭಶಕುನವು" ಎಂದು ನುಡಿಯಲು;

ಆ ಶಕುಂತಲೆಯು ಲಜ್ಜೆಯಿಂದೊಡಗೂಡಿರಲು ;

ಅಷ್ಟಱಲ್ಲೀ ಆಭರಣವಂ ತಂದ ಋಷಿಕುಮಾರನಾದ ನಾರದನು ಸಂಗಡ ಬಂದಿರುವ ಗೌತಮನಂ ಕುಱಿತು—"ಎಲೈ ಮಿತ್ರನಾದ ಗೌತಮನೇ ಈಗ ಸ್ನಾನಕ್ಕೆ ಇಳಿದಿರುವ ಕಣ್ವಮಹಾಋಷಿಗೆ ಹೀಗೆ ವೃಕ್ಷಂಗಳು ಸಮಸ್ತಾಭರಣಂಗಳನ್ನಿತ್ತುದಂ ಆ ಆಭರಣಗಳಂ ಗೌತಮಿಯ ಹಸ್ತಕ್ಕೆ ಶಕುಂತಲೆಗೆ ಅಲಂಕಾರವಂಗೆಯ್ಯುವುದಕ್ಕೆ ಕೊಟ್ಟಿರುವ ಈ ಸಂಗತಿಯಂ ಬಿನ್ನಪಂ ಗೆಯ್ಯುವ, ನಡೆ" ಎಂದು ಅವನಂ ಕರೆದುಕೊಂಡು ಪೋಗಲು ;

ಅನಸೂಯೆಯು—"ಎಲೆ ಪ್ರಿಯಂವದೆಯೇ, ನಮ್ಮ ಶಕುಂತಳೆಯು ಯೋಗ್ಯವಾದ ಆಭರಣವುಳ್ಳವಳಾದಳು. ಇವಳಿಗೆ ಅಲಂಕಾರವಂ ಮಾಡಬೇಕಾದಲ್ಲಿ

ಚಿತ್ರವಂ ಒರೆಯುವುದರಲ್ಲಿ ಪರಿಚಯವಿದ್ದರೆ ಈ ಕಾರ್ಯವಂ ಮಾಡಬಹುದು'', ಎಂದು ನುಡಿಯಲು;

ಶಕುಂತಲೆಯು—'' ಎಲೌ ಸಖಿಯರುಗಳಿರಾ, ನಿಮ್ಮ ಕುಶಲತೆಯಂ ನಾನೂ ತಿಳಿದಿರುವೆನು. ಆದ್ದರಿಂ ಚಿತ್ರಕಾರ್ಯದಿಂ ಪ್ರಯೋಜನವೇನು?'' ಎಂದು ಪೇಳಲು;

ಆ ವಾಕ್ಯಕ್ಕೆ ಆ ಸಖಿಯರೀರ್ವರು ಮನ್ಮಥನ ಜಯಲಕ್ಷ್ಮಿಯನ್ನಲಂಕರಿಸುವರೋ ಎಂಬಂತೆ ಸರ್ವಾಂಗಸುಂದರಿಯಾದ ಆ ಶಕುಂತಲೆಯನ್ನನೇಕ ಭೂಷಣಂಗಳಿಂದಲಂಕರಿಸುತ್ತಿರಲು;

ಅಷ್ಟರಲ್ಲೇ ಕಣ್ವಮುನಿಯು ಸರಸ್ಸಿನಲ್ಲಿ ಸ್ನಾನವಂಗೆಯ್ದು ಬಂದು, ಸಮಸ್ತಾಭರಣಂಗಳಿಂ ಭೂಷಿತಳಾಗಿರುವ ಶಕುಂತಲೆಯಂ ನೋಡಿ, ಮನದ ದುಃಖದಿಂದೊಂದು ವಾರ್ತೆಯಂ ನುಡಿಯುತಿರ್ದನು:—

ಅದೆಂತೆನೆ:—ನಮ್ಮ ಶಕುಂತಲೆಯು ಇದುವರೆಗೂ ಎನ್ನಿಂ ಪೋಷಿತಳಾಗಿ ಈಗ ತನ್ನ ಪತಿಯಾದ ದುಷ್ಯಂತರಾಯನ ಗೃಹವಂ ಕುರಿತು ಪೋಗುವಳೆಂದು ಎನ್ನ ಮನವು ಅತಿ ದುಃಖದಿಂ ಯುಕ್ತವಾದುದು. ಹೊರಸೂಸದಂತೆ ರೆಪ್ಪೆಗಳಲ್ಲೇ ತಡೆದಿರುವ ಕಣ್ಣೀರುಗಳಿಂ ಕಲುಷವಾಗಿರುವ ಎನ್ನೀದೃಷ್ಟಿಗಳು ರಾಜಗೃಹವಂ ಪೊಂದಿದ ಮೇಲೆ ಮರಳಿ ಈ ಶಕುಂತಳೆಯಂ ನೋಡುವುದಕ್ಕಿಲ್ಲವೆಂಬ ಚಿಂತೆಯಿಂ ಅಲಸವಾಗಿ ಇನ್ನೊಂದು ಕಡೆಗೆ ಚಲಿಸದೆ ಇರುವುವು. ಮತ್ತು ಅರಣ್ಯದಲ್ಲಿ ವಾಸವಂ ಮಾಡಿಕೊಂಡು ಸಂಸಾರಸುಖವಂ ಬಿಟ್ಟ ಧರ್ಮಜ್ಞಾನಿಯಾದ ಎನಗೂ ಈ ಶಕುಂತಲೆಯಂ ಸಾಕಿದ ಪ್ರೇಮಮಾತ್ರದಿಂದಲೇ ವ್ಯಾಕುಲತ್ವವು ಪ್ರಾಪ್ತವಾಗಿರುವುದು. ಇಂತಲ್ಲದೆ ಪತ್ನೀಪುತ್ರರುಗಳಿಂದೊಡಗೊಂಡು ಸಂಸಾರಸುಖಾಸಕ್ತರಾಗಿರುವ ಜನರುಗಳು ತಮ್ಮ ತಮ್ಮ ಪತ್ನಿಯರಲ್ಲಿ ಪುಟ್ಟಿದ ಹೆಣ್ಣುಮಕ್ಕಳುಗಳು ಅವರವರ ಪತಿಗೃಹವಂ ಕುರಿತು ಪೋಗುವುದರಿಂದುಂಟಾಗುವ ಹೊಸಪರಿಯಾದ ದುಃಖಗಳಿಂ ಪೀಡಿತರಾಗಿ ಹೇಗೆ ಜೀವಿಸುವರೋ ತಿಳಿಯದು!'' ಎಂದು ನುಡಿಯುತ್ತ ಬರುತ್ತಿರಲು ,

ಸಖಿಯರುಗಳೀರ್ವರೂ ಹಿಂದಿರುಗಿ ಆ ಕಣ್ವಮುನೀಶ್ವರನಂ ನೋಡಿ ಶಕುಂತಳೆಯಂ ಕುರಿತು—'' ಎಲೆ ಶಕುಂತಳೆ, ನೀನು ಸಮಸ್ತಾಭರಣದಿಂದಲಂಕೃತಳಾದೆ. ಇನ್ನುಮೇಲೆ ಜಾಗ್ರತೆಯಿಂ ಸೀರೆ ಕುಪ್ಪುಸವಂ ತೊಟ್ಟುಕೋ '' ಎಂದು ಪೇಳಲು;

ಆ ಶಕುಂತಳೆಯು ಮನ್ಮಥನ ಜಯಲಕ್ಷ್ಮಿಯು ಬೆಳದಿಂಗಳೆಂಬ ವಸ್ತ್ರವನ್ನು ಡುವಂತೆ ಅತಿ ಶುಭ್ರಮಾದ ಸೀರೆ ಕುಪ್ಪಸಗಳಿಂದಲಂಕೃತಳಾಗಲು ;

ಗೌತಮಿಯು—" ಎಲೆ ಮಗಳೇ, ನಿನ್ನ ತಂದೆಯಾದ ಕಣ್ವಮುನೀಶ್ವರನು ಆನಂದವೆಂಬ ನದಿಯಂ ಹೊಂದಿದೋಳಿಸುವ್ವೋ ಎಂಬಂತಿರುವ ನೇತ್ರಗಳಿಂ, ನಿನ್ನಾಲಿಂಗನವಂ ಮಾಡುವನೋ ಎಂಬಂತೆ ದಯಾದೃಷ್ಟಿಯಿಂ ನೋಡುತ್ತಿರುವನು. ಸಮೀಪವಂ ಸೇರಿ ಆವನ ಪಾದಂಗಳಿಗೆ ವಂದನೆಯಂ ವಿರಚಿಸು" ಎಂದು ಪೇಳಲು;

ಶಕುಂತಲೆಯು ಲಜ್ಜೆಯಿಂ—" ಎಲೈ ತಂದೆಯಾದ ಮಹಾಮುನಿಯೇ, ನಿನ್ನ ಚರಣಾರವಿಂದಗಳಿಗೆ ನಮಸ್ಕಾರವಂ ಗೆಯ್ಯುವೆನು " ಎಂದು ನುಡಿದು ನಮ ಸ್ಕರಿಸಲು ;

ಕಣ್ವಮುನಿಯು ಶಕುಂತಲೆಯಂ ಕುರಿತು—" ಎಲೆ ಪುತ್ರಿ, ಯಯಾ ತಿರಾಯನಿಗೆ ವೃಷಪರ್ವರಾಯನ ಮಗಳಾದ ಶರ್ಮಿಷ್ಠೆಯು ಹೇಗೆ ಪ್ರೇಮ ಪಾತ್ರಳಾಗಿರ್ದು ರಾಜ್ಯಾಧಿಪತ್ಯಕ್ಕೆ ಯೋಗ್ಯನಾದ ಪುರುವೆಂಬ ಪುತ್ರನಂ ಪಡೆದಳೋ, ಹಾಗೆ ನಿನ್ನ ಪತಿಯಾದ ದುಷ್ಯಂತರಾಯನ ವಿಶ್ವಾಸಕ್ಕೆ ಪಾತ್ರಳಾಗಿ ಯುವರಾಜಪದವಿಗೆ ಯೋಗ್ಯನಾದ ಪುತ್ರನಂ ಪಡೆ " ಎಂದು ಆಶೀರ್ವಾದವಂ ಗೆಯ್ಯಲು ;

ಗೌತಮಿಯು—"ಎಲೈ ಷಡ್ಗುಣೈಶ್ವರ್ಯಸಂಪನ್ನನಾದ ಮಹಾಮುನಿಯೇ, ಈ ನಮ್ಮ ಶಕುಂತಳೆಯಂ ತನ್ನ ಪತಿಗೆ ಪ್ರೀತಿಪಾತ್ರಳಾಗುವಂತೆಯೂ ಸಮಸ್ತ ಭೂಮಂಡಲಕ್ಕೆ ದೊರೆಯಾಗುವ ಪುತ್ರನಂ ಪಡೆಯುವಂತೆಯೂ–ಈ ಎರಡು ಪ್ರಕಾ ರವಾಗಿ ಅಪ್ಪಣೆಯನ್ನಿತ್ತಿರುವ ವರವು ಒಂದು ಕಾಲಕ್ಕೂ ವ್ಯರ್ಥವಾಗಲಾಱದು " ಎಂದು ನುಡಿಯಲು ;

ಆ ಕಣ್ವಮುನೀಶ್ವರನು ಶಕುಂತಳೆಯಂ ಕುಱಿತು—" ಎಲೆ ಪುತ್ರಿ, ಇತ್ತಲು ಯಜ್ಞಶಾಲೆಯಲ್ಲಿರುವ ಸದ್ಯೋಹುತವಾದ ಅಗ್ನಿಯ ಪ್ರದಕ್ಷಿಣೆಯಂ ಗೆಯ್ಯುವುದು" ಎಂದು ಅವಳಂ ಕರೆದುಕೊಂಡು ಸರ್ವರಿಂದೊಡಗೂಡಿ ಬಂದು, ಆ ಶಕುಂತಲೆಯಂ ಅಗ್ನಿಪ್ರದಕ್ಷಿಣೆಮಾಡುವಂತೆ ಮಾಡಿ, ಆ ಔಪಾಸನಾಗ್ನಿಗಳಂ ಕುಱಿತು "ಎಲೈ ಆಹವನೀಯ ಗಾರ್ಹಸ್ಪತ್ಯದಕ್ಷಿಣಾಗಳೆಂದು ಪ್ರಸಿದ್ಧಂಗಳಾಗಿ ಸಮಿತ್ತು ದರ್ಭೆ ಗಳಿಂದಲಂಕೃತವಾಗಿ, ವೇದಿಕೆಗಳಿಂ ಯುಕ್ತಮಾದ ಅಗ್ನಿಗಳೇ, ನಿಮ್ಮ ಪ್ರದಕ್ಷಿಣ ವಂ ಗೆಯ್ಯುತ್ತಿರುವ ಈ ಶಕುಂತಲೆಗುಂಟಾಗುವ ಸಮಸ್ತ ವಿಘ್ನಗಳಂ ಪರಿಹರಿಸಿರಿ,

ಶುಭವನ್ನುಂಟುಮಾಡಿರಿ'' ಎಂದು ಯಜ್ಞಗೃಹದಲ್ಲಿ ಇರುವ ಅಗ್ನಿಗಳಂ ಕುಱಿತು ಪೇಳಿ, ಇವಳ ಸಂಗಡ ಪೋಗುವುದಕ್ಕೆ ಶಾರ್ಙ್ಗರವಮಿಶ್ರ ಮೊದಲಾದ ಶಿಷ್ಯರುಗಳು ಎಲ್ಲಿ?'' ಎಂದು ಕೇಳಲು ;

ಅಷ್ಟಱಲ್ಲೇ ಆ ಶಿಷ್ಯರೆಲ್ಲರೂ ಸನ್ನದ್ಧರಾಗಲಾಗಿ ಅವರಲ್ಲೊಬ್ಬ ಶಿಷ್ಯನಂ ಕುಱಿತು—'' ಎಲೈ ಶಾರ್ಙ್ಗರವನೇ, ಈ ನಿನ್ನ ತಂಗಿಯಾದ ಶಕುಂತಲೆಗೆ ಒಳ್ಳೆಯ ಮಾರ್ಗವಂ ತೋಱಿಸುತ ಪ್ರತಿಷ್ಠಾನಪುರಕ್ಕೆ ಕರೆದುಕೊಂಡು ಪೋಗುವುದು '' ಎಂದು ಪೇಳಲು;

ಆ ಶಿಷ್ಯನು ಆದೇಶಿಪ್ರೀತಿಯಿಂ ಮಾಡುವೆನೆಂದು ಮಾರ್ಗವಂ ತೋಱಿಸುವುದಱಲ್ಲಿ ಸನ್ನಾಹವುಳ್ಳವನಾದನು.

ಎಂಬಲ್ಲಿಗೆ

ಕೃಷ್ಣರಾಜವಾಣೀವಿಲಾಸ ರತ್ನಾಕರವೆಂಬ ಶಾಕುಂತಲನಾಟಕ ನವೀನಟೀಕಿನಲ್ಲಿ ಶಕುಂತಲೆಯು ಸರ್ವಾಲಂಕಾರಯುಕ್ತಳಾಗಿ, ಪತಿಯಾದ ದುಷ್ಯಂತರಾಯನ ಪುರವಂ ಕುಱಿತು ಪೋಗುವುದಕ್ಕೆಸನ್ನದ್ಧಳಾಗಿರ್ದಳೆಂಬ ತೃತೀಯಕಲ್ಲೋಲದಲ್ಲಿ ಪ್ರಥಮತರಂಗಂ ಸಂಪೂರ್ಣಂ.

REGISTRAR UNIVERSITY

ತೃತೀಯಕಲ್ಲೋಲದ ದ್ವಿತೀಯತರಂಗಂ

ಅನಂತರದಲ್ಲಿ ಆ ಕಣ್ವಮಹಾಮುನಿಯು ಶಕುಂತಲೆಯು ದುಷ್ಯಂತರಾಯನ ಪುರಕ್ಕೆ ಪೋಗುವಳೆಂದು ಖಿನ್ನಹೃದಯನಾಗಿ, ಆ ತಪೋವನದಲ್ಲಿರುವ ಸಮಸ್ತ ವೃಕ್ಷಲತೆಗಳಂ ಕುಱಿತು:—'' ಎಲೈ ವನದೇವತೆಗೆ ವಾಸಯೋಗ್ಯಂಗಳಾದ ವೃಕ್ಷಲತಾಗುಲ್ಮಗಳಿರಾ ! ಯಾವ ಶಕುಂತಲೆಯು ನಿಮ್ಮನಿಮ್ಮ ಪಾತೆಗಳಿಗೆ ನೀರೆಱೆಯುವುದಕ್ಕೆಮೊದಲು ತಾನು ಜಲಪಾನವಂ ಗೆಯ್ಯುವುದಕ್ಕೂ ಇಚ್ಛೈಸದೆ ಇದ್ದಳೋ, ಯಾವಳು ತನ್ನ ಅಲಂಕಾರಕ್ಕೋಸುಗ ನಿಮ್ಮಲ್ಲಿ ಪುಟ್ಟಿದ ಒಂದು ಚಿಗುರನ್ನಾದರೂ ವಿಶ್ವಾಸದಿಂ ಮುರಿಯದೆ ಇರ್ದಳೋ, ಯಾವ ಶಕುಂತಳೆಗೆ ನಿಮ್ಮಗಳಲ್ಲಿ ಮೊದಲು ಪುಷ್ಪಂಗಳಾಗಲು ಮಹತ್ತಾದ ಸಂತೋಷವುಂಟಾಗುತಿರ್ದುದೋ, ಆ ಶಕುಂತಳೆಯು ತನ್ನ ಪತಿಯ ಗೃಹಕ್ಕೆ ಪೋಗುತ್ತಿರುವಳು, ನೀವೆಲ್ಲರೂ ಅಪ್ಪಣೆಯನ್ನೀಯಬೇಕು'' ಎಂದು ಕಂಬನಿಯಿಂ ತುಂಬಿ, ಅತಿ ಚಿಂತಾಕ್ರಾಂತನಾಗಿ ಬೇಡಿಕೊಳ್ಳಲು ; ಅಷ್ಟಱಲ್ಲೇ ಆ ಗಿಡುಮರಗಳಲ್ಲಿರ್ದ ಕೋಗಿಲೆಗಳು

ಧ್ವನಿಯಂ ಗೆಯ್ಯಲು, ಕಣ್ವಮುನಿಯು ನಮ್ಮ ಶಕುಂತಲೆಯೊಡನೆ ಬೆಳೆದ ಈ ವೃಕ್ಷಂಗಳು ಕೋಗಿಲೆಯ ಧ್ವನಿಗಳೆಂಬ ವ್ಯಾಜದಿಂದ ಇವಳು ತನ್ನ ಪತಿಯ ಗೃಹಕ್ಕೆ ಪೋಗಲಿ ಎಂದು ಸಮ್ಮತಿಸಿರುವುವು''

ಎನ್ನುವಷ್ಟರಲ್ಲೀ "ಕಮಲಲತೆಗಳಿಂ ಪೂರಿತವಾದ ಕೊಳಂಗಳಿಂ ಈ ಶಕುಂತಲೆಯು ಪೋಗುವ ಮಾರ್ಗವು ಮನೋಹರವಾದ ಪ್ರದೇಶವುಳ್ಳುದಾಗಲಿ ! ನೆರಳುಗಳುಳ್ಳ ವೃಕ್ಷಂಗಳಿಂ ಶಾಂತವಾದ ಸೂರ್ಯಕಿರಣಗಳ ಸಂತಾಪವುಳ್ಳದ್ದಾಗಲಿ! ಮತ್ತು ಕಮಲಪರಾಗದಂತೆ ಮೃದುವಾದ ದೂಳುಳ್ಳುದಾಗಲಿ ! ಅಧಿಕವಾಗಿ ಇದಿರೆದ್ದು ಬಾರದೆ ಬೆಂಬಿಡಿದು ಹಿತವಾಗಿ ಬೀಸುವ ಗಾಳಿಯುಳ್ಳುದಾಗಿ ಮಂಗಳಕರವಾಗಲಿ !'' ಎಂದು ಆಶೀರ್ವಾದರೂಪವಾಗಿ ವನದೇವತೆಗಳು ಪೇಳ್ದ ಅಶರೀರವಾಕ್ಯವಂ ಕಣ್ವಋಷಿ ಮೊದಲಾದ ಸಮಸ್ತರೂ ಕೇಳಿ ಆಶ್ಚರ್ಯಯುಕ್ತರಾಗಲು ;

ಆ ಗೌತಮಿಯು—" ಎಲೆ ಶಕುಂತಲೆಯೇ, ಬಂಧುಜನದಂತೆ ಅತಿ ಸ್ನೇಹಿತರಾದ ವನದೇವತೆಗಳೆಲ್ಲರೂ ನೀನು ಪತಿಗೃಹಕ್ಕೆ ಪೋಗುವುದಕ್ಕೆ ಅಪ್ಪಣೆಯನ್ನಿತ್ತಿರುವರಾದ್ದರಿಂ ಸಮಸ್ತ ವನದೇವತೆಯರಿಗೆ ನಮಸ್ಕಾರವಂ ಗೆಯ್ಯುವುದು'' ಎಂದು ಪೇಳಲು,

ಆ ವಾಕ್ಯಕ್ಕೆ ಶಕುಂತಲೆಯು ಭಯಭಕ್ತಿಯಿಂ ಯುಕ್ತಳಾಗಿ, ಸಮಸ್ತ ವನದೇವತೆಗಳಂ ಕುರಿತು ನಮಸ್ಕಾರವಂ ಗೆಯ್ದು, ಹಿಂದಿರುಗಿ ಬರುವ ಪ್ರಿಯಂವದೆಯಂ ಏಕಾಂತಕ್ಕೆ ಕರೆದು,–"ಎಲೆ ಪ್ರಿಯಂವದೆಯೇ, ಆರ್ಯಪುತ್ರನಾದ ಮಹಾರಾಜನಂ ನೋಡುವೆನೆಂಬ ಕುತೂಹಲವಿರ್ದರೂ ಬಾಲ್ಯಪ್ರಭೃತಿಯಾಗಿ ವಾಸವಂ ಗೆಯ್ದ ಈ ತಪೋವನವಂ ಬಿಟ್ಟು ಪೋಗುವೆನೆಂದರೆ, ಅತಿ ದುಃಖದಿಂದೊಂದಡಿಯಿಡುವುದಕ್ಕೆ ಕಾಲುಗಳು ಮುಂಬರಿದು ಪೋಗಲಾರವು '' ಎಂದು ನುಡಿಯಲು;

ಪ್ರಿಯಂವದೆಯು—" ಎಲೆ ಶಕುಂತಲೆಯೇ, ನೀನು ಪೇಳುವುದು ಯುಕ್ತವೇ ಸರಿ. ಆದರೂ ಈ ಆಶ್ರಮವಂ ಬಿಟ್ಟು ಪೋಗುವ ವ್ಯಸನವು ನಿನ್ನೊಬ್ಬಳಿಗೇ ಅಲ್ಲ, ಮನೋಹರಾಂಗಿಯಾದ ನಿನ್ನಗಲಿಕೆಯಿಂ ಈ ತಪೋವನದಲ್ಲಿರುವ ಸಮಸ್ತ ಪ್ರಾಣಿಗಳಿಗೂ ನಿನ್ನಂತೆಯೇ ಅತ್ಯಂತ ವ್ಯಸನವುಂಟಾಗಿರುವುದು. ಇದೋ! ಸಮಸ್ತ ಹುಲ್ಲೆಗಳು ನಿನ್ನಿಂದ ಪೋಷಿತಂಗಳಾದ್ದರಿಂ ನೀನು ಪೋಗುವುದಂ ನೋಡಿ ತಾವು ತಿನ್ನುತಿರ್ದ ಹುಲ್ಲುಗಳಂ ಬಿಟ್ಟು ಬಾಯೊಳಿರ್ದ ಕಬಳಂಗಳನ್ನುಗುಳುತ್ತಿರುವುವು.

ನವಿಲುಗಳು ತಾವು ಮಾಡುತಿರ್ದ ನಾಟ್ಯಗಳಂ ಬಿಟ್ಟು ನಿನ್ನಂ ಎದುರು ನೋಡುತ್ತಿರುವುವು. ವನದೇವತೆಗಳು ಶುಭ್ರಮಾಗಿ ಬೀಳುತಿರುವ ಎಲೆಗಳೆಂಬ ವ್ಯಾಜದಿಂ ಕಣ್ಣೀರುಗಳಂ ಬಿಡುತ್ತಿರುವುವು. ಆದ್ದಱಿಂ ಸಮಸ್ತ ಗಿಡುಬಳ್ಳಿಗಳಿಗೂ ನಿನ್ನಂ ಬಿಟ್ಟಿರಲಾಱದ ದುಃಖವಿರುವುದು '' ಎಂದು ಪೇಳಲು;

ಆಶಕುಂತಲೆಯು ದುಃಖದಿಂ ರಕ್ತದಂತೆ ಅತಿ ಕೆಂಪಾದ ನೇತ್ರಗಳುಳ್ಳವಳಾಗಿ ಕಣ್ವಮುನಿಯಂ ಕುಱಿತು—"ಎಲೈ ತಂದೆಯೇ, ಎನ್ನ ಸಹೋದರಿಯಂತೆ ಸಾಕಿದ ಈ ವನಜ್ಯೋತ್ಸ್ನೆಯೆಂಬ ಇರುವಂತಿಗೆಯ ಲತೆಯ ಸಮೀಪವಂ ಕುಱಿತು ಪೋಗಿ ಅದಕ್ಕೆ ನಾನು ಪೋಗುವ ವೃತ್ತಾಂತವಂ ಪೇಳಿ ಬರುವೆನು'' ಎನಲು;

ಕಣ್ವಮುನಿಯು—"ಎಲೆ ಪುತ್ರಿಯೆ, ನಿನಗಾಬಳ್ಳಿಯಲ್ಲಿ ಸಹೋದರಿಯಂತೆ ಸ್ನೇಹವಿರುವುದಂ ಬಲ್ಲೆನು. ದಕ್ಷಿಣದಿಕ್ಕಿನಲ್ಲಿರುವ ಆ ಲತೆಯಂ ಕುಱಿತು ಪೋಗು '' ಎಂದು ನುಡಿಯಲು ;

ಮಂದಗಮನದಿಂ ವನಜ್ಯೋತ್ಸ್ನೆಯೆಂಬ ಲತೆಯ ಸಮೀಪವಂ ಸೇರಿ, "ಎಲೆ ವನಜ್ಯೋತ್ಸ್ನೆಯೇ, ನಾನು ನನ್ನ ಪತಿಗೃಹವಂ ಕುಱಿತು ಪೋಗುವೆನು. ನೀನು ಸೀವಮಾವಿನ ಮರದಿಂ ಕೂಡಿ ಸಂತೋಷದಿಂದಿರುವೆ. ದಿಕ್ಕುದಿಕ್ಕಿಗೆ ಪೋಗಿರುವ ನಿನ್ನ ಕವಲುಗಳೆಂಬ ತೋಳುಗಳಿಂ ಎನ್ನನಾಲಿಂಗನವಂ ಗೆಯ್ಯುವುದು; ಇದು ಮೊದಲು ಇನ್ನುಮೇಲೆ ನಾನು ದೂರಮಾಗಿ ಪೋಗುವಳಾದ್ದಱಿಂ ಎನ್ನಂತೆ ಅನ್ನಾದಿಗಳಂ ಬಿಟ್ಟು ಜಲವನ್ನೆಱೆದು ಸಂರಕ್ಷಿಸುವರು ಯಾರು?'' ಎಂದು ದುಃಖದಿಂ ಗದ್ಗದಗೂಡಿದ ವಚನವಂ ಪೇಳುತ್ತಾ ಮುತ್ತಿನಂತೆ ಕಣ್ಣೀರುಗಳಂ ಬಿಡುತ್ತಿರಲು;

ಆ ಕಣ್ವಮುನೀಶ್ವರನು ಆ ಶಕುಂತಲೆಯಂ ವನಜ್ಯೋತ್ಸ್ನೆಯೆಂಬ ಲತೆಯಂ ಸಹ ನೋಡಿ—"ಎಲೆ ಪುತ್ರಿಯಾದ ಶಕುಂತಲೆಯೇ, ಮೇನಕೆಯು ವಿಶ್ವಾಮಿತ್ರನಿಂದ ನಿನ್ನಂ ಪೆತ್ತು ಹಿಮವತ್ಪರ್ವತದ ತಪ್ಪಲಲ್ಲಿ ಬಿಟ್ಟುಹೋಗಲಾಗಿ ಸಂರಕ್ಷಿಸುವುದಕ್ಕೋಸುಗ ನಿನ್ನಂ ತೆಗೆದುಕೊಂಡುಬರುವಾಗಲೆ ನಿನಗೆ ಅನುರೂಪನಾದ ಕುಲಶೀಲಪರಿಶುದ್ಧನಾದ ಪುರುಷನಿಗೆ ಕೊಟ್ಟು ಸಂತೋಷವಂ ನೋಡಬೇಕೆಂಬ ಸಂಕಲ್ಪವಂ ಗೆಯ್ದನು ಈಶ್ವರಕಟಾಕ್ಷದಿಂದಲೂ ಪೂರ್ವಾರ್ಜಿತಮಾದ ಪುಣ್ಯಗಳಿಂದಲೂ ಸರಿಯಾದ ದುಷ್ಯಂತರಾಯನಂ ಪತಿಯಂ ಮಾಡಿಕೊಂಡಿರುವೆ? ಈ ವನಜ್ಯೋತ್ಸ್ನೆಯು ಯೋಗ್ಯವಾದ ಸೀವಮಾವಿನ ಮರದಿಂದೊಡಗೂಡಿರುವುದು. ಆದ್ದಱಿಂ ನಿಮ್ಮಿಬ್ಬರ

ವಿಷಯದಲ್ಲಿಯೂ ಎನಗಿರ್ದ ವಿವಾಹಚಿಂತೆಯು ಪೋದುದು. ಇನ್ನು ಮೇಲೆ ನಿನ್ನ ಪತಿಯು ಪಟ್ಟಣದ ಮಾರ್ಗವಂ ಅನುಸರಿಸಿ ನಡೆ'' ಎಂದು ನುಡಿಯಲು;

ಶಕುಂತಲೆಯು ಅತಿದುಃಖದಿಂ ಯುಕ್ತಳಾಗಿ ಸಖಿಯರಂ ಕುಱಿತು "ಎಲೌ ಪ್ರಾಣಪ್ರಿಯರಾದ ಸಖಿಯರುಗಳಿರಾ! ಈ ವನಜ್ಯೋತ್ಸ್ನೆಯೆಂಬ ಲತೆಯಂ ಇದುವರೆಗೂ ನಾನು ಅತಿ ಪ್ರೇಮದಿಂ ಸಾಕಿದೆನು. ಇನ್ನುಮೇಲೆ ನಿಮ್ಮಿಬ್ಬರ ಕೆಯ್ಯಲ್ಲಿ ಎತ್ತಿಕೊಡುವೆನು. ಬಾಡಿಪೋಗದಂತೆ ಆರಯ್ಕೆಗೆಯ್ವುದು'' ಎಂದು ನುಡಿಯಲು ;

ಸಖಿಯರುಗಳು—" ಎಲೆ ಶಕುಂತಳೆಯೇ, ಈ ವನಜ್ಯೋತ್ಸ್ನೆಯೆಂಬ ಲತೆಯನ್ನು ಮಾತ್ರ ನಿಮ್ಮ ಹಸ್ತಕ್ಕೆ ಕೊಟ್ಟೆನೆಂದು ನುಡಿಯುತ್ತಿರುವೆ. ನಮ್ಮಿಬ್ಬರಂ ಯಾರ ಹಸ್ತಕ್ಕೆ ಒಪ್ಪಿಸಿ ಪೋಗುವೆ, ಪೇಳು'' ಎಂದು ನುಡಿದು, ಅಧಿಕವ್ಯಸನದಿಂ ಕಣ್ಣೀರಂ ಬಿಡುತಿರಲು ;

ಕಣ್ವಮುನಿಯು ರೋದನವಂ ಗೆಯ್ಯುತ್ತಿರುವ ಆ-ಅನಸೂಯಾಪ್ರಿಯಂವದೆಯರೀರ್ವರಂ ಕುಱಿತು—" ಎಲೌ ಸಖಿಯರುಗಳಿರಾ! ನೀವಿಬ್ಬರೂ ದುಃಖವಂ ಪಡುತ್ತಿರುವ ಶಕುಂತಲೆಯಂ ಸಮಾಧಾನವಂ ಗೆಯ್ಯಬೇಕಲ್ಲದೆ ನೀವೇ ರೋದನವಂ ಗೆಯ್ಯುವುದು ಯುಕ್ತವಲ್ಲ'' ಎಂದು ನುಡಿದು, ಆ ಲತೆಯ ಸಮೀಪದಿಂ ಎಲ್ಲರಂ ಹಿಂದಿರುಗಿಸಿ, ಕರೆದುಕೊಂಡು ಬರುತ್ತಿರಲು ;

ಶಕುಂತಲೆಯು—" ಎಲೈ ತಂದೆಯೇ, ಎನ್ನ ಪರ್ಣಶಾಲೆಯ ಸುತ್ತಲೂ ನಿತ್ಯದಲೂ ಸಂಚರಿಸುತ್ತ ಸಂಪೂರ್ಣ ಗರ್ಭಿಣಿಯಾಗಿರುವ ಈ ಹೆಣ್ಣು ಹುಲ್ಲೆಯು ಯಾವಾಗ ಮಱಿಯನ್ನೀಯುತ್ತಿರುವುದೋ ಆಗ ಪ್ರೀತಿಕರವಾದ ಈ ಮೃಗವು ಮಱಿಯಂ ಪೆತ್ತ ವಾರ್ತೆಯಂ ಪೇಳಿ ಬರುವಂತೆ ಎನ್ನ ಬಳಿಗೆ ಒಬ್ಬ ಶಿಷ್ಯನಂ ಕಳುಹಿಸಿಕೊಡಬೇಕು'' ಎಂದು ನುಡಿಯಲು ;

ಕಣ್ವಮುನಿಯು—" ಎಲೆ ಪುತ್ರಿಯೇ, ನೀನು ಪೇಳಿದ ವಾಕ್ಯವಂ ಮಱೆಯದೆ ಈ ವೃತ್ತಾಂತವಂ ಪೇಳಿ ಕಳುಹಿಸುವೆನು'' ಎನಲು ;

ಶಕುಂತಲೆಯು ತನ್ನ ಒತ್ತಿನಲ್ಲಿ ಸುತ್ತಿಬರುವ ಹುಲ್ಲೆಯ ಮಱಿಯಂ ನೋಡಿ ನಿಂದು—" ಎಲೆ ಸಖಿಯರುಗಳಿರಾ ಈ ಮಱಿಹುಲ್ಲೆಯು ಯಾತಕ್ಕೋಸುಗವೋ ಬಾರಿಬಾರಿಗೂ ಎನ್ನ ಪಾದಮೂಲದ ಸೀರೆಯ ನೆಱಿಯಲ್ಲಿ ಸುತ್ತಿ ನಿಲ್ಲುತ್ತಲಿರುವುದು'' ಎನಲು;

ಕಣ್ವಮುನಿಯು—“ ಎಲೌ ಮಗಳೇ, ಕೇಳು. ಯಾವ ಮೃಗವಂ ದರ್ಭೆಗಳ ಕೊನೆಯಿಂ ಗಾಯವಾಗಿರುವ ಮುಖದಲ್ಲಿ ವ್ರಣಹರವಾದ ಇಂಗಳದ ಎಣ್ಣೆಯಂ ಹತ್ತಿಸಿ ಸಲಹಿದೆಯೋ, ಮತ್ತು ಕಾಡಿನಲ್ಲಿ ಬೆಳೆದ ಸಾಮೆಯೆಂಬ ಧಾನ್ಯಮುಷ್ಟಿಯಿಂ ವೃದ್ಧಿಯಂ ಪೊಂದಿಸಿದೆಯೋ, ಹಾಗೆ ನಿನ್ನಿಂದ ಪೋಷಿತವಾಗಿ ಪುತ್ರನಂತೆ ಪ್ರೇಮಾಸ್ಪದವಾಗಿರುವ ಈ ಹುಲ್ಲೆಯ ಮಱಿಯು ನೀನು ಪೋಗುವ ಮಾರ್ಗವಂ ಬಿಟ್ಟು ಎಂತು ಪೋಗುವುದು ! ” ಎಂದು ನುಡಿಯಲು;

ಶಕುಂತಲೆಯು ಆ ಹುಲ್ಲೆಯ ಮಱಿಯಂ ಕುಱಿತು—“ ಮಗುವೇ, ನಿನ್ನ ಸಹವಾಸವನ್ನೇ ಬಿಟ್ಟು ಪೋಗುತ್ತಿರುವ ಎನ್ನಂ ಯಾತಕ್ಕೆ ಅನುಸರಿಸಿ ಬರುತ್ತಿರುವೆ? ನೀನು ನವಮಾಸವೂ ಹೊಟ್ಟೆಯೊಳಿಟ್ಟು ಪೆತ್ತ ತಾಯಿಯಿಲ್ಲದೆ ಎನ್ನಿಂದಲೇ ರಕ್ಷಿಸಿಕೊಂಡಿರುವೆ. ಈಗಲೂ ಎನ್ನಂ ಅಗಲಿರುವ ನಿನ್ನಂ ತಂದೆಯಾದ ಕಣ್ವಮುನಿಯು ಹಾನಿವೃದ್ಧಿಯಂ ಚಿಂತಿಸುತ್ತ ಸಂರಕ್ಷಿಸುವನಾದ್ದಱಿಂ ಹಿಂದಿರುಗಿ ಪೋಗು ” ಎಂದು ನುಡಿದು, ಅಧಿಕವಾಗಿ ಕಣ್ಣೀರುಗಳಂ ಬಿಡುತ ಪೋಗುತ್ತಿರಲು;

ಕಣ್ವಮುನೀಶ್ವರನಾ ಶಕುಂತಲೆಯ ಮುಖವಂ ನೋಡಿ-“ ಎಲೌ ಪುತ್ರಿಯೇ, ಮನವಂ ದೃಢವಂ ಗೆಯ್ದು ಉನ್ನತಂಗಳಾದ ರೆಪ್ಪೆಗಳಿಂದೊಪ್ಪುತ್ತಿರುವ ನಿನ್ನ ನೇತ್ರಗಳಿಂ ಪೊಱಮಡುತ್ತಿರುವ ಕಂಬನಿಗಳಂ ಹೊಱಸೂಸದಂತೆ ನಿರೋಧವಂ ಗೆಯ್ಯುವುದು. ಏಕೆಂದರೆ—ಈ ತಪೋವನದ ಮಾರ್ಗವು ಕಾಣದೆ ವ್ಯತ್ಯಾಸಗಳಾಗುವುದು.” ಎಂದು ನುಡಿದು ಅವಳ ದುಃಖವಂ ಸಮಾಧಾನವಂ ಗೆಯ್ಯುತ್ತಿರಲು ;

ಶಾರ್ಙ್ಗರವನೆಂಬ ಶಿಷ್ಯನು ಗುರುವಾದ ಕಣ್ವಮುನೀಶ್ವರನಂ ಕುಱಿತು,-“ ಎಲೈ ಷಡ್ಗುಣೈಶ್ವರ್ಯಸಂಪನ್ನನಾದ ಸ್ವಾಮಿಯೇ, ಕಳುಹಿಸುವುದಕ್ಕೆ ಸಂಗಡ ಬಂದ ಬಂಧುಗಳು ಜಲವಂ ದಾಂಟಿ ಬರಕೂಡದು, ಎಂಬ ಶಾಸ್ತ್ರವಂ ಕೇಳಿರುವೆನು. ಆದ್ದಱಿಂ ಮುಂಗಡೆಯಲ್ಲಿ ಸರೋವರವು ಕಾಣುತ್ತಿರುವುದು. ಇಲ್ಲಿ ನಿಂತು ನಮಗೆ ಪೇಳತಕ್ಕ ನೀತಿಮಾರ್ಗವಂ ಪೇಳಿ ಹಿಂದಿರುಗಿ, ಪರ್ಣಶಾಲೆಯಂ ಕುಱಿತು ಪೋಗಬಹುದು” ಎಂದು ಬಿನ್ನೈಸಲು;

ಆ ವಾಕ್ಯಕ್ಕೆ ಕಣ್ವಮುನಿಯು ಸಮ್ಮತನಾಗಿ, ಮುಂಭಾಗದಲ್ಲಿರ್ದ ಹಾಲೆಯ ಮರದ ನೆರಳಂ ಸೇರುವೆನೆಂದು ಶಕುಂತಲೆ ಮೊದಲಾದ ಸಮಸ್ತರಿಂದೊಡಗೂಡಿ ಬಂದು, ಪೂಜ್ಯನಾದ ದುಷ್ಯಂತರಾಯಂಗೆ ಯುಕ್ತವಾದ ಏನು ವಾಕ್ಯವಂ ಪೇಳಿ ಕಳುಹಿಸಲಿ, ಎಂದು ತನ್ನ ಮನದೊಳಾಲೋಚನೆಯಂ ಗೆಯ್ಯುತ್ತಾ ನಿಲ್ಲಲು ;

ಶಕುಂತಳೆಯು ಆ ಕೊಳದ ಅಂಚಿನಲ್ಲಿ ಸಂಚರಿಸುವ ಒಂದಾನೊಂದು ಚಕ್ರ

ವಾಕದ ಹೆಣ್ಣು ಪಕ್ಷಿಯು ದಕ್ಷಿಣದಿಕ್ಕಿನಲ್ಲಿರುವ ಕೊಳದಲ್ಲಿ ಬೆಳೆದಿರುವ ತಾವರೆ ಯೆಲೆಯಿಂ ಮರೆಯಾದ ತನ್ನ ಪತಿಯಂ ಕಾಣದೆ ದುಃಖಾತುರಮಾಗಿ ಹೇರಳ ಮಾದ ಧ್ವನಿಯನ್ನುಂಟುಮಾಡುತಿರುವುದು. ಆದ್ದರಿಂ ಪಕ್ಷಿಯಾದರೂ ಇದು ತನ್ನ ಪತಿಯ ಅಗಲಿಕೆಯಿಂ ದುಃಖಪಡುತ್ತಿರುವುದು. ನಾನು ಮಹಾರಾಜನಿಂ ಬಿಟ್ಟಿರು ವುದರಿಂದುಂಟಾದ ದುಃಖವಂ ಸಹಿಸಲಾರೆನು '' ಎಂದು ನುಡಿಯಲು;

ಅನಸೂಯೆಯು—'' ಎಲೆ ಶಕುಂತಳೆಯೇ, ಹಾಗೆ ನೀನು ತಿಳಿಯಬೇಡ. ಈ ಚಕ್ರವಾಕ ಹೆಣ್ಣುಪಕ್ಷಿಯು ತನ್ನ ಪತಿಯಿಲ್ಲದೆ ಇದ್ದರೂ ರಾತ್ರಿಯಂ ಹೆಚ್ಚಾ ದ ವ್ಯಸನದಿಂ ಕಳೆಯುತ್ತಿರುವುದು. ನಿನಗೆ ಮಹಾರಾಜನಾದ ದುಷ್ಯಂತರಾಯನಂ ಮರಳಿ ಕಾಣುವೆನೆಂಬ ಆಶೆಯು ಬಹುಕಾಲದಿಂ ಪ್ರಾಪ್ತವಾದ ಅಧಿಕ ದುಃಖವಂ ಪೋಗಲಾಡಿಸುವುದು'' ಎಂದು ನುಡಿಯುತ್ತಿರಲು ;

ಕಣ್ವಮುನಿಯು ಆ ದುಷ್ಯಂತರಾಯಂಗೆ ಪೇಳಿ ಕಳುಹಿಸತಕ್ಕ ವಾಕ್ಯವಂ ತನ್ನ ಮನದೊಳು ಆಲೋಚನೆಯಂ ಗೆಯ್ದು ಶಾರ್ಙ್ಗರವನಂ ಕರೆದು—'' ಎಲೈ ಶಿಷ್ಯನೇ, ಶಕುಂತಲೆಯನ್ನೊಡಗೊಂಡು ಪ್ರತಿಷ್ಠಾನಪುರಕ್ಕೆ ಪೋಗಿ, ದೊರೆಯಾದ ದುಷ್ಯಂತರಾಯನ ಮುಂಭಾಗದಲ್ಲಿ ಈ ಶಕುಂತಲೆಯಂ ಮುಂದಿಟ್ಟುಕೊಂಡು ಈ ಕೆಲವು ವಾಕ್ಯಗಳಂ ಪೇಳಬೇಕು '' ಎನ್ನಲು ;

ಶಿಷ್ಯನು—'' ಎಲೈ ಸ್ವಾಮಿಯೇ, ನೀವು ಏನು ವಾಕ್ಯವನ್ನಪ್ಪಣೆಯನ್ನೀ ಯುತ್ತಿರುವಿರೋ, ಅದನ್ನು ಹೆಚ್ಚುಕಡಮೆ ಇಲ್ಲದಂತೆ ಆ ದುಷ್ಯಂತರಾಯಂಗೆ ಪೇಳುವೆನು'' ಎಂದು ಬಿನ್ನೈಸಲು;

ಕಣ್ವಮುನಿಯು—'' ಎಲೈ ಶಿಷ್ಯನೇ, ರಾಯನಂ ಕುರಿತು ಈ ವಾಕ್ಯ ವಂ ಪೇಳುವುದು: ಅದೇನೆಂದರೆ—ಕಣ್ವಮುನಿಯಾಗಿರುವನು ತಪಸ್ಸೇ ದ್ರವ್ಯವಾಗಿ ರುವನೆಂತಲೂ, ಗೂಢವಾಗಿ ನೀನು ಮಾಡಿಪೋದೀ ಕಾರ್ಯಮಂ ಜ್ಞಾನದೃಷ್ಟಿಯಿಂ ತಿಳಿದಿರುವನೆಂತಲೂ ತನ್ನ ವಾಕ್ಯವಂ ನಡೆಸದಿರಲು ಶಾಪಾಗ್ನಿಯಿಂ ಸಮಸ್ತ ಸಂಪ ತ್ತಂ ದಹಿಸುವನೆಂತಲೂ, ಚೆನ್ನಾಗಿ ಯೋಚನೆಯಂ ಗೆಯ್ಯುವುದು. ಮತ್ತು ನಿನ್ನ ಕುಲ ವಂ ಬಹುಕಾಲದಿಂ ಉನ್ನತವಾಗಿ ಬೆಳೆದು ಕಳಂಕರಹಿತವಾಗಿರುವುದನ್ನಾಗಿಯೂ ತಮ್ಮಂಥ ಋಷಿಗಳ ವಾಕ್ಯವಂ ಪರಿಪಾಲನೆಯಂ ಗೆಯ್ದುದರಿಂ ಪ್ರಸಿದ್ಧವಾಗಿ ವೃದ್ಧಿಯಂ ಪೊಂದಿರುವುದನ್ನಾಗಿಯೂ ಚೆನ್ನಾಗಿ ಯೋಚನೆಯಂ ಗೆಯ್ದು ಮತ್ತು ತಂದೆಯಾದ ತನಗೂ ತಿಳಿಸದೆ ಏನು ಬಂದರೂ ಬರಲೆಂದು ನಿನ್ನಲ್ಲಿ ಅತಿ ವಿಶ್ವಾಸ ಪೂರ್ವಕವಾಗಿ ನಡೆಸಿರುವ ಶಕುಂತಲೆಯ ಅನುರಾಗಾತಿಶಯವಂ ಚೆನ್ನಾಗಿ ಆಲೋ

ಜನೆಯಂ ಗೆಯ್ದು ಇಂಥ ಪ್ರೇಮಾಸ್ಪದಳಾದ ಶಕುಂತಳೆಯಂ ಅನೇಕರಾದ ನಿನ್ನ ಪತ್ನಿಯರಂತೆ ಸಮಾನವಾಗಿ ಸಲಹಬೇಕೆಂತಲೂ, ಮತ್ತು ನಿನ್ನ ವಾಕ್ಯವೇ ಪ್ರಮಾಣ ವೆಂದು ಯಾರಿಗೂ ತಿಳಿಸದೆ ನಿನ್ನೊಡನೆ ಗಾಂಧರ್ವವಿವಾಹಕ್ಕೆ ಒಡಂಬಟ್ಟಿರುವಳಾ ದ್ದಱಿಂದಿವಳಂ ನಿನ್ನ ಸಮಸ್ತ ಪತ್ನಿಯರಿಗಿಂತಲೂ ಪೂಜ್ಯಳಾಗಿ ಸಲ್ಲತಕ್ಕವಳು ಎಂದು. ಇದಲ್ಲದೆ ಲೋಕದಲ್ಲಿ ಹೆಣ್ಣುಗಳಿಗೆ ತಾಯಿತಂದೆ ಮೊದಲಾದ ಬಂಧುಗಳು ಆಳಿಯನಂ ಕುಱಿತು ವಿಶೇಷವಾಗಿ ಉಪಚಾರೋಕ್ತಿಗಳಂ ಪೇಳತಕ್ಕದ್ದು ಯುಕ್ತ ವಲ್ಲವಾದ್ದಱಿಂ ಭಾವಗರ್ಭಿತವಾಗಿ ಈ ವಾಕ್ಯಗಳಂ ಸೂಚಿಸಿರುವನು. ಇದಱ ಮೇಲೆ ಪುಣ್ಯವಿದ್ದಂತೆ ಕಾರ್ಯಂಗಳು ನಡೆಯುವುವು ಎಂದು–ರಾಯನಂ ಕುಱಿ ತು ಪೇಳುವುದು '' ಎಂದು ಅಜ್ಞೆಯನ್ನಿತ್ತು, ಶಕುಂತಳೆಯಂ ಕುಱಿತು, " ಎಲೌ ಪುತ್ರಿಯೇ ಈಗ ನಿನಗೆ ಕೆಲವು ನೀತಿವಾಕ್ಯಗಳಂ ಪೇಳಬೇಕಾಗಿರುವುದು— ನಾನು ಅರಣ್ಯದಲ್ಲಿ ವಾಸವಂ ಮಾಡಿಕೊಂಡು ಇದ್ದರೂ ಸಮಸ್ತ ಲೋಕವೃತ್ತಾಂತವಂ ಬಲ್ಲೆನು '' ಎನ್ನಲು;

ಆಶಾಙ್ಗರವನು— "ಎಲೈ ಸ್ವಾಮಿಯೇ, ತಮ್ಮಂಥ ಜ್ಞಾನಿಗಳಿಗೆ ಗೋಚ ರವಿಲ್ಲದೆ ಇರುವುದು ಒಂದುಕಾರ್ಯವೂ ಇಲ್ಲದೆ ಇರುವುದಾದ್ದಱಿಂ ನಿಮ್ಮ ಪುತ್ರಿ ಯಾದ ಈ ಶಕುಂತಳೆಗೆ ಬುದ್ಧಿವಾಕ್ಯವನಪ್ಪಣೆಯಂ ಈಯಬೇಕು '' ಎಂದು ವಿಜ್ಞಾಪನೆಯಂ ಗೆಯ್ಯಲು;

ಕಣ್ವಮುನಿಯು ಶಕುಂತಲೆಯ ಶಿರಸ್ಸಿನಲ್ಲಿ ಕರವನ್ನಿಟ್ಟು–"ಎಲೌ ಪುತ್ರಿಯೇ, ಈಗ ನಿನ್ನ ಪತಿಗೃಹವಂ ಪೊಂದಿ, ಅತ್ತೆ ಮಾವ ಮೊದಲಾದ ಪೂಜ್ಯರುಗಳ ಶುಶ್ರೂ ಷೆಯಂ ಚೆನ್ನಾಗಿಮಾಡು. ನಿನ್ನ ಸವತಿಯರುಗಳಲ್ಲಿ ಗರ್ವವಂ ಗೆಯ್ಯದೆ ಪ್ರೇಮ ಪಾತ್ರರಾದ ಸಖಿಯರುಗಳಂತೆ ಹಿತವಾದ ಕಾರ್ಯಗಳಂ ನಡೆಸು. ನಿನ್ನ ಪತಿಯಾದ ರಾಯನು ಒಂದಾನೊಂದು ಕಾಲದಲ್ಲಿ ಕೋಪದಿಂ ನಿನ್ನನ್ನ ಗಲಿದರೂ ಕಡುನುಡಿಯಂ ನುಡಿಯದೆ ಕೋಪದಿಂದವನಿಗೆ ಪ್ರತ್ಯುತ್ತರವಂ ಪೇಳದೆ ಅಸೂಯಾರಹಿತಳಾಗಿರು ವುದು. ಮತ್ತು ನಿನ್ನ ಸೇವೆಯಂ ಗೆಯ್ಯುವ ಜನರುಗಳಲ್ಲಿ ಋಜುಬುದ್ಧಿಯುಳ್ಳವ ಳಾಗಿ ಅವರಂ ದಯದಿಂ ಸಲಹುತ್ತ ಸಮಸ್ತವಾದ ಸಂಪತ್ತುಗಳಿದ್ದರೂ ಗರ್ವಿತಳಾ ಗದೆಯೂ ಇರುವುದು. ಲೋಕದಲ್ಲಿ ಹೀಗೆ ಪತಿಯೇ ಗತಿಯೆಂದು ಇರುವ ಸ್ತ್ರೀಯರು ಗಳು ಪತಿವ್ರತಾಶಿರೋಮಣಿಯರಾಗಿ ಪತ್ನಿಯರೆಂಬ ಪದವಿಗೆ ಯೋಗ್ಯರಾಗುವರು. ಹೀಗಿಲ್ಲದೆ ವಕ್ರರಾಗಿ ದುರಾಚಾರಿಗಳಾಗಿರುವ ಸ್ತ್ರೀಯರುಗಳು ಉಭಯಕು ಲಕ್ಕೂ ಮನೋವ್ಯಥೆಯಂ ಪುಟ್ಟಿಸುತ್ತಿರುವರು. '' ಎಂದು ಶಕುಂತಲೆಗೆ ಬುದ್ಧಿ

ಯಂ ಪೇಳಿ, ಗೌತಮಿಯಂ ಕುಱಿತು—“ ಎಲೌ ಗೌತಮಿಯೇ, ಇದಱಮೇಲೆ ನಿನ್ನ ಮನಕ್ಕೆ ಏನು ತೋಱುವುದೋ ಆಬುದ್ಧಿಯಂ ಪೇಳಬಹುದು.” ಎಂದು ನುಡಿಯಲು;

ಆ ಗೌತಮಿಯು—“ ಎಲೈ ಸ್ವಾಮಿಯೇ, ನೀನು ಅಪ್ಪಣೆಯನ್ನಿತ್ತುದಕ್ಕಿಂತಲೂ ಸ್ತ್ರೀಯರಿಗೆ ಪೇಳತಕ್ಕ ಬುದ್ಧಿಯಿನ್ನೇನೂ ಇರಲಱದು ” ಎಂದು ನುಡಿದು ಶಕುಂತಲೆಯಂ ಕುಱಿತು—“ ಬಾಲಕಿಯೇ, ಈಗ ನಿನ್ನ ತಂದೆಯಾದ ಕಣ್ವಮುನೀಶ್ವರನು ಪೇಳಿದ ಬುದ್ಧಿಯಂ ನಿನ್ನ ಮನದಲ್ಲಿ ದೃಢವಾಗಿರಿಸು ” ಎಂದು ಪೇಳಲು,

ಕಣ್ವಮುನೀಶ್ವರನು—“ ಎಲೆ ಪುತ್ರಿ, ಶಕುಂತಲೆಯೇ, ನಿನ್ನ ಪ್ರಯಾಣಕ್ಕೆ ಸಾವಕಾಶವಾಗುವುದು. ನಿನ್ನ ಸಖಿಯರೀರ್ವರನ್ನಾಲಿಂಗನೆಯಂ ಗೆಯ್ದು ಜಾಗ್ರತೆಯಾಗಿ ಪೋಗುವುದು ” ಎಂದು ನುಡಿದು, ಆಶಕುಂತಲೆಯ ಗಲ್ಲವಂ ತನ್ನ ಕರಪಲ್ಲವದಿಂ ಮುದ್ದಿಸುತ್ತಿರಲು ;

ಶಕುಂತಲೆಯು ಕರ್ಣಾಂತವಾಗಿ ಹಬ್ಬಿರುವ ಕಣ್ಣುಗಳಿಂ ಜಲಧಾರೆಯನ್ನುಂಟುಮಾಡುತ್ತ—“ ಎಲೈ ತಂದೆಯಾದ ಮಹಾಮುನಿಯೇ, ನೀನು ಅಪ್ಪಣೆಯನ್ನೀಯುವ ವಾಕ್ಯದಿಂದೀ ಅನಸೂಯೆ ಪ್ರಿಯಂವದೆಯರೀರ್ವರು ಎನ್ನಂ ಬಿಟ್ಟು ಹಿಂದಿರುಗಿ ಪೋಗುವಂತೆ ಕಾಣುವರು ” ಎನ್ನಲು;

ಕಣ್ವಮುನಿಯು—“ಎಲೌ ಪುತ್ರಿಯೇ, ಇವರೀರ್ವರನ್ನು ನಿನ್ನಂತೆ ಅನುರೂಪರಾದ ಪುರುಷರಿಗೆ ಕೊಟ್ಟು ವಿವಾಹಂ ಗೆಯ್ಯಬೇಕಾಗಿರುವುದಱಿಂದ ಈಗ ನಿನ್ನೊಡನೆ ಬರುವುದು ಯುಕ್ತವಲ್ಲ. ಗೌತಮಿಯು ನಿನ್ನ ಸಂಗಡಲೇ ಬರುವಳು ” ಎಂದು ಉಚಿತೋಪಚಾರವಾಕ್ಯವಂ ನುಡಿದು ಸಮಾಧಾನವಂ ಗೆಯ್ಯುತ್ತಿರಲು ;

ಶಕುಂತಲೆಯು ತನ್ನ ತಂದೆಯಾದ ಕಣ್ವಮುನೀಶ್ವರನ ಚರಣಾಂಬುಜಕ್ಕೆ ನಮಸ್ಕಾರವಂ ಗೆಯ್ದು ಆ ಪಾದರಜಸ್ಸಂ ತನ್ನ ಶಿರದೊಳಾಂತು,—“ಎಲೈ ತಂದೆಯೇ, ಬಾಲ್ಯಾರಭ್ಯವಾಗಿ ಇದುವರೆಗೂ ನಿನ್ನ ತೊಡೆಯಮೇಲೆ ಬಳೆದು ಈಗ ಆ ತೊಡೆಗಳಿಂ ವಿರಹಿತಳಾದೆನು. ಲೋಕದಲ್ಲಿ ಮಲೆಯ ಪರ್ವತಕಿಂತ ಚಂದನಲತೆಯು ಹೇಗೆ ಇನ್ನೊಂದು ಕಡೆಯಲ್ಲಿ ಜೀವಿಸಲಾಱದೋ ಹಾಗೆ ನಿನ್ನನ್ನಗಲಿ ಪತಿಗೃಹದಲ್ಲಿ ಹೇಗೆ ಪ್ರಾಣವಂ ಧರಿಸುವೆನು ? ” ಎಂದು ಹೇರಳವಾಗಿ ರೋದನವಂ ಗೆಯ್ಯುತ್ತ ಬಾಷ್ಪವೃಷ್ಟಿಯನ್ನುಂಟುಮಾಡುತ್ತಿರಲು ;

ಕಣ್ವಮುನಿಯು—“ ಎಲೆ ಸುತೆಯೆ, ಏಕೆ ಅತಿದುಃಖವಂ ಪೊಂದುತ್ತಿರುವೆ? ಈಗ ನಿನಗುಂಟಾಗುವ ದುಃಖವು ಪತಿಗೃಹವಂ ಸೇರಿದಮೇಲೆ ಇರಲಾಱದು. ಹೇಗೆಂದರೆ:—ಸತ್ಕುಲದಲ್ಲಿ ಪುಟ್ಟಿರುವ ನಿನ್ನ ಪತಿಗೆ ಯೋಗ್ಯವಾದ ಪಟ್ಟಸ್ತ್ರೀಯ

ಸ್ಥಾನದಲ್ಲಿರ್ದುಕೊಂಡು ಅನೇಕವಾಗಿ ಸೇವೆಯಂ ಮಾಳ್ಪ ಸ್ತ್ರೀಯರಿಂದಲೂ ಧನ ಕನಕ ರತ್ನಭೂಷಣಮೊದಲಾದ ವಿಭವದಿಂ ಕೂಡಿ ದೊರೆತನಕ್ಕೆ ಯೋಗ್ಯಮಾದ ಉಯಾಯ ಕಾರ್ಯಂಗಳಲ್ಲಿ ಒಂದು ಕ್ಷಣಮಾದರೂ ಸಾವಕಾಶವಿಲ್ಲದಿರುತ್ತ ಪೂರ್ವದಿಕ್ಕೆಂಬ ಸ್ತ್ರೀಯು ಸೂರ್ಯನಂ ಪಡೆಯುವಂತೆ ಪವಿತ್ರಕರನಾದ ತೇಜೋವಂತನಾದ ಪುತ್ರನಂ ಪಡೆದು ಎನ್ನ ವಿಯೋಗದಿಂದುಂಟಾದ ದುಃಖವಂ ಮರೆಯುತ್ತಿರುವೆ " ಎಂದು ಶಕುಂತಳೆಯ ಮಸ್ತಕವಂ ತನ್ನ ಹಸ್ತದಿಂ ಸೇವರಿಸುತ್ತಿರಲು ;

ಶಕುಂತಳೆಯು ಮರಳಿ ಅವನ ಪಾದಂಗಳಿಗೆ ವಂದನೆಯಂ ಗೆಯ್ಯಲು ;

ಮುನಿಯು–" ನಿನ್ನ ಮನೋರಥವಿದ್ದಂತೆ ನಿನ್ನ ಕಾರ್ಯಗಳೆಲ್ಲಾ ಕೈಗೂಡಲಿ ! " ಎಂದು ಆಶೀರ್ವಾದವಂ ಗೆಯ್ಯಲು ;

ಶಕುಂತಳೆಯು ತನ್ನ ಸಖಿಯರುಗಳ ಸಮೀಪವಂ ಸೇರಿ, " ಎಲೌ ಪ್ರಾಣಪ್ರಿಯರುಗಳಿರಾ, ನೀವೀರ್ವರೂ ಎನ್ನಂ ಏಕಕಾಲದಲ್ಲಿ ಆಲಿಂಗನಂ ಗೆಯ್ಯುವುದು " ಎಂದು ನುಡಿಯಲು ;

ಸಖಿಯರುಗಳೀರ್ವರು ಅದೇ ರೀತಿಯಿಂದಾಶಕುಂತಳೆಯನ್ನಾಲಿಂಗಿಸಿ, " ಎಲೌ ಸುಂದರಿಯೇ, ನಿನ್ನ ಪತಿಯಾದ ದುಷ್ಯಂತರಾಯನು ಅನೇಕವಾದ ರಾಜ್ಯವಂ ಪರಿಪಾಲನೆಯಂ ಗೆಯ್ಯುವ ಕಾರ್ಯಗೌರವದಿಂ ಗಾಂಧರ್ವವಿವಾಹದಿಂ ನಿನ್ನಂ ವಿವಾಹಿತಳಂ ಮಾಡಿಕೊಂಡ ವೃತ್ತಾಂತವಂ ಒಂದುವೇಳೆ ಮರೆತವನಾದರೆ ಅವನ ನಾಮಾಂಕಿತದಿಂ ಯುಕ್ತಮಾದ ಈ ಮುದ್ರಿಕೆಯನ್ನಾರಾಯಂಗೆ ತೋರಿಸುವುದು " ಎಂದಾವುಂಗರವನ್ನಾಶಕುಂತಳೆಯ ಹಸ್ತಕ್ಕೆ ಕೊಡಲು ;

ಶಕುಂತಳೆಯು–" ಎಲೌ ಸಖಿಯರುಗಳಿರಾ, ಈ ಸಮಯದಲ್ಲಿ ಈ ಮುದ್ರಿಕೆಯನ್ನಿತ್ತು ಕ್ಷೋಭವನ್ನುಂಟುಮಾಡಿದಿರಿ. ದೊರೆಯಾದ ದುಷ್ಯಂತರಾಯನು ಬಹುಜನ ಸ್ತ್ರೀಯರಿಗೆ ವಲ್ಲಭನಾದ್ದರಿಂದೊಂದು ಸಮಯದಲ್ಲಿ ಎನ್ನಂ ಮರೆತರೂ ಮರೆಯಬಹುದು " ಎನಲು ;

ಸಖಿಯರು–" ಎಲೆ ಶಕುಂತಳೆಯೇ, ನೀನು ಭಯವಂ ಪೊಂದಬೇಡ. ಲೋಕದಲ್ಲಿ ಅತಿಸ್ನೇಹವು ಎಲ್ಲಿ ಉಂಟಾಗುವುದೋ ಆಸ್ಥಳದಲ್ಲಿ ಮೊದಲು ಕಷ್ಟವನ್ನೇ ಯೋಚಿಸಬೇಕಾಗಿರುವುದು. ಯಾವುದಿರ್ದರೂ ನಿನ್ನ ತಂದೆಯ ಆಶೀರ್ವಾದ ಪ್ರಭಾವದಿಂ ಶುಭಮಾಗುವುದು " ಎಂದು ಮಧುರಾಲಾಪವಂ ಗೆಯ್ಯುತಿರಲು,

ಅಷ್ಟರಲ್ಲೇ ಶಾರ್ಙ್ಗರವನು—" ಎಲೆ ಶಕುಂತಳೆಯೇ, ನೀನು ಸರ್ವರಿಗೂ

ಯೋಗಕ್ಷೇಮವಂ ಪೇಳುತ್ತಿರುವಷ್ಟರಲ್ಲೇ ಸೂರ್ಯನು ನೊಗದುದ್ದವಾದ ಆಕಾಶವನ್ನೇರಿದನು. ಇನ್ನು ಸಾವಕಾಶವಂ ಮಾಡದೆ ಜಾಗ್ರತೆಯಾಗಿ ನಡೆ'' ಎಂದು ನುಡಿಯಲು;

ಶಕುಂತಳೆಯು ತಪೋವನಕ್ಕೆ ಅಭಿಮುಖಳಾಗಿ ನಿಂತು,—''ಎಲೈ ತಂದೆಯಾದ ಮುನಿಯೇ, ಮರಳಿ ಈ ಆಶ್ರಮವನ್ನು ಯಾವಾಗ ಕಾಣುವೆನು ಪೇಳು?'' ಎಂದು ಗದ್ಗದ ಸ್ವರದಿಂ ಯುಕ್ತಳಾಗಿ ನುಡಿಯಲು;

ಮುನಿಯು—''ಎಲೌ ಪುತ್ರಿಯೇ, ಕೇಳು. ಚತುಸ್ಸಮುದ್ರಮುದ್ರಿತವಾದ ಈಭೂಮಿಯೀಶಗೆ ಪತ್ನಿಯಾಗಿ ಬಹಳವಾಗಿ ಸಮಸ್ತಸೌಖ್ಯಗಳನ್ನನುಭವಿಸಿ, ಶೂರಾಗ್ರೇಸರನಾದ ಮಹಾರಥನಾದ ದುಷ್ಯಂತರಾಯನಿಂ ಪುಟ್ಟಿದ ನಿನ್ನ ಪುತ್ರನಲ್ಲಿ ಸಮಸ್ತರಾಜ್ಯಭಾರವನೊಪ್ಪಿಸಿದ, ಪತಿಯನ್ನೊಡಗೊಂಡು ಕಾಂತಿಗುಣಪ್ರಧಾನವಾದ ಈ ಆಶ್ರಮದಲ್ಲಿ ಮರಳಿ ವಾಸವಂ ಗೆಯ್ಯುತ್ತಿರುವೆ, ಪೋಗು'' ಎಂದು ಅಪ್ಪಣೆಯನ್ನೀಯಲು;

ಗೌತಮಿಯು—''ಎಲೆ ಪುತ್ರಿಯೇ, ನೀನು ಹೋಗುವುದಕ್ಕೆ ಹೊತ್ತು ಬಹಳವಾಗಿ ಪೋಗುತ್ತಿರುವುದು. ತಂದೆಯಾದ ಮುನೀಶ್ವರನಂ ಪರ್ಣಶಾಲೆಗೆ ಪೋಗುವಂತೆ ನುಡಿದು ಪ್ರಯಾಣೋನ್ಮುಖಳಾಗುವುದು'' ಎಂದು ನುಡಿದು, ''ಎಲೈ ಕಣ್ವಮಹಾಮುನಿಯೇ, ಈ ನಿನ್ನ ಪುತ್ರಿಯು ಮರಳಿ ಏನೋ ಒಂದು ವಾಕ್ಯವಂ ಪೇಳುವಂತೆ ಕಾಲವಂ ಕಳೆಯುತ್ತ ಇರುವಳು. ಹಿಂದಿರುಗಿ ಆಶ್ರಮಕ್ಕೆ ಪೋಗಬಹುದು?'' ಎಂದು ನುಡಿಯಲು;

ಕಣ್ವಮುನಿಯು—''ಎಲೌ ಪುತ್ರಿಯೇ, ಈಗ ಎನಗೆ ತಪೋನುಷ್ಠಾನವಂ ಮಾಳ್ಪ ಕಾಲವು ಮೀರಿ ಪೋಗುತ್ತಿರುವುದು'' ಎನಲು;

ಶಕುಂತಳೆಯು, ಮೊದಲೆ ಎನ್ನ ತಂದೆಯಾದ ಕಣ್ವಮುನಿಪತಿಯ ಶರೀರವು ತಪವಂ ಗೆಯ್ಯುವುದರಿಂದ ಕೃಶವಾಗಿರುವುದು, ಈಗ ಎನ್ನ ವಿಯೋಗದಿಂದ ಅತಿ ದುಃಖಕ್ಕೆ ಪಾತ್ರವಾದುದು'' ಎಂದು ನುಡಿಯಲು;

ಆ ಕಣ್ವಮುನಿಯು ನಿಟ್ಟುಸಿರುಬಿಟ್ಟು—''ಎಲೌ ಮಗಳೇ, ಕೇಳು. ಪರ್ಣಶಾಲೆಯ ಬಾಗಿಲಲ್ಲಿ ತೃಣಧಾನ್ಯಗಳಿಂ ವಿರಚಿಸುತಿರ್ದ ವನದೇವತೆಗಳ ಪೂಜೆಯಂ ನೋಡುತಿರ್ದ ಎನಗೆ ತಾಪವು ಹೇಗೆ ಪರಿಹಾರವಾಗುವದು? ಆದರೆ ಈಗ ಬಹು ಹೊತ್ತಾದುದು, ಹೊರಡು; ನಿನ್ನ ಮಾರ್ಗಗಳು ಮಂಗಳಕರಗಳಾಗಲಿ!'' ಎಂದು ನುಡಿದು, ಅವಳ ಗಲ್ಲವಂ ಮುದ್ದಿಸಿ ಅನಸೂಯೆ ಪ್ರಿಯಂವದೆಯರಿಂದೊ

ಡಗೊಂಡು, ಕೆಲವು ದೂರ ಬಂದು ನಿಂತು, ಹಿಂದಿರುಗಿ ನೋಡುತ್ತಿರಲು;

ಶಕುಂತಳೆಯು ಗೌತಮಿಯಿಂದಲೂ ಋಷಿಶಿಷ್ಯರುಗಳಿಂದಲೂ ಒಡಗೊಂಡು ಅತ್ಯಂತಚಿಂತಾಕ್ರಾಂತಳಾಗಿ ಪ್ರತಿಷ್ಠಾನಪುರದ ಮಾರ್ಗವನ್ನನುಸರಿಸಿ ತೆರಳುತ್ತಿತ್ತಿರಲು;

ಇತ್ತಲಾ ಅನಸೂಯೆ ಪ್ರಿಯಂವದೆಯರೀರ್ವರು ಆಶಕುಂತಲೆಯು ಪೋಗುವ ಮಾರ್ಗವಂ ನೋಡುತ್ತಾ ನಿಂದು ಅನಸೂಯೆಯು ಪ್ರಿಯಂವದೆಯಂ ಕುಱಿತು, "ಎಲೆ ಪ್ರಿಯಂವದೆಯೇ, ಪೋಗುತ್ತಿರುವ ಶಕುಂತಲೆಯಂ ನೋಡಿಯಾದರೂ ದುಃಖಪರಿಹಾರವಂ ಮಾಡಿಕೊಳ್ಳುವೆವೆಂದರೆ- ಈ ಪಾಪಿಯಾದ ಗಿಡಂಗಳ ಹೊದಱುಗಳು ಮಱೆಯಾದುವು, ಇನ್ನಾವಾಗ ನಮ್ಮ ಶಕುಂತಳೆಯಂ ಕಾಣುವೆವೋ!" ಎಂದು ಅನ್ಯೋನ್ಯವಾಗಿ ಸಲ್ಲಾಪವಂ ಗೆಯ್ಯುತ್ತಿರಲು;

ಕಣ್ವಮುನಿಯು ಆ ಶಕುಂತಳೆಯಂ ನೋಡಿ, ಕಾಣದೆ ನಿಟ್ಟುಸಿರಂ ಬಿಡುತ್ತ, "ಎಲೌ ಸಖಿಯರುಗಳಿರಾ, ನಿಮ್ಮೊಡನೆ ಸಂಚಾರವಂ ಗೆಯ್ಯುತ್ತಿರ್ದು ಅನೇಕ ವಿನೋದಕ್ಕೆ ಕಾರಣಳಾದ ಶಕುಂತಳೆಯು ಪೋದಳೆಂಬ ದುಃಖವಂ ಕಡೆಗೊತ್ತಿ ಎನ್ನೊಡನೆ ಆಶ್ರಮಕ್ಕೆ ಬನ್ನಿರಿ" ಎಂದು ಪೇಳಲು;

ಆ ವಾಕ್ಯಕ್ಕೆ ಸಖಿಯರೀರ್ವರು—"ಎಲೈ ಸ್ವಾಮಿಯೇ, ನಿಮ್ಮ ಶಕುಂತಳೆಯು ಇಲ್ಲದಿರುವುದಱಿಂದೀ ತಪೋವನವೆಲ್ಲ ಶೂನ್ಯಮಾಗಿ ಕಾಣುತ್ತಿರುವುದು. ನಾವು ಹೇಗೆ ಈ ಆಶ್ರಮಪ್ರವೇಶವಂ ಮಾಳ್ಪೆವು" ಎನ್ನಲು;

ಕಣ್ವಮುನಿಯು—"ಎಲೌ ಬಾಲೆಯರುಗಳಿರಾ, ನಿಮಗಾಶಕುಂತಳೆಯಲ್ಲಿರುವ ಅನುರಾಗದಿಂದೀ ತಪೋವನವು ಶೂನ್ಯಮಾಗಿ ಕಾಣುವುದು. ಆದರೂ ಈ ಶಕುಂತಳೆಯನ್ನು ಅವಳ ಪತಿಗೃಹಕ್ಕೆ ಕಳುಹಿಸಿ ಎನ್ನಮನಸ್ಸು ಸಮಾಧಾನವಾಗಿರುವುದು. ಏಕೆಂದರೆ:-ಯಾವ ಹೊತ್ತಿರ್ದರೂ ಹೆಣ್ಣುಮಕ್ಕಳು ಪರದ್ರವ್ಯವಾಗಿರುವರು. ಆದ್ದಱಿಂದೀಗ ಆ ಶಕುಂತಳೆಯನ್ನು ಪತಿಗೃಹಕ್ಕೆ ಕಳುಹಿಸಿದ ಎನಗೆ ದುಃಖವಿದ್ದರೂ ಇಲ್ಲದಂತೆ ಈಹೊತ್ತಿರ್ದ ಭಾರನ್ನಿಳುಹಿದರೆ ಹೇಗೆ ಅಂತಃಕರಣಂಗಳು ಸಂತುಷ್ಟಿಯಂ ಪೊಂದುತಿರುವುವೋ ಆರೀತಿಯಿಂದಧಿಕಸಂತೋಷವು ಪ್ರಾಪ್ತಮಾದುದು" ಎಂದು ನುಡಿಯುತಿರ್ದನು;

ಎಂಬಲ್ಲಿಗೆ

ಕೃಷ್ಣರಾಜವಾಣೀವಿಲಾಸ ರತ್ನಾಕರವೆಂಬ ಶಾಕುಂತಲನಾಟಕ ನವೀನಟೀಕಿನಲ್ಲಿ ಶಕುಂತಳೆಯು ಕಣ್ವಮುನಿಯಿಂ ಸಮಸ್ತ ಬುದ್ಧಿಮಾರ್ಗವಂ ತಿಳಿದು ಗೌತಮೀಋಷಿಶಿಷ್ಯರುಗಳಿಂ ದೊಡಗೂಡಿ ಪ್ರತಿಷ್ಠಾನ ನಗರಾಭಿಮುಖಳಾಗಿ ಬರುತಿರ್ದಳೆಂಬಲ್ಲಿಗೆ ತೃತೀಯಕಲ್ಲೋಲದಲ್ಲಿ ದ್ವಿತೀಯ ತರಂಗಂ ಸಂಪೂರ್ಣಂ.

ತೃತೀಯಕಲ್ಲೋಲದ ತೃತೀಯತರಂಗಂ

ಅನಂತರದಲ್ಲಿ ಶಕುಂತಳೆಯು ಅತ್ಯಂತಚಿಂತಾಕ್ರಾಂತಳಾಗಿ ಅಡಿಗಡಿಗೆ ತಾನಿರ್ದ ತಪೋವನವಂ ನೋಡುತ್ತಾ, ಕಮಲಗಳಿಗಿಂತಲೂ ನೂರ್ಮಡಿಯಾಗಿ ಮೃದುವಾದ ಪಾದಗಳಿಂದ ಯಾವಾಗಲೂ ಬಹಳವಾಗಿ ನಡೆದವಳಲ್ಲವಾದ್ದರಿಂ ಹತ್ತೆಂಟು ಹೆಜ್ಜೆಗೆ ಒಂದುಸ್ಥಾನದಲ್ಲಿ ನಿಂತು ನಿಟ್ಟುಸಿರಂ ಬಿಡುತ್ತಾ, ಇನ್ನೆಷ್ಟುದೂರದಲ್ಲಿ ಪ್ರತಿಷ್ಠಾನನಗರವಿರುವದೋ ಎಂದು ತನ್ನಸಂಗಡ ಬರುವ ಗೌತಮಿಯಂ ಮುನಿಶಿಷ್ಯರಂ ಕೇಳುತ್ತಾ ಬಿರುಗಾಳಿಗೆ ಚಲಿಸುತ್ತಿರುವ ಎಳಲತೆಯಂತೆ ಬಳುಕುತ್ತಿರುವ ಶರೀರವುಳ್ಳವಳಾಗಿ, ಅಲ್ಲಲ್ಲಿ ಲತೆಗಳ ಗುಂಪಿನಿಂ ತಂಪುದೋರುತ್ತಿರುವ ಹೊಳೆ ಕೊಳ ಕಾಲುವೆಗಳು ಮೊದಲಾದ ಸ್ಥಾನಂಗಳಲ್ಲಿ ಕುಳಿತು ಮಾರ್ಗಾಯಾಸವಂ ಕಳೆಯುತ್ತಾ, ಬರುವಲ್ಲಿ—ನಿರ್ಮಲವಾದ ಜಲದಿಂದಲೂ ಹಂಸಕಾರಂಡ ಚಕ್ರವಾಕ ಮೊದಲಾದ ಪಕ್ಷಿಗಳಿಂದಲೂ ಕಮಲವನದಿಂ ಜಾರುತ್ತಿರುವ ಮಕರಂದಧಾರೆಗಳಂ ಪಾನಂಗೆಯ್ಯುತ್ತ ಮದವೇರಿ ಝೇಂಕಾರವಂಗೆಯ್ಯುತ್ತಿರುವ ಭೃಂಗಸಂಘದಿಂದಲೂ ಸಂಗತವಾಗಿರುವ ಚಕ್ರತೀರ್ಥವೆಂಬ ಸರೋವರವಂ ಕಂಡು;—“ ಎಲೌ ಗೌತಮಿಯೇ ಹಂಸಗಳ ಹಿಂಡುಗಳಿಂದಲೂ, ಮಕರಂದ ಪಾನವಂ ಗೆಯ್ಯುವುದಕ್ಕೋಸುಗ ಮೊತ್ತವಾಗಿ ಒತ್ತಿನಲ್ಲಿ ಮುತ್ತುತ್ತಿರುವ ತುಂಬಿಗಳ ಹಿಂಡುಗಳಿಂದಲೂ, ಶೈತ್ಯ ಸೌರಭ್ಯಮಾಂದ್ಯದಿಂದೊಡಗೂಡಿ ಸುಳಿಯುತ್ತಿರುವ ತೆಂಗಾಳಿಯಿಂದಲೂ ಈಸರಸ್ಸು ನೋಡುವರ ಕಂಗಳಿಗೆ ಮಂಗಳವನ್ನುಂಟುಮಾಡುತ್ತಿರುವುದಾದ್ದರಿಂದೀ ಕೊಳದಂಚಿನಲ್ಲಿ ಒಂದು ಮುಹೂರ್ತವಿದ್ದು ಜಲಪಾನವಂ ಗೆಯ್ದು ಮಾರ್ಗಾಯಾಸವಂ ಬಿಸುಗೈದು ಮುಂಬರಿದು ಪೋಗುವೆನು ” ಎಂದುನುಡಿದು, ಆಸರೋವರದ ತೀರದಲ್ಲಿ ಎಲ್ಲರಿಂದೊಡಗೊಂಡು ಕುಳಿತು, ತಪೋವನದಿಂ ತಂದಿರ್ದ ಮಧುರವಾದ ಫಲಂಗಳಂ ಭಕ್ಷಿಸಿ, ಜಲಪಾನವಂ ಗೆಯ್ದು, ಒಂದುಗಳಿಗೆ ಅಲ್ಲಿದ್ದು ಆಬಳಿಕ ಎಲ್ಲರಿಂ ಕೂಡಿ ತೆರಳುತ್ತಾ ಪ್ರತಿಷ್ಠಾನನಗರದ ಮಾರ್ಗವಂ ತೋರಿಸುತ್ತಾ ಪೋಗುವ ಶಾರ್ಙ್ಗರವನ ಬೆಂಬಿಡಿದು ಬರುತ್ತಿರಲು;

ಇತ್ತಲು ಪ್ರತಿಷ್ಠಾನಪಟ್ಟಣದಲ್ಲಿ ದುಷ್ಯಂತರಾಜನು ಸಮಸ್ತ ರಾಜ್ಯವಿಚಾರಣೆಯುಂ ಗೆಯ್ದು, ಸಕಲ ಸಾಮಂತರಾದ ದೊರೆಗಳು ತಂದ ಕಪ್ಪಗಳನೊಪ್ಪಿಸಿ

ಕೊಂಡು, ಉಚಿತವಾದ ಮಧುರಾಲಾಪದಿಂದೆಲ್ಲರಂ ಮನ್ನಿಸಿ ಅಪ್ಪಣೆಯನ್ನಿತ್ತು, ತಾನು ತನ್ನಂತಃಪುರಪ್ರವೇಶವಂ ಗೆಯ್ದು ನವರತ್ನದ ಗೊಂಬೆಗಳಿಂ ಚಿತ್ರರವಾಗಿ ಸುತ್ತುವರಿದ ಮುತ್ತಿನ ಕುಚ್ಚುಗಳಿಂದ ರಮಣೀಯತೆಯುಂ ಪೊಂದಿದ ವಜ್ರದ ಸ್ತಂಭಂಗಳಿಂದಿಂಬುವಡೆದು, ಮೊಲ್ಲೆ ಮಲ್ಲಿಗೆ ಜಾಜಿ ಸೇವಂತಿಗೆ ಮೊದಲಾದ ಪರಿಮಳಭರಿತವಾದ ಪುಷ್ಪಮಾಲೆಗಳಿಂ ಮೂಱು ಲೋಕಸೌಂದರ್ಯವನ್ನೊಳಗೊಂಡಿರುವ ವಜ್ರದ ಹಜಾರದಲ್ಲಿ ಪವಳದ ಪಾದಗಳಿಂ ಪರಿಷ್ಕೃತವಾದ ಪೀಠದೊಳ್ ಕುಳಿತು ನರ್ಮಸಚಿವನಾದ ವಿದೂಷಕನೊಡನೆ ವಿನೋದವಾಕ್ಯವಂ ಪೇಳುತ್ತ ಸಂತುಷ್ಟಚಿತ್ತನಾಗಿ ಕುಳಿತಿರಲು ;

ಅಷ್ಟಱಲ್ಲೀ ಸಂಗೀತಶಾಲೆಯಲ್ಲಿ ಒಂದಾನೊಂದು ಕರ್ಣಸುಖವನ್ನುಂಟು ಮಾಡುವ ಸಂಗೀತವು ಕೇಳಲಾಗಲು ; ವಿದೂಷಕನು ಕಿವಿಗೊಟ್ಟು ಕೇಳಿ— "ಎಲೈ ಮಿತ್ರನಾದ ಮಹಾರಾಯನೇ, ಸಂಗೀತಶಾಲೆಯಲ್ಲಿ ಚಿತ್ತಮನಿರಿಸುವ ಮಹಸು ಸ್ವರವಿಂದಚಿತವಾದ ಗಾನಸ್ವರವು ಕೇಳಿ ಬರುವುದು. ಈ ಸ್ವರವಂ ಕೇಳಲು ಹಂಸಪದಿಕೆಯೆಂಬ ಸ್ತ್ರೀಯು ವರ್ಣಗಳ ಪರಿಚಯುವಂ ಮಾಡುವಂತೆ ತೋಱುವುದು.'' ಎನಲು ;

ದುಷ್ಯಂತರಾಯನು—"ಎಲೈ ವಿದೂಷಕನೇ, ಸದ್ದು ಮಾಡದಿರು. ನಾನು ಈ ಗಾನಸ್ವರದ ಸಂಗತಿಯಂ ಚೆನ್ನಾಗಿ ಕೇಳುವೆನು '' ಎಂದು ನುಡಿದು, ನಿಶ್ಚಲನಾಗಿ ಕಿವಿಗೊಟ್ಟು—" ಎಲೈ ಭ್ರಮರವೇ, ನೀನು ನೂತನವಾದ ಮಕರಂದ ರಸದಲ್ಲಿ ಆಸಕ್ತನಾಗಿ, ಮನಬಂದಂತೆ ಮಾವಿನ ಗೊಂಚಲನ್ನು ಚುಂಬನಂಗೆಯ್ದು ಈ ಕಮಲವಾಸದಿಂ ಸಂತುಷ್ಟನಾಗಿ, ಆ ಗೊಂಚಲನ್ನೇನುಕಾರಣದಿಂ ಮಱೆತಿರುವೆಯೋ ತಿಳಿಯದು '' ಎಂದು ಪಾಡುತ್ತಿರುವ ಮಧುರರಾಗದಿಂ ಯುಕ್ತವಾದ ಸಂಗೀತಸ್ವರವಂ ಕೇಳಿ, " ಈ ಗೀತವು ಶೋಭನವಾದ ರಾಗಪ್ರವಾಹವನ್ನುಂಟು ಮಾಡುವುದು ! '' ಎಂದು ಶ್ಲಾಘನೆಯಂ ಗೆಯ್ಯುತ್ತಿರಲು ;

ವಿದೂಷಕನು—" ಎಲೈ ಮಹಾರಾಜನೇ, ಈ ಗಾನಸ್ವರದ ಮುಖ್ಯಾರ್ಥವು ನಿನ್ನ ಮನಕ್ಕೆ ತಿಳಿದುದೋ, ಏನು ? '' ಎಂದು ಕೇಳಲು;

ರಾಯನು—" ಎಲೈ ವಿದೂಷಕನೇ, ಕೇಳು. ಹಂಸಪದಿಕೆಯೆಂಬ ಸ್ತ್ರೀಯು ತುಂಬಿಯ ನೆಪಗೆಯ್ದು ನಾನು ಒಬ್ಬಾಳೊಬ್ಬ ಸ್ತ್ರೀಯೊಡನೆ ಚುಂಬನಾಲಿಂಗನ ಪೂರ್ವಕವಾಗಿ ರತಿಗೆಯ್ದು ಈಗ ಅವಳಂ ಮಱೆದು ಭೂಮಿಯ ವಿಚಾರಣೆಯಲ್ಲಿ ಆಸಕ್ತನಾಗಿರುವನೆಂತೆ ನಿಂದಿಸಲ್ಪಟ್ಟಿರುವೆನು. ಈಗ ನೀನು ಪೋಗಿ ಆ ಹಂಸ

ಪದಿಕೆಯೆಂಬ ಸ್ತ್ರೀಯಂ ಕುಱಿತು, ತುಂಬಿಯನ್ನೆವಗೆಯ್ದು ಚೆನ್ನಾಗಿ ಎನ್ನಂ ನಿಂದಿಸುತ್ತಿರುವೆ, ಎಂದು ಪೇಳುವುದು '' ಎನ್ನಲು

ವಿದೂಷಕನು–ಆಜ್ಞೆಯು ಯಾವ ಮೇರೆಗೆ ಆಗುವುದೋ ಆ ಪ್ರಕಾರವಾಗಿ ನಡೆದುಕೊಳ್ಳುವೆನೆಂದು ತಾನಿರ್ದ ಸ್ಥಾನದಿಂದೆದ್ದು, '' ಕಾಮಕ್ರೋಧಾದಿಗಳಿಂ ವಿರಹಿತನಾದ ಪುರುಷನಾದರೂ ಸುಂದರಿಯಾದ ಅಪ್ಸರಸ್ತ್ರೀಯ ಕೆಯ್ಯಲ್ಲಿ ತನ್ನ ಜುಟ್ಟಂ ಕೊಟ್ಟು ಬಿಡಿಸಿಕೊಳ್ಳಲಾಱದೆ ಹೇಗೆ ಕಷ್ಟವಂ ಪೊಂದುವನೋ, ಅವನಂತೆ ನಾನು ಈ ದುಷ್ಯಂತರಾಯನ ಕೈಗೆ ಸಿಕ್ಕಿ ಬಿಡಿಸಿಕೊಳ್ಳಲಾಱದೆ ಶ್ರಮಪಡುವನಾಗುತ್ತಿರುವೆನು, ಮುಂದೆ ಎನಗೆ ಗತಿಯೇನು? '' ಎಂದು ನುಡಿಯುತ್ತಿರಲು;

ಆ ವಾಕ್ಯವಂ ಕೇಳ್ದ ರಾಯನು ಮುಗುಳ್ನಗೆಯಿಂ ಯುಕ್ತಮಾದ ಮುಖಾರವಿಂದನಾಗಿ,—'' ಎಲೈ ವಿದೂಷಕನೇ, ನಿನ್ನ ಪರಿಹಾಸ್ಯದ ನುಡಿಯು ಹಾಗಿರಲಿ, ಜಾಣ್ಮೆಯುಳ್ಳವನಾಗಿ ಪೋಗಿ ನಾ ಪೇಳ್ದ ವಾಕ್ಯವನ್ನಾ ಹಂಸಪದಿಕೆಗೆ ಪೇಳು '' ಎನಲು;

ವಿದೂಷಕನು ಅದೇ ರೀತಿಯಿಂದ ಪೊಱಮಟ್ಟು ಪೋಗಲು ;

ಆ ರಾಯನು, ಉಪಶ್ರುತಿಯಂತೆ ಉಂಟಾದ ಗಾನಸ್ವರವಂ ಕೇಳಿ, ಏನೋ ಒಂದು ಕಳವಳವು ಮನದಲ್ಲಿ ಉಂಟಾಗಿ, ಈ ಗಾನಸ್ವರವಂ ಕೇಳಿದಾರಭ್ಯಮಾಗಿ ಇಷ್ಟಜನದಗಲಿಕೆ ಇಲ್ಲದಿರ್ದರೂ ಹೃದಯದಲ್ಲಿ ಮಹತ್ತಾದ ಸಂತಾಪವುಂಟಾದುದು.'' ಎಂದು ತನ್ನೊಳು ತಾನು ಆಲೋಚನೆಯಂ ಗೆಯ್ಯುತ್ತಾ, ಮತ್ತು ಲೋಕದಲ್ಲಿ ಇಷ್ಟಜನರಿಂದೊಡಗೂಡಿ ಸಂತುಷ್ಟಹೃದಯನಾಗಿರ್ದ ಪುರುಷನು ತನ್ನ ಮನಸ್ಸಿಗೆ ಆನಂದವನ್ನುಂಟುಮಾಡುವ ಸುಂದರಗಳಾದ ಪದಾರ್ಥಂಗಳಂ ನೋಡಿದ್ದಱಿಂದಲೂ ಕರ್ಣಸುಖವನ್ನುಂಟುಮಾಡುವ ಗಾನಸ್ವರವಂ ಕೇಳಿದ್ದಱಿಂದಲೂ, ಜನ್ಮಾಂತರದಲ್ಲಿ ತಾನು ಮಾಡಿದ ಮಿತ್ರತ್ವ ಮೊದಲಾದ ವ್ಯಾಪಾರವಂ ಮನದಲ್ಲಿ ಸ್ಮರಿಸಿ ಇಂಥದೆಂದು ಪೇಳುವುದಕ್ಕಾಗದೆ ಪರ್ಯಾಕುಲನಾಗುವಂತೆ ಈಗ ನಾನೀಗಾನಸ್ವರವಂ ಕೇಳಿದ್ದಱಿಂ ಪೂರ್ವದಲ್ಲಿ ಒಂದು ಕಾರ್ಯವಂ ನಾನು ಮಾಡಿದವನಂತೆಯೂ ಅದಂ ಈಗ ಮಱೆತು ಕಳವಳವಂ ಪೊಂದುವನಂತೆಯೂ ತೋಱುವುದೆಂದು ಆಲೋಚನೆಯಂ ಗೆಯ್ಯುತಿರಲು ;

ಅಷ್ಟಱಲ್ಲೇ ಬಾಗಲು ಕಾವಲಲ್ಲಿರ್ದ ವೃದ್ಧನಾದ ದ್ವಾರಪಾಲಕನು ರಾಯನಿರುವ ಹಜಾರಕ್ಕೆ ಪ್ರವೇಶವಂ ಗೆಯ್ದು, ಮೊದಲು ಯೌವನಕಾಲದಲ್ಲಿ ಅನೇಕ

ವಿಲಾಸದಿಂದಿರ್ದು ಈಗ ವೃದ್ಧಾಪ್ಯದ ದೆಸೆಯಿಂ ಈ ಅವಸ್ಥೆಯಂ ಪೊಂದಿದೆನೆಂದು ನಿಟ್ಟುಸಿರಂ ಬಿಡುತ್ತ, ಅನಂತರದಲ್ಲಿ ದಂಡವಂ ಪಿಡಿದು ಸಂಚರಿಸುವುದು ಗೊತ್ತಾದವರಿಗೆ ಕುಲಧರ್ಮವೆಂದು ಯಾವ ದಂಡವಂ ಪಿಡಿದು ಸಂಚರಿಸುತಿರ್ದನೋ ಅನೇಕ ಕಾಲವು ಕಳೆದು ಪೋಗಲಾಗಿ ಅದೇ ದಂಡವೇ ಮುಪ್ಪಿನಿಂ ತಪ್ಪುಹೆಜ್ಜೆಯನ್ನಿಟ್ಟು ಸಂಚರಿಸುವ ಎನಗೆ ಊರುಗೋಲಾದುದು ಎಂದು ನುಡಿಯುತ್ತಾಬಂದು, ಮುಂದೆಡೆಯಲ್ಲಿ ಸ್ವಲ್ಪದೂರದಲ್ಲಿರುವ ದುಷ್ಯಂತಮಹಾರಾಯನಂ ಕಂಡು,—“ಈಗ ಕಾರ್ಯಾರ್ಥವಾಗಿ ಬಂದು ಇರುವ ಜನಗಳ ವೃತ್ತಾಂತವಂ ಪೇಳದೆ ಇರಕೂಡದು. ರಾಯನಾದರೋ ಈಗತಾನೇ ಸಿಂಹಾಸನದಿಂದೆದ್ದು ಅಂತಃಪುರದಲ್ಲಿ ವಿಜನನಾಗಿ ವಿಹಾರವಂ ಗೆಯ್ಯುತ್ತಿರುವನು. ಕಣ್ವಋಷಿಶಿಷ್ಯರುಗಳು ಬಂದುಇರುವ ವಾರ್ತೆಯಂ ಪೇಳುವುದಕ್ಕೆ ಹೇಗೆ ಸಮರ್ಥನಾಗಲಿ? ಆದರೂ ಸೂರ್ಯನು ಹೇಗೆ ಒಂದಾವೃತ್ತಿ ರಥಕ್ಕೆ ಕಟ್ಟಿದ ಕುದುರೆಯಂ ಬಿಚ್ಚುವುದಕ್ಕೆ ಕಾಲವಿಲ್ಲದೆ ಸರ್ವದಾ ಸಂಚಾರವಂ ಗೆಯ್ಯುತ್ತಿರುವನೋ, ವಾಯುವು ಹೇಗೆ ಎಡೆಬಿಡದೆ ರಾತ್ರಿಹಗಲಿನಲ್ಲಿ ಸಂಚಾರವಂ ಗೆಯ್ಯುತ್ತಿರುವನೋ, ಆದಿಶೇಷನು ಯಾವ ಮೇರೆಯಲ್ಲಿ ಭೂಭಾರವಂ ನಿರಂತರದಲ್ಲಿಯೂ ಶಿರದಲ್ಲಿ ವಹಿಸಿಕೊಂಡಿರುವನೋ, ಆ ರೀತಿಯಿಂದ ದೊರೆಯಾದವನು ಸಮಸ್ತ ಜನರು ಮಾಡಿದ ಪುಣ್ಯದ ಆಱುಭಾಗಗಳಲ್ಲಿ ಒಂದುಭಾಗ ಧರ್ಮಸಂಪಾದನೆಗೋಸುಗ ಜನರುಗಳಂ ಆಯಾಯ ಕಾರ್ಯಗಳಲ್ಲಿ ನೇಮಕವಂ ಮಾಡುವ ಅಧಿಕಾರದಲ್ಲಿ ಎಡೆಬಿಡದೆ ಇರುವನಾದ್ದರಿಂದ ಕಣ್ವಶಿಷ್ಯಾಗಮನವಂ ವಿಜ್ಞಾಪನೆಯಂ ಗೆಯ್ಯುವೆನು” ಎಂದು ನಿಶ್ಚೈಸಿ ಮುಂಬರಿದು, ಸ್ವಲ್ಪದೂರ ಬಂದು, ಅನೇಕವಾದ ಆನೆಗಳ ಹಿಂಡುಗಳಲ್ಲಿಮನ ಬಂದಂತೆ ಸಂಚಾರವಂ ಗೆಯ್ದು ಮಧ್ಯಾಹ್ನಕಾಲದಲ್ಲಿ ಶೀತಳವಾದ ಸ್ಥಾನದಲ್ಲಿ ಸ್ವಸ್ಥಚಿತ್ತವಾಗಿರುವ ಮದ್ದಾನೆಯಂತೆ, ನಮ್ಮ ರಾಯನು ಸಮಸ್ತ ಪ್ರಜೆಗಳಂ ತನ್ನ ಮಕ್ಕಳುಗಳಂತೆ ಯುಕ್ತವಾದ ಕಾರ್ಯಗಳಲ್ಲಿ ನೇಮಿಸಿ, ಶಾಂತಚಿತ್ತನಾಗಿ ಏಕಾಂತವಾದ ಅಂತಃಪುರದಲ್ಲಿ ಸುಖಿತನಾಗಿರುವನೆಂದು ತಿಳಿದು ಬಂದು ರಾಯನ ಪಾದಂಗಳಿಗೆ ವಂದನೆಯಂ ಗೆಯ್ದು—“ಎಲೈ ಮಹಾರಾಯನೇ, ಹಿಮವತ್ಪರ್ವತದ ತಪ್ಪಲಲ್ಲಿರುವ ಅರಣ್ಯವಾಸಿಯಾದ ಕಣ್ವಮುನಿಯ ಶಿಷ್ಯರುಗಳು ಒಬ್ಬ ಸುಂದರವದನಾರವಿಂದಮುಳ್ಳ ಬಾಲೆಯಿಂದಲೂ, ವೃದ್ಧಳಾದ ಒಬ್ಬ ಸ್ತ್ರೀಯಿಂದಲೂ ಯುಕ್ತರಾಗಿ, ನಮ್ಮ ಋಷಿಯು ಕೆಲವು ವಾಕ್ಯಗಳಂ ರಾಯಂಗೆ ಬಿನ್ನಯಿಸುವಂತೆ ಅಪ್ಪಣೆಯನ್ನಿತ್ತು ಕಳುಹಿಸಿರುವನೆಂದು ಬಂದು, ನಮ್ಮ ಅರಮನೆಯ ಬಾಗಿಲಲ್ಲಿ ಇರುವರು; ತಮ್ಮ ಚಿತ್ತಕ್ಕೆ ಬಂದಂತೆ ಮಾಡಬಹುದು” ಎಂದು

ವಿಜ್ಞಾಪನೆಯಂ ಗೆಯ್ದು, ಕೆಲದೊಳ್ ನಿಲ್ಲಲು;

ರಾಯನು—"ಎಲೈ ವೃದ್ಧಕಂಚುಕಿಯೇ, ಕಣ್ವಋಷಿಯ ಆಜ್ಞೆಯಂ ತೆಗೆದುಕೊಂಡು ಬಂದಿರುವರೆಂದು ಪೇಳಿರುವೆಯಾದ್ದರಿಂ ಋಷಿಶಿಷ್ಯರುಗಳಿಗೆ ವೇದೋಕ್ತಮಾದ ಸತ್ಕಾರಂಗಳಿಂ ಪೂಜೆಯಂ ಗೆಯ್ದು ಅವರಂ ಕರೆದುಕೊಂಡು ನಾನಿರುವ ಬಳಿಗೆ ನೀನೆ ಬರುವಂತೆ ರಾಯನ ಆಜ್ಞೆಯಾಗಿರುವುದೆಂದು ಸೋಮರಾತನೆಂಬ ಪುರೋಹಿತನಿಗೆ ಪೇಳುವುದು. ನಾನು ಆ ಋಷಿಗಳ ಸಂದರ್ಶನಕ್ಕೆ ಯೋಗ್ಯಮಾದ ಸ್ಥಳಕ್ಕೆ ಪೋಗುವೆನು" ಎಂದು ಅಪ್ಪಣೆಯನ್ನೀಯಲು;

ಆ ವೃದ್ಧಕಂಚುಕಿಯು—ಅಪ್ಪಣೆಯಾದಂತೆ ನಡೆದುಕೊಳ್ಳುವೆನೆಂದು ನುಡಿದು ಹಿಂದಿರಿಗಿ ಬರುತ್ತಿರಲು;

ರಾಯನು—ಹೊರಗೆ ಯಾರೆಂದು ಕೇಳಲು;

ಆಕ್ಷಣದಲ್ಲಿ ಬೆಳ್ಳಿಯ ಬೆತ್ತವಂ ಪಿಡಿದು, ಏನು ಅಪ್ಪಣೆಯಾಗುವುದೋ ಆ ಅಪ್ಪಣೆಯನ್ನೀಯಬೇಕೆಂದ ವೇತ್ರಧಾರಿಣಿಯಾದ ಸ್ತ್ರೀಯ ವಾಕ್ಯವಂ ಕೇಳಿ, "ಎಲೌ ಸ್ತ್ರೀಯೇ, ಕಣ್ವಋಷಿಯ ಶಿಷ್ಯರು ಬಂದಿರುವರಂತೆ. ಅವರ ಸಂದರ್ಶನಕ್ಕೋಸುಗ ಔಪಾಸನಗೃಹಕ್ಕೆ ಪೋಗಬೇಕಾಗಿರುವುದು" ಎಂದು ನುಡಿದ ರಾಯನಿಗೆ ಆ ಸ್ತ್ರೀಯು ಮಾರ್ಗವಂ ತೋರಿಸುತ್ತಾ ಬರಲು ;

ರಾಯನು ಅಗ್ನಿಗೃಹವಂ ಪ್ರವೇಶವಂ ಗೆಯ್ಯುತ, ತನ್ನ ಅಧಿಕಾರದ ಆಯಾಸದಿಂ ಖಿನ್ನನಾಗಿ, "ಲೋಕದಲ್ಲಿ ಸಮಸ್ತ ಪ್ರಾಣಿಗಳು ತಾವುತಾವು ಪ್ರಾರ್ಥಿಸುತಿದ್ದ ಮಾನಸಾಭೀಷ್ಟವಂ ಪಡೆದು ಸೌಖ್ಯವಂ ಪೊಂದುತಿಪವು. ದೊರೆಗಳ ಚರಿತ್ರವಾದರೋ ಅತ್ಯಂತ ದುಃಖಕರಂಗಳಾಗಿ ಇರುವುವು. ಹೇಗೆಂದರೆ:—ದೊರೆಯಾದವನಿಗೆ ಮೊದಲು ರಾಜ್ಯವಂ ಸಂಪಾದಿಸಬೇಕೆಂಬ ಇಚ್ಛೆಯು ಬಲವಾಗಿರುವುದು. ಸಮಸ್ತಸನ್ನಾಹವಂ ಗೆಯ್ದು ಶತ್ರುನಿಗ್ರಹವಂ ರಚಿಸಿ, ಆ ರಾಜ್ಯವಂ ಸ್ವಾಧೀನವಂ ಗೆಯ್ದ ಬಳಿಕ ಆ ಸಂಪಾದನೇಚ್ಛೆಯು ನಾಶವಂ ಪೊಂದುವುದು. ಆಬಳಿಕ ಶತ್ರುಮಿತ್ರರಂ ಶೋಧಿಸುತ್ತಾ, ಬ್ರಾಹ್ಮಣಾದಿ ವರ್ಣಂಗಳಿಗೆ ಸಾಂಕರ್ಯವು ಪುಟ್ಟದಂತೆ ಪ್ರಜೆಗಳಿಗೆ ಶತ್ರುಗಳಿಂ ಕ್ಷೋಭೆಯುಂಟಾಗದಂತೆ ನ್ಯಾಯಧರ್ಮಪರನಾಗಿ, ದ್ರವ್ಯಾರ್ಜನೆಯಂ ಗೆಯ್ಯುತ್ತಾ, ಸಮಸ್ತ ರಾಜಧರ್ಮದಿಂ ಯುಕ್ತನಾಗಿ, ಆ ರಾಜ್ಯವಂ ಸಂರಕ್ಷಣೆಯಂ ಗೆಯ್ಯುವ ವ್ಯಾಪಾರವು ನಿರಂತರದಲ್ಲಿಯೂ ವ್ಯಾಕುಲವಂ ಪುಟ್ಟಿಸುವುದಲ್ಲದೆ ಸಂತೋಷವಂ ಸಂಪಾದಿಸಲಾರದು. ಹಾಗಾದರೆ ರಾಜ್ಯವಂ ಸಂಪಾದಿಸದ ದೊರೆಗಳಿಗೆ ಸುಖವಿಲ್ಲವೆ?—ಎಂದರೆ, ಪುರುಷನು ಬಿಸಲಿಗೋಸುಗ

ತನ್ನ ಕೆಯ್ಯಲ್ಲಿ ಪಿಡಿದಿರುವ ಛತ್ರಿಯು ನೆರಳನ್ನುಂಟುಮಾಡುವುದರಿಂ ಸುಖವಂ, ಹಸ್ತದಿಂ ಪಿಡಿದಿರುವುದರಿಂ ದುಃಖವಂ ಹೇಗೆ ಪುಟ್ಟಿಸುತ್ತಿರುವುದೋ, ಅದರಂತೆ ರಾಜ್ಯವು ಅತ್ಯಂತ ಸುಖವನ್ನುಂಟುಮಾಡದೆ ಅತಿ ದುಃಖವಂ ಪುಟ್ಟಿಸದೆ ಸುಖ ದುಃಖಾತ್ಮಕವಾಗಿರುವುದು '' ಎಂದು ನುಡಿಯುತ್ತಾ ಇರಲು;

ಅಷ್ಟರಲ್ಲೀ, ಕಾಲಸೂಚಕರಾದ ಭಟರುಗಳು ಬಂದು ರಾಯನ ಮುಂಭಾಗದಲ್ಲಿ ನಿಂದು ಕರವೆತ್ತಿ, " ಎಲೈ ರಾಯನೇ! ನಿನ್ನ ಸೌಖ್ಯದಲ್ಲಿ ಸ್ವಲ್ಪವಾದರೂ ಅಭಿಲಾಷೆಯಿಲ್ಲದೆ ಇರುವವನಾಗಿ ಸಮಸ್ತವಾದ ಪ್ರಪಂಚವಂ ಸಂರಕ್ಷಣೆಯಂ ಗೆಯ್ಯುವುದಕ್ಕೋಸುಗ ದುಃಖವಂ ಪೊಂದುತಲಿರುವೆ. ಆದರೂ ವೃಕ್ಷಂಗಳು ಹೇಗೆ ಕೊಂಬೆಗಳ ಕೊನೆಗಳಿಂ ಬೇಸಗೆಯ ಬಿಸಲಿನಿಂದುಂಟಾದ ಕ್ರೂರವಾದ ಉಷ್ಣವಂ ಸಹಿಸುತ್ತ ತಮ್ಮ ಶರೀರದ ಜನಗಳ ಸಂತಾಪವಂ ತಮ್ಮ ನೆರಳಿನಿಂದ ಪರಿಹರಿಸುವಂತೆ, ನಿನ್ನ ಉತ್ಪತ್ತಿಯು ಸಮಸ್ತರಂ ಸಲಹುವುದಕ್ಕೋಸುಗಮಲ್ಲದೆ ನೀನು ಸುಖವಂ ಪೊಂದುವುದಕ್ಕಲ್ಲ!'' ಎಂದು ಪೊಗಳಲು. ಇನ್ನೋರ್ವನು ಅದೇ ರೀತಿಯಿಂ ಕರವನ್ನೆತ್ತಿ—" ಎಲೈ ಸ್ವಾಮಿಯೇ. ನೀನು ದಂಡೋಪಾಯನಿರತನಾಗಿ, ಪರಸ್ತ್ರೀ ಪರದ್ರವ್ಯಾಪಹಾರ, ಸುರಾಪಾನ, ಸ್ವರ್ಣಸ್ತೇಯ ಮೊದಲಾದ ದುರ್ಮಾರ್ಗದಲ್ಲಿ ನಿರತರಾದ ಜನರುಗಳಂ ನಿಗ್ರಹಿಸುತ್ತಿರುವೆ. ಮತ್ತು ಋಣಗ್ರಹಣ, ಭೂವಿಷಯಕ, ಮೊದಲಾದ ವ್ಯವಹಾರಂಗಳಂ ನ್ಯಾಯಮಾರ್ಗವಿದ್ದಂತೆ ಶಮನವಂ ಗೆಯ್ದು ಪ್ರಜೆಗಳಂ ಸಲಹುತ್ತಿರುವೆ. ಮತ್ತು ಅತ್ಯಂತವಾದ ಐಶ್ವರ್ಯವುಂಟಾಗುತ್ತಿಲಾಗಿ ಕಾರ್ಯಕ್ಕೆ ಬಾರದ ಬಂಧುಗಳು ಅನೇಕವಾಗಿ ಉಂಟಾಗುತ್ತಿರುವರು. ಆದರೂ ನಿಗ್ರಹಾನುಗ್ರಹಸಾಮರ್ಥ್ಯದಿಂ ಪ್ರಜೆಗಳಂ ಸಂರಕ್ಷಿಸುವ ಕೃತ್ಯವು ನಿನ್ನಲ್ಲಿಯೇ ಪರಿಸಮಾಪ್ತವಾಗಿ ತೋರುವುದು '' ಎಂದು ಎರಡನೆಯವನು ಸ್ತೋತ್ರವಂ ಗೈಯ್ಯುತ್ತಿರಲು;

ರಾಯನು "ಸಮಸ್ತ ಜನಸಂರಕ್ಷಣೆಗೋಸುಗ ಸುಖವಿಲ್ಲದೆ ದುಃಖಪರನಾಗುವೆ'' ಎಂದು ಭಟರುಗಳು ಸ್ತುತಿಗೆಯ್ದ ವಾಕ್ಯವಂ ಕೇಳಿ, ತನಗೆ ಸೌಖ್ಯವಿಲ್ಲದಿರ್ದರೂ ಬಹುಜನರಂ ಸಲಹುವೆನೆಂದು ಅಂತರಂಗದ ಸಂತೋಷದಿಂ ಯುಕ್ತನಾಗಿ ಬರುತ್ತಿರಲು;

ದ್ವಾರಪಾಲನೆಯಂ ಗೆಯ್ಯುವ ಸ್ತ್ರೀಯು—" ಎಲೈ ಮಹಾರಾಜನೇ, ನೂತನವಾದ ಸಾರಣೆಯಿಂದ ಕಾಂತಿಯುಕ್ತವಾಗಿ, ಸಂಪ್ರಾಪ್ತವಾದ ಹೋಮಕ್ಕೆ ಸಾಧನವಾದ ಗೋವಿನಿಂದೊಡಗೂಡಿರುವ, ಉಪಾಸನೆಯ ಗೃಹದ ಜಗಲಿಯನ್ನು

ರೋಹಣೆಯಂ ಗೆಯ್ಯಬೇಕು '' ಎಂದು ಉಪಚಾರೋಕ್ತಿಗಳಂ ಪೇಳುತ್ತಬರಲು ;

ದುಷ್ಯಂತರಾಜನು ಆದೇರೀತಿಯಿಂದ ಆ ಗೃಹವಂ ಪ್ರವೇಶವಂ ಗೆಯ್ದು ಸೇವಕಜನರಿಂದೊಡಗೂಡಿ ದ್ವಾರಪಾಲಕಿಯಂ ಕುಱಿತು--'' ಎಲೆ ವೇತ್ರವತಿಯೇ, ಪೂಜ್ಯನಾದ ಕಣ್ವಮುನೀಶ್ವರನು ತನ್ನ ಶಿಷ್ಯರನ್ನೇನುಕಾರಣ ಎನ್ನ ಬಳಿಗೆ ಕಳುಹಿಸಿರುವನೊ ? ಮತ್ತು ವೃದ್ಧಿಯಂ ಪೊಂದಿದ ಋಷಿಗಳ ತಪಂಗಳು ವಿಘ್ನಂಗಳಿಂ ದೂಷಿತಂಗಳಾದುವೊ? ಹಾಗಲ್ಲದಿರೆ ಧರ್ಮಕರವಾದ ತಪೋವನದಲ್ಲಿ ಸಂಚರಿಸುತ್ತಿರುವ ಮೃಗ ಮೊದಲಾದ ಪ್ರಾಣಿಗಳಲ್ಲಿ ಆ ಋಷಿಗಳ ತಪಃಪ್ರಭಾವವನ್ನಱಿಯದೆ ಯಾವನಾದರೂ ದುರ್ವ್ಯಾಪಾರವಂ ಗೆಯ್ದುದಱಿಂದಲೊ? ಅಲ್ಲದೆ ನಾನೇನಾದರೂ ಅಧರ್ಮವಂ ನಡೆಸಿದ್ದಱಿಂ ವೃಕ್ಷಲತೆಗಳಲ್ಲಿ ಫಲಪುಷ್ಪಂಗಳಾಗುವುದು ನಿಂತುಪೋಗಿರುವುವೊ? ಇನ್ನೇನು ಕಾರಣದಿಂದ ಎನ್ನ ಬಳಿಗೆ ಶಿಷ್ಯರಂ ಕಳುಹಿಸಿರುವನು? ಎಂದು ಅನೇಕವಾದ ಊಹೆಯಂ ಪಡೆದಿರುವ ಎನ್ನ ಮನವು ಸಂಶಯಯುಕ್ತವಾಗಿ ಕಳವಳಂ ಪೊಂದುತಿರುವುದು '' ಎಂದು ನುಡಿಯಲು;

ವೇತ್ರವತಿಯು —'' ಎಲೈ ಸ್ವಾಮಿಯೇ, ಋಷಿಗಳಾದವರು ಶುಭವಾದ ಕಾರ್ಯಗಳಿಂ ಸಂತುಷ್ಟಿಯಂ ಪೊಂದುವರಾದ್ದಱಿಂ ನಿನ್ನ ಶುಭಚರಿತ್ರೆಯಂ ನೋಡಿ ನಿನಗೆ ವೇದೋಕ್ತವಾದ ಆಶೀರ್ವಾದವಂ ಗೆಯ್ದು ಪೋಗುವುದಕ್ಕೋಸುಗ ಬಂದಿರುವರು ಎಂದು ಊಹಿಸುತ್ತಿರುವೆನು '' ಎನ್ನಲು;

ಅಷ್ಟಱಲ್ಲೇ ಸೋಮರಾತನೆಂಬ ಪುರೋಹಿತನು ಕಣ್ವಋಷಿ ಶಿಷ್ಯರಾದ ಶಾರ್ಙ್ಗರವನಂ, ಶಾರದ್ವತನೆಂಬವನಂ, ಶಕುಂತಲೆಯಂ, ಗೌತಮಿಯಂ, ಕರೆದುಕೊಂಡು ಕಂಚುಕಿಯಿಂದೊಡಗೊಂಡು ರಾಯನಿರುವ ಔಪಾಸನಗೃಹಪ್ರವೇಶವಂ ಗೆಯ್ಯಲು;

ವೃದ್ಧಕಂಚುಕಿಯು--'' ಎಲೈ ಋಷಿಗಳಿರಾ, ಮಹಾರಾಜನಾದ ದುಷ್ಯಂತರಾಜನು ಮುಂಬಾಗದಲ್ಲಿರುವನು '' ಎಂದು ನುಡಿಯಲು;

ಋಷಿಗಳೀರ್ವರು ನೋಡಿ, ಶಾರ್ಙ್ಗರವನು ಶಾರದ್ವತನನ್ನು ಕುಱಿತು- ''ಎಲೈ ಶಾರದ್ವತನೇ, ಐಶ್ವರ್ಯವು ಎಷ್ಟಿದ್ದರೂ ತನ್ನ ಸ್ವಭಾವವನ್ನತಿಕ್ರಮಿಸದೆ ಇರುತ, ಸಮಸ್ತ ಜನಸಂರಕ್ಷಕನಾದಂಥ ಈ ದುಷ್ಯಂತರಾಜನು ಭೂಮಿಯಂ ಧರ್ಮದಿಂ ಸಂರಕ್ಷಿಸುತ್ತಿರುವಲ್ಲಿ, ಯಾವ ಪುರುಷನಾದರೂ ತನ್ನ ವರ್ಣಾಶ್ರಮಧರ್ಮವಂ ಬಿಟ್ಟು ದುರ್ಮಾರ್ಗವಂ ಪೊಂದಲಾರನು. ಮತ್ತು ಈ ರಾಯನು ಧರ್ಮಾತ್ಮನಾಗಿ, ಸತ್ಯಸ್ವರೂಪನಾಗಿ, ಬಾಂಬಾರಿಗೂ ಪರಿಚಯವಂ ಪಡೆದಿರುವ ನಿರ್ಮಲ

ಮನಸ್ಸಿನಿಂ ಯುಕ್ತನಾಗಿರ್ದರೂ ಈ ರಾಯನಿರುವ ಸ್ಥಾನವು ಅಗ್ನಿಯಿಂ ಪ್ರಜ್ವಲಿಸುತ್ತಿರುವ ಗೃಹವು ಹೇಗೆ ಪ್ರವೇಶಿಸುವುದಕ್ಕೆ ಅಸಾಧ್ಯವಾಗಿರುವುಗೋ ಅದರಂತೆ ಎನಗೆ ಸಮೀಪಕ್ಕೆ ಪೋಗುವುದಕ್ಕೆ ಭಯವುಂಟಾಗಿರುವುದು'' ಎಂದು ನುಡಿಯಲು;

ಆ ಶಾರದ್ವತನು-''ಎಲೈ ಮಿತ್ರನೇ, ನೀನು ಪೇಳುವ ವಾಕ್ಯವು ಯುಕ್ತವಾಗಿರುವುದು. ಸರ್ವದಾ ಅರಣ್ಯದಲ್ಲಿ ವಾಸವಂ ಗೆಯ್ಯುತಿರ್ದು ಈಗ ಪುರವಂ ಪೊಕ್ಕಿದ್ದರಿಂದೀಪರಿಯಾಗಿ ಭಯಕ್ಕೆ ಕಾರಣವಾದುದು. ಈಗ ನಾನು ನೂತನವಾಗಿ ಈ ಪಟ್ಟಣವಂ ಪ್ರವೇಶವಂ ಗೆಯ್ದುದರಿಂದ ನದಿ ಮೊದಲಾದ ನಿರ್ಮಲಜಲದಲ್ಲಿ ಸ್ನಾನವಂ ಗೆಯ್ಯುತ್ತಿರುವ ಪುರುಷನು ಅಭ್ಯಂಗನಸ್ನಾನವಂ ಗೆಯ್ದಿರುವವನಂ ಪರಿಶುದ್ಧನಲ್ಲವೆಂದು ತಿಳಿಯುವಂತೆ, ಸದ್ವ್ಯಾಪಾರದಲ್ಲಿರುವ ಮನುಜನು ದುರ್ಮಾರ್ಗನಿರತನಾದ ಪುರುಷನಂ ದುಷ್ಟನನ್ನಾಗಿ ತಿಳಿಯುವಂತೆ, ಜಾಗರೂಕನಾಗಿರುವ ಮನುಜನು ಮಲಗಿರುವವನಂ ಕಂಡು ಮಂದಬುದ್ಧಿಯನ್ನಾಗಿ ತಿಳಿಯುವಂತೆ, ಮನಬಂದಂತೆ ತಿರುಗುವ ಪುರುಷನು ನಿರ್ಬಂಧಕ್ಕೆ ಸಿಕ್ಕಿದವನಂ ನೋಡಿ ಕೈಲಾಗದವನನ್ನಾಗಿ ತಿಳಿಯುವಂತೆ, ಸಮಸ್ತ ಸಂಸಾರಸುಖವಂ ಬಿಟ್ಟು ಇರುವ ನಾನು ಈ ಪುರದಲ್ಲಿರುವ ಸಮಸ್ತ ಜನರಂ ಪತ್ನೀಪುತ್ರರು ಮೊದಲಾದ ವಿಷಯಸುಖಾಸಕ್ತರನ್ನಾಗಿ ತಿಳಿಯುವೆನು'' ಎಂದು ಹೇಳುತ್ತಿರಲು ;

ಶಕುಂತಲೆಯು ತನಗೆ ಅವಶಕುನವಾದುದಂ ತಿಳಿದು ಒತ್ತಿನಲ್ಲಿ ಬರುವ ಗೌತಮಿಯಂ ಕುರಿತು, '' ಎಲೌ ತಾಯೇ, ಏನು ಕಾರಣದಿಂದಲೋ ಎನ್ನ ಬಲಗಣ್ಣು ಹಾರುತ್ತಿರುವುದು? '' ಎಂದು ನುಡಿಯಲು ;

ಆ ಗೌತಮಿಯು—'' ಎಲೆ ಪುತ್ರಿಯೇ, ನಿನಗೆ ಅಶುಭಂಗಳೆಲ್ಲಾ ಪರಿಹಾರವಾಗುವಂತೆ ನಿನ್ನ ಪತಿಯಾದ ದುಷ್ಯಂತರಾಯನ ಕುಲದೇವತೆಯು ನಿನಗೆ ಸರ್ವಸಂಪದವನ್ನೀಯಲಿ! '' ಎಂದು ಆಶೀರ್ವಾದವಂ ಗೆಯ್ಯಲು ;

ಸೋಮರಾತನೆಂಬ ಪುರೋಹಿತನು ಶಾರ್ಙ್ಗರವಋಷಿಗೆ ರಾಯನಂ ತೋರಿಸಿ-'' ಎಲೈ ಋಷಿಶ್ರೇಷ್ಠನೇ, ಸಮಸ್ತವಾದ ಬ್ರಾಹ್ಮಣ ಕ್ಷತ್ರಿಯ ಮೊದಲಾದ ವರ್ಣಾಶ್ರಮ ಧರ್ಮಂಗಳಂ ವ್ಯತ್ಯಾಸವಿಲ್ಲದಂತೆ ಪರಿಪಾಲಿಸುತ್ತಿರುವ ರಾಜಾಧಿರಾಜನಾದ ನಮ್ಮ ದುಷ್ಯಂತರಾಜನು ಮೊದಲೇ ಸಿಂಹಾಸನದಿಂದೆದ್ದು ನೀವು ಬರುವುದನ್ನೇ ಎದರುನೋಡುತ್ತಾ ಇರುವನು. ಈ ದಿವ್ಯವಾದ ಆಕಾರವಂ ನೋಡು '' ಎಂದು ಪೇಳಲು ;

ಶಾರ್ಙ್ಗರವನು—''ಎಲೈ ಬ್ರಾಹ್ಮಣಶ್ರೇಷ್ಠನೇ, ನೀನು ಈ ರಾಜನ ಪುರೋ

ಹಿತನಾದ್ದಱಿಂದಿಂತು ಸ್ತೋತ್ರವಂ ಗೆಯ್ಯುವುದು ಯುಕ್ತವಾಗಿರುವುದು. ಆದರೂ ನಾನು ಅರಣ್ಯವಾಸಿಯಾಗಿ ರಾಯನ ಹಂಗಿಲ್ಲದೆ ಇದ್ದರೂ ಸ್ತೋತ್ರವಂಗೆಯ್ಯಬೇಕಾಗಿರುವುದು. ಹೇಗೆಂದರೆ—ಲೋಕದಲ್ಲಿ ವೃಕ್ಷಂಗಳು ಫಲಪುಷ್ಪಂಗಳಿಂ ಪೂರಿತಂಗಳಾಗಿ ಜನೋಪಕಾರಾರ್ಥವಾಗಿ ಬಾಗಿರುವುವು; ಮೇಘಂಗಳು ನೂತನವಾದ ಜಲವಂ ಪಾನವಂ ಗೈದು ಮಳೆಗಱೆಯುವುದಕ್ಕೋಸುಗ ಭೂಮಿಗೆ ದೂರದಿಂ ಜೋಲುತ್ತಿರುವುವು; ಸತ್ಪುರುಷರಾದವರು ಅಧಿಕೈಶ್ವರ್ಯದಿಂ ಯುಕ್ತರಾದರೂ ತಮ್ಮ ಮರ್ಯಾದೆಯಂ ಮೀಱದೆ ಸದ್ಗುಣಾನ್ವಿತರಾಗಿರುವರು. ಹಾಗೆಯೇ ಸರಿ. ಪರೋಪಕಾರಿಗಳಾದ ಮನುಷ್ಯರ ಸ್ವಭಾವವು ಜನಮನೋರಂಜಕವಾಗಿರುವುದು. ಆದ್ದಱಿಂ ಸಮಸ್ತ ಲೋಕಸಂರಕ್ಷಣಾರ್ಥವಾಗಿ ಪುಟ್ಟಿರುವ ಈ ದುಷ್ಯಂತರಾಯನ ಸದ್ಗುಣಂಗಳಂ ವರ್ಣಿಸುವುದಕ್ಕೆ ಅಸಾಧ್ಯಂಗಳಾಗಿರುವುದು " ಎನ್ನಲು;

ರಾಯನ ಸಮೀಪದಲ್ಲಿರ್ದ ದ್ವಾರಪಾಲಕಸ್ತ್ರೀಯು ಬರುವ ಋಷಿಗಳಂ ಕಂಡು,—"ಎಲೈ ಸ್ವಾಮಿಯೇ, ಈ ಋಷಿಗಳು ಪ್ರಸನ್ನಮುಖರಾಗಿ ಬರುವುದಱಿಂದೇನೋ ಒಂದು ಶುಭವರ್ತಮಾನವಂ ಪೇಳುವರೆಂದು ತೋಱುವುದು" ಎಂದು ನುಡಿಯಲು;

OSMANIA UNIVERSITY

ರಾಯನು ಆ ಋಷಿಗಳ ಮಧ್ಯದಲ್ಲಿ ರಾಜಲಕ್ಷ್ಮಿಯಂತೆ ಬರುತ್ತಿರುವ ಶಕುಂತಲೆಯುಂ ಕಂಡು, ದೂರ್ವಾಸಋಷಿಯ ಶಾಪಬಲದಿಂ ಆ ಶಕುಂತಲೆಯ ಗುಱುತಂ ಮಱೆತು, ಆ ದ್ವಾರಪಾಲಕಿಯಂ ಕುಱಿತು—"ಎಲೆ ವೇತ್ರವತಿಯೇ, ಬಿಸಿಲಿಂ ಒಣಗಿ ಬಿಳ್ಪೇಱಿದ ತಱಗೆಲೆಯ ನಡುವೆ ತಳತಳಿಸುತ್ತಿರುವ ಚಿಗುರಿನೋಪಾದಿಯಲ್ಲಿ ಶುಷ್ಕಾಂಗರಾದ ಈ ಋಷಿಗಳ ನಡುವೆ ಮೇಲುಮುಸುಕಿನಿಂದಳವಟ್ಟು ಒಂದು ಮಟ್ಟಾಗಿ ಹೊಱಸೂಸುವ ದೇಹಕಾಂತಿಯುಳ್ಳ ಒಬ್ಬಾಳೊಬ್ಬ ಸ್ತ್ರೀಯು ಬರುತ್ತಿರುವಳು. ಇವಳಾರು? ಎಂದು ನುಡಿಯಲು;

ಆ ವೇತ್ರವತಿಯು—"ಎಲೈ ಸ್ವಾಮಿಯೇ, ಕಾಮಕ್ರೋಧಾದಿಗಳು ಮೊದಲಾದ ವಿಷಯಾಸಕ್ತಿಯಂ ಬಿಟ್ಟಿರುವ ಈ ಋಷಿಗಳು ಸ್ತ್ರೀಯನ್ನೊಳಕೊಂಡು ಬರುವುದಱಿಂದೆನ್ನ ಮನವು ಅತ್ಯಾಶ್ಚರ್ಯದಿಂ ಯುಕ್ತವಾಗಿರುವುದು. ಆದರೂ ಆ ಸ್ತ್ರೀಯ ಆಕಾರವು ನೋಡುವುದಕ್ಕೆ ರಮಣೀಯವಾಗಿರುವುದು" ಎಂದು ನುಡಿಯಲು;

ದುಷ್ಯಂತರಾಜನು—" ಎಲೆ ವೇತ್ರವತಿಯೇ, ದೊರೆಯಾದ ನಾನು ಪರಪತ್ನಿಯಂ ನೋಡುವುದು ಯುಕ್ತವಲ್ಲ " ಎನಲು;

ಶಕುಂತಲೆಯು ರಾಯನಾಡಿದ ವಾಕ್ಯವಂ ಕೇಳಿ ತನ್ನ ಎದೆಯಲ್ಲಿ ಹಸ್ತಗಳನ್ನಿರಿಸಿ ನಡುಗುತ್ತಿರುವ ಮನವಂ ಕುಱಿತು—"ಎಲೆ ಮನವೇ, ಪೂಜ್ಯನಾದ ದುಷ್ಯಂತರಾಯನ ಮನೋವೃತ್ತಿಯಂ ಚೆನ್ನಾಗಿ ತಿಳಿಯದೆ ದೊರೆಯಾದವನು ಪರಸ್ತ್ರೀಯಂ ನೋಡಬಾರದೆಂದು ಸಾಧಾರಣವಾಗಿ ಪೇಳಿದ ಮಾತ್ರದಿಂದಲೇ ನಡುಗಬೇಡ, ಧೈರ್ಯವನ್ನವಲಂಬಿಸು" ಎಂದು ತನ್ನೊಳು ತಾನು ನುಡಿದುಕೊಳ್ಳುತ್ತಿರಲು;

ಸೋಮರಾತನೆಂಬ ಪುರೋಹಿತನು ರಾಯನಂ ಕುಱಿತು—"ಎಲೈ ಮಹಾರಾಯನೇ, ಈ ಋಷಿಗಳಂ ಧೂಪ ಮೊದಲಾದ ವೇದೋಕ್ತವಾದ ಉಪಚಾರಂಗಳಿಂ ಪೂಜೆಯಂ ವಿರಚಿಸಿರುವೆನು. ಇವರ್ಗೆ ಗುರುವಾದ ಕಣ್ವಮಹಾಮುನಿಯು ಸ್ವಾಮಿಯವರಿಗೆ ಕೆಲವು ವಾಕ್ಯವಂ ವಿಜ್ಞಾಪನೆಯಂ ಗೆಯ್ಯುವುದೆಂದು ಕಳುಹಿಸಿರುವನಂತೆ. ಅದಂ ಚಿತ್ತವಿಟ್ಟು ಕೇಳಬೇಕು" ಎಂದು ಅಱಿಕೆ ಗೆಯ್ದು ಕೆಲದೊಳ್ ನಿಲ್ಲಲು;

ಆರಾಯನು ಆ ಪುರೋಹಿತನ ವಾಕ್ಯವಂ ಮನದ್ರಂದು ಆ ಋಷಿಗಳಂ ಪ್ರಶ್ನೆಯಂ ಗೆಯ್ಯುವೆನೆಂದು ಪೇಳುತ್ತಿರ್ದನು.

REGISTRAR UNIVERSITY

ಎಂಬಲ್ಲಿಗೆ

ಕೃಷ್ಣರಾಜವಾಣೀವಿಲಾಸ ರತ್ನಾಕರವೆಂಬ ಶಾಕುಂತಲನಾಟಕ ನವೀನಟೀಕಿನಲ್ಲಿ ಶಕುಂತಲೆ ಗೌತಮಿ ಶಾಙ್ಗ್ರವ ಶಾರದ್ವತ ಋಷಿಗಳು ದುಷ್ಯಂತಮಹಾರಾಯನಂ ಕಂಡರೆಂಬ ತೃತೀಯಕಲ್ಲೋಲದಲ್ಲಿ ತೃತೀಯತರಂಗಂ ಸಂಪೂರ್ಣಂ.

ತೃತೀಯ ಕಲ್ಲೋಲದ ಚತುರ್ಥತರಂಗಂ.

ಅನಂತರದಲ್ಲಿ ಆ ದುಷ್ಯಂತರಾಯನು ಆ ಋಷಿಗಳಂ ಕುಱಿತು ಪ್ರಶ್ನೆಯಂ ಗೆಯ್ಯಬೇಕೆಂದು ಮನದಲ್ಲಾಲೋಚನೆಯಂ ಗೆಯ್ಯುತ್ತಿರುವಷ್ಟಱಲ್ಲೇ ಆ ಋಷಿಗಳೀರ್ವರು ತಮ್ಮ ಹಸ್ತಗಳನ್ನೆತ್ತಿ—"ಎಲೈ ಮಹಾರಾಯನೇ ! ಜಯವುಳ್ಳವನಾಗಿ, ಪುತ್ರಪೌತ್ರಾಭಿವೃದ್ಧಿಯಿಂ ಯುಕ್ತನಾಗು !" ಎಂದು ಆಶೀರ್ವಾದವಂ ಗೆಯ್ಯಲು;

ರಾಜನು ತಾನು ಕುಳಿತಿರ್ದ ರತ್ನಪೀಠದಿಂದೆದ್ದು ಆ ಋಷಿಗಳ ಪಾದಂಗಳಿಗೆ ವಂದನೆಯಂ ಗೆಯ್ದು ವಿನಯಾನ್ವಿತನಾಗಲು;

ಋಷಿಗಳು–"ಎಲೈ ಮಹಾರಾಜನೇ, ನಿನ್ನ ಮನದಲ್ಲಿರ್ದ ಸರ್ವಾಭೀಷ್ಟವಂ ಪಡೆದು ಸುಖಿಯಾಗು!" ಎಂದು ಮರಳಿ ಆಶೀರ್ವಾದವಂ ಗೆಯ್ಯಲು;

ರಾಯನು–"ಎಲೈ ಪೂಜ್ಯರಾದ ಋಷಿಗಳಿರ, ನಿಮ್ಮ ತಪಸ್ಸುಗಳು ನಿರ್ವಿಘ್ನವಾಗಿ ನಡೆಯುವುವೆ ? ತಪೋವನವು ದುಷ್ಟರಾದ ರಾಕ್ಷಸರೊದಲಾದವರ ಬಾಧೆಯಿಂ ವಿರಹಿತವಾಗಿರುವುದೆ?" ಎಂದು ಕುಶಲಪ್ರಶ್ನೆಯಂ ಗೆಯ್ಯಲು;

ಋಷಿಗಳು—"ಎಲೈ ಮಹಾರಾಯನೇ, ಸೂರ್ಯನು ಚೆನ್ನಾಗಿ ಪ್ರಕಾಶಮಾನನಾಗಿರುವಲ್ಲಿ ಅಂಧಕಾರಪ್ರಚಾರವು ಹೇಗಿಲ್ಲದಿರುವುದೋ ಅದೇ ರೀತಿಯಿಂ ನೀನು ಧರ್ಮಾತ್ಮನಾಗಿ ನಿಗ್ರಹಾನುಗ್ರಹಂಗಳಲ್ಲಿ ಸಮರ್ಥನಾಗಿ ಸತ್ಯದಿಂ ರಾಜ್ಯಪರಿಪಾಲನೆಯಂ ಗೆಯ್ಯುತ್ತಿರುವಲ್ಲಿ ನಮ್ಮ ತಪಸ್ಸುಗಳಿಗೂ ತಪೋವನಕ್ಕೂ ದುಷ್ಟರಬಾಧೆಯು ಪುಟ್ಟಲಾರದು" ಎಂದು ವಿಜ್ಞಾಪನೆಯಂ ಗೆಯ್ಯಲು;

ರಾಯನು—"ಎಲೈ ಪೂಜ್ಯರಾದ ಋಷಿಗಳಿರಾ, ಷಡ್ಗುಣೈಶ್ವರ್ಯಸಂಪನ್ನನಾದ ಕಣ್ವಮುನೀಶ್ವರನು ಜಗತ್ತಿಗೆ ಅನುಗ್ರಹವನ್ನುಂಟುಮಾಡುವುದಕ್ಕೋಸುಗ ಕುಶಲದಲ್ಲಿರುವನೆ ? ಎನ್ನಲು;

ಋಷಿಗಳು—"ಎಲೈ ಮಹಾರಾಯನೇ, ಅಷ್ಟಮಹಾಸಿದ್ಧಿಯಂ ಪಡೆದಿರುವ ಮಹಾಮಹಿಮರಾದ ನಮ್ಮ ಗುರುಗಳ ಯೋಗಕ್ಷೇಮಕ್ಕೆ ಕಡಮೆಯೇನು ? ಆದರೂ ಕೆಲವು ವಾಕ್ಯವಂ ನಿಮಗೆ ವಿಜ್ಞಾಪನೆಯಂ ಗೆಯ್ದು ಬರುವಂತೆ ಅಪ್ಪಣೆಯನ್ನಿತ್ತು ಇರುವರು" ಎನ್ನಲು;

" ಅದಂ ಕೇಳುವೆನು ಪೇಳಬಹುದು" ಎನ್ನಲು;

ಶಾರ್ಙ್ಗರವನು ರಾಯನಂ ಕುರಿತು—"ಎಲೈ ಮಹಾರಾಯನೇ, ನೀನು ನಮ್ಮ ತಪೋವನಕ್ಕೆ ಬಂದು ಇದ್ದಾಗ್ಯೆ ಅನುರಾಗದಿಂ ಯುಕ್ತನಾಗಿ ನಮ್ಮ ಪುತ್ರಿಯಾದ ಶಕುಂತಲೆಗೆ ಅನೇಕವಾದ ಭಾಷೆಯನ್ನಿತ್ತು, ಗಾಂಧರ್ವವಿವಾಹವಂ ವಿರಚಿಸಿ ಬಂದ ವೃತ್ತಾಂತವಂ ತಿಳಿದಾಗ್ಗೂ ಯುಕ್ತಮಾದ ಕಾರ್ಯವಂ ನಡೆಸಿದನೆಂದು ಸಮ್ಮತವಾಗಿ ಪ್ರೀತಿಯುಕ್ತನಾದೆನೆಂತಲೂ, ಮತ್ತು ಲೋಕದಲ್ಲಿ ಶ್ರೇಷ್ಠರಲ್ಲಿ ಅಗ್ರಗಣ್ಯನಾಗಿ ರಾಜೋತ್ತಮನಾದ ನೀನು ಸತ್ಕಾರಂಗಳೇ ಮೂರ್ತಿಭವಿಸಿದಂತಿರುವ ಈ ಶಕುಂತಲೆಯೊಡನೆ ಕೂಡಿದುದರಿಂ ಬ್ರಹ್ಮನು ಲೋಕದಲ್ಲಿ ಉತ್ತಮಪುರುಷರೊಡನೆ ದುಷ್ಟಸ್ತ್ರೀಯರಂ, ರೂಪವತಿಯರಾದ ಸ್ತ್ರೀಯರೊಡನೆ ಕುರೂಪಿಗಳಾಗಿ ದುರಾಚಾರಿಗಳಾದ ಪುರುಷರಂ ಕೂಡಿಸುವನೆಂಬ ಜನಾಪವಾದವಂ ಪೋಗಲಾಡಿಸಿಕೊಂಡಿರುವನು. ಈಗ ನಿನ್ನಿಂದ ಗರ್ಭವಂ ಪಡೆದಿರುವ ಈ ಶಕುಂತಲೆಯಂ

ಧರ್ಮಾರ್ಥ ಕಾಮಮೋಕ್ಷಗಳೆಂಬ ಪುರುಷಾರ್ಥವಂ ಸಂಪಾದಿಸುವುದಕ್ಕೋಸುಗ ನೀನು ಇವಳಂ ಪರಿಗ್ರಹಿಸಿ ಸುಖದಿಂದಿರುವುದೆಂತಲೂ ನಮ್ಮಮುನಿಯು ಅಪ್ಪಣೆಯ ನ್ನಿತ್ತಿರುವರು '' ಎಂದು ನುಡಿಯಲು;

ಗೌತಮಿಯು ರಾಯನಂ ಕುಱಿತು—'' ಎಲೈ ಪೂಜ್ಯನಾದ ರಾಯನೇ, ಕೆಲವು ವಚನವಂ ಪೇಳಬೇಕೆಂದಿರುವೆನು. ಆದರೂ ಆ ವಚನಂಗಳಿಗೆ ಅವಕಾಶವಿಲ್ಲದೆ ಇರುವುದು. ಹೇಗೆಂದರೆ—ಲೋಕದಲ್ಲಿ ವಿವಾಹವಾಗುವ ಕಾಲದಲ್ಲಿ ತಂದೆ ತಾಯಿ ಮೊದಲಾದ ಬಂಧುಗಳ ಸಮ್ಮತಿಯಾಗಬೇಕಾಗಿರುವಲ್ಲಿ ನೀನು ಗುರುವಾದ ಕಣ್ವಮುನೀಶ್ವರನ ಆಜ್ಞೆಯನ್ನೂ ಅಪೇಕ್ಷಿಸದೆ, ಈ ಶಕುಂತಲೆಯು ಬಂಧುವಾದ ನಮ್ಮನ್ನೊಬ್ಬರನ್ನಾದರೂ ಕೇಳದೆ, ಅನುರಾಗದಿಂ ಯುಕ್ತರಾಗಿ ಗಾಂಧರ್ವವಿವಾಹವಂ ನಡೆಸಿರುವರಾದ್ದಱಿಂ ನಿಮ್ಮೊಬ್ಬೊಬ್ಬರ ಚರಿತ್ರವನ್ನೇನೆಂದು ನುಡಿಯಲಿ '' ಎನ್ನಲು;

ಆ ಶಕುಂತಲೆಯು ಗೌತಮಿಯಂ ಕುಱಿತು—''ಎಲೌ ತಾಯೇ, ಆರ್ಯಪುತ್ರನಾದ ರಾಯನು ಏನೋ ಒಂದು ವಾಕ್ಯವಂ ಪೇಳುವನಂತೆ ತೋಱುವನು; ಅದಂ ಕೇಳು '' ಎಂದು ನುಡಿಯಲು;

ರಾಯನು ಆ ಗೌತಮಿಯಂ ಆ ಋಷಿಗಳಂ ಕುಱಿತು—'' ಎಲೈ ಪೂಜ್ಯರುಗಳಿರಾ, ಏನು ಪೇಳಿದಿರಿ ! '' ಎಂದು ಗರ್ಜಿಸಿ ನುಡಿಯಲು;

ಆವಾಕ್ಯಕ್ಕೆ ಶಕುಂತಲೆಯು—''ರಾಯನು ಪೇಳುವ ವಾಕ್ಯವು ಅಗ್ನಿಯಂತೆ ಕ್ರೂರವಾಗಿರುವುದು'' ಎನ್ನಲು;

ಶಾರ್ಙ್ಗರವನು—'' ಅಯ್ಯಾ ರಾಯನೇ, ಸಮಸ್ತಧರ್ಮಶಾಸ್ತ್ರಂಗಳಲ್ಲಿ ಕುಶಲನಾದ ನೀನು ಯಾವ ಕಾರಣದಿಂ ಗರ್ಜಿಸಿ ನುಡಿಯುತ್ತಿರುವೆ ? ಲೋಕದಲ್ಲಿ ಪತಿವ್ರತಾಸ್ತ್ರೀಯಾದವಳು ತನ್ನ ಪತಿಯಿರುವ ಸ್ಥಾನವಂ ಬಿಟ್ಟು ತನ್ನ ತಂದೆಯ ಮನೆಯಲ್ಲಿ ಇರ್ದಳಾದರೆ ಜನರುಗಳು ಆವಳಲ್ಲಿ ದೋಷವನ್ನೂ ಹಿಸುತ್ತಿರುವುದಾದ್ದಱಿಂ ಸ್ತ್ರೀಯಾದವಳು ಗಂಡನ ವಿಶ್ವಾಸಕ್ಕೆ ಪಾತ್ರಳಲ್ಲದೆ ಇರ್ದರೂ ಆವನ ಬಳಿಯಲ್ಲೇ ಇರುವುದಕ್ಕೆ ಯೋಗ್ಯಳೆಂದು ಹಿತಕರರಾದ ಬಂಧುಗಳು ಇಚ್ಛೈಸುತ್ತಿರುವರು. ಇಂತು ಲೋಕಮರ್ಯಾದೆ ಇರುವುದಱಿಂದೀಶಕುಂತಲೆಯು ನಿನಗೆ ಪ್ರೀತಿಪಾತ್ರಳಾಗಲಿ, ಆಗದೆ ಇರಲಿ ನಿನ್ನ ಸಮೀಪದಲ್ಲಿರುವುದಕ್ಕೆ ಯೋಗ್ಯಳಾಗುವಳು '' ಎಂದು ನುಡಿಯಲು;

ಆ ವಾಕ್ಯವಂ ಕೇಳಿ, ರಾಯನು—'' ಎಲೈ ಮುನಿಯೇ, ನೀನು ಪೇಳುವ ವಾಕ್ಯವಂ ಕೇಳುವಲ್ಲಿ ನಾನು ಈಸ್ತ್ರೀಯಂ ಪೂರ್ವದಲ್ಲಿ ವಿವಾಹವಂ ಮಾಡಿಕೊಂಡಿರುವಂತೆ ತೋಱುವುದೆ !'' ಎನ್ನಲು ;

ಆ ವಚನವಂ ಕೇಳ್ದ ಶಕುಂತಲೆಯು ಭಿನ್ನಹೃದಯಳಾಗಿ,—“ಎಲೆ ಮನವೇ, ಈಗ ನೀನು ಸಂತಾಪದಿಂ ಯುಕ್ತಮಾಡೆ” ಎಂದು ತನ್ನ ಮನವಂ ಕುಱಿತು ಪೇಳುತ್ತಾ ತಳವಳಪಡುತ್ತಾ ಇರಲು;

ಶಾರ್ಙ್ಗರವನು—“ಎಲೈ ರಾಯನೇ, ಗಾಂಧರ್ವವಿವಾಹ ಮೊದಲಾದ ಕಾರ್ಯಂಗಳಂ ನಡೆಸಿ, ಈಗ ಆಕಾರ್ಯಗಳಲ್ಲಿ ದ್ವೇಷವುಂಟಾದುದೋ ಎನು! ಅಲ್ಲದಿರೆ ಧರ್ಮದಲ್ಲೇ ವಿಮುಖತ್ವವು ಪುಟ್ಟಿದುದೋ ಏನು? ಅಂತುಮಲ್ಲದಿರೆ ಈ ಋಷಿಗಳು ಎಂತು ದೊರೆಯಾದ ಎನಗೆ ಬಂಧುಗಳಾಗುವರು; ಈ ಶಕುಂತಲೆಯೆಂತು ಪತ್ನಿಯಾಗುವಳು ಎಂದು ನಮಗೆ ಅಪಮಾನವಂ ಗಯ್ಯುತ್ತಿರುವೆಯೋ ಏನು! ಯಾವ ಕಾರಣದಿಂದ ಏನು ಕೇಳುವಿರೆಂದು ಗರ್ಜಿಸಿ ನುಡಿಯುತ್ತಿರುವೆ?” ಎನ್ನಲು;

ರಾಯನು—“ಎಲೈ ಋಷಿಯೇ, ಯಾತಕ್ಕೋಸುಗ ಇಲ್ಲದೆ ಇರುವ ಕಾರ್ಯವಂ ಕಲ್ಪಿಸಿಕೊಂಡು ಎನ್ನಂ ಕುಱಿತು ಪ್ರಶ್ನೆಯಂಗೆಯ್ಯುತಿರುವೆ?” ಎನ್ನಲು;

ಶಾರ್ಙ್ಗರವನು—“ಎಲೈ ದೊರೆಯೇ, ಕೇಳು. ಮಾಡಿದ ಕಾರ್ಯವಂ ಮಱೆಯುವುದು ಧರ್ಮಕಾರ್ಯಂಗಳಲ್ಲಿ ದ್ವೇಷವಂ ಗೆಯ್ಯುವುದು, ಹಿತವಾಕ್ಯವಂ ಪೇಳುವರಿಗೆ ಅನನುಮತಿಯ ಮಾಳ್ಪುದು-ಇವೆಲ್ಲವು ಐಶ್ವರ್ಯಮತ್ತರಾದ ಅರಸುಗಳಲ್ಲಿ ವ್ಯಾಪಿಸಿಕೊಂಡಿರುವುದಾದ್ದಱಿಂದ ನಾನಿಂತು ನುಡಿದೆನು” ಎನ್ನಲು;

ರಾಯನು—“ಎಲೈ ಋಷಿಯೇ, ಈ ನಿಷ್ಠುರವಾಕ್ಯಂಗಳಿಂ ಎನ್ನಂ ಚೆನ್ನಾಗಿ ಧಿಕ್ಕಾರವಂ ಗೆಯ್ಯೆ” ಎನ್ನಲು;

ಗೌತಮಿಯು ಶಕುಂತಲೆಯಂ ಕುಱಿತು—“ಎಲೆ ಶಕುಂತಳೆಯೇ, ನಿನ್ನ ಮೇಲುಮುಸಕಂ ತೆಗೆಯುವೆನು. ನೀನು ಒಂದು ಮುಹೂರ್ತ ಲಜ್ಜೆಯಂ ಪೊಂದಬೇಡ. ನಿನ್ನಾಕಾರವಂ ಈ ದುಷ್ಯಂತರಾಯನು ನೋಡಿಯಾದರೂ ತನ್ನ ಪತ್ನಿಯಹುದೆಂದು ತಿಳಿಯಲಿ” ಎಂದು ನುಡಿದು, ಮನ್ಮಥನ ಖಡ್ಗದ ಒರೆಗಳೆಯುವಂತೆ ಆ ಶಕುಂತಲೆಯ ಮೇಲುಮುಸುಕಂ ತೆಗೆಯಲು;

ರಾಯನು ಅವಳಂ ಚೆನ್ನಾಗಿ ನಿರೀಕ್ಷಣೆಯಂ ಗೆಯ್ದು,-ನಿರ್ಮಲಕಾಂತಿಯುಳ್ಳುದಾಗಿ ಮುಂಭಾಗದಲ್ಲಿ ಪೊಳೆಯುತ್ತಿರುವ ಶಕುಂತಲೆಯ ರೂಪವಂ ನೋಡಲು ಇವಳೊಡನೆ ಸಂಭೋಗಾದಿಗಳಂ ಮಾಡಿರುವೆನೊ ಇಲ್ಲವೊ ಎಂಬ ಸಂದೇಹವು ಪ್ರಾಪ್ತವಾಗುತ್ತಿರುವುದು. ಪ್ರಾತಃಕಾಲದಲ್ಲಿ ಭ್ರಮರವು ಮಂಜಿನಿಂ ತುಂಬಿ ಇರುವ ಮಧ್ಯಪ್ರದೇಶವುಳ್ಳ ಮೊಲ್ಲೆಯ ಹೂವಂ ನೋಡಿ ಇದಱಲ್ಲಿರುವುದು ಮಕರಂದವಹುದೋ ಅಲ್ಲವೊ? ಎಂಬ ಸಂದೇಹದಿಂದಾಕುಂದಪುಷ್ಪವಂ ಬಿಟ್ಟು ಪೋಗುವುದಕ್ಕೆ

ಸಮರ್ಥವಾಗಲಾರದೆ ಇರುವಂತೆ ಇವಳ ಲಾವಣ್ಯವಂ ನೋಡಿ ಬಿಡುವುದಕ್ಕೂ ವಿವಾಹದ ಸ್ಮರಣೆಯಿಲ್ಲದಿರುವುದರಿಂ ಪರಿಗ್ರಹಿಸುವುದಕ್ಕೂ ಸಮರ್ಥನಾಗಲಾರನು—ಎಂದು ತನ್ನೊಳು ತಾನು ಆಲೋಚನೆಯಂ ಗೆಯ್ದು ಮೌನದಿಂ ಕುಳಿತಿರಲು ;

ಆ ದ್ವಾರಪಾಲಕಿಯು ಶಕುಂತಲೆಯಂ ನೋಡಿ—ನೂತನವಾಗಿ ಸುಖಕ್ಕೆ ಯೋಗ್ಯವಾದ ಈ ಶಕುಂತಲೆಯ ರೂಪವಂ ನೋಡಿ ಯಾವ ಪುರುಷನಾದರೂ ಇದು ಯುಕ್ತ ಇದು ಅಯುಕ್ತವೆಂದು ವಿಚಾರಣೆಯಂ ಗೆಯ್ಯಲಾರನು. ನಮ್ಮ ರಾಯನು ಧರ್ಮಾಪೇಕ್ಷಿಯಾದುದರಿಂದ ಈಪ್ರಕಾರವಾಗಿ ಆಲೋಚನೆಯಂ ಗೆಯ್ಯುತ್ತಿರುವನು!'' ಎಂದು ನುಡಿಯಲು ;

ಶಾರ್ಙ್ಗರವನು—''ಎಲೈ ರಾಯನೇ, ಪ್ರತ್ಯುತ್ತರವನ್ನೀಯ್ಯದೆ ಏನು ಕಾರಣದಿಂ ಮೌನದಿಂ ಕುಳಿತಿರುವೆ?'' ಎನ್ನಲು ;

ರಾಯನು—'' ಅಯ್ಯಾ ಋಷಿಗಳಿರಾ, ಎಷ್ಟುಪ್ರಕಾರವಾಗಿ ಆಲೋಚನೆಯಂ ಗೆಯ್ದರೂ ಈ ಶಕುಂತಳೆಯಂ ವಿವಾಹಿತಳನ್ನಾಗಿ ಮಾಡಿಕೊಂಡ ಸ್ಮರಣೆಯು ಪುಟ್ಟದೆ ಇರುವುದಾದ್ದರಿಂ ಚೆನ್ನಾಗಿ ವ್ಯಕ್ತವಾಗ ಗರ್ಭಚಿಹ್ನೆಯುಳ್ಳ ಈ ಶಕುಂತಲೆಗೆ ನಾನು ಪತಿಯಾದೆನೆಂದು ಹೇಗೆ ಒಡಂಬಡಲಿ, ಪೇಳಿರಿ?'' ಎನ್ನಲು ;

ಆ ಶಕುಂತಲೆಯು ಅತ್ಯಂತಸಂತಾಪದಿಂ ಯುಕ್ತಳಾಗಿ,—'' ಎಲೈ ಋಷಿಗಳಿರಾ, ಈ ರಾಯಂಗೆ ಎನ್ನ ವಿವಾಹದಲ್ಲೇ ಸಂದೇಹವುಂಟಾಗಿ ಇರುವಲ್ಲಿ ಪಟ್ಟಸ್ತ್ರೀಯಾಗಿ ಸಮಸ್ತಸೌಖ್ಯವಂ ಪೊಂದುವೆನೆಂದು ಬಹುದೂರ ವ್ಯಾಪಿಸಿ ಇರುವ ಎನ್ನ ಆಶೆಯು ವ್ಯರ್ಥವಾದುದು!'' ಎನ್ನಲು;

ಶಾರ್ಙ್ಗರವನು ಕೋಪದಿಂ ಯುಕ್ತನಾಗಿ—'' ಎಲೈ ರಾಯನೇ, ಪೇಳುವೆನು ಕೇಳು. ಲೋಕದಲ್ಲಿ ಒಬ್ಬಾನೊಬ್ಬ ಪುರುಷನು ಸ್ವಕೀಯ ದ್ರವ್ಯವಂ ಕದ್ದ ಕಳ್ಳನಂ ದಂಡಿಸದೆ ನೀನೇ ಈ ದ್ರವ್ಯಕ್ಕೆ ಯೋಗ್ಯನೆಂದಾಕಳ್ಳನನ್ನೇ ದಾನಪಾತ್ರನನ್ನಾಗಿ ಮಾಡುವಂತೆ ನೀನು ನಮ್ಮ ಋಷಿಪುತ್ರಿಯಂ ಆಋಷಿಗೆ ತಿಳಿಸದೆ ವಿವಾಹ ಮೊದಲಾದ ಕಾರ್ಯಗಳಂ ನಡೆಸಿದಾಗ್ಗೂ ಶಾಪವನ್ನೀಯದೆ ಸಮ್ಮತನಾಗಿ ಇವಳಂ ನಿನ್ನ ಬಳಿಗೆ ಕಳುಹಿಸಿರುವ ನಮ್ಮ ಕಣ್ವಮುನೀಶ್ವರನಂ ಅಪಮಾನವಂ ಗೆಯ್ಯುವುದು ಯುಕ್ತವಲ್ಲ.'' ಎಂದು ನುಡಿಯಲು ;

ಶಾರದ್ವತನು—'' ಎಲೈ ಶಾರ್ಙ್ಗರವನೇ, ಇನ್ನು ಅಧಿಕವಾದ ವಾಕ್ಯಮಂ ಪೇಳದೆ ಸುಮ್ಮನಿರು'' ಎಂದು ನುಡಿದು, ಶಕುಂತಲೆಯಂ ಕುರಿತು—'' ಎಲಾ

ಶಕುಂತಲೆ, ಈ ರಾಯಂಗೆ ನಾವು ಪೇಳತಕ್ಕ ವಾಕ್ಯವಂ ಪೇಳಿದಾಗ್ಯೂ ಈ ರಾಯನು ಈಪ್ರಕಾರವಾಗಿ ವಕ್ರವಾಕ್ಯವಂ ನುಡಿಯುತಿರುವನಾದ್ದಱಿಂ ನೀನು ಗುಱುತಿನ ಮಾತಿರ್ದಲ್ಲಿ ಅದಂ ಪೇಳಬಹುದು '' ಎನ್ನಲು ;

ಆ ಶಕುಂತಲೆಯು—''ಆಪ್ರಕಾರವಾಗಿರ್ದ ಅನುರಾಗವೇ ಈ ಅವಸ್ಥೆಯಾದಲ್ಲಿ ಗುಱಿತಿನ ವಾಕ್ಯದಿಂ ಫಲವೇನು? ಎನ್ನ ಶರೀರವು ಅತಿ ದುಃಖಕ್ಕೆ ಪಾತ್ರವಾದುದು'' ಎಂದು ತನ್ನ ಮನದಲ್ಲಿ ಆಲೋಚನೆಯಂ ಗೆಯ್ದು ರಾಯನಂ ಕುಱಿತು—''ಎಲೈ ಆರ್ಯಪುತ್ರನೇ'' ಎಂದು ಅರ್ಧವಚನವಂ ಪೇಳಿ,—''ವಿವಾಹವಾಗಿರುವುದೇ ಸಂದೇಹವಾಗಿರುವಲ್ಲಿ ಆರ್ಯಪುತ್ರನೆಂದು ಕರೆಯುವ ಸಂಪ್ರದಾಯವು ಹಾಗಿರಲಿ'' ಎಂದು ನುಡಿದು, ಮರಳಿ,''ಪುರುವಂಶದಲ್ಲಿ ಪುಟ್ಟಿದ ರಾಯನೇ, ಕೇಳು. ಪೂರ್ವದಲ್ಲಿ ನಮ್ಮ ತಪೋವನಕ್ಕೆ ಬಂದಿದ್ದಾಗ್ಗೆ ಸ್ವಭಾವವ್ಯಾಕುಲಚಿತ್ತಳಾದ ಎನ್ನಂ ನಿನ್ನ ಗರ್ಭದಲ್ಲಿ ಪುಟ್ಟಿದ ಪುತ್ರನಿಗೆ ಸಮಸ್ತರಾಜ್ಯಕ್ಕೆ ದೊರೆಯನ್ನಾಗಿ ಮಾಡುವೆನೆಂತಲೂ, ಬಹುಜನ ಸ್ತ್ರೀಯರಿದ್ದರೂ ನೀನೇ ಎನಗೆ ಪ್ರೇಮಪಾತ್ರಳಾದ ಪಟ್ಟದ ಸ್ತ್ರೀಯಾಗುವೆಯೆಂತಲೂ, ಇನ್ನು ನಾನಾಪ್ರಕಾರವಾದ ವಾಕ್ಯಗಳಿಂ ವಂಚಿಸಿ, ಈಗ ವಿವಾಹವಾದುದೇ ಅಪದ್ಧವೆಂಬ ನಿಷ್ಠುರವಾಕ್ಯದಿಂ ನಿರಾಕರಿಸುವುದು ನಿನಗೆ ಯುಕ್ತವಲ್ಲ! '' ಎನಲು;

ರಾಯನು ಶಕುಂತಲೆಯಾಡಿದ ವಾಕ್ಯವಂ ಕೇಳಿ ಇವಳ ವಾಕ್ಯದಿಂ ಪುಟ್ಟಿದ ಪಾಪವು ಶಾಂತವಾಗಲೆಂದು ತನ್ನ ಕಿವಿಗಳಂ ಮುಚ್ಚಿ, ಅವಳಂ ಕುಱಿತು—''ಎಲೌ ಶಕುಂತಲೆಯೇ, ತೀರಂಗಳಂ ಮೀಱಿ ಹರಿಯುವ ನದಿಯು ನಿರ್ಮಲವಾಗಿರ್ದ ಜಲವಂ ಕೆಸಱುಗೆಯ್ದು ಬೇರುಸಹಿತವಾಗಿ ತೀರವೃಕ್ಷಗಳಂ ಹೇಗೆ ನಾಶವಂ ಪೊಂದಿಸುತಿರುವುದೋ, ಅದಱಂತೆ ನೀನು ಪುರುವಂಶದಲ್ಲಿ ಪುಟ್ಟಿದವರು ಪರಸ್ತ್ರೀಯರಂ ಸ್ಮರಿಸತಕ್ಕವರಲ್ಲವೆಂಬ ಪ್ರಸಿದ್ಧಿ ಕೆಡಿಸುವುದಕ್ಕೋಸುಗವೂ ಎನ್ನಂ ದುಷ್ಟನೆಂದೆನಿಸುವುದಕ್ಕೂ ಏನು ಯೋಚನೆಯಂ ಗೈದೆ! '' ಎಂದು ನುಡಿಯಲು ;

ಶಕುಂತಲೆಯು—'' ಎಲೈ ರಾಯನೇ, ಆದರೂ ಚಿಂತೆಯೇನು? ಯಥಾರ್ಥವಾಗಿ ಪರಸ್ತ್ರೀಯರಂ ಮುಟ್ಟತಕ್ಕನಲ್ಲವನೆಂದು ನುಡಿಯುತ್ತಿರುವೆಯಷ್ಟೆ. ನೀನು ಕೊಟ್ಟಿರುವ ಗುಱುತಿನ ಉಂಗುರದಿಂ ನಿನ್ನ ಸಂಶಯವಂ ಪೋಗಲಾಡಿಸುವೆನು '' ಎನ್ನಲು;

ರಾಯನು— ' ಎಲೌ ಸ್ತ್ರೀಯೇ, ಈ ವಾಕ್ಯವಂ ಯುಕ್ತವಾಗಿ ಪೇಳಿದೆ. ಆ ಮುದ್ರಿಕೆಯಂ ತೋಱಿಸು'' ಎನ್ನಲು,

ಅವಳು ಉಂಗರವನ್ನಿಟ್ಟಿದ್ದ ಬೆರಳಂ ಮುಟ್ಟಿನೋಡಿ ಅದಂ ಕಾಣದೆ ಅತ್ಯಂತ ವ್ಯಾಕುಲಳಾಗಿ—"ಉಂಗರದಿಂದ ಬೆರಳು ಶೂನ್ಯಮಾದುದು ! ಮುಂದೆ ಗತಿಯೇನು!" ಎಂದು ಗೌತಮಿಯಂ ನೋಡಲು;

ಗೌತಮಿಯು ಹೇರಳವಾದ ದಿಗಲಿನಿಂದ ನೋಡಿ, ಉಂಗುರವಂ ಕಾಣದೆ, "ಎಲೆ ಶಕುಂತಲೆಯೇ, ನೀನು ಶಕ್ರಾವತಾರವೆಂಬ ಸರೋವರದ ಸಮೀಪದಲ್ಲಿ ಶಚೀತೀರ್ಥಕ್ಕೆ ನಮಸ್ಕಾರವಂ ಮಾಡುವ ಕಾಲದಲ್ಲಿ ನಿನ್ನ ಬೆರಳಿನಿಂದ ಉಂಗರವು ಜಾಱಿ ಬಿದ್ದಂತೆ ತೋಱುವುದು" ಎನ್ನಲು ;

ರಾಯನು—"ಲೋಕದಲ್ಲಿ ಸ್ತ್ರೀಯರುಗಳು ತತ್ಕಾಲದಲ್ಲಿ ಕಲ್ಪನಾಬುದ್ಧಿಯುಳ್ಳವರೆಂದು ಜನರುಗಳು ಪೇಳುವುದು ಈಗ ಯಥಾರ್ಥಮಾದುದು!" ಎನ್ನಲು;

ಶಕುಂತಲೆಯು ಭಿನ್ನಹೃದಯಳಾಗಿ, "ಕೆಟ್ಟ ದೈವವು ತನ್ನ ಮಹಾತ್ಮೆಯಂ ಎನ್ನಲ್ಲಿ ತೋಱಿಸಿದುದು. ಆದರೂ ಎಲೈ ರಾಯನೇ, ನೀನಿತ್ತ ಉಂಗುರವು ಪೋದರೂ ನೀನು ನಮ್ಮ ತಪೋವನದಲ್ಲಿ ಏಕಾಂತವಾಗಿ ನಡೆಸಿದ ಚರ್ಯವಂ ಪೇಳುವೆನು, ಕೇಳು." ಎನ್ನಲು;

ರಾಯನು—"ನೋಡತಕ್ಕುದು ಒಂದಾಯಿತು, ಕೇಳತಕ್ಕುದೊಂದು ಹುಟ್ಟಿತೊ! ಕೇಳುವೆನು ಪೇಳು" ಎಂದಾವಾಕ್ಯಕ್ಕೆ—"ಒಂದಾನೊಂದು ದಿವಸದಲ್ಲಿ ಮನೋಹರವಾದ ಇರುವಂತಿಗೆಲತೆಯ ಮಂಟಪದಲ್ಲಿ ನಾವಿಬ್ಬರು ಕುಳಿತಿರುವ ಕಾಲದಲ್ಲಿ ತಾವರೆಯೆಲೆಯ ದೊನ್ನೆಯಲ್ಲಿರುವ ಜಲವಂ ನೀನು ಹಸ್ತದಲ್ಲಿ ಪಿಡಿದುಕೊಂಡಿರಲು ಆಕ್ಷಣದಲ್ಲಿ ಪುತ್ರನಂತೆ ಅನುರಾಗದಿಂ ನಾನು ಸಲಹಿದ ದೀರ್ಘಾಪಾಂಗನೆಂಬ ಹುಲ್ಲೆಯ ಮಱಿಯು ಬರಲು, ಹಸ್ತದಲ್ಲಿ ಪಿಡಿದಿರ್ದ ಜಲವಂ ದಯವುಳ್ಳವನಾಗಿ ಆ ಮೃಗದ ಮಱಿಯು ಮೊದಲು ಪಾನವಂ ಗೆಯ್ಯಲೆಂದು, ಅದಂ ಜಲಪಾನವಂ ಗೆಯಿಸುವುದಕ್ಕೋಸುಗ ಪಿಡಿಯುವುದಕ್ಕೆ ಪೋಗಲು, ಆಮೃಗವು ನಿನ್ನಲ್ಲಿ ಪರಿಚಯವಿಲ್ಲದ್ದಱಿಂ ಜಲಪಾನೇಚ್ಛೆಯಿಲ್ಲದೆ ನಿನ್ನ ಹಸ್ತಸಮೀಪಕ್ಕೆ ಬಾರದಿರಲು, ಆಬಳಿಕ ನಾನು ಜಲದಿಂ ತುಂಬಿದ ಆ ತಾವರೆಯೆಲೆಯ ದೊನ್ನೆಯಂ ಪಿಡಿಯಲು, ಆ ಹುಲ್ಲೆಯ ಮಱಿಯು ನನ್ನಲ್ಲಿ ವಿಶ್ವಾಸವುಳ್ಳುದಾಗಿ ಎನ್ನ ಸಮೀಪವಂ ಸೇರಲು, ಆ ಬಳಿಕ ನಾನು ಈ ಅರಣ್ಯಸ್ಥಾನದಲ್ಲಿ ನಾವಿಬ್ಬರೇ ಇದ್ದಾಗ್ಯೂ ಈ ಮೃಗದ ಮಱಿಯು ಎನ್ನ ಬಳಿಗೆ ಬಂದುದಲ್ಲದೆ ನಿನ್ನಬಳಿಗೆ ಬರಲಿಲ್ಲ ಎನ್ನಲು; ನೀನು ಲೋಕದಲ್ಲಿ ಸಮಸ್ತಪ್ರಾಣಿಗಳು ಪರಿಚಯವಿದ್ದ ಸ್ಥಳಕ್ಕೆ ಪೋಗುವುದಲ್ಲದೆ ಇನ್ನೊಂದು ಸ್ಥಳಕ್ಕೆ ಪೋಗಲಾಱವು, ನೀವಿಬ್ಬರೂ ಅರಣ್ಯವಾಸಿಗಳಲ್ಲವೆ!–ಎಂದು

ನಗುತ ಹಾಸ್ಯವಂ ಗೆಯ್ದಿರುವೆ.'' ಎಂದು ಗುಱುತಿನ ವಾಕ್ಯವಂ ಪೇಳಲು;

ರಾಯನು—“ ಎಲೌ ಸ್ತ್ರೀಯೇ, ತಮ್ಮ ಕಾರ್ಯವಂ ಗೆಲುವುದಕ್ಕೋಸುಗ ಈ ಪ್ರಕಾರವಾಗಿ ಅನೃತವಾಕ್ಯವಂ ಪೇಳುತ್ತಿರುವ ಸ್ತ್ರೀಯರ ರುಚಿಕರವಾದ ವಾಕ್ಯಕ್ಕೆ ಕಾಮುಕರಾದ ಪುರುಷರು ಮರುಳುಗೊಳ್ಳುತ್ತಿರುವರಲ್ಲದೆ ನಾನು ನಿನ್ನ ವಂಚನೆಯ ವಾಕ್ಯಕ್ಕೆ ಒಳಗಾಗತಕ್ಕವನಲ್ಲ''ವೆಂದು ಪೇಳಲು;

ಗೌತಮಿಯು—“ ಎಲೈ ಮಹಾರಾಜನಾದ ದುಷ್ಯಂತರಾಯನೇ, ಅನೃತ ವಾಕ್ಯವಂ ಪೇಳುವಳೆಂದು ತಿಳಿಯದಿರು. ಅರಣ್ಯದಲ್ಲಿ ವೃದ್ಧಿಯಂ ಪೊಂದಿರುವ ಳಾದ್ದಱಿಂ ಯಥಾರ್ಥವಾಗಿ ಪೇಳುವಳಲ್ಲದೆ ವಂಚನೆಯ ವಚನವಂ ಪೇಳುವುದಕ್ಕೆ ಯೋಗ್ಯಳಾಗಲಾಱಳು.'' ಎಂದು ನುಡಿಯಲು ;

ರಾಯನು:-“ಎಲೌ ತಾಪಸವೃದ್ಧೆಯೇ, ಕೇಳು. ಲೋಕದಲ್ಲಿ ಸ್ತ್ರೀಯರುಗಳಿಗೆ ವಂಚನೆಯು, ಅನೃತವು, ಮೋಸವಂ ಗೈಯ್ಯುವುದು—ಇವು ಮೊದಲಾದ ಚಮತ್ಕಾರವು ಯಾರು ಕಲಿಸದೆ ಇದ್ದರೂ ಅವರು ಪುಟ್ಟುತ್ತಲೇ ಸಂಗಡ ಬರುವುವು. ಮತ್ತು ವಂಚನೆ ಮೊದಲಾದ ಕಾರ್ಯಂಗಳು ಹೆಣ್ಣುಪ್ರಾಣಿಗಳಾದ ಪಕ್ಷಿಮೃಗಗಳಲ್ಲಿಯೂ ವ್ಯಕ್ತವಾಗಿ ತೋಱುತ್ತಿರುವಲ್ಲಿ ಸ್ತ್ರೀಯರುಗಳಿಗೆ ಮತ್ತೊಬ್ಬರು, ಉಪದೇಶವಂ ಗೆಯ್ದು ಕಲಿಸಬೇಕೆಂಬ ಪ್ರಕೃತವಿಲ್ಲದೆ ಇರುವುದು. ಹೇಗೆಂದರೆ:— ಹೆಣ್ಣುಕೋಗಿಲೆಗಳು ಗಗನಕ್ಕೆ ಹಾಱುವುದಕ್ಕೆ ಮೊದಲೆ ತಮ್ಮ ಮೊಟ್ಟೆಗಳಂ ಒಡೆದು ಮಱಿಗಳಂ ಮಾಡುವುದಕ್ಕೆ ತಮಗೆ ತಿಳಿಯದೆ ಇದ್ದರೂ ವಂಚನೆಯಿಂದಾ ಕಾಗೆಗಳ ಗೂಡುಗಳಲ್ಲಿ ಆ ಮೊಟ್ಟೆಗಳನ್ನಿಟ್ಟು ತಮ್ಮ ಮಱಿಗಳಂ ಸಲಹುವಂತೆ ಮಾಡುತ್ತಿರುವುವು. ಹೀಗಿರುವಲ್ಲಿ ಸ್ತ್ರೀಯರಾದವರು ಮಾಡುವ ವಂಚನೆಯಂ ಕೇಳತಕ್ಕದ್ದೇನು ! '' ಎಂದು ನುಡಿಯಲು;

ಶಕುಂತಲೆಯು ಅತ್ಯಂತಕೋಪದಿಂ ಕಣ್ಣುಗಳಂ ರಕ್ತದಂತೆ ಕೆಂಪುಗೆಯ್ದು, ಹುಬ್ಬುಗಳಂ ಗಂಟಿಕ್ಕಿಕೊಂಡು, ರಾಯನಂ ಕುಱಿತು—“ ಎಲೈ ನೀಚನಾದ ದೊರೆಯೇ, ಕೇಳು. ಲೋಕದಲ್ಲಿ ಕುಟಿಲಬುದ್ಧಿಯುಳ್ಳ ಪುರುಷನು ತನ್ನಂತೆ ಸಮಸ್ತಜನರಂ ಕುಟಿಲರೆಂದು ತಿಳಿಯುವಂತೆ, ನಿನ್ನ ಹೃದಯದ ಅನುಮಾನದಂತೆ ಎನ್ನ ವಚನವಂ ತಿಳಿಯದಿರು. ತೃಣದಿಂ ಮುಚ್ಚಿರುವ ಬಾವಿಯಂತೆ ಧರ್ಮದಿಂ ರಾಜ್ಯವಂ ಸಲಹುವೆನೆಂದು ನಟಿಸುತ್ತ ಅಂತರಂಗದಲ್ಲಿ ಮಹಾ ಪಾಪಬುದ್ಧಿಯಂ ಧರಿಸಿರುವ ನಿನ್ನ ಸಾಮ್ಯವಂ ಯಾವ ಪುರುಷನೂ ಪೊಂದಲಱನು'' ಎಂದು ನುಡಿಯಲು;

ದುಷ್ಯಂತರಾಯನು ಶಕುಂತಲೆಯಾಡಿದ ಕರ್ಣಕಠೋರವಾದ ವಾಕ್ಯವಂ ಕೇಳಿ, " ಈ ಶಕುಂತಲೆಯು ಪೂರ್ವದಲ್ಲಿ ಮಾಡಿದ ಕಾರ್ಯವಂ ಮಱೆತು ಈಗ ಎನ್ನಂ ಸಂಶಯಬುದ್ಧಿಯುಳ್ಳವನನ್ನಾಗಿ ತಿಳಿದು ನಿಂದಿಸುವ ಈ ನಿಷ್ಠುರವಾಕ್ಯವು ಯಥಾರ್ಥವಾಗಿ ತೋಱುವುದು. ಮತ್ತು ಏಕಾಂತವಾಗಿ ಮಾಡಿದ ಕಾರ್ಯವಂ ಮಱೆತು ಇದ್ದುದಱಿಂ ಕ್ರೂರವಾದ ಮನೋವ್ಯಾಪಾರವುಳ್ಳ ಎನ್ನಲ್ಲಿ ರಕ್ತನೇತ್ರೆಯಾದ ಈ ಶಕುಂತಲೆಯು ಹುಬ್ಬುಗಳಂ ಗಂಟಿಕ್ಕಿರುವ ರೀತಿಯು ಮನ್ಮಥನ ಮುರಿದ ಬಿಲ್ಲಿನಂತೆ ತೋಱುತ್ತಿರುವುದು " ಎಂದು ತನ್ನ ಮನದಲ್ಲಿ ಆಲೋಚನೆಯಂಗೆಯ್ಯುತಿರ್ದನು.

ಎಂಬಲ್ಲಿಗೆ

ಗದ್ಯ —ಚಂಡಕರಮಂಡಲೋಚ್ಚಂಡತೇಜಃಪ್ರಕಾಂಡಕಾಂಡಷಂಡಖಂಡಿತಾಖಂಡಶೌರ್ಯಪರಿಮಂಡಿತ ಭಂಡನೋದ್ದಂಡಾರಿಮಂಡಲ ಕಂಡೂಲದೋರ್ದಂಡಪಾಂಡಿತ್ಯ ಪಾಂಡುರುಚಿಖಂಡಡಿಂಡೀರಪುಂಡರೀಕ ಪರಿಪಾಂಡುರಯಶಃಪಿಚಂಡಿಲ ಬ್ರಂಹ್ಮಾಂಡಭಾಂಡೋದ್ಘಟ ಕಾಲಕೂಟಪ್ರತಿಭಟ ಕಟುಕಪಟನಿಶಾಟಕೂಟಪಾಟನಲಂಪಟ ಸ್ಫುಟಿಲಪುಟಘಟಿತ ವಿಕಟ ಕೃಪೀಟಯೋನಿ ಕುಟಿಲಮೋಹಾಂಧಕಾರಚ್ಛಟಾವಿಘಟನಪಟು ನಟನ್ಮಹಾನಟ ಮುಕುಟತಟ ಪರ್ಯಟತ್ತಟಿನೀತಟಾಂತರಿಂಗದಭಂಗೋತ್ತುಂಗತರಂಗ ಸಂಗರಭಂಗಸಂಭ್ರಮೋಜ್ಜೃಂಭಮಾಣ ಗಂಭೀರವಾಗ್ಗುಂಭಸಂಭಾವಿತ ಗರನಗರವರನಿಲಯ ಚಂದ್ರಚೂಡಚರಣಾರವಿಂದ ಸೇವಾಮರಂದ ನಿರಂತರನಿಷೇವಣ ಸ್ವಯಂವೃತಕವಿತಾವಧೂರತ್ನ ರಾಜಾಧಿರಾಜ ಮಹಾರಾಜ ಶ್ರೀಚಾಮರಾಜಪುತ್ರಾತ್ರೇಯಸಗೋತ್ರ ಪವಿತ್ರಚರಿತ್ರ ಶಂಖ ಚಕ್ರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ನರಪತಿಬಿರುದ ಶ್ರೀಚಾಮುಂಡಿಕಾವರಪ್ರಸಾದಲಬ್ಧ ಮಹೀಶೂರಮಹಾಸಂಸ್ಥಾನದೇದೀಪ್ಯಮಾನಕುಲಕ್ರಮಾಗತದಿವ್ಯರತ್ನಸಿಂಹಾಸನಾರೂಢಶ್ರೀಕೃಷ್ಣರಾಜಕಂಠೀರವರು ಸರಸಜನಾನಂದಕರವಾಗಿ ಲೋಕೋಪಕಾರಾರ್ಥವಾಗಿ ನವರಸಭರಿತವಾಗಿ ಕರ್ಣಾಟಕಭಾಷೆಯಿಂ ವಿರಚಿಸಿದ ಕೃಷ್ಣರಾಜವಾಣೀವಿಲಾಸರತ್ನಾಕರವೆಂಬ ಶಾಕುಂತಳನಾಟಕದ ನವೀನ ಟೀಕೆಯಲ್ಲಿ ದುಷ್ಯಂತ ಶಕುಂತಲೆಯರಿಗೆ ಸಲ್ಲಾಪಮಾದುದೆಂಬ ತೃತೀಯಕಲ್ಲೋಲದಲ್ಲಿ ಚತುರ್ಥತರಂಗಂ

ತೃತೀಯಕಲ್ಲೋಲಂ ಸಮಾಪ್ತಂ

ಚತುರ್ಥ ಕಲ್ಲೋಲಂ

ಅನಂತರದಲ್ಲಿ ದುಷ್ಯಂತರಾಯನು ಶಕುಂತಲೆಯಂ ಕುಱಿತು ಪೇಳುತಿರ್ದನದಂತೆನೆ:—

« ಎಲೌ ಮಂಗಳಾಂಗಿಯೇ, ದುಷ್ಯಂತರಾಯನು ದುರ್ವ್ಯಾಪಾರದಿಂ ಜನರಂ ಮೋಸಗೊಳಿಸುವನಲ್ಲವೆಂಬ ಎನ್ನ ಚರಿತ್ರವೂ ಲೋಕಪ್ರಸಿದ್ಧವಾಗಿರುವುದು. ಹೀಗಿರುವಲ್ಲಿ ನಿನ್ನಂ ಪತ್ನಿಯನ್ನಾಗಿ ಮಾಡಿಕೊಂಡ ಪರಿಯು ಎನ್ನಲ್ಲಿ ತೋಱುವುದಿಲ್ಲ " ಎಂದು ನುಡಿಯಲು;

ಶಕುಂತಲೆಯು—« ಎಲೈ ರಾಯನೇ, ಅರಣ್ಯದಲ್ಲಿ ಸ್ವಸ್ಥವಾಗಿ ಸುಖದಲ್ಲಿರ್ದ ನಾನು ವಿಶ್ವಾಸವುಳ್ಳವನೆಂದು ಮಾತಿನಲ್ಲಿ ಅಮೃತವಂ ಹೃದಯದಲ್ಲಿ ವಿಷವಂ ಧರಿಸಿರುವ ನಿನ್ನ ಹಸ್ತಕ್ಕೆ ಯಾವಾಗ ಸಿಕ್ಕಿದೆನೋ ಆಗಲೇ ಅನಾಥಳಾಗಿ ಮನಬಂದಂತೆ ತಿರುಗುವುದಕ್ಕೆ ಯೋಗ್ಯಳಾದೆನು " ಎಂದು ಸೀರೆಯ ಸೆಱಗಂ ತನ್ನ ಮುಖಕ್ಕೆ ಮುಚ್ಚಿ ಅತ್ಯಂತವಾಗಿ ರೋದನವಂ ಗೆಯ್ಯುತ್ತಿರಲು;

ಶಾರ್ಙ್ಗರವನು—« ಎಲೆ ಶಕುಂತಳೆ, ತಂದೆಯಾದ ಕಣ್ವಮುನೀಶ್ವರನಿಗೆ ತಿಳಿಸದೆ ಚಾಪಲ್ಯದಿಂದ ರಹಸ್ಯವಾಗಿ ನೀನು ಮಾಡಿದ ಕಾರ್ಯದಿಂದುಂಟಾದ ಶೋಕಾಗ್ನಿಯೇ ನಿನ್ನಂ ಸುಡುತ್ತಿರುವುದು. ಲೋಕದಲ್ಲಿ ಯಾರಾಗಲಿ ಒಂದು ಕಾರ್ಯವಂ ಮಾಡಬೇಕಾಗಿದ್ದರೂ ಒಬ್ಬರಲ್ಲಿ ಸ್ನೇಹವಂ ವಿರಚಿಸಬೇಕಾಗಿದ್ದರೂ ಚೆನ್ನಾಗಿ ಪರೀಕ್ಷೆಯಂ ಗೆಯ್ದು ತನಗೆ ಆಪ್ತರಾಗಿ ನೀತಿಪರರಾದವರೊಡನೆ ಆಲೋಚನೆಯಂ ಗೆಯ್ದು, ಆಬಳಿಕ ಆ ಕಾರ್ಯವಂ ನಡೆಸಬೇಕು. ಯಾಕೆಂದರೆ:—ಜನರ ಸ್ವಭಾವವಂ ಪರೀಕ್ಷಿಸದೆ ತನಗೆ ಹಿತವಾಗಿ ನೀತಿಯಂ ಬಲ್ಲವರೊಡನೆ ಆಲೋಚನೆಯಂ ಗೆಯ್ಯದ ಮಾಡಿದ ಮಿತ್ರತ್ವ ಮೊದಲಾದ ಕಾರ್ಯಗಳು ಕೊನೆಗೆ ತನಗೆ ವೈರಿಗಳಾಗಿ ಸಕಲದುಃಖವನ್ನುಂಟುಮಾಡುತ್ತಿರುವುವು" ಎಂದು ನುಡಿಯಲು;

ಆ ರಾಯನು ಆ ಋಷಿಯಾಡಿದ ವಾಕ್ಯವಂ ಕೇಳಿ, « ಎಲೈ ಸತ್ಯವಾಕ್ಯವುಳ್ಳ ಶಾರ್ಙ್ಗರವನೇ, ಕೇಳು. ನೀನು ಎನ್ನಂ ವಂಚನೆಯುಳ್ಳವನಂ ಮಾಡಿ ಕಾರ್ಯವಂ ಮಱೆಯುವೆನೆಂದು ನುಡಿದ ವಾಕ್ಯವಂ ನಾನು ಒಪ್ಪಿಕೊಂಡೆನು. ಆದರೂ ಈ ಶಕುಂತಲೆಯಂ ವಂಚಿಸಿದುದಱಿಂದೆನಗೆ ಬರತಕ್ಕ ಭಾಗ್ಯವೇನು ? " ಎಂದು ನುಡಿಯಲು ;

ಆಮುನಿಯು—“ ಎಲೈ ರಾಯನೇ, ಈ ಶಕುಂತಲೆಯಿಂ ಕೆಡಿಸುವುದೇ ಭಾಗ್ಯವು ” ಎನಲು;

ರಾಯನು—“ ಅಯ್ಯಾ ಋಷಿಯೇ, ಪುರುವಂಶದಲ್ಲಿ ಪುಟ್ಟಿದವರು ವಂಚನೆಯಿಂದ ಜನಗಳಂ ಕೆಡಿಸುವರೆಂಬ ತಾತ್ಪರ್ಯದಿಂ ನುಡಿದ ನಿನ್ನ ವಾಕ್ಯವು ಜನರ ವಿಶ್ವಾಸಕ್ಕೆ ಯೋಗ್ಯವಾಗಲಾರದು. ಹಿಂದಕ್ಕೆ ನಮ್ಮಲ್ಲಿ ಇಂಥ ಕಾರ್ಯಗಳು ನಡೆದಿರುವುದಂ ತಿಳಿದು ಇರುವೆಯಾ? ” ಎನ್ನಲು;

ಶಾರ್ಙ್ಗರವನು—“ ಎಲೈ ಅರಸೇ, ಕೇಳು. ನಾನು ಈ ವಿವಾದವಂ ಮಾಡುವುದರಿಂ ಎನಗೆ ಪ್ರಯೋಜನವಿಲ್ಲ. ನಮ್ಮ ಗುರುವಾದ ಕಣ್ವಮುನೀಶ್ವರನು ಏನು ಅಪ್ಪಣೆಯನ್ನಿತ್ತು ಕಳುಹಿರ್ದನೋ, ಆವಾಕ್ಯವಂ ನಿನ್ನೊಡನೆ ಪೇಳಿರುವೆವು. ಈಗ ನಾವು ನಮ್ಮ ತಪೋವನವಂ ಕುರಿತು ಪೋಗುವೆವು. ನಿನ್ನ ಪತ್ನಿಯಾದ ಈ ಶಕುಂತಲೆಯಂ ಅನುರಾಗದಿಂ ಸಂರಕ್ಷಣೆಯಂ ಮಾಡಿದರೂ ಮಾಡು, ಮನಬಾರದೆ ಬಿಟ್ಟರೂ ಬಿಡು. ಲೋಕದಲ್ಲಿ ಪುರುಷರುಗಳಿಗೆ ಅವರವರ ಹೆಂಡತಿಯಲ್ಲಿ ಅವರವರ ಕರ್ತೃತ್ವವು ನಾನಾಪ್ರಕಾರವಾಗಿ ಇರುವುದು. ಅದಂ ವಿಶೇಷವಾಗಿ ಪೇಳಿ ಪ್ರಯೋಜನವಿಲ್ಲ. ” ಎಂದು ನುಡಿದು,

ಗೌತಮಿಯಂ ಕುರಿತು,—“ ಎಲೌ ಪೂಜ್ಯಳೇ, ಇನ್ನು ತಪೋವನಕ್ಕೆ ನಡೆ” ಎಂದು ನುಡಿಯಲು;

ಆವಾಕ್ಯಕ್ಕೆ ಎಲ್ಲರು ಎದ್ದು ಪ್ರಯಾಣೋನ್ಮುಖರಾಗಿ ಪೊರಮಡಲು;

ಶಕುಂತಲೆಯು ಅಧಿಕದುಃಖದಿಂ ಯುಕ್ತಳಾಗಿ ಪೋಗುತ್ತಿರುವರಂ ಕುರಿತು “ ಎಲೈ ಪೂಜ್ಯರುಗಳಿರಾ, ನಾನು ಈ ಧೂರ್ತನಾದ ದುಷ್ಯಂತರಾಯನಿಂ ವಂಚಿತಳಾಗಿ ಇರುವೆನು. ನೀವು ಎನ್ನಂ ಬಿಟ್ಟು ಪೋಗುವುದು ಯುಕ್ತಮಲ್ಲ ” ಎಂದು ದುಃಖದಿಂ ರಕ್ತದಂತೆ ಇರುವ ನೇತ್ರಗಳಿಂ ಧಾರಾಳವಾಗಿ ಸುರಿಯುತ್ತಿರುವ ಕಣ್ಣೀರುಳ್ಳವಳಾಗಿ, ಅವರ ಸಂಗಡಲೇ ಪೋಗುತ್ತಿರಲು;

ಗೌತಮಿಯು ಸಂಗಡ ಬರುವ ಶಕುಂತಲೆಯಂ ತೋರಿಸಿ—“ ಎಲೈ ವತ್ಸನಾದ ಶಾರ್ಙ್ಗರವನೇ, ನಮ್ಮೀಶಕುಂತಲೆಯು ಕರುಣದಿಂದೊಡಗೂಡಿದ ರೋದನವುಳ್ಳವಳಾಗಿ, ನಮ್ಮ ಸಂಗಡಲೇ ಬರುತ್ತಿರುವಳು. ನನ್ನಲ್ಲಿ ಇರಬೇಡವೆಂದು ತಿರಸ್ಕಾರವಂ ಮಾಡಿದ ತನ್ನ ಪತಿಯ ಸಮೀಪದಲ್ಲಿ ಇದ್ದು ತಾನೇ ಪ್ರಯೋಜನವೇನು?” ಎಂದು ಪೇಳಲು;

ಆ ಶಾರ್ಙ್ಗರವನು ಹಿಂದಿರುಗಿ ಸಂಗಡ ಬರುವ ಶಕುಂತಲೆಯಂ ಕಂಡು, ಅತ್ಯಂತ ಕೋಪೋದ್ದೀಪಿತನಾಗಿ, ರಾಯನು ತಿರಸ್ಕಾರವಂ ಗೆಯ್ದನೆಂಬ ದೋಷದಲ್ಲಿ ದೃಷ್ಟಿಯನ್ನಿಟ್ಟು ಪತಿಯೆಂಬ ಜ್ಞಾನವಿಲ್ಲದೆ ಇರುವ ಶಕುಂತಲೆಯೇ! ಕೇಳು. ನಮ್ಮ ಸಂಗಡ ಬರುವುದಕ್ಕೆ ನಿನಗೆ ಸ್ವಾತಂತ್ರ್ಯವುಂಟಾದುದೆ! '' ಎಂದು ಕ್ರೋಧದಿಂ ಕಣ್ಣುಗಳಂ ಕೆಂಡದಂತೆ ಮಾಡಿ ಗರ್ಜಿಸಿ ನುಡಿದು, “ ಲೋಕದಲ್ಲಿ ಯಾವ ಸ್ತ್ರೀಯಾಗಲಿ ಬಾಲ್ಯದಲ್ಲಿ ತಂದೆಯಿಂ, ಯೌವನಕಾಲದಲ್ಲಿ ಪತಿಯಿಂ, ಮುಪ್ಪಿನಲ್ಲಿ ಮಗನಿಂ ಸಲಹುವುದಕ್ಕೆ ಯೋಗ್ಯಳಲ್ಲದೆ ತನ್ನ ದೇಹವಿರುವವರೆಗೂ ಸ್ವತಂತ್ರಳಾಗಲಾಗಲೆಂತಲೂ, ಮತ್ತು ಯಾವ ಪುರುಷನ ಮನೆಯಲ್ಲಿ ಸ್ತ್ರೀಯು ಪುರುಷನಂತೆ ಸಮಸ್ತ ಕಾರ್ಯಂಗಳಲ್ಲಿ ಸ್ವತಂತ್ರಳಾಗುವಳೋ ಅವನ ಗೃಹವು ನಾಶವಂ ಪೊಂದುವುದೆಂತಲೂ ನೀತಿಜ್ಞರಾದವರು ಪೇಳುತ್ತಿರುವರಾದ್ದರಿಂದ ನಮ್ಮ ಸಂಗಡ ಬಾರದೆ,ನಿನ್ನ ಪತಿಯಲ್ಲಿಯೇ ಇರುವುದು '' ಎಂದು ನುಡಿಯಲು;

ಶಕುಂತಲೆಯು ಶಾರ್ಙ್ಗರವನ ನಿಷ್ಠುರವಾಕ್ಯವಂಕೇಳಿ ವ್ಯಾಘ್ರಹೂಂಕಾರವಂ ಕೇಳಿದ ಮರಿಹುಲ್ಲೆಯಂತೆ ಅತ್ಯಂತ ಭಯಾತುರಳಾಗಿ, ಕಂಬನಿಯಂ ಬಿಡುತ್ತ, ಕಾಂತಿಹೀನಳಾಗಿ ಹೇರಳವಾಗಿ ನಡುಗುತ್ತ ನಿಲ್ಲಲು;

ಶಾರ್ಙ್ಗರವನು ಮರಳಿ ಶಕುಂತಲೆಯಂ ಕುರಿತು— “ಎಲೆ ಬಾಲೇ, ಮುಖ್ಯವಾದ ವಾಕ್ಯವಂ ಪೇಳುವೆನು ಕೇಳು. ಭೂಪತಿಯಾದ ದುಷ್ಯಂತರಾಯನು ಯಾವಪ್ರಕಾರವಾಗಿ ಪೇಳುತ್ತಿರುವನೋ ಆರೀತಿಯಿಂದಿರುವುದು ನಿನಗೆ ಯುಕ್ತವು. ಮತ್ತು ಪತಿಯ ವಾಕ್ಯಾನುಸಾರವಾಗಿ ನೀನು ಮನಬಂದಂತೆ ಸಂಚರಿಸುತ್ತ ಇರ್ದರೂ ನಿನ್ನ ಸಂರಕ್ಷಿಸಿದ ಕಣ್ವಮುನಿಯಿಂ ನಿನಗೆ ಭಯವುಂಟಾಗಲಾರದು. ಮತ್ತು ಮಹಾ ಪತಿವ್ರತೆಯಾದ ನಿನ್ನ ಚರಿತ್ರವಂ ನೀನೆ ಬಲ್ಲೆಯಾದ್ದರಿಂ ಪತಿಯಾದ ಈ ರಾಯನ ಗೃಹದಲ್ಲಿ ಗೌಡಿಯ ಚಾಕರಿಯಾದರೂ ನಿನಗೆ ಯೋಗ್ಯವಾಗಿರುವುದು. ನೀನು ಎಮ್ಮೊಡನೆ ಬರಲಾಗದು ? ನಿಲ್ಲು ! ನಾವು ಪೋಗುವೆವು'' ಎಂದು ನುಡಿಯಲು ;

ರಾಯನು— “ ಎಲೈ ಮುನಿಶಿಷ್ಯನೇ, ಯಾತಕ್ಕೋಸುಗ ಈ ಸ್ತ್ರೀಯಂ ಇಲ್ಲಿಯೇ ಬಿಟ್ಟು ಪೋಗುತ್ತಿರುವೆ ? ಆದರೂ ಪೇಳುವೆನು ಕೇಳು! ಚಂದ್ರನು ಕನ್ನೈದಿಲೆಗಳಂ ವಿಕಾಸವಂ ಮಾಡುವನಲ್ಲದೆ ಕಮಲಗಳನ್ನು ಅರಳಿಸಲಾರನು ; ಸೂರ್ಯನು ಕಮಲಗಳಿಗೆ ಕಳೆಯನ್ನುಂಟುಮಾಡುವನಲ್ಲದೆ ಕನ್ನೈದಿಲೆಗಳಂ ಅರಳಿಸಲಾರನು. ಆದ್ದರಿಂದ ಜಿತೇಂದ್ರಿಯರಾದ ನಮ್ಮಂಥ ಪುರುಷರು ಸ್ವಸ್ತ್ರೀಯರಲ್ಲಿ

ಆಸಕ್ತರಾಗಿರುವರಲ್ಲದೆ, ಪರಸ್ತ್ರೀಯರ ಆಲಿಂಗನ ಚುಂಬನಾದಿಗಳಲ್ಲಿ ಸ್ವಲ್ಪವಾದರೂ ಅಭಿಲಾಷೆಯಿಲ್ಲದೆ ಪರಾಙ್ಮುಖವಾದ ವ್ಯಾಪಾರವುಳ್ಳವರು '' ಎಂದು ನುಡಿಯಲು;

ಶಾರ್ಙ್ಗರವನು—'' ಎಲೈ ವಂಚಕನಾದ ರಾಯನೇ ಕೇಳು. ಪೂರ್ವದಂತೆ ಶಕುಂತಲೆಯೊಡನೆ ಮಾಡಿದ ಗಾಂಧರ್ವವಿವಾಹ ಮೊದಲಾದ ಕಾರ್ಯವಂ ಅನ್ಯಸ್ತ್ರೀಯರ ಸಂಭೋಗದಿಂ ಮಱೆತು ಇವಳು ಎನ್ನ ಪತ್ನಿಯಲ್ಲವೆಂದು ಪೇಳುತ್ತಿರುವೆಯೋ ಆಗಲೆ ನೀನು ಮಹಾಪಾಪಾತ್ಮನೆಂಬುವುದಂ ತಿಳಿದಿರುವೆನು '' ಎಂದು ನುಡಿಯಲು;

ರಾಯನು ಆ ನಿಷ್ಠುರವಾಕ್ಯವಂ ಕೇಳಿ, '' ಎಲೈ ಋಷಿಯೇ, ನಾನು ಪೇಳುವ ವಾಕ್ಯಗಳಿಗೂ ಈ ಶಕುಂತಲೆಯು ಪೇಳಿದ ವಾಕ್ಯಗಳಿಗೂ ಗೌರವಲಾಘವಂಗಳಂ ಈಗ ನಿನ್ನನ್ನೇ ಕೇಳುವೆನು. ಹೇಗಂದರೆ—ಪೂರ್ವದಲ್ಲಿ ಈ ಶಕುಂತಳೆಯೊಡನೆ ಗಾಂಧರ್ವವಿವಾಹ ಮೊದಲಾದ ಕಾರ್ಯಗಳಂ ಮಾಡಿ ಈಗ ಮಱೆತು ಮೂಢನಾಗಿರುವೆನೋ, ಅಲ್ಲದೆ ಈಗ ಸಂಶಯವು ಪ್ರಾಪ್ತವಾದುದಱಿಂದ ಈ ಶಕುಂತಲೆಯು ತನ್ನ ಕಾರ್ಯವಂ ಗೆಲ್ಲುವುದಕ್ಕೋಸುಗ ಅನೃತವಂ ಪೇಳುತ್ತಿರುವಳೋ ಪೇಳು. ಮತ್ತು ಜ್ಞಾನಶೂನ್ಯನಾಗಿ ಮೊದಲು ಮಾಡಿದ ಕಾರ್ಯವಂ ಮಱೆತು ಈ ಶಕುಂತಲೆಯಂ ತಿರಸ್ಕರಿಸಿದೆನಾದರೆ ಪತ್ನೀಪರಿತ್ಯಾಗದಿಂ ಮಹಾಪಾಪವು ಸಂಭವಿಸುತ್ತಿರುವುದು. ಅದಲ್ಲದೆ ಇವಳು ಸುಳ್ಳುಮಾತುಗಳಂ ಪೇಳಲು ಆ ವಾಕ್ಯಕ್ಕೆ ಒಪ್ಪಿ ಇವಳಂ ಪತ್ನಿಯನ್ನಾಗಿ ಮಾಡಿಕೊಂಡೆನಾದರೆ ಪರಸ್ತ್ರೀಯರ ಸಂಗದಿಂ ಮಹಾಪಾತಕಿಯಾಗುವೆನು. ಇದಕ್ಕೇನುತ್ತರವಂ ಪೇಳುವೆನು?'' ಎನಲು,

ಆ ವಾಕ್ಯಕ್ಕೆ ಶಾರ್ಙ್ಗರವನು ಬಹು ಚನ್ನಾದುದೆಂದು ಉತ್ತರವಂ ಪೇಳಲೋಸುಗ ಆಲೋಚನೆಯಂ ಗೆಯ್ಯುತ್ತಿರಲು;

ಅಷ್ಟಱಲ್ಲೀ ಆ ರಾಯನ ಪುರೋಹಿತನು ಇವರೆಲ್ಲರೂ ಪೇಳುತ್ತಿರುವ ವಿವಾದವಾಕ್ಯವಂ ಕೇಳುತಿರ್ದು ರಾಯನಂ ಕುಱಿತು—'' ಎಲೈ ಮಹಾರಾಜನೇ, ನಾನು ಪೇಳಿದ ಪ್ರಕಾರಕ್ಕೆ ಮಾಡಲು ಯುಕ್ತವಾಗಿ ತೋಱುವುದು '' ಎನ್ನಲು;

ರಾಯನು—'' ಎಲೈ ಪುರೋಹಿತರೇ, ಎನ್ನ ಪಾಪ ಪುಣ್ಯಕ್ಕೆ ನೀವು ಬಾಧ್ಯರಾದ್ದಱಿಂ ಹೇಗೆ ಅಪ್ಪಣೆಯನ್ನೀಯುತ್ತಿರುವಿರೋ ಆ ಪ್ರಕಾರವಾಗಿ ನಡೆದುಕೊಳ್ಳುವೆನು '' ಎಂದು ನುಡಿಯಲು;

ಆ ಪುರೋಹಿತನು—'' ಅಯ್ಯಾ ರಾಯನೇ ಈ ಶಕುಂತಲೆಯು ಗರ್ಭಿಣಿ

ಯಾದ್ದರಿಂದಿವಳು ಪ್ರಸುವಿಸುವವರೆಗೂ ಎನ್ನ ಮನೆಯಲ್ಲಿರಲಿ; ಏಕೆಂದರೆ-ಪೂರ್ವದಲ್ಲಿ ನೀನು ತಪೋವನಕ್ಕೆ ಪೋಗಿದ್ದಾಗ ಚಕ್ರವರ್ತಿಯಾಗುವ ಪುತ್ರನಂ ಪಡೆಯುವೆ ಎಂದು ಮೊದಲೇ ಋಷಿಗಳಿಂ ಕೇಳಲ್ಪಟ್ಟಿರುವೆಯಾದ್ದರಿಂ ಈ ಶಕುಂತಲೆಯ ಗರ್ಭದಲ್ಲಿ ಪುಟ್ಟುವ ಕಣ್ವಋಷಿಯ ಮೊಮ್ಮಗನು ಆ ಋಷಿಗಳು ಪೇಳಿದಂತೆ ಆಜಾನುಬಾಹುವಾಗಿ, ವಿಶಾಲವಕ್ಷಸ್ಥಲನಾಗಿ, ಉನ್ನತನಾಸಿಕನಾಗಿ, ರಕ್ತನೇತ್ರಾಂತನಾಗಿ ಇನ್ನು ಅನೇಕಮಾದ ಚಕ್ರವರ್ತಿ ಲಕ್ಷಣಗಳಿಂದೊಡಗೂಡಿದವನಾದರೆ, ನೀನು ಸಂತುಷ್ಟಹೃದಯನಾಗಿ ಈ ಶಕುಂತಲೆಯಂ ನಿನ್ನ ಅಂತಃಪುರಪ್ರವೇಶವಂ ಗೆಯ್ವುದು, ಇಲ್ಲದೆ ಇವಳ ಗರ್ಭದಿಂ ಪುಟ್ಟಿದ ಪುತ್ರನಲ್ಲಿ ರಾಜಲಕ್ಷಣಂಗಳಿಲ್ಲವಾದಲ್ಲಿ ಇವಳಂ ತಂದೆಯಾದ ಕಣ್ವಋಷಿಯ ಸಮೀಪಕ್ಕೆ ಕಳುಹಿಸುವುದು ಯುಕ್ತವಾಗಿ ಇರುವುದು'' ಎನ್ನಲು;

OSMANIA UNIVERSITY REGISTERED

ರಾಜನು-'' ಪೂಜ್ಯರಾದ ನಿಮ್ಮ ಚಿತ್ತಕ್ಕೆ ಹೇಗೆ ಯುಕ್ತವಾಗಿ ತೋರುವುದೋ ಆ ಪ್ರಕಾರವಾಗಿ ಕಾರ್ಯವಂ ನಡೆಸಬಹುದು'' ಎಂದು ಅಪ್ಪಣೆಯನ್ನೀಯ್ಯಲು;

ಪುರೋಹಿತನು— ಎಲೆ ಬಾಲೆಯಾದ ಶಕುಂತಲೆಯೇ ಎನ್ನ ಸಂಗಡ ಬರುವುದೆಂದು ನುಡಿಯಲು;

ಆ ಶಕುಂತಲೆಯು ಪುರೋಹಿತನು ಪೇಳಿದ ವಾಕ್ಯವಂ ಕೇಳಿ, ಎನ್ನವಸ್ಥೆಯು ಈಪ್ರಕಾರವಾದುದು, ಮುಂದೆ ಗತಿಯಂ ಕಾಣೆನೆಂದು ತನ್ನ ಮನದಲ್ಲಿ ಅತ್ಯಂತ ದುಃಖಾತುರಳಾಗಿ, ಭೂಮಿಯಂ ಕುರಿತು '' ಭೂದೇವಿಯೇ, ನೀನು ಬಾಯಿ ತೆರೆದೆಯಾದರೆ ನಿನ್ನಲ್ಲಿ ಪ್ರವೇಶವಂಗೆಯ್ವೆನು'' ಎಂದು ನುಡಿಯುತ್ತ. ಕಾಡ್ಗಿಚ್ಚಿನ ಸೆಕೆತಟ್ಟಿದ ಎಳೆಯ ಬಳ್ಳಿಯಂತೆ ದುಃಖಾಗ್ನಿಯಿಂ ಕಂದಿ ಕಾಂತಿಹೀನವಾದ ಕಾಯದಿಂ ಕೂಡಿ, ಸೂರ್ಯಬಿಂಬವಂ ಧರಿಸಿದ ಪೂರ್ವದಿಕ್ಕಿನಂತೆ ಗರ್ಭದಿಂ ಬಿಳ್ಪೇರಿದ ದೇಹಕಾಂತಿಯುಳ್ಳವಳಾಗಿ, ಹೇರಳವಾದ ರೋದನವಂ ಗೆಯ್ಯುತ್ತ, ಆ ಪುರೋಹಿತನು ಋಷಿಗಳೊಡನೆ ಸಹ ಪೊರಮಟ್ಟು ಬರುತ್ತಿರಲು;

ರಾಯನು ದುರ್ವಾಸಮುನಿಯ ಶಾಪದಿಂ ಪೂರ್ವದಲ್ಲಿ ಮಾಡಿದ ಕಾರ್ಯಜ್ಞಾನವಿಲ್ಲದಿದ್ದರೂ ಕಳವಳಪಡುತ, ಶಕುಂತಲೆಯು ಪೋದುದಂ ಚಿಂತಿಸುತ್ತಿರಲು;

ಇತ್ತಲು ಶಕುಂತಲೆಯು ಸ್ವರವೆತ್ತಿ ರೋದನವಂ ಗೆಯ್ಯುತ, ಪುರೋಹಿತನೊಡನೆ ಬರುತ್ತಿರಲು;

ಅಷ್ಟರಲ್ಲೀ ಸ್ವರ್ಗದಲ್ಲಿರ್ದ ಮೇನಕೆಯು ತನಗೆ ಮಿತ್ರರಾದ ಸಾನುಮತಿ ಸಾರಸಿಕೆಯರೆಂಬ ಸಖಿಯರಂ ಕುಱಿತು–“ ಎಲೌ ಸಖಿಯರುಗಳಿರಾ, ಎನ್ನ ಮಗಳಾದ ಶಕುಂತಲೆಯಂ ಕಣ್ವಮುನೀಶ್ವರನು ಹಿಮತ್ಪರ್ವತದ ತಪ್ಪಲಿಂ ತೆಗೆದುಕೊಂಡುಪೋಗಿ ತನ್ನಾಶ್ರಮದಲ್ಲಿ ಪ್ರೇಮದಿಂ ತನ್ನ ಪುತ್ರಿಗಿಂತಲೂ ಅತಿಶಯವಾಗಿ ಸಲಹುತ್ತಿರುವನೆಂತಲೂ, ಚಂದ್ರವಂಶೋತ್ಪನ್ನನಾದ ದುಷ್ಯಂತರಾಯನು ಆ ಕಣ್ವಮುನಿಯ ತಪೋವನದಲ್ಲಿರ್ದ ಎನ್ನ ಮಗಳಾದ ಶಕುಂತಲೆಯಂ ಗಾಂಧರ್ವ ವಿವಾಹದಿಂ ವಿವಾಹಿತಳಂ ಮಾಡಿಕೊಂಡು ಪೋದನೆಂತಲೂ, ಶಕ್ರಾವತಾರ ತೀರ್ಥ ಸಂರಕ್ಷಣೆಗೋಸುಗ ಪೋಗಿರ್ದ ಕಾಂತಿಮತಿಯ ಮುಖವಚನದಿಂದ ತಿಳಿದಿರುವೆನು. ಆದ್ದಱಿಂ–ನೀವಿಬ್ಬರೂ ಶಕ್ರತೀರ್ಥಸಂರಕ್ಷಣೆಯಂ ಗೆಯ್ಯುವುದಕ್ಕೆ ಪೋಗುತ್ತಿರುವಿರಷ್ಟೆ. ಅಲ್ಲಿ ಎನ್ನ ಪುತ್ರಿಯ ಯೋಗಕ್ಷೇಮವಂ ತಿಳಿದುಬರುವುದು. ಮತ್ತಾ ಆ ಶಕುಂತಲೆಯು ಆ ಕಣ್ವಮುನಿಯ ತಪೋವನದಲ್ಲಾಗಲಿ ಅವಳ ಪತಿಯಾದ ದುಷ್ಯಂತರಾಯನ ಅಂತಃಪುರದಲ್ಲಿಯಾಗಲಿ ಸಂತೋಷದಲಿರ್ದರಂತು ನಮಗೆಲ್ಲರಿಗೂ ಸಮ್ಮತವೇ ಸರಿ. ಅದಲ್ಲದೆ ಆ ದುಷ್ಯಂತರಾಯನು ಬಹು ಜನಸ್ತ್ರೀಯರಲ್ಲಿ ಆಸಕ್ತನಾಗಿ ಇವಳಂ ಮಱೆತು ದುಃಖಕ್ಕೆ ಪಾತ್ರಳನ್ನಾಗಿ ಮಾಡಿರ್ದರೂ, ಕಣ್ವಮುನಿಯು ದಯದಿಂದ ಸಲಹದೆ ಇರ್ದನಾದರೂ ನಿಮ್ಮ ವಿಮಾನದಲ್ಲಿ ಕುಳ್ಳಿರಿಸಿಕೊಂಡು ನಾನಿರುವ ಬಳಿ ಬರುವುದು ” ಎಂದು ಪೇಳಲು;

ಆ ಸಾನುಮತಿಸಾರಸಿಕೆಯರೆಂಬ ಸ್ತ್ರೀಯರು ಅವಳ ವಾಕ್ಯವಂ ಅಂಗೀಕರಿಸಿ ವಿಮಾನಾರೂಢರಾಗಿ ಭೂಲೋಕವಂ ಕುಱಿತು ಬರುತ್ತಾ, ಸಾರಸಿಕೆಯು ಸಾನುಮತಿಯಂ ಕುಱಿತು–“ಎಲೆ ಸಾನುಮತಿಯೇ, ನೀನು ಶಕ್ರಾವತಾರ ತೀರ್ಥವಂ ಸಂರಕ್ಷಿಸುವುದಕ್ಕೆ ಪೋಗು, ನಾನು ಕಣ್ವಮುನೀಶ್ವನ ಆಶ್ರಮಕ್ಕೆ ಪೋಗಿ ಶಕುಂತಲೆಯಂ ಕಂಡು ಕುಶಲಪ್ರಶ್ನೆಯಂ ಗೆಯ್ಯುವೆನು. ಅವಳು ಆ ತಪೋವನದಲಿಲ್ಲದಿರ್ದರೆ ದುಷ್ಯಂತರಾಯನ ಪುರಪ್ರವೇಶವಂ ಗೆಯ್ದು ಬರುವೆನು ” ಎಂದು ನುಡಿದು, ಆ ಸಾನುಮತಿಯಂ ಬಿಟ್ಟುಬರುತ್ತಾ, ಅಲ್ಲಲ್ಲಿರುವ ತಪೋವನವಂ ನೋಡುತ್ತಾಬರಲು; ಮುಂಭಾಗದಲ್ಲಿ ತಮ್ಮ ಸ್ವಜಾತಿಸಿದ್ಧವಾದ ವೈರಮಂ ಬಿಟ್ಟು ಮಿತ್ರತ್ವದಿಂ ಕ್ರೀಡಿಸುತ್ತಿರುವ ಸಿಂಹಶಾರ್ದೂಲಮದಗಜಹರಿಣ ಮೊದಲಾದ ಮೃಗಂಗಳಿಂ ಪರಿವೃತಮಾಗಿ, ಶಾಂತಿರಸಕ್ಕೆ ತವರ್ಮನೆಯಾಗಿ, ಮೋಕ್ಷಲಕ್ಷ್ಮಿಯ ಪಾಣಿಗ್ರಹಣಸ್ಥಾನವೆನಿಸಿ ಕುಜನಾಶ್ರಯಮಾದರೂ ಸದ್ವಂಶಶಾಲಿಯಾಗಿ ವಿರಾಜಿಸುವ ಕಣ್ವಾಶ್ರಮವಂ ಕಂಡು, ಅಲ್ಲಿರುವ ನದಿ ನದ ತಟಾಕ ಪರ್ಣಶಾಲೆ ಮೊದಲಾದ ಸ್ಥಾನಂಗಳಂ

ನೋಡುತ, ಮಗಳಾದ ಶಕುಂತಲೆಯ ವಿಯೋಗದಿಂ ವ್ಯಸನಾತುರನಾಗಿರುವ ಕಣ್ವಮುನಿಯಂ ಕಂಡು, ಮನದಲ್ಲಿ ನಮಸ್ಕರಿಸಿ, ಅನಸೂಯೆಪ್ರಿಯಂವದೆಯರೀರ್ವರು-- ನಮ್ಮ ಶಕುಂತಲೆಯು ಪತಿಗೃಹವಂ ಕುರಿತು ಪೋದಂದಾರಭ್ಯವಾಗಿ ನಮಗೆ ಆಹಾರವೇ ರುಚಿಸಲಾರದೆಂದು ಅನ್ಯೋನ್ಯವಾಗಿ ಸಲ್ಲಾಪವಂ ಗೆಯ್ಯುವುದಂ ಕೇಳಿ ಶಕುಂತಲೆಯು ದುಷ್ಯಂತರಾಯನ ಪುರಕ್ಕೆ ಪೋಗಿರುವಳೆಂದು ತನ್ನ ಮನದಲ್ಲಿ ನಿಶ್ಚಯಿಸಿ, ಅಲ್ಲಿಂದ ಹಿಂದಿರುಗಿ, ಪ್ರತಿಷ್ಠಾನಪುರಾಭಿಮುಖಳಾಗಿ ಬರುತ, ಎನ್ನ ಸ್ನೇಹಿತಳ ಪುತ್ರಿಯಾದ ಶಕುಂತಲೆಯು ಎಂತಿರುವಳೋ ಅವಳಂ ಯಾವಾಗ ನೋಡುವೆನೋ ಎಂಬ ಕುತೂಹಲದಿಂ ಯುಕ್ತಳಾಗಿ, ಬರುತ್ತಿರಲು; ಮಧ್ಯಮಾರ್ಗದಲ್ಲಿ ತನ್ನ ಬಲಗಣ್ಣು ಬಲಭುಜವು ಸಹ ಹಾರುವುದಂ ತಿಳಿದು, ಭಿನ್ನಹೃದಯಳಾಗಿ, ಎನಗುಂಟಾಗುವ ಅವಶಕುನವಂ ಸಂಭಾವಿಸಿದಲ್ಲಿ ಶಕುಂತಲೆಯು ದುಷ್ಯಂತರಾಯನ ಸಮೀಪದಲ್ಲಿ ಕ್ಷೇಮದಿಂದಿರಲಾರಳೆಂದು ಸಂಶಯಾಕ್ರಾಂತಚಿತ್ತಳಾಗಿ ಬರಲು; ಮುಂಬಾಗದಲ್ಲಿ ಅಳಕಾನಗರದಂತೆ ಚಿತ್ರಲೇಖಾಂಚಿತವಾಗಿ ಸ್ವರ್ಗಲೋಕದಂತೆ ಸುರಶಾಲಾಶ್ರಿತವಾಗಿ, ಗಂಧರ್ವಸಂಘೋಷ ಸುಂದರವಾಗಿ, ಪಾತಾಳದಂತೆ ಅನೇಕ [illegible]ಗಾಶ್ರಯವೆನಿಸಿ, ಆಕಾಶದಂತೆ ಸದ್ರಾಜಹಂಸಸೇವಿತಮಾಗಿ, ಸಮುದ್ರದಂತೆ ಅನೇಕ ವಾಹಿನೀಸಂಗತವಾಗಿ, ನವರತ್ನಾಶ್ರಯವೆನಿಸಿ, ಇನ್ನೂ ಅನಂತಾನಂತ ಸೌಧತೋರಣ ಮೊದಲಾಗಿ ಚಿತ್ರತರ ವಸ್ತುವಿಸಿಂದ ರಮಣೀಯಮಾಗಿರುವ ಪ್ರತಿಷ್ಠಾನಪಟ್ಟಣವಂ ಕಂಡು, ಸಂತೋಷವಂ ಪಡೆದು, ನಮಗೆ ಸ್ವಾಮಿಯಾದ ಇಂದ್ರನ ಸ್ವರ್ಗಕ್ಕಿಂತಲೂ ಈ ಪುರವು ನೂರ್ಮಡಿಯಾದ ಸೊಗಸುಳ್ಳದೆಂದು ಶಿರವಂ ತೂಗುತ್ತಾ ಬರುತ್ತಾ, ಮೇರುಶೃಂಗದಂತೆ ನವರತ್ನಖಚಿತವಾಗಿ ಆಕಾಶವಂ ವ್ಯಾಪಿಸಿರುವ ದುಷ್ಯಂತರಾಯನ ಉಪ್ಪರಿಗೆಯಂ ಕಂಡು ಸುಂದರಮಾದ ಈಮಂದಿರವು ಮಹಾರಾಜನಾದ ದುಷ್ಯಂತನದಾಗಿರಬಹುದೆಂದೂಹಿಸುತ್ತ, ತಿರಸ್ಕರಣೀ ವಿದ್ಯದಿಂದಾರಿಗೂ ಗೋಚರಳಾಗದೆ ಬರುತ್ತಿರಲು;

ಅಷ್ಟರಲ್ಲೇ ಶಕುಂತಲೆಯು ಪುರೋಹಿತನ ಬೆಂಬಿಡಿದು ಬರುತ್ತಾ, ತಾನು ಪುಟ್ಟಿದ ಕಣ್ವಮುನೀಶ್ವರನು ಅತ್ಯಂತ ಪ್ರೇಮದಿಂ ತನ್ನ ಸಂರಕ್ಷಣೆಯಂ ಗೆಯ್ದ ಪರಿಯಂ, ರಾಯನು ತಪೋವನಕ್ಕೆ ಬಂದು ಪಲಬಗೆಯಾಗಿ ನಂಬಿಗೆಯ ವಾಕ್ಯವಂ ತನಗೆ ಪೇಳಿ ಗಾಂಧರ್ವ ವಿವಾಹವಂ ಗೆಯ್ದು ಈಗ ಎನ್ನಂ ಪತ್ನಿಯಲ್ಲವೆಂದು ತಿರಸ್ಕಾರವಂ ವಿರಚಿಸಿದ ಸಂಗತಿಯಂ ಗಟ್ಟಿಯಾಗಿ ಪೇಳುತ್ತ, ಧ್ವನಿಗೆಯ್ದು ರೋದನವಂ ಮಾಡುತ್ತಾ ಬರುತ್ತಿರಲು;

ಸಾರಸಿಕೆಯೆಂಬ ಆ ಅಪ್ಸರಸ್ತ್ರೀಯು ಆಶ್ರಯವಿಲ್ಲದೆ ಇರುವ ಲತೆಯಂತೆ ಬಳುಕುತ ಬರುವ ಶಕುಂತಲೆಯಂ ಕಂಡು, ಅವಳ ವಾಕ್ಯವೆಲ್ಲವಂ ಕಿವಿಗೊಟ್ಟು ಅಂತರಿಕ್ಷದಲ್ಲಿ ನಿಂತು ಕೇಳಿ, "ಇವಳೇ ಶಕುಂತಲೆಯು, ನನ್ನ ಸ್ನೇಹಿತಳಾದ ಮೇನಕೆಯು ಸೂಚಿಸಿದಂತೆ ರಾಯನು ಇವಳಿಗೆ ಮೋಸವಂ ಗೆಯ್ದಂತೆ ಇವಳ ವಾಕ್ಯದಿಂದ ತೋರುತ್ತಿರುವುದು. ಇವಳು ದುಃಖವಂ ಪೊಂದುವುದಂ ನೋಡಿದರೆ ಎನಗೆ ಮಹತ್ತಾದ ಸಂತಾಪವುಂಟಾಗುವುದು. ಇನ್ನುಮೇಲೆ ಇವಳಂ ಮೇನಕೆಯ ಸಮೀಪಕ್ಕೆ ಕರೆದುಕೊಂಡು ಪೋಗುವೆನು" ಎಂದು ತನ್ನ ಮನದಲ್ಲಿ ನಿಶ್ಚಯವಂ ಗೆಯ್ದು, ಜೀವರತ್ನಂಗಳ ಸಾಲುಗಳಿಂದ ಮನೋಹರವಾಗಿ ಸೂರ್ಯತೇಜಸ್ಸಂ ನಿರಾಕರಿಸುವ ವಿಮಾನವನ್ನಾ ಶಕುಂತಲೆಯು ಬರುವ ಭೂಮಿಗಿಳುಹಲು;

ಆಗ ಪುರೋಹಿತ ಮೊದಲಾದ ಪುರಜನರುಗಳೆಲ್ಲಾ ಆ ವಿಮಾನದ ಕಾಂತಿಯಂ ಕಂಡು, ಅದ್ಭುತವಾದ ಈ ಕಾಂತಿಯು ಏನಿರುವುದೆಂದು ಕಣ್ಗಳಂ ಮುಚ್ಚದೆ ನೋಡುತ್ತಿರಲು;

ಆಕ್ಷಣದಲ್ಲಿ ಸಾರಸಿಕೆಯು ಪೋಗುತ್ತಿರುವ ಶಕುಂತಲೆಯಂ ತನ್ನ ಕರಗಳಿಂದ ಎತ್ತಿವಿಮಾನದಲ್ಲಿ ಕುಳ್ಳಿರಿಸಿಕೊಂಡು, ಗಗನಮಾರ್ಗವಂ ಕುರಿತು ಪೋಗಲು;

ದುಷ್ಯಂತರಾಯನ ಪುರೋಹಿತನು ಶಕುಂತಲೆಯಂ ತೆಗೆದುಕೊಂಡು ಪೋದುದನ್ನು ಕಂಡು ಅತ್ಯಾಶ್ಚರ್ಯಯುಕ್ತನಾಗಿ,—ಈ ಸಂಗತಿಯಂ ರಾಯಂಗೆ ವಿಜ್ಞಾಪನೆಯಂ ಗೆಯ್ಯುವೆನೆಂದು ಹಿಂದಿರುಗಿ ಬರುತ್ತಿರಲು ;

ಅಷ್ಟರಲ್ಲೇ ರಾಯನು ಶಕುಂತಲೆಯಂ ಅಂತರಿಕ್ಷಕ್ಕೆ ಸಾರಸಿಕೆಯು ತೆಗೆದುಕೊಂಡು ಪೋಗುವಾಗ್ಗ ಸಮಸ್ತ ಜನರು ಕಂಡು ಹಾಹಾಕಾರವಂ ಗೆಯ್ಯಲು, ಆ ಕಲಕಲವಂ ಕೇಳಿ,-ಈ ಕಲಕಲಧ್ವನಿಯು ಪುಟ್ಟುವುದಕ್ಕೆ ಕಾರಣವೇನೆಂದು ಯೋಚಿಸುತ್ತಿರಲು ;

ಅಷ್ಟರಲ್ಲೇ ಪುರೋಹಿತನು ಅತ್ಯಂತ ತ್ವರೆಯಿಂದ ಓಡಿಬಂದು ರಾಯನ ಮುಂಗೆ ನಿಲ್ಲಲು ;

ರಾಯನು-"ಅಯ್ಯಾ ಪುರೋಹಿತರೇ, ಏನುಕಾರ್ಯಕ್ಕೋಸುಗ ಬಂದಿರಿ?" ಎಂದು ಕೇಳಲಾ ಪುರೋಹಿತನು—"ಅಯ್ಯಾ ಮಹಾರಾಯನೇ, ಅತ್ಯಾಶ್ಚರ್ಯವಾದ ವಾಕ್ಯವಂ ಬಿನ್ನೈಸುವೆನು ಕೇಳು. ಶಕುಂತಲೆಯು ಎನ್ನ ಸಂಗಡ ಬರುತ ತಾನು ಪುಟ್ಟಿದ್ದು ಮೊದಲಾಗಿ ಇದುವರೆಗೂ ತನ್ನ ವೃತ್ತಾಂತಗಳಂ ಪೇಳಿಕೊಂಡು ತನ್ನ ತೋಳುಗಳನ್ನೆತ್ತಿ ರೋದನವಂ ಗೆಯ್ಯುತ್ತಿರಲು, ಅಷ್ಟರಲ್ಲೇ

ಅಪ್ಸರಸ್ತೀರ್ಥವೆಂಬ ಸರಸ್ಸಿನ ಸಮೀಪದಲ್ಲಿ ಒಂದಾನೊಂದು ತೇಜೋಮಯಮಾದ ವಿಮಾನದಲ್ಲಿ ಒಬ್ಬ ಸ್ತ್ರೀಯು ಬಂದು ಗಗನಕ್ಕೆ ಶಕುಂತಲೆಯನ್ನೆತ್ತಿಕೊಂಡು ಪೋಗಿ ಅಂತರ್ಧಾನವಾದಳು. ಮುಂದೆ ಏನು ಅಪ್ಪಣೆಯನ್ನೀಯುವಿರಿ ?" ಎಂದು ನುಡಿಯಲು ;

ರಾಯನು–"ಅಯ್ಯ, ಪೂಜ್ಯರಾದ ಪುರೋಹಿತರೇ, ಮೊದಲೇ ನಾನು ಆ ಶಕುಂತಲೆಯಂ ಎನ್ನ ಪತ್ನಿಯಲ್ಲವೆಂದು ತಿರಸ್ಕಾರವಂ ಗೆಯ್ದಿರುವೆನು. ಈಗ ಅವಳು ಪೋದಳೆಂದು ವ್ಯರ್ಥವಾಗಿ ಮನೋವ್ಯಥೆಯಂ ಪೊಂದದೆ ಸ್ವಸ್ಥಚಿತ್ತರಾಗಿ ನಿಮ್ಮ ಗೃಹವಂ ಪ್ರವೇಶವಂ ಗೆಯ್ಯಬೇಕು" ಎಂದು ಅಪ್ಪಣೆಯನ್ನೀಯಲು;

ಆ ಪುರೋಹಿತನು ರಾಯನ ಅಪ್ಪಣೆಯಂ ಪಡೆದು ತನ್ನ ಗೃಹಕ್ಕೆ ಪೋಗಲು;

ಇತ್ತ ರಾಯನು ತನ್ನ ಸಮೀಪದಲ್ಲಿರುವ ದ್ವಾರಪಾಲಕನಂ ಕುರಿತು, "ಎಲೈ ಕಂಚುಕಿಯೇ, ಏನು ಕಾರಣದಿಂದಲೋ ಎನ್ನ ಹೃದಯವು ಕಳವಳವಂ ಪೊಂದುತ್ತಿರುವುದು. ಶಯನಗೃಹದ ಮಾರ್ಗವನ್ನನುಸರಿಸಿ ನಡೆ" ಎಂದು ಅಪ್ಪಣೆಯನ್ನಿತ್ತು, ಕುಳಿತಿರ್ದ ರತ್ನಪೀಠದಿಂದೆದ್ದು, ಆ ಕಂಚುಕಿಯು ತೋರಿಸುವ ಮಾರ್ಗವಂ ಕುರಿತು ಬಂದು, ಹಂಸತೂಲವಿರಾಜಮಾನವಾದ ಮಂಚದಲ್ಲಿ ಕುಳಿತು, "ಮುನಿಪುತ್ರಿಯಾದ ಶಕುಂತಲೆಯಂ ಅಧಿಕವಾಗಿ ತಿರಸ್ಕಾರವಂ ಗೆಯ್ದ ಎನ್ನ ಹೃದಯವು ಬಲವಾಗಿ ವ್ಯಸನವಂ ಪೊಂದುತ, ಎನ್ನ ಸಮಾಧಾನವಂ ಗೆಯ್ಯುವಂತೆ ತೋರಿ ಪೇಳುವದಕ್ಕಾಗದೆ ಇರುವ ಏನೋ ಒಂದು ವಿಶ್ವಾಸವನ್ನವಳಲ್ಲಿ ಪುಟ್ಟಿಸುತ್ತಿರುವುದು" ಎಂದು ತನ್ನೊಳು ತಾನು ಆಲೋಚನೆಯಂ ಗೆಯ್ಯುತ, ಶಯನಗೃಹದಲ್ಲಿರ್ದನು.

ಎಂಬಲ್ಲಿಗೆ

ಕೃಷ್ಣರಾಜಕಂಠೀರವರು ರಚಿಸಿದ ಕೃಷ್ಣರಾಜವಾಣೀವಿಲಾಸ ರತ್ನಾಕರವೆಂಬ ಶಾಕುಂತಲನವೀನಟೀಕಿನಲ್ಲಿ ದುಷ್ಯಂತರಾಯನಿಂದ ತಿರಸ್ಕಾರವಂ ಪಡೆದ ಶಕುಂತಲೆಯಂ ಸಾರಸಿಕೆಯೆಂಬ ಅಪ್ಸರಸ್ತ್ರೀಯು ಮೇನಕೆಯ ಸಮೀಪಕ್ಕೆ ತೆಗೆದುಕೊಂಡು ಪೋದಳೆಂಬ ಚತುರ್ಥ ಕಲ್ಲೋಲದಲ್ಲಿ ಪ್ರಥಮ ತರಂಗಂ ಸಂಪೂರ್ಣಂ.

ಚತುರ್ಥಕಲ್ಲೋಲದ ದ್ವಿತೀಯತರಂಗಂ.

ಅನಂತರದಲ್ಲಿ ರಾಯನು ಏನೋ ಒಂದು ಮನೋವ್ಯಥೆಯಂ ಪೊಂದಿ ಶಯನ ಗೃಹದಲ್ಲಿರುತ್ತಿರಲು ;

ಇತ್ತಲು ಶಕ್ರಾವತಾರತೀರ್ಥವೆಂಬ ಸರೋವರದ ಸಮೀಪದಲ್ಲಿ ವಾಸವಂ ಗೆಯ್ಯುತಿರ್ದ ಒಬ್ಬಾನೊಬ್ಬ ಬೆಸ್ತರವನು ಒಂದುದಿನ ಮತ್ಸ್ಯಗಳಂ ಪಿಡಿಯುವು ದಕ್ಕೆ ಆ ಸರಸ್ಸಿನಲ್ಲಿ ಬಲೆಯಂ ಬೀಸಿ ಅನೇಕ ಮತ್ಸ್ಯಗಳಂ ಹಿಡಿಯಲದರೊಳ್ಳಿ ಒಂದು ಮೀನು ಹೊಂಬಣ್ಣವಾಗಿ ಹೊಳೆಯುತ್ತಿರಲು, ಅದಂ ಭಕ್ಷಿಸಲೋಸುಗ ತುಂಡುಗೆಯ್ಯಲಾ ಮೀನಹೊಟ್ಟೆಯಲ್ಲಿ ಶಕುಂತಲೆಯ ಹಸ್ತದಿಂ ಜಾರಿಬಿದ್ದ ಅಮೂಲ್ಯವಾದ ರತ್ನಗಳಿಂ ಕೆತ್ತಿರುವ ಮುದ್ರೆಯುಂಗುರವಂ ಕಂಡು, ಅಧಿಕ ಸಂತೋ ಷಯುಕ್ತನಾಗಿ,— "ಈ ಉಂಗುರವಂ ಕ್ರಯವಂ ಮಾಡಿ ಅಧಿಕ ದ್ರವ್ಯಮಂ ಪಡೆದು ಮಡದಿಮಕ್ಕಳಂ ಸಲಹುವೆನು" ಎಂದು ತನ್ನ ಮನದಲ್ಲಿ ಆಲೋಚ ನೆಯಂ ಗೆಯ್ದು, ಆ ಉಂಗುರವಂ ತೆಗೆದುಕೊಂಡು ಪ್ರತಿಷ್ಠಾನಪಟ್ಟಣಕ್ಕೆ ಬಂದು, ಒಬ್ಬಾನೊಬ್ಬ ವರ್ತಕನಿಗೆ ತೋರಿಸಲು;

ಆ ವರ್ತಕನು ರತ್ನದಿಂ ಕೆತ್ತಿರುವ ದುಷ್ಯಂತರಾಯನ ನಾಮಾಕ್ಷರವಂ ನೋಡಿಕೊಂಡು,–"ಈ ಉಂಗುರವು ಮಹಾರಾಜನಾದ ದುಷ್ಯಂತರಾಯನದಿರು ವುದು. ಇವನು ಇದಂ ಎಲ್ಲಿಂದಲೋ ಕದ್ದುಕೊಂಡು ಬಂದಿರುವನು ಎಂದು ಕಾಣು ವನು. ಈ ಉಂಗುರಕ್ಕೆ ಅನೇಕ ದ್ರವ್ಯವಂ ಕೊಟ್ಟರೂ ಕ್ರಯಸಾಲದೆ ಇರುವುದು. ಈ ಮುದ್ರಿಕೆಯಂ ಎನ್ನಲ್ಲಿರಿಸಿಕೊಂಡು ಇವನು ಪೇಳುವಂತೆ ನಾನು ಕ್ರಯವಂ ಕೊಟ್ಟರೆ ಮಹಾಪರಾಧಿಯಾಗಿ ರಾಜದಂಡನೆಗೆ ಯೋಗ್ಯನಾಗುವೆನು" ಎಂದಾ ಲೋಚಿಸಿ, ಆ ಬೆಸ್ತರವನಂ ಕುರಿತು–"ಎಲೈ ಪುರುಷನೇ, ಈ ಉಂಗುರದ ಕ್ರಯ ಕ್ಕೆ ಕೆಲವು ದ್ರವ್ಯವು ಸಾಲದೆ ಇರುವುದು. ಅದಂ ತೆಗೆದುಕೊಂಡು ನಾನು ಜಾಗ್ರ ತೆಯಿಂ ಬರುವವರೆಗೂ ನೀನು ಇಲ್ಲೇ ಇರುವುದು" ಎಂದು ನುಡಿದು, ತ್ವರೆಯಿಂ ಗ್ರಾಮಪಾಲಕನ ಸಮೀಪಕ್ಕೆ ಬಂದು, "ಎಲೈ ಸ್ವಾಮಿಯೇ, ಯಾವನೋ ಒಬ್ಬ ಪುರುಷನು ರತ್ನಖಚಿತವಾಗಿ ದುಷ್ಯಂತಮಹಾರಾಯನ ನಾಮಾಕ್ಷರದಿಂ ಯುಕ್ತ ವಾಗಿರುವ ಒಂದು ಮುದ್ರೆಯುಂಗರವಂ ತೆಗೆದುಕೊಂಡು ಬಂದು, ಇದಕ್ಕೆ ಯೋ ಗ್ಯವಾದ ಕ್ರಯದ್ರವ್ಯವಂ ಕೊಡುವುದೆಂದು ಕೇಳುವನು. ಆ ಉಂಗುರವನ್ನೊಡಿ ಭಯಾತುರನಾಗಿ ತಮ್ಮ ಸಮೀಪಕ್ಕೆ ಬಂದಿರುವೆನು" ಎಂದು ನುಡಿಯಲು ;

ಆ ಗ್ರಾಮಪಾಲಕನು ಅತಿ ಜಾಗ್ರತೆಯಿಂದೆದ್ದು ಜಾನುಕ, ಸೂಚಕರೆಂಬ ಇಬ್ಬರು ಭಟರುಗಳಂ ಕರೆದುಕೊಂಡು ಹೋಗಿ, ಆಬೆಸ್ತರವನಂ ಉಂಗುರಸಹಿತವಾಗಿ ಪಿಡಿದು, ಅವನ ಬಾಹುಗಳಂ ಹಗ್ಗಗಳಿಂ ಬಲವಾಗಿ ಬಂಧಿಸಿ, ಉಂಗುರವಂ ತನ್ನ ಹಸ್ತದಲ್ಲಿ ಪಿಡಿದು, ಅವನಂ ಹಿಂಗಟ್ಟುಕಟ್ಟಿಕೊಂಡು ಬರುತ, ಅವನಂ ಕುರಿತು, "ಎಲಾ ಚೋರನೇ, ದಿವ್ಯರತ್ನಖಚಿತವಾಗಿ ರಾಜಯೋಗ್ಯವಾದ ಈ ಮುದ್ರಿಕೆಯಂ ಹೇಗೆ ಸಂಪಾದನೆಯಂ ಗೆಯ್ದಿರುವೆ? ಇದರ ಸಂಗತಿಯಂ ಚೆನ್ನಾಗಿ ಪೇಳುವುದು!" ಎಂದು ಪ್ರಹಾರವಂಗೆಯ್ಯಲು;

ಆ ಬೆಸ್ತರವನು ಭಯದಿಂ ನಡುಗುತ್ತ, ಗ್ರಾಮಪಾಲಕನಂ ಕುರಿತು- "ಎಲೈ ಸ್ವಾಮಿಯೇ, ನಾನು ಕಳ್ಳತನವಂ ಮಾಡಿದವನಲ್ಲ. ಎನ್ನಂ ವ್ಯರ್ಥವಾಗಿ ಬಾಧೆಯಂ ಪಡಿಸಲಾಗದು" ಎಂದು ನುಡಿಯಲು ಆವಾಕ್ಯಕ್ಕೆ ಜಾನುಕನೆಂಬ ಭಟನು-"ಎಲೋ ಕಳ್ಳ, ಕೇಳು. ನೀನು ಕಳ್ಳತನವಂ ಮಾಡದೆ ಈ ಉಂಗುರವಂ ಸತ್ಪಾತ್ರನಾದ ಬ್ರಾಹ್ಮಣನೆಂದು ದೊರೆಯಾದ ದುಷ್ಯಂತರಾಯನು ನಿನಗೆ ದಾನವಂ ಕೊಟ್ಟಿರುವನೇ ಪೇಳು" ಎಂದು ಗದ್ದರಿಸಲು;

ಆಬೆಸ್ತನು "ಎಲೈ ಭಟನೇ, ಕೇಳು. ನಾನು ಶಕ್ರಾವತಾರತೀರ್ಥವಾಸಿಯಾದ ಬೆಸ್ತರಜಾತಿಯವನು" ಎಂದು ನುಡಿಯಲು

ಆ ವಾಕ್ಯಕ್ಕೆ ಜಾನುಕನು,—"ನೀನು ಯಾವ ಜಾತಿಯವನು, ಎಂದು ನಿನ್ನ ಜಾತಿಯಂ ನಾನು ಕೇಳಲಿಲ್ಲ. ಸತ್ಯವಾಗಿ ಈ ಉಂಗುರವಂ ಎಲ್ಲಿಂದ ತೆಗೆದುಕೊಂಡು ಬಂದಿರುವೆ? ಯಥಾರ್ಥವಾಗಿ ಪೇಳು" ಎಂದು ನುಡಿಯಲು;

ಗ್ರಾಮಪಾಲಕನು ಭಟರುಗಳಂ ಕುರಿತು—"ಎಲೆ ಭಟರುಗಳಿರಾ! ಚೋರನಂ ನಿರ್ಬಂಧವಂ ಮಾಡದಿರಿ; ಈ ಉಂಗುರದ ಸಂಗತಿಯಂ ಚೆನ್ನಾಗಿ ವಿಸ್ತಾರವಾಗಿ ಪೇಳುವನು" ಎನಲು;

ಆ ವಾಕ್ಯಕ್ಕೆ ಅವರೀರ್ವರು ಸುಮ್ಮನಾಗಲು;

ಆ ಬೆಸ್ತರವನು ಆ ಗ್ರಾಮಪಾಲಕನಂ ಕುರಿತು—"ಎಲೈ ಸ್ವಾಮಿಯೇ, ನಾನು ಒಲೆ, ಗಾಣ ಮೊದಲಾದ ಸಾಧನಗಳಿಂದ ಮತ್ಸ್ಯಗಳಂ ಪಿಡಿದು, ಅವುಗಳಂ ಕ್ರಯವಂ ಗೆಯ್ದು ಪತ್ನೀಪುತ್ರರುಗಳಂ ಸಲಹುತ್ತಿರುವೆನು" ಎಂದು ನುಡಿಯಲು;

ಆ ವಾಕ್ಯಕ್ಕೆ ಗ್ರಾಮಪಾಲಕನು ನಸುನಕ್ಕು, "ಎಲಾ ಬೆಸ್ತರವನೇ, ಪ್ರಾಣಿಗಳ ಹಿಂಸೆಯಂ ಗೆಯ್ಯುವ ನಿನ್ನ ಜೀವವು ಮಹಾಪರಿಶುದ್ಧವಾದುದು!" ಎನಲು;

ಬೆಸ್ತರವನು-"ಎಲೈ ಸ್ವಾಮಿಯೇ, ಪ್ರಾಣಿಹಿಂಸೆಯಂ ಮಾಡುವುದು ಯುಕ್ತ

ಮಲ್ಲವೆಂದು ನುಡಿಯುತ್ತಿರುವೆಯಷ್ಟೆ. ಹಾಗಾದರೆ ಪೇಳುವೆನು, ಲೋಕದಲ್ಲಿ ಅವರವರ ಜಾತಿಗೆ ಯೋಗ್ಯವಾಗಿರುವ ಕಾರ್ಯವು ಎಂಥ ದುಷ್ಟವಾದಾಗ್ಗೂ ಬಿಡತಕ್ಕುದಲ್ಲವಾಗಿರುವುದು. ಹೇಗಂದರೆ-ಶ್ರೋತ್ರಿಯನಾದ ಬ್ರಾಹ್ಮಣನು ಯಜ್ಞವಂ ಗೆಯ್ಯುವ ಕಾಲದಲ್ಲಿ ಪಶುವಧೆಯಂ ಮಾಳ್ಪ ಕಾರ್ಯದಿಂ ಕ್ರೂರನಾದಾಗ್ಗೂ ಸರ್ವರ ದಯಕೆ ಪಾತ್ರನಾಗಿ ಯೋಗ್ಯನಾಗುವುದಱಿಂದ ಸ್ವಜಾತಿಧರ್ಮವಂ ಬಿಡತಕ್ಕುದು ಯುಕ್ತಮಲ್ಲ.'' ಎಂದು ನುಡಿಯಲು ;

ಆ ಗ್ರಾಮಪಾಲಕನು-“ ಎಲಾ ಬೆಸ್ತರವನೇ ಅದಂತಿರಲಿ. ಈ ಉಂಗುರವು ನಿನ್ನ ಸಮೀಪಕ್ಕೆ ಬಂದ ಸಂಗತಿಯಂ ಸತ್ಯವಾಗಿ ಪೇಳು '' ಎಂದು ನುಡಿಯಲು;

ಬೆಸ್ತರವನು—“ ಎಲೈ ಸ್ವಾಮಿಯೇ, ನಿಶ್ಚಯವಾಗಿ ಆಶಕ್ರಾವತಾರ ತೀರ್ಥದಲ್ಲಿ ಬಲೆಯಂ ಬೀಸಿ ಅನೇಕ ಮತ್ಸ್ಯಗಳಂ ಪಿಡಿಯುವಲ್ಲಿ ಒಂದು ರಕ್ತವರ್ಣವಾಗಿರ್ದ ಮೀನಂ ಕಂಡು ಅದಂ ಭೇದಿಸಲು ಅದಱ ಉದರದಲ್ಲಿ ಈ ರತ್ನಖಚಿತವಾಗಿರ್ದ ಉಂಗುರವಿರಲು, ಇದಂ ನೋಡಿ ಬಡವನಿಗೆ ಭಾಗ್ಯವು ಬಂದಂತೆ ಅತಿಸಂತುಷ್ಟನಾಗಿ ಈ ಪುರಕ್ಕೆ ಬಂದು ಇದಂ ವಿಕ್ರಯವಂ ಗೆಯಲೋಸುಗ ವರ್ತಕನಿಗೆ ತೋಱಿಸುತ್ತಿರುವಲ್ಲಿ ನಿಮ್ಮ ಕೈಗೆ ಸಿಕ್ಕಿದೆನು. ಇದೀಗ ಎನಗೆ ಮುದ್ರೆಯು ದೊರಕಿದ ಸಂಗತಿಯು. ಇನ್ನುಮೇಲೆ ಎನ್ನಂ ಸಂರಕ್ಷಿಸಿದರೂ ಸಂರಕ್ಷಿಸಿ, ಇಲ್ಲವಾದಲ್ಲಿ ಸಂಹರಿಸಿದರೂ ಸಂಹರಿಸಿ; ಯಥಾರ್ಥವಾಗಿ ಪೇಳಿರುವೆನು'' ಎಂದು ನುಡಿಯಲು ;

ಆ ಗ್ರಾಮಪಾಲಕನು— “ ಇವನು ಪೇಳುವ ಈ ವಾಕ್ಯವು ಸತ್ಯವಾಗಿ ತೋಱುವುದು. ಈ ರತ್ನಮುದ್ರಿಕೆಯು ಮತ್ಸ್ಯಗಂಧವುಳ್ಳುದಾಗಿರುವುದು. ಆದ್ದಱಿಂದೀ ಉಂಗುರವಂ ತೆಗೆದುಕೊಂಡು ಮಹಾರಾಜನಾದ ದುಷ್ಯಂತರಾಯನ ಅರಮನೆಗೆ ಪೋಗಿ ಈ ಮುದ್ರಿಕೆಯ ಸಂಗತಿಯಂ ವಿಜ್ಞಾಪನೆಯಂ ಗೆಯ್ದು ಸ್ವಾಮಿಯಾದವನು ಏನಪ್ಪಣೆಯನ್ನೀಯುತ್ತಿರುವನೋ ಅದಂ ತೆಗೆದುಕೊಂಡು ಜಾಗ್ರತೆಯಾಗಿ ಬರುವೆನು. ಅದುವರೆಗೂ ಈ ಬೆಸ್ತರವನಂ ಈ ಕೋಟೆಯ ಬಾಗಿಲಲ್ಲಿ ಜಾಗರೂಕರಾಗಿ ಕಾದುಕೊಂಡಿರುವುದು '' ಎಂದು ಆ ಭಟರುಗಳಿಗೆ ಅಪ್ಪಣೆಯನ್ನಿತ್ತು, ದುಷ್ಯಂತರಾಯನ ಸಭಾಸ್ಥಾನಕ್ಕೆ ಪೋಗಿ, ಅಲ್ಲಿರ್ದ ವೃದ್ಧಕಂಚುಕಿಯಂ ಕರೆದು, ತಾನು ಬಂದಿರುವ ಸಂಗತಿಯಂ ಜಾಗ್ರತೆಯಾಗಿ ರಾಯಂಗೆ ಬಿನ್ನೈಸು ಎನಲು;

ಆ ಕಂಚುಕಿಯು ಬಂದು-“ಎಲೈ ಮಹಾರಾಯನೇ, ಗ್ರಾಮಾಧಿಪತಿಯು

ಏನೋ ಒಂದು ಕಾರ್ಯವಂ ವಿಜ್ಞಾಪನೆಯಂಗೆಯ್ಯುವೆನೆಂದು ಒಂದು ಬಾಗಿಲಲ್ಲಿ ಕಾದಿರುವನು '' ಎನಲು;

ಆ ರಾಯನು ಬರಹೇಳುವುದೆಂದು ಅಪ್ಪಣೆಯನ್ನೀಯಲು ;

ಆ ಕಂಚುಕಿಯು ಬಂದು ಆ ಗ್ರಾಮಪಾಲಕನಂ ಕರೆದುಕೊಂಡು ಪೋಗಿ ರಾಯನ ಮುಂಬಾಗದೊಳ್ ಬಿಡಲು ;

ಆ ಗ್ರಾಮಪಾಲಕನು ದಂಡಾಕಾರಮಾಗಿ ನಮಸ್ಕಾರವಂ ಗೆಯ್ದು ರತ್ನಮುದ್ರಿಕೆಯಂ ರಾಯನ ಸಮೀಪದಲ್ಲಿರಿಸಿ, ಆ ಮುದ್ರಿಕೆಯು ಬಂದ ಸಂಗತಿಯೆಲ್ಲಮಂ ಪಾಜ್ಞವಾಗಿ ಬಿನ್ನೈಸಲು;

ರಾಯನು ಆಉಂಗುರವಂ ನೋಡಿದ ಕ್ಷಣದಲ್ಲಿ ದೂರ್ವಾಸಋುಷಿಯ ಶಾಪವುತೊಲಗಿ ಶಕುಂತಳೆಯ ಸ್ಮರಣೆಯುಂಟಾಗಲಾಗಿ, ಆಉಂಗುರವಂ ಕರದಲ್ಲಿ ಪಿಡಿದು ನೋಡಿ, ಶಕುಂತಳೆಯೊಡನೆ ತಾನು ಮಾಡಿದ ಸಮಸ್ತ ವೃತ್ತಾಂತವಂ ಸ್ಮರಿಸಿಕೊಂಡು ಕಂಬನಿಯಂ ಬಿಡುತ್ತಾ, ಗ್ರಾಮಾಧಿಪತಿಯಂ ಕುಱಿತು, ‹‹ ಎಲೈ ಗ್ರಾಮಪಾಲಕನೇ, ಈ ಉಂಗುರದ ಕ್ರಯಕ್ಕೆ ಸರಿಯಾಗಿ ಬೆಸ್ತರವನಿಗೆ ಹಣ ಕೊಡುವಂತೆ ನನ್ನಾಜ್ಞೆಯಾಗಿರುವುದೆಂದು ಕೋಶಾಧಿಕಾರಿಗೆ ಪೇಳಿ ತೆಗೆದುಕೊಂಡು ಪೋಗುವುದು '' ಎಂದು ಪೇಳಲು;

ಇತ್ತಲು ಆ ಭಟರುಗಳಿಬ್ಬರಲ್ಲಿ ಸೂಚಕನೆಂಬುವನು ಜಾನುಕನಂ ಕುಱಿತು, ‹‹ ಎಲೈ ಸ್ನೇಹಿತನೇ, ಒಡೆಯನಾದ ಗ್ರಾಮಾಧಿಪತಿಯು ಮಹಾರಾಜನಾದ ದುಷ್ಯಂತರಾಯನ ಸಭಾಸ್ಥಾನಕ್ಕೆ ಪೋಗಿ ಬಹು ಹೊತ್ತಾದರೂ ಇನ್ನೂ ಸಾವಕಾಶವಂ ಮಾಡುವನು '' ಎಂದು ನುಡಿಯಲು; ಜಾನುಕನು –‹‹ಎಲೈ ಸೂಚಕನೇ, ಕೇಳು. ದೊರೆಗಳಾದವರು ಸಮಯವಱಿತು ಪೋಗುವುದಕ್ಕೆ ಯೋಗ್ಯರಲ್ಲದೆ ಮನಬಂದಂತೆ ಪೋಗುವುದಕ್ಕೆ ಆಗಲಾಱದಾದ್ದಱಿಂ ಸಾವಕಾಶಮಾಗಿ ಕಾಣುವುದು '' ಎಂದು ನುಡಿಯಲಾ ಸೂಚಕನು—‹‹ ಎಲೈ ಜಾನುಕನೇ ಈಗ ಮುದ್ರಿಕೆಯಂ ಕದ್ದಿರುವ ಈ ಬೆಸ್ತರವನಿಗೆ ಮರಣ ಸಮೀಪಿಸಿರುವುದು. ಇವನ ಮರಣ ಕಾಲಕ್ಕೆ ಕಂಠಕ್ಕೆ ಹಾಕುವ ಪುಷ್ಪಮಾಲೆಯಂ ಕಟ್ಟುವುದಕ್ಕೆ ಎನ್ನ ಹಸ್ತಂಗಳು ತ್ವರೆ ಪಡುತ್ತಿರುವುವು '' ಎನ್ನಲು ;

ಆ ಬೆಸ್ತರವನು, ‹‹ಎಲೈ ಭಟರುಗಳಿರಾ,ಕೇಳಿ, ಮಹಾರಾಜನಾದ ದುಷ್ಯಂತರಾಯನು ಚೌರ್ಯ ಮೊದಲಾದ ಅಪರಾಧವೊಂದೂ ಇಲ್ಲದೆ ಅಕಾರಣಮಾಗಿ ಒಬ್ಬರಂ ಕೊಲ್ಲಿಸುವುದಱಲ್ಲಿ ಕಾರಣನಾಗಲಾಱನು.'' ಎಂದು ನುಡಿಯುತ್ತಿರಲು;

ಅಷ್ಟರಲ್ಲೀ ಆ ಬೆಸ್ತರವನಿಗೆ ಕೊಡತಕ್ಕ ದ್ರವ್ಯವಂ ತೆಗೆದುಕೊಂಡು ಬರುವ ಗ್ರಾಮಾಧಿಪತಿಯುಂ ಕಂಡು, ಆ ಜಾನುಕನು—“ ಎಲೈ ಬೆಸ್ತರವನೇ, ಅದೋ ರಾಜಗೃಹದಿಂ ರಾಯನ ಅಪ್ಪಣೆಯಂ ತೆಗೆದುಕೊಂಡು ನಾವಿರುವ ಸ್ಥಳಕ್ಕೆ ಅಭಿಮುಖನಾಗಿ ಗ್ರಾಮಾಧಿಪತಿಯು ಬರುತ್ತಿರುವನು. ಬಂದಮೇಲೆ ನೀನು ಗೃಧ್ರಬಲಿಯಾಗುವೆ ” ಎಂದು ಭಯವನ್ನುಂಟುಮಾಡುತ್ತಿರಲು;

ಅಷ್ಟರಲ್ಲೀ ಗ್ರಾಮಾಧಿಪತಿಯು ಜಾಗ್ರತೆಯಿಂ ಬಂದು,–“ ಎಲೈ ಭಟರುಗಳಿರಾ, ಈ ಬೆಸ್ತರವನು ತನಗೆ ಉಂಗುರವಂ ದೊರಕಿದ ಸಂಗತಿಯಂ ಯಥಾರ್ಥವಾಗಿ ಪೇಳಿರುವನಾದ್ದರಿಂ ಬಲೆಯಿಂ ಜೀವಿಸುತ್ತಿರುವನಂ ಬಿಟ್ಟು ಕಳುಹಿಸಿ ” ಎಂದು ಅಜ್ಞೆಯನ್ನೀಯಲು;

ಆ ಜಾನುಕನು–“ ಎಲೈ ಸ್ವಾಮಿಯೇ, ನಿನ್ನಾಜ್ಞೆಯು ಎಂತಾಗುವುದೋ, ಅಪ್ರಕಾರಕ್ಕೆ ನಡೆದುಕೊಳ್ಳುವೆನು ” ಎಂದು ನುಡಿಯಲು;

ಆ ಸೂಚಕನು, “ ಎಲೈ ಸ್ವಾಮಿಯೇ, ಬೆಸ್ತರವನು ಯಮ ಪುರಪ್ರವೇಶವಂ ಗೆಯ್ದು ಹಿಂದಿರಿಗಿ ಬಂದವನಂತಾದನು ” ಎಂದು ನುಡಿದು, ಅವನ ಭುಜಗಳಂ ಕಟ್ಟಿರ್ದ ಹಗ್ಗಗಳಂ ಬಿಚ್ಚಲು;

ಆ ಬೆಸ್ತರವನು ಆಗ್ರಾಮಾಧಿಪತಿಗೆ ನಮಸ್ಕಾರವಂ ಗೆಯ್ದು, “ ಎಲೈ ಸ್ವಾಮಿಯೇ, ಎನ್ನ ಪ್ರಾಣವು ನಿನ್ನ ಕೆಯ್ಯಲ್ಲಿರುವುದು. ಎನ್ನಂ ಸಂರಕ್ಷಿಸಬೇಕು ” ಎಂದು ನುಡಿಯಲು ;

ಆ ಗ್ರಾಮಪಾಲಕನು— “ ಎಲೈ ಬೆಸ್ತರವನೇ, ಮಹಾರಾಯನಾದ ದುಷ್ಯಂತರಾಯನು ನೀನು ತಂದ ರತ್ನಮುದ್ರಿಕೆಯ ಕ್ರಯಕ್ಕೆ ಸರಿಯಾದ ಈ ದ್ರವ್ಯವಂ ನಿನಗೆ ಉಡುಗೊರೆಯಾಗಿ ಅಪ್ಪಣೆಯನ್ನಿತ್ತಿರುವನು. ಇದಂ ತೆಗೆದುಕೋ ” ಎಂದು ಅವನಿಗೆ ತಾನು ತಂದಿರ್ದ ದ್ರವ್ಯವಂ ಕೊಡಲು ;

ಆ ಬೆಸ್ತರವನು ಅತ್ಯಂತಸಂತುಷ್ಟನಾಗಿ,ಆ ದ್ರವ್ಯವಂ ತೆಗೆದುಕೊಂಡು, ಆ ಗ್ರಾಮಾಧಿಪತಿಯ ಚರಣಂಗಳಿಗೆ ನಮಸ್ಕಾರವಂಗೆಯ್ದು, “ ಎಲೈ ಸ್ವಾಮಿಯೇ, ನಿನ್ನ ಕಟಾಕ್ಷದಿಂ ನಾನು ಸಂರಕ್ಷಿತನಾದೆನು ” ಎಂದು ನುಡಿಯುತ್ತಿರಲು;

ಆ ಸೂಚಕನು, “ಈ ಬೆಸ್ತರವನು ಮಹಾರಾಯನಾದ ದುಷ್ಯಂತರಾಯನ ಅನುಗ್ರಹಕ್ಕೆ ಪಾತ್ರನಾಗಿ, ಶೂಲಕ್ಕೆ ಹಾಕಿರ್ದ ಪುರುಷನಂ ತೆಗೆದು ಆನೆಯ ಕುಂಭಸ್ಥಲದಲ್ಲಿ ಕುಳ್ಳಿರಿಸಿದಂತಾದನು ” ಎಂದು ನುಡಿಯಲು ;

ಆವಾಕ್ಯಕ್ಕೆ ಜಾನುಕನು,– “ ಎಲೈ ಸೂಚಕನೇ, ಕೇಳು. ಈಗ ತೆಗೆದು

ಕೊಂಡು ಪೋದ ಉಂಗರದಿಂ ದುಷ್ಯಂತರಾಯನು ಸಂತುಷ್ಟನಾದನೆಂಬುವುದನ್ನು ಇವನಿಗೆ ಕೊಟ್ಟು ಕಳುಹಿಸಿದ ಉಡುಗೊರೆಯೇ ಪೇಳುತ್ತಿರುವುದು'' ಎನಲು;

ಆ ಸೂಚಕನು,— ‹‹ ಎಲೈ ಜಾನುಕನೇ, ರತ್ನಖಚಿತವಾಗಿ ಶ್ರೇಷ್ಠವಾದ ಆ ಉಂಗರವಂ ನೋಡಿದ ಮಾತ್ರದಿಂದಲೇ ರಾಯನು ಸಂತೋಷಯುಕ್ತನಾಗಲಾರನು. ಇನ್ನೇನೋ ಕಾರಣವಿರುವುದು ಎಂದು ಊಹಿಸುತ್ತಿರುವೆನು. ಅಲ್ಲಿ ನಡೆದ ಸಂಗತಿಯೆಲ್ಲವೂ ಗ್ರಾಮಾಧಿಪತಿಗೆ ತಿಳಿದಿರಬಹುದು'' ಎಂದು ನುಡಿಯಲು;

ಆ ಗ್ರಾಮಪಾಲಕನು-‹‘ಎಲೈ ಸೂಚಕನೇ, ನಾನು ತೆಗೆದುಕೊಂಡು ಪೋದ ರತ್ನಾಂಗುಳಿಯ ದರ್ಶನದಿಂ ರಾಯನು ತನಗೆ ಪ್ರೇಮಪಾತ್ರವಾದ ಒಬ್ಬಾನೊಬ್ಬ ಜನವಂ ಸ್ಮರಿಸಿಕೊಂಡು ಒಂದು ಮುಹೂರ್ತ ಗಂಭೀರಸ್ವಭಾವನಾಗಿರ್ದು, ಆ ಬಳಿಕ ಕಣ್ಣೀರಿನಿಂ ಕೂಡಿದ ನೇತ್ರವುಳ್ಳವನಾಗಿ, ಅಧಿಕವ್ಯಸನಾತುರನಾದನು '' ಎಂದು ನುಡಿಯಲು ;

ಆ ಸೂಚಕನು‹‹ ಎಲೈ ಸ್ವಾಮಿಯೇ, ನೀನು ಪೋಗಿ ಜಗತ್ತಿಗೆಲ್ಲಾ ಒಡವೆಯಾದ ದುಷ್ಯಂತರಾಯನ ನೇತ್ರಂಗಳಲ್ಲಿ ನೀರು ಬರುವಂತೆ ಚೆನ್ನಾಗಿ ಸೇವೆಯಂ ಮಾಡಿದೆ.'' ಎಂದು ನುಡಿಯಲು ;

ಆ ವಾಕ್ಯಕ್ಕೆ ಜಾನುಕನು, ‹‹ ಎಲೈ ಸೂಚಕನೇ, ಗ್ರಾಮಾಧಿಪತಿಯಾದವನು ಏನು ಕಾರ್ಯವು ಪುರದಲ್ಲಿ ನಡೆದರೆ ಅದಂ ರಾಯಂಗೆ ವಿಜ್ಞಾಪನೆಯಂ ಗೆಯ್ಯುವುದು ಯುಕ್ತವಾಗಿರುವುದು. ಆದ್ದರಿಂದಿವನಿಂ ದೋಷವಿಲ್ಲ, ಮತ್ಸ್ಯಶತ್ರುವಾದ ಈ ಬೆಸ್ತರವನಿಂದಲೇ ನಮ್ಮ ಸ್ವಾಮಿಯಾದ ದುಷ್ಯಂತರಾಯನ ನೇತ್ರಗಳಲ್ಲಿ ಜಲವುಂಟಾದುದು '' ಎಂದು ನುಡಿದು, ಆ ಬೆಸ್ತರವನಂ ಅಸೂಯೆಯಿಂ ನೋಡಲು;

ಆ ಬೆಸ್ತರವನು—‹‹ಎಲೈ ಗ್ರಾಮಾಧಿಪತಿಯೇ, ಕೆಲವು ನಿಮಗೆ ಪುಷ್ಪವಿಕ್ರಯಕ್ಕಾಗುವುದು. ಇದಂ ತೆಗೆದುಕೊಳ್ಳಬೇಕು '' ಎಂದು ಕೊಡಲು ;

ಆ ಜಾನುಕನು,-‹‹ ಎಲೈ ಬೆಸ್ತರವನೇ, ನೀನು ಪೇಳಿದ ವಾಕ್ಯವು ಯುಕ್ತವಾಗಿರುವುದು '' ಎನಲು ;

ಆ ಗ್ರಾಮಾಧಿಪತಿಯು ಅವನಿತ್ತ ದ್ರವ್ಯವಂ ತೆಗೆದುಕೊಂಡು ‹‹ ಎಲೈ ಬೆಸ್ತರವನೇ, ಈಗ ಎನಗೆ ಮಹತ್ತರವಾದ ಪ್ರಿಯಮಿತ್ರನೆ'' ಎಂದು ನುಡಿದು ಪೋಗಲು;

ಇವರೆಲ್ಲರೂ ಆ ದ್ರವ್ಯವಂ ಹಂಚಿಕೊಂಡು ಮದ್ಯಸಾಕ್ಷಿಯಾಗಿ ಮಿತ್ರ

ತ್ಸವಂ ಮಾಡುವುದಕ್ಕೆ ಮಧ್ಯವಂ ಮಾಡುವ ಸ್ಥಾನಕ್ಕೆ ಜತೆಗೊಂಡು ಪೋಗಲು;

ಇತ್ತಲು ಶಕ್ರಾವತಾರತೀರ್ಥವೆಂಬ ಸರೋವರವಂ ಕುರಿತು ಪೋಗಿರ್ದ ಸಾನುಮತಿಯೆಂಬ ಅಪ್ಸರಸ್ತ್ರೀಯು–ಶಕುಂತಲೆಯೆಂಬುವಳು ಈ ಮಾರ್ಗದಿಂ ಋಷಿಶಿಷ್ಯರಿಂದೊಡಗೂಡಿ ಪ್ರತಿಷ್ಠಾನಪಟ್ಟಣಕ್ಕೆ ಪೋದಳೆಂಬ ವಾರ್ತೆಯಂ ಆ ತೀರ್ಥವಾಸಿಗಳಾದ ಜನರ ಮುಖವಚನದಿಂ ತಿಳಿದು, ಸಾರಸಿಕೆಯು ಪೋಗಿ ಬಲುಹೊತ್ತಾದುದು. ಅವಳು ಎಲ್ಲಿ ಪೋದಳೊ, ಶಕುಂತಲೆಯ ವೃತ್ತಾಂತವು ಎಂತಿರುವುದೊ, ಅದಂ ತಿಳಿದುಬರುವೆನೆಂದು ವಿಮಾನಾರೂಢಳಾಗಿ ಪ್ರತಿಷ್ಠಾನಪುರವಂ ಪ್ರವೇಶಿಸಿ, ಅಲ್ಲಿಯೂ ಶಕುಂತಲೆಯಂ ಕಾಣದೆ, ದುಷ್ಯಂತರಾಯನ ಅಂತಃಪುರಕ್ಕೆ ಯೋಗ್ಯಮಾದ ಪ್ರಮದವನಕ್ಕೆ ಬಂದು, ಆ ವನದಲ್ಲಿ ವಿಮಾನವನ್ನಿಳುಹಿಸುತ್ತಾ, ತನ್ನೊಳು ತಾನು– "ನಾನು ಶಕ್ರಾವತಾರತೀರ್ಥದಲ್ಲಿ ಇರ್ದೆನಾದರೆ ಸತ್ಪುರುಷರುಗಳ ಸ್ನಾನಕ್ಕೆ ವಿರೋಧವಾಗುವುದೆಂತಲೂ, ಶಕುಂತಲೆಯ ವೃತ್ತಾಂತವಂ ತಿಳಿದುಬರುವೆನೆಂತಲೂ ಆ ಸರಸ್ಸಿನ ದೆಸೆಯಿಂ ಹಿಂದಿರುಗಿ ಬಂದೆನು. ಈಗ ರಾಜಋಷಿಯಾದ ದುಷ್ಯಂತರಾಯನ ವೃತ್ತಾಂತವನ್ನಾದರೂ ಚೆನ್ನಾಗಿ ತಿಳಿಯುವೆನು. ಮತ್ತು ಎನಗೆ ಪ್ರಾಣಪ್ರಿಯಳಾದ ಮೇನಕೆಯು ತನ್ನ ಮಗಳಾದ ಶಕುಂತಲೆಯ ವೃತ್ತಾಂತವಂ ತಿಳಿದು ಬರುವಂತೆ ಪೇಳಿರುವಳು." ಎಂದು ಯೋಚಿಸುತ್ತಾ, ಆ ಪ್ರಮದವನವಂ ಸುತ್ತಲೂ ನೋಡುತ್ತಾ, "ನಮ್ಮ ಶಕುಂತಲೆಯು ಈ ರಾಯನ ಪುರಿಗೆ ಬಂದಿರ್ದಲ್ಲಿ ಮಹಾ ಉತ್ಸವಕಾಲವಾಗಿರಬೇಕು. ಈ ರಾಯನ ಮಂದಿರವಾದರೋ, ಗೀತವಾದ್ಯಗಳಿಂ ವಿರಹಿತವಾಗಿರುವುದಕ್ಕೆ ಏನು ಕಾರಣವಿರುವುದೊ ತಿಳಿಯಲು ಜ್ಞಾನದೃಷ್ಟಿಯಿಂ ಸಮಸ್ತವೃತ್ತಾಂತವಂ ತಿಳಿಯುವೆನೆಂಬ ಅಹಂಕಾರವು ಎನಗಿರುವುದು. ಆದರೂ ಸಖಿಯಾದ ಮೇನಕೆಯು ತನ್ನ ಮಗಳ ಯೋಗಕ್ಷೇಮವಂ ತಿಳಿದುಬರುವುದೆಂದು ಪೇಳಿರುವ ಪ್ರಕಾರಕ್ಕೆ ನಡೆಯಬೇಕಾದ್ದರಿಂದ ಇಲ್ಲಿರುವ ವನಪಾಲಕಿಯರ ಪಾರ್ಶ್ವಗಳಲ್ಲಿ ತಿರಸ್ಕರಣೀವಿದ್ಯೆಯಿಂದ ಮರೆಯಾಗಿರುತ್ತ ಇಲ್ಲಿ ನಡೆಯುವ ಸಮಸ್ತ ವೃತ್ತಾಂತವಂ ತಿಳಿಯುವೆನು" ಎಂದು ಯೋಚಿಸಿ, ವಿಮಾನದಿಂದ ಇಳಿದು, ಯಾರಿಗೂ ಗೋಚರಳಾಗದಂತೆ ಇರುತ್ತಿರಲು;

ಅಷ್ಟರಲ್ಲೇ ಮಧುಕರಿಕೆಯೆಂಬ ವನಪಾಲಕಿಯು ಒಬ್ಬ ಸಖಿಯಿಂದೊಡಗೂಡಿ, ವಸಂತಋತುವಿನಿಂದ ಸುಂದರವಾದ ಪ್ರಮದವನವಂ ಪೊಕ್ಕು, "ರಾಯನು ಉದ್ಯಾನವನಕ್ಕೆ ವಸಂತೋತ್ಸವವಂ ವಿರಚಿಸುವುದಕ್ಕೋಸುಗ ಬರುವನು, ಪುಷ್ಪಫಲಗಳಿಂ ಮಾಧವೀಮಂಟಪ ಕ್ರೀಡಾಶಾಲೆ ಮೊದಲಾದ ರಮ್ಯಸ್ಥಾನಗಳಂ ಅಲಂಕ

ರಿಸಬೇಕು” ಎಂದು ನುಡಿಯುತ್ತ, ಮುಂಬರಿದು ಬಂದು, ಮುಂಬಾಗದೊಳ್ ಮೊಳಕೆದೋಱುವ ಸೀಮಾವಿನ ಕೆಂದಳಿರಂ ನೋಡಿ,—“ಈ ಮಾವಿನ ಚಿಗುರು ಕೋಗಿಲೆಗಳಿಗೆ ಸಂತೋಷಕಾರಿಯಾಗಿಯೂ, ವಸಂತಮಾಸಕ್ಕೆ ಪ್ರಾಣರೂಪವಾಗಿಯೂ, ಸುಗಂಧಭರಿತವಾಗಿಯೂ ಇರುವುದಱಿಂ ತುಂಬಿ ಬರುವ ತುಂಬಿಗಳ ಪಾರ್ಗಳಿಂ ಭಗ್ನವಾಗಿ ಷಡೃತುಗಳಿಗೂ ಮಂಗಳಸ್ವರೂಪವಾಗಿರುವುದೆಂದು ತಿಳಿಯುವೆನು” ಎಂದು ತನ್ನೊಳು ತಾನು ಮಾತನಾಡಿಕೊಳ್ಳುತ್ತಿರಲು;

ಸಂಗಡ ಬಂದಿರುವ ಮಧುಕರಿಕೆಯೆಂಬ ಸಖಿಯು—“ಎಲೆ ಪರಭೃತಿಕೆ, ಒಬ್ಬಳೇ ಏನೋ ಒಂದು ವಾಕ್ಯವಂ ನುಡಿಯುತ್ತಿರುವೆ” ಎನಲಾಪರಭೃತಿಕೆಯು—“ಎಲೆ ಮಧುಕರಿಕೆಯೇ, ಈ ಹೆಣ್ಣುಕೋಗಿಲೆಯು ಸೀಮಾವಿನ ಮೊಗರುಗಾಯನ್ನೋಡಿ ಹುಚ್ಚುಹಿಡಿದಂತೆ ಕುಣಿಯುತ್ತಿರುವುದು” ಎನಲಾಮಧುಕರಿಕೆಯು ಜಾಗ್ರತೆಯಿಂ ಸಖಿಯ ಸಮೀಪಕ್ಕೆ ಬಂದು—“ಎಲೆ ಸಖಿಯೆ, ವಸಂತಕಾಲವು ಪ್ರಾಪ್ತಮಾದುದೆ?” ಎಂದು ನುಡಿಯಲವಳು—“ಈಗ ವಸಂತಕಾಲವು ಬಂದಿರುವುದು. ನಿನ್ನ ವಿಲಾಸಗಾನಕ್ಕೆ ಸಮಯ ದೊರಕಿರುವುದು” ಎಂದು ನುಡಿಯಲಾ ಮಧುಕರಿಕೆಯು,—“ಎಲೆ ಸಖಿಯೇ, ಎನ್ನಂ ಬೀಳದಂತೆ ಪಿಡಿದುಕೊ, ನಾನು ಕಾಮದೇವನ ಪೂಜೆಗೋಸುಗ ತುದಿಗಾಲಿನಿಂ ನಿಂತು ಸೀಮಾವಿನ ಚಿಗುರಂ ಕೊಯ್ಯುವೆನು” ಎಂದು ನುಡಿಯಲು; ಪರಭೃತಿಕೆಯು—“ಎನಗೂ ಆ ಮನ್ಮಥ ಮಹಾದೇವನ ಪೂಜಾಫಲವಂ ಸಂಪಾದಿಸಲಿಚ್ಛೆ ಇರುವುದು” ಎಂದು ನುಡಿಯಲಾಮಧುಕರಿಕೆಯು,—“ಎನಗೆ ಹೇಗೆ ಮನ್ಮಥಪೂಜೆಯಲ್ಲಿ ಬುದ್ಧಿಪುಟ್ಟಿರುವುದೋ ನಿನಗೂ ಅದೇ ಮೇರೆಗೆ ಪುಟ್ಟಿರುವುದಾದ್ದಱಿಂ ನಮ್ಮಿಬ್ಬರಿಗೂ ಮನವೊಂದಾಗಿ ಶರೀರವೆರಡಾಗಿರುವುದು” ಎಂದು ನುಡಿದು, ಆ ಪರಭೃತಿಕೆಯ ಅವಲಂಬನವಂ ಗೆಯ್ದು ಸೀಮಾವಿನ ಚಿಗುರಂ ಕೊಯ್ಯುವುದಕ್ಕೆ ಕುಚಂಗಳು ಊರ್ಧ್ವಭಾಗವಂ ಸೇಱುವಂತೆ, ತ್ರಿವಳಿಗಳು ಮಱೆಯಾಗುವಂತೆ, ನೀಟವಾದ ದೇಹವು ನೋಟಕ್ಕಾಶ್ಚರ್ಯವನ್ನುಂಟುಮಾಡುವಂತೆ, ನಿತಂಬಗಳ ಭಾರಕ್ಕೆ ತೊಡೆಗಳಲ್ಲಿ ಕಿಱುನಡುಕವು ಪುಟ್ಟುವಂತೆ, ತುದಿಗಾಲಿನಿಂ ನಿಂತು—“ಎಲೆ ಪರಭೃತಿಕೆಯೇ ಈ ಚೂತಾಂಕುರವು ಇನ್ನೂ ಚೆನ್ನಾಗಿ ಬಲಿಯದಿದ್ದರೂ ವೃತಭೇದವಂ ಗೆಯ್ಯಲು ಅಧಿಕ ಪರಿಮಳವನ್ನುಂಟುಮಾಡುತ್ತಿರುವುದು” ಎಂದು ನುಡಿದು, ಕಪೋತಹಸ್ತವಂ ಗೆಯ್ದು, ಆ ಚಿಗುರಂ ಕರದಲ್ಲಿ ಪಿಡಿದು—“ಎಲೈ ಮಾವಿನಚಿಗುರೇ, ನಿನ್ನಂ ನಾನು ಧನುರ್ಧಾರಿಯಾದ ಮನ್ಮಥನಿಗೆ ಕೊಡುತ್ತಿರುವೆನು. ನೀನು ವಿರಹಿಜನರುಗಳ ಹೃದಯವೇ ಲಕ್ಷ್ಯವು

ಳ್ಳದಾಗಿ ಅರವಿಂದಾಶೋಕ ಮೊದಲಾದ ಐದು ಬಾಣಕ್ಕಿಂತಲೂ ಅಧಿಕವಾಗು!'' ಎಂದು ನುಡಿದು, ಆ ಮಾವಿನ ಚಿಗುರಂ ಕೊಯ್ದು ಭೂಮಿಗೆ ಇಡುತ್ತಿರಲು;

ಅಷ್ಟರಲ್ಲೇ, "ಬೇಡ ಬೇಡ''ವೆಂದು ವಸ್ತ್ರವಂ ಬೀಸುತ್ತಾ, ಅತಿ ಜಾಗ್ರತೆಯಿಂದ ವಾತಾಯನನೆಂಬ ಒಬ್ಬ ಕಂಚುಕಿಯು ಬಂದು, ಆ ಮಧುಕರಿಕೆಯಂ ಕುರಿತು, "ಎಲೆ ಜ್ಞಾನಶೂನ್ಯಳಾದ ಸ್ತ್ರೀಯೇ, ಮಹಾರಾಜನಾದ ದುಷ್ಯಂತರಾಯನು ವಸಂತೋತ್ಸವವು ಆಗದೆಂದು ನಿಷೇಧವಂ ಗೆಯ್ದಿರುವಲ್ಲಿ ನೀವಾವು ಮೊದಲಾದ ಚಿಗುರುಗಳಂ ಕೊಯ್ಯುವುದಕ್ಕೆ ನೀನಾರು?'' ಎಂದು ಕೋಪದಿಂ ಘರ್ಜಿಸಿ ನುಡಿಯಲು;

ಆ ವನಪಾಲಕಿಯರಿರ್ವರೂ ಭಯಭ್ರಾಂತರಾಗಿ, ಆ ಕಂಚುಕಿಯಂ ಕುರಿತು,–"ಎಲೈ ವಾತಾಯನನೇ, ನಮ್ಮ ಮೇಲೆ ಕೋಪವಂ ಗೆಯ್ಯದಿರು; ದುಷ್ಯಂತಮಹಾರಾಯನು ವಸಂತೋತ್ಸವವಂ ನಿಲ್ಲಿಸಿದ ಸಂಗತಿಯಂ ನಾವು ತಿಳಿದವರಲ್ಲ'' ಎನಲಾ ಕಂಚುಕಿಯು–"ಎಲೆ ಸ್ತ್ರೀಯರುಗಳಿರಾ! ಹಾಗಾದರೆ ಈ ಸಂಗತಿಯು ತಿಳಿಯದೆ, ಏನು? ಈ ವನವನ್ನು ಆಶ್ರಯಿಸಿರುವ ಲತಾವೃಕ್ಷಗಳು ಮೊದಲಾಗಿ ರಾಯನ ಆಜ್ಞೆಯಂ ಮೀರಲಾರದೆ ಇರುವುವು. ಹೇಗೆಂದರೆ:— ಈ ಮಾವಿನ ಮರಗಳಲ್ಲಿ ಮೊಗ್ಗುಗಳುಂಟಾಗಿ ಬಹುಕಾಲವಾದರೂ ರಾಜಾಜ್ಞೆಗೆ ಭಯಗೊಂಡು ತಮ್ಮ ಪರಾಗಗಳೊಡಗೂಡದೆ ಇನ್ನು ಹಾಗೆಯೆ ಇರುವುದೆಂತಲೂ, ಗೋರಂಟೆ ಮರಗಳಲ್ಲಿ ಉಂಟಾಗಿರುವ ಮೊಗರುಗಾಯಿಗಳು ಪಕ್ವಫಲವಾಗದೆ ಪುಟ್ಟಿದಂತೆಯೇ ಇರುವುವೆಂತಲೂ, ಶಿಶಿರಋತುವು ಪೋಗಿ ವಸಂತಕಾಲವು ಪ್ರಾಪ್ತವಾದರೂ ಗಂಡುಗೋಗಿಲೆಗಳ ಧ್ವನಿಯು ಕಂಠದಲ್ಲಿ ಲೀನವಾಗಿರುವುದೆಂತಲೂ, ಮನ್ಮಥನೂ ಕೂಡ ಬತ್ತಳಿಕೆಯಿಂದ ಅರ್ಧಬಾಣವಂ ಸೆಳೆದು ರಾಯನ ಆಜ್ಞೆಗೆ ಭಯಪಟ್ಟು ಅಲ್ಲೇ ಆ ಬಾಣವಂ ನಡೆಸುವನೆಂತಲೂ ಊಹಿಸುತ್ತಿರುವೆನು'' ಎಂದು ನುಡಿಯಲಾ ವಾಕ್ಯವಂ ಕೇಳಿ, ಮರೆಯಾಗಿರ್ದ ಸಾನುಮತಿಯೆಂಬ ಅಪ್ಸರಸ್ತ್ರೀಯು—"ಕಂಚುಕಿಯಾಡಿದ ವಾಕ್ಯವು ಯಥಾರ್ಥವೇ ಸರಿ. ರಾಜರ್ಷಿಯಾದ ದುಷ್ಯಂತರಾಯನು ಮಹಾಪ್ರಭಾವಶಾಲಿಯಾಗಿರುವನು'' ಎಂದು ನುಡಿಯುತ್ತಿರಲು; ಮಧುಕರಿಯು ಆ ಕಂಚುಕಿಯಂ ಕುರಿತು–"ಎಲೈ ವಾತಾಯನನೇ, ದೊರೆಯ ಭಾವಮೈದುನನಾದ ಮಿತ್ರಾವಸುವು ಕೆಲವು ದಿನದಿಂ ನಮ್ಮಿಬ್ಬರನ್ನು ಈ ಪ್ರಮದವನವನ್ನು ಸಲಹಿಕೊಂಡಿರುವುದೆಂದು ಕಳುಹಿಸಿ ಇರುವುದರಿಂ ರಾಯನ ಪಾದಸನ್ನಿಧಿಯಂ ಬಿಟ್ಟು ಇಲ್ಲಿಲ್ಲೇ ಸಂಚರಿಸುತ್ತಾ ಸಮಸ್ತವಾದ ಈ ವನದ

ಶೃಂಗಾರವಂ ಗೆಯ್ಯುವ ಕಾರ್ಯದಲ್ಲಿ ಸಿದ್ಧವಾಗಿರುವ ನಾವು ವಸಂತೋತ್ಸವವಂ ನಿಲ್ಲಿಸಿದ ಸಂಗತಿಯಂ ತಿಳಿದವರಲ್ಲ'' ಎಂದು ನುಡಿಯಲಾ ಕಂಚುಕಿಯು-“ ಎಲೌ ಸ್ತ್ರೀಯರುಗಳಿರಾ, ಇದುವರೆಗೂ ಈ ವೃತ್ತಾಂತವಂ ತಿಳಿಯದೆ ಕಾರ್ಯವಂ ನಡೆಸಿದಂತೆ ಮುಂದೆ ಪಲ್ಲವಪುಷ್ಪಗಳಂ ಕೊಯ್ಯುವ ಕಾರ್ಯವಂ ನಡೆಯಿಸದಿರಿ. '' ಎಂದು ನುಡಿಯಲವರಿರ್ವರು—“ ಎಲೈ ಕಂಚುಕಿಯೆ, ಏನು ಕಾರಣದಿಂದಾರಾಯನು ವಸಂತೋತ್ಸವವಂ ನಿಲ್ಲಿಸಿರುವನೋ ಆ ಕಾರಣವಂ ಪೇಳಬೇಕೆಂಬ ಕುತೂಹಲವುಂಟಾಗಿರುವುದು; ಪೇಳು. '' ಎಂದು ನುಡಿಯಲು;

ಇತ್ತಲು ಸಾನುಮತಿಯೆಂಬ ಅಪ್ಸರಸ್ತ್ರೀಯು—“ ಮನುಷ್ಯರಾದವರು ಉತ್ಸವಪ್ರಿಯರಾಗಿರುವರು, ಹೀಗಿರುವಲ್ಲಿ ದೊರೆಯಾದ ದುಷ್ಯಂತರಾಯನು ವರ್ಷಂಪ್ರತಿ ವರ್ಷದಲ್ಲಿಯೂ ತೀರ್ಥವಸಂತೋತ್ಸವವಂ ನಿಲ್ಲಿಸಬೇಕಾದಲ್ಲಿ ಮಹತ್ತಾದ ಕಾರಣವಿರಬೇಕು'' ಎಂದು ತನ್ನ ಮನದಲ್ಲಿ ಆಲೋಚನೆಯಂ ಗೆಯ್ಯುತ್ತಿರಲು;

ಇತ್ತಲು, ಕಂಚುಕಿಯು-“ಎಲೆ ಸ್ತ್ರೀಯರುಗಳಿರಾ, ಕೇಳಿ. ಶಕುಂತಲೆಯಂ ತಿರಸ್ಕಾರವಂ ಗೆಯ್ದುದರಿಂ ಬಹಳವಾಗಿ ಪುಟ್ಟಿರುವ ಲೋಕಾಪವಾದದ ವೃತ್ತಾಂತವು ನಿಮ್ಮ ಕರ್ಣಮಾರ್ಗಕ್ಕೆ ಗೋಚರವಾಗಲಿಲ್ಲವೇನು ? '' ಎಂದು ನುಡಿಯಲು ;

ವನಪಾಲಕಿಯರು-“ಎಲೈ ಪೂಜ್ಯನಾದ ಕಂಚುಕಿಯೇ, ಕೇಳು. ದೊರೆಯ ಭಾವಮೈದುನನಾದ ಪುತ್ರಾವಸುವಿನ ಮುಖವಚನದಿಂ ರಾಯನು ರತ್ನಮುದ್ರಿಕೆಯು ಸಂದರ್ಶನವಂ ಗೈದ ಸಂಗತಿಯುಂ ಮಾತ್ರ ಸ್ವಲ್ಪವಾಗಿ ತಿಳಿದಿರುವೆನು '' ಎನಲು ;

ಕಂಚುಕಿಯು—“ ಎಲೌ ಸ್ತ್ರೀಯರುಗಳಿರಾ, ನೀವು ತಿಳಿದಿದ್ದಮೇಲೆ ಸ್ವಲ್ಪವಾಗಿ ವಿವರಿಸುವೆನು, ಕೇಳಿ. ಗಾತ್ರಮಾಧಿಪತಿಯು ರತ್ನಮುದ್ರಿಕೆಯಂ ತೋರಿಸಲಾಕ್ಷಣದಲ್ಲಿ ಪೂಜ್ಯಳಾದ ಶಕುಂತಲೆಯಂ ಒಬ್ಬರೂ ತಿಳಿಯದಂತೆ ಗಾಂಧರ್ವವಿವಾಹದಿಂ ಧರ್ಮಪತ್ನಿಯನ್ನಾಗಿ ಮಾಡಿಕೊಂಡು ಈಗ ಅಜ್ಞಾನದಿಂದಿವಳಂ ತಿರಸ್ಕಾರವಂಗೆಯ್ದನೆಂನೂ, ಇವು ಮೊದಲಾದ ತಾನು ಮಾಡಿದ ಕಾರ್ಯಗಳಂ ಸ್ಮರಿಸಿಕೊಳ್ಳುತ್ತಾ ವಸಂತೋತ್ಸವ, ಚಂದ್ರಿಕಾವಿಹರಣ, ಉಪವನಾಲೋಕನ, ಗಂಧ ತಾಂಬೂಲ, ಶಯ್ಯೆ ಮೊದಲಾದ ರಮ್ಯಪದಾರ್ಥಂಗಳಲ್ಲಿ ದ್ವೇಷವಂ ಗೆಯ್ಯುತ್ತ, ಮೊದಲಿನಂತೆ ಸಾಮಾಜಿಕ ಸೇನಾಪತಿ ಮೊದಲಾದ ಪ್ರಜೆಗಳಂ ಪರಿವೃತನಾಗದೆ, ವಿಜನ

ವಾದ ಸ್ಥಳದಲ್ಲಿ ಏನೋ ಒಂದು ಕಾರ್ಯವಂ ಆಲೋಚನೆಯಂ ಗೆಯ್ಯುತ್ತಿರುವನು. ಮತ್ತು ಹಾಸಿಗೆಯಲ್ಲಿ ಸಂತಾಪದಿಂ ಹೊರಳುತ್ತ ನಿದ್ರೆಯಂಗೆಯ್ಯದೇನೆ ರಾತ್ರಿಗಳಂ ಕಳೆಯುತ್ತಿರುವನು ಮತ್ತು ಅತಿದಾಕ್ಷಿಣ್ಯದಿಂದಂತಃಪುರಸ್ತ್ರೀಯರುಗಳಿಗೆ ಪ್ರತ್ಯುತ್ತರವಂ ಯಾವಾಗ ಪೇಳುವುದಕ್ಕೆ ಯತ್ನಿಸುವನೋ ಆಗ ಆಸ್ತ್ರೀಯರಂ ಶಕುಂತಲೆ ಎಂದು ಕರೆದು, ಅಷ್ಟರಲ್ಲೀ ಎಚ್ಚತ್ತು ಲಜ್ಜೆಯಿಂದೊಡಗೊಂಡು ಅಕಾರ್ಯವಾದುದೆಂದಾಶ್ಚರ್ಯಯುಕ್ತನಾಗುವನು. ಇಂತು ಪಲಬಗೆಯಾದ ಶಕುಂತಲೆಯ ವಿರಹ ಚಿಂತನೆಗಳಿಂದಾಕ್ರಾಂತ ಚಿತ್ತವುಳ್ಳವನಾದ್ದರಿಂದೀವಸಂತೋತ್ಸವವಂ ನಿಲ್ಲಿಸುವಂತೆ ಆಜ್ಞೆಯನ್ನಿತ್ತನು'' ಎಂದು ಪೇಳಲು;

ಸಾನುಮತಿಯು ಈ ವಾಕ್ಯವಂ ಕೇಳಿ—"ನಮ್ಮ ಶಕುಂತಲೆಯಂ ಸ್ಮರಿಸಿಕೊಂಡು ವಿರಹವ್ಯಾಕುಲನಾದ್ದರಿಂದೆನಗೆ ಪ್ರೀತಿಯುಂಟಾದುದು '' ಎಂದು ತಿಳಿಯುತ್ತಿರಲು;

ವನಪಾಲಕಿಯರು—"ವಸಂತೋತ್ಸವವಂ ನಿಲ್ಲಿಸಿದ್ದು ಈಗ ಯುಕ್ತವಾದುದು '' ಎಂದು ನುಡಿಯುತ್ತಿರಲು;

ಅಷ್ಟರಲ್ಲೀ ದುಷ್ಯಂತರಾಯನು, ಶಕುಂತಲೆಯ ವಿರಹವಂ ಸೈರಿಸಲಾರದೆ, ಪ್ರಮದವನಕ್ಕೆ ಹೋಗಿ ಈಗ ಸಂತಾಪವಂ ಹೋಗುವಂತೆ ಮಾಡುವೆನು, ಎಂದು ಮನದಂದು, ವಿದೂಷಕನಂ ಸಂಗಡ ಬರುವಂತೆ ಆಜ್ಞೆಯನ್ನಿತ್ತು ಒಬ್ಬ ಸೇವಕನಿಂದೊಡಗೊಂಡು ಆ ಪ್ರಮದವನವಂ ಪ್ರವೇಶವಂ ಗೆಯ್ಯುತ್ತಿರಲು;

ಅಷ್ಟರಲ್ಲೀ ಆ ಕಂಚುಕಿಯು ರಾಯನು ಬರುವುದಂ ತಿಳಿದು—"ಎಲೈ ವನಪಾಲಕರುಗಳಿರಾ, ಸ್ವಾಮಿಯಾದವನು ಈ ವನಕ್ಕೆ ಬಿಜಯಂಗೆಯ್ಯುವನು. ನಿಮ್ಮ ಕಾರ್ಯಂಗಳಲ್ಲಿ ಜಾಗರೂಕರಾಗಿರಿ '' ಎಂದು ಅವರಿರ್ವರಂ ಕಳುಹಿಸಿಕೊಡಲು;

ವಿದೂಷಕನು—"ಇತ್ತಲು ಬಿಜಯಂಗೆಯ್ಯಬಹುದು '' ಎಂದು ಉಪಚಾರೋಕ್ತಿಗಳಂ ನುಡಿಯುತ್ತಿರಲು;

ಕಂಚುಕಿಯು ರಾಯನಂ ಕಂಡು,—"ಸುಂದರಾಕಾರವುಳ್ಳ ಜನರುಗಳು ಯಾವ ಅವಸ್ಥೆಗಳಲ್ಲಿಯೂ ರಮಣೀಯರಾಗಿರುವರು. ಹೇಗೆಂದರೆ:—ಈನಮ್ಮ ರಾಯನು ವಿರಹದಿಂ ವ್ಯಾಕುಲನಾಗಿ ಇದ್ದರೂ ನೇತ್ರಾನಂದಕರನಾಗಿ ಇರುವನು. ಮತ್ತು ಹಾರಕಂಕಣಗಳಿಂ ವಿರಹಿತನಾಗಿ ಎಡದ ಮುಂಗೆಯ್ಯಲ್ಲಿ ಧರಿಸಿರುವ ಒಂದು ಸುವರ್ಣದ ಬಳೆಯುಳ್ಳವನಾಗಿ, ಬಿಸಿಯಾಗಿ ಪೊರಮಡುವ ನಿಟ್ಟುಸಿರುಗಳಿಂ ಬೆಳ್ಪೇ

ರಿದ ತುಟಿಯುಳ್ಳವನಾಗಿ, ಶಕುಂತಲೆಯ ಚಿಂತೆಯಿಂದುಂಟಾದ ಜಾಗರಣೆಯಿಂದ ಅತ್ಯಂತ ಬಳಲಿಕೆಯಿಂ ಯುಕ್ತವಾದ ನೇತ್ರವುಳ್ಳವನಾಗಿದ್ದರೂ ಸಾಣೆಹಿಡಿದ ಮಹಾರತ್ನದಂತೆ ಅತ್ಯಂತ ಕ್ಷೀಣನಾಗಿದ್ದರೂ, ತನ್ನ ದೇಹದ ಒಂದಾನೊಂದು ಕಾಂತಿಯಿಂ ಮನೋಹರನಾಗಿ ಕಾಣುವನು '' ಎಂದು ಹೇಳುತ್ತಿರಲು;

ಇತ್ತಲು, ಸಾನುಮತಿಯು ದುಷ್ಯಂತರಾಯನಂ ನೋಡಿ–ನಮ್ಮ ಶಕುಂತಲೆಯು ಈ ರಾಯನ ತಿರಸ್ಕಾರದಿಂದ ಅವಮಾನಿತಳಾಗಿದ್ದರೂ ಇವನಿಗೋಸುಗ ಅವಳು ಅತ್ಯಂತ ತಾಪದಿಂ ಸಂಕಟಪಡುವಳೆಂದು ತನ್ನ ಮನದೊಳ್ ತಿಳಿದುಕೊಳ್ಳುತ್ತಿರಲು;

ರಾಯನು ಚಿಂತೆಯಿಂದ ಉಪವನಾಭಿಮುಖನಾಗಿ ನಸುದಿರುಗಿ, ತನ್ನ ಮನವಂ ಕುಱಿತು,–''ಕೆಟ್ಟಮನವೇ, ಮೊದಲು ಹುಲ್ಲೆಯಂತೆ ಚಂಚಲವಾದ ನೇತ್ರವುಳ್ಳ ಪ್ರಾಣಪ್ರಿಯಳಾದ ಶಕುಂತಲೆಯು ನಾನಾಪ್ರಕಾರವಾದ ಗುಱುತಿನ ಮಾತುಗಳಂ ಪೇಳಿ ಎಚ್ಚರವಂ ಗೆಯ್ದರೂ ಮಲಗಿರ್ದು ಈಗ ಆ ಕೋಮಲಾಂಗಿಯ ತಿರಸ್ಕಾರದಿಂದುಂಟಾದ ದುಃಖವನ್ನನುಭವಿಸುವುದಕ್ಕೆ ಜಾಗರೂಕನಾಗಿರುವೆ !'' ಎಂದು ನಿಂದಿಸುತ್ತಿರಲು;

ಸಾನುಮತಿಯು—''ಇಂತು ರಾಯನು ಶಕುಂತಲೆಯಂ ಸ್ಮರಿಸುತ್ತ ಸಂತಾಪವಂ ಪೊಂದುತ್ತಿರುವುದು ಅವಳ ಪುಣ್ಯವೇ ಸರಿ '' ಎಂದು ನುಡಿದುಕೊಳ್ಳುತ್ತಿರಲು;

ವಿದೂಷಕನು,–'' ರಾಯನು ಶಕುಂತಲೆಯ ವಿರಹವೆಂಬ ವ್ಯಾಧಿಯಂ ದಾಂಟಿದ್ದನು. ಮರಳಿ ಆ ವ್ಯಾಧಿಗೆ ತಗುಲಿಕೊಂಡನು. ಇದಕ್ಕೆ ಏನು ಚಿಕಿತ್ಸೆಯಂ ಮಾಡಬೇಕು? '' ಎಂದು ತನ್ನ ಮನದೊಳು ಆಲೋಚಿಸುತ್ತಿರಲು;

ಅಷ್ಟಱಲ್ಲಿ ಕಂಚುಕಿಯು ರಾಯನ ಮುಂಭಾಗದೊಳ್ ಬಂದು ನಿಂದು, ''ಎಲೈ ಮಹಾರಾಜನೇ ನೀನು ಜಯವಂತನಾಗು! ಈಗ ಪ್ರಮದವನದ ರಮ್ಯವಾದ ಪ್ರದೇಶಗಳಂ ನಿರೀಕ್ಷಣೆಯಂ ಗೆಯ್ದು ಕ್ರೀಡಾಶೈಲ ಮಾಧವೀಮಂಟಪ ಮುಂತಾದ ತಾಪಹರವಾದ ಸ್ಥಾನಂಗಳಲ್ಲಿ ವಾಸವಂ ಗೆಯ್ಯಬಹುದು '' ಎಂದು ಬಿನ್ನಯಿಸಲು ;

ರಾಯನು ತನ್ನ ಸಂಗಡ ಬಂದು ಕರದಲ್ಲಿ ಬೆತ್ತವಂ ಪಿಡಿದು ನಿಂದಿರುವ ಸ್ತ್ರೀಯಂ ಕುಱಿತು–'' ಎಲೆ ವೇತ್ರವತಿಯೇ, ನೀನು ಜಾಗ್ರತೆಯಿಂ ಆರ್ಯಪಿಶುನನೆಂಬ ಮಂತ್ರಿಯ ಸಮೀಪಕ್ಕೆ ಪೋಗಿ, ಈಗ ನಾವು ರಾತ್ರಿಯಲ್ಲಿ ಜಾಗರಣವಂ

ಗೆಯ್ದುದರಿಂ ಸಿಂಹಾಸನಾರೋಹಣವಂ ಗೆಯ್ಯುವುದಕ್ಕೆ ಬರುವುದಿಲ್ಲವಾಗಿರುವುದರಿಂದೀಗ ಏನಾದರೂ ಅವಶ್ಯಕವಾದ ರಾಜಕಾರ್ಯವಿದ್ದಲ್ಲಿ ಅದಂ ಪತ್ರಿಕೆಯಲ್ಲಿ ಬರೆಯಿಸಿಕೊಂಡು ಬರುವಂತೆ ಎನ್ನ ಆಜ್ಞೆಯಾಗಿರುವುದೆಂದು ಪೇಳುವುದು" ಎನಲಾ ವೇತ್ರವತಿಯು, "ಅಪ್ಪಣೆಯಾದಂತೆ ನಡೆದುಕೊಳ್ಳುವೆನು" ಎಂದು ಪೋದ ಮೇಲೆ, ವಾತಾಯನನೆಂಬ ಕಂಚುಕಿಯಂ ಕರೆದು,—ಇದೇ ಕಾರ್ಯವಂ ನೀನೂ ಮಾಡೆಂದು ಕಳುಹಿಸಲು;

ವಿದೂಷಕನು—"ಎಲೈ ಸ್ವಾಮಿಯೇ, ಈಗ ಒಂದು ನೊಣವೂ ಇಲ್ಲದಂತೆ ಎಲ್ಲರಂ ಕಳುಹಿಸಿ, ಶೀತಳವಾಗಿ ತಾಪಪರಿಹಾರವಾಗಿ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತಿರುವ ಈ ಪ್ರಮದವನ ಪ್ರದೇಶದಲ್ಲಿ ಸುಖವಾಗಿ ನಿನ್ನ ದೇಹವಂ ಸಂತೋಷಗೊಳಿಸಬಹುದು" ಎಂದು ನುಡಿಯಲು;

ರಾಯನು ನಿಟ್ಟುಸಿರಂ ಬಿಡುತ್ತಾ ವಿದೂಷಕನಂ ಕುರಿತು—"ಎಲೈ ಮಿತ್ರನೇ, ಲೋಕದಲ್ಲಿ ವಿಪತ್ತುಗಳು ರಂಧ್ರವನ್ನೇ ಕಾದುಕೊಂಡು ಇರುವುವೆಂದು ಜನರು ಪೇಳುವ ವಾಕ್ಯಗಳು ಯಥಾರ್ಥವಾಗಿ ತೋರುವುವು. ಹೇಗೆಂದರೆ:—ಕಣ್ವಮುನಿಯ ಪುತ್ರಿಯಾದ ಶಕುಂತಳೆಯ ಸ್ಮರಣೆಗೆ ಕಡೆಯಾಗಿರ್ದ ಎನ್ನ ಅಜ್ಞಾನವು ಈಗತಾನೇ ತೊಲಗಿರುವುದು. ಅಷ್ಟರಲ್ಲೇ ಸಮಸ್ತ ಜನವಂ ಬಾಧಿಸುತ್ತಿರುವ ಮನ್ಮಥನು ಎನ್ನಂ ವ್ಯಥೆಯಂ ಪೊಂದಿಸುವುದಕ್ಕೋಸುಗ ತನ್ನ ಧನುಸ್ಸಿನಲ್ಲಿ ತನ ಕಂಪೇರಿದ ಮಾವಿನ ಚಿಗುರಿನ ಸರಳನ್ನೇರಿಸುತ್ತಿರುವನು. ಈ ದುಷ್ಟಮನ್ಮಥನ ಬಾಧೆಯಂ ಸೈರಿಸಲಾರೆನು" ಎಂದು ಪೇಳಲು;

ವಿದೂಷಕನು—"ಎಲೈ ರಾಯನೇ, ನೀನು ಸ್ವಸ್ಥನಾಗಿರು. ಈ ದುಷ್ಟನಾದ ಮನ್ಮಥನಂ ಈ ದಂಡದಿಂ ದಂಡಿಸುವೆನು" ಎಂದು ತಾನು ಪಿಡಿದಿರ್ದ ಊರ್ಗೋಲನ್ನೆತ್ತುತ್ತಿರಲು;

ರಾಯನು ವಿದೂಷಕನ ವಾಕ್ಯಕ್ಕೆ ನಸುನಗುತ—"ಎಲೈ ವಿದೂಷಕನೇ, ನಿನ್ನ ಬ್ರಹ್ಮತೇಜಸ್ಸಂ ನೋಡಿದೆನು. ನೀನು ಮಾಡುವ ಸಾಹಸವಂತಿರಲಿ. ಈಗ ಎನ್ನ ಪ್ರಾಣಪ್ರಿಯಳಾದ ಶಕುಂತಳೆಗೆ ಸ್ವಲ್ಪವಾಗಿಯಾದರೂ ಸದೃಶವಾಗಿರುವ ಒಳ್ಳಿಗಳಂ ನೋಡುತ್ತಾ ಯಾವಸ್ಥಳದಲ್ಲಿ ಕುಳಿತುಕೊಳ್ಳುವೆನೆಂದಂ ಪೇಳು" ಎನಲು;

ವಿದೂಷಕನು—"ಎಲೈ ಸ್ವಾಮೀ, ಈ ಪ್ರಮದವನಕ್ಕೆ ಪ್ರವೇಶವಂ ಗೆಯ್ಯುವಾಗ್ಗೆ ಸಮೀಪಸೇವಕಳಾದ ಚತುರಿಕೆಗೆ,—ಈ ವನದ ಮಾಧವೀಮಂಟಪದಲ್ಲಿ ಕೆಲವು ಕಾಲವಿರುವೆನು, ಅಲ್ಲಿಗೆ ನಾನು ಸ್ವಹಸ್ತದಿಂ ಬರೆದಿರುವ ಪೂಜ್ಯಳಾದ

ಶಕುಂತಲೆಯ ಭಾವಚಿತ್ರದ ಪಟವಂ ತರುವುದು' ಎಂದು ಆಜ್ಞೆಯನಿತ್ತು ಬಂದಿರುವೆಯಷ್ಟೆ. ಈಗ ಆ ಮಾಧವೀಮಂಟಪಕ್ಕೆ ಬಿಜಯಂಗೆಯ್ಯಬಹುದು'' ಎಂದು ಬಿನ್ನಯಿಸಿ, ಮುಂದುಗಡೆಯಲ್ಲಿ ಮಾರ್ಗವಂ ತೋಱಿಸುತ್ತ ಬರಲು;

ಸಾನುಮತಿಯು ಅದೃಶ್ಯಳಾಗಿ ರಾಯನನ್ನು ಅನುಸರಿಸಿ ಬರುತ್ತಿರಲು;

ವಿದೂಷಕನು—''ಎಲೈ ಮಹಾರಾಜನೆ, ಈಯದ್ದಿದ ರತ್ನಶಿಲೆಗಳಿಂದೊಪ್ಪುತ, ಪುಷ್ಪವಾಸನೆಗೆ ನೆರೆದೆಱಗುವ ಮಱಿದುಂಬಿಗಳ ಗಾನಸ್ವರದಿಂ ಬಾಗಿರುವ ಪೂಗೊಂಚಲುಗಳಲ್ಲಿ ಕುಳಿತು ತೂಗಾಡುವ ಶುಕ ಪಿಕ ಮೊದಲಾದ ಪಕ್ಷಿಗಳ ಕಲಕಲಧ್ವನಿಗಳಿಂ ಭರಿತವಾಗಿ ಶೀತೋಪಚಾರಕ್ಕೆ ರಮಣೀಯವಾಗಿರುವ ಈ ಮಾಧವೀಮಂಟಪವಂ ಪ್ರವೇಶವಂ ಗೆಯ್ದು ಸಂತೋಷದಿಂ ಕುಳಿತುಕೊಂಡಿರಬಹುದು'' ಎಂದು ರಾಯನನೊಡಗೊಂಡು ಆ ಮಂಟಪದಲ್ಲಿ ಕುಳಿತುಕೊಳ್ಳಲು;

ಸಾನುಮತಿಯು ಬಳ್ಳಿಗಳ ಮಱಿಗೊಂಡು,—'ಎನ್ನ ಸ್ನೇಹಿತಳ ಪುತ್ರಿಯಾದ ಶಕುಂತಳೆಯುಂ ಬರೆದಿರುವ ಭಾವಚಿತ್ರಪಟವಂ ನೋಡಿ, ಅವಳಲ್ಲಿರುವ ಜನಾಧಿಪನಾದ ಈ ದುಷ್ಯಂತರಾಯನ ಅಭಿಮತವಾದ ಅನುರಾಗದ ಪರಿಯನ್ನಱಿದು ಪೋಗಿ, ಆ ಮೇನಕೆಗೆ ವಿವರಿಸುವೆನು'' ಎಂದು ಸವಿಾಪವಂ ಸಾರಿ, ಮಱಿಯಾಗಿ ನೋಡುತ್ತಿರಲು;

ರಾಯನು—'ಎಲೈ ಸ್ನೇಹಿತನೇ, ಈಗ ಆ ಶಕುಂತಲೆಯೊಡನೆ ಕಣ್ವಾಶ್ರಮದಲ್ಲಿ ಮೊದಲು ಮಾಡಿದ ಶೃಂಗಾರಚೇಷ್ಟೆಯ ವೃತ್ತಾಂತವಂ ಸ್ಮರಿಸಿಕೊಳ್ಳುವೆನು. ನಿನ್ನ ಸಂಗಡ ಅವಳ ಸಂಗತಿಯುಂ ಪೇಳಿರ್ದೆನು. ಆದರೂ ಆ ಶಕುಂತಲೆಯುಂ ಸಭಾಮಧ್ಯದಲ್ಲಿ ತಿರಸ್ಕಾರವಂ ಗೆಯ್ಯುವಕಾಲದಲ್ಲಿ ನೀನು ಎನ್ನ ಸವಿಾಪದಲ್ಲಾದರೂ ಇದ್ದುಕೊಂಡು ಎನಗೆ ಸಂಶಯ ಬಂದ ವೇಳೆಯಲ್ಲಿ ಜ್ಞಾಪ್ತಿಯನ್ನೀಯದೆ ನಾನು ಮಱಿತಂತೆ ನೀನೂ ಮಱಿತು ಪೋದೆ'' ಎಂದು ನುಡಿಯಲು;

ವಿದೂಷಕನು—''ಅಯ್ಯಾ ರಾಯನೇ, ನಾನು ಮಱಿಯಲಿಲ್ಲ. ನಾನು ಪ್ರತಿಷ್ಠಾನಪಟ್ಟಣಕ್ಕೆ ಪೊಱಮಟ್ಟು ಬರುವಾಗ್ಗೆ ನೀನು ಎನ್ನೊಡನೆ ಶಕುಂತಲೆಯ ವೃತ್ತಾಂತವೆಲ್ಲವಂ ಪೇಳಿ,—ಎಲೈ ಮಿತ್ರನೇ, ಈಗ ನಾನು ವಿನೋದಕ್ಕೋಸುಗವಾಗಿ ಈ ವಾರ್ತೆಯುಂ ಪೇಳಿರುವೆನು, ಇದಂ ಯಥಾರ್ಥವನ್ನಾಗಿ ತಿಳಿಯದಿರು ಎಂದು ಕಣ್ವಾಶ್ರಮದಲ್ಲಿ ಪೇಳಿದೆಯಷ್ಟೆ. ಮೃತ್ಪಿಂಡದಂತೆ ಮಂದಮತಿಯಾದ ನಾನು ನೀನು ಪೇಳಿದ ಶಕುಂತಲೆಯ ವಾರ್ತೆಯೆಲ್ಲವಂ ವಿನೋದಕ್ಕೆ ನುಡಿದೆಯೆಂದೇ ತಿಳಿದೆನು. ಆದರೂ ಮುಂದಾಗತಕ್ಕ ಕಾರ್ಯವು ಬಲವತ್ತರವಾಗಿರುವುದು.

ರಾಯನು ಒಂದು ಗಳಿಗೆ ಏನೋ ಒಂದು ಪದಾರ್ಥವಂ ಧ್ಯಾನಿಸಿ ವಿದೂಷಕನಂ ಕುಱಿತು—“ಎಲೈ ಮಿತ್ರನೇ, ಎನ್ನಂ ಸಂರಕ್ಷಿಸು” ಎಂದು ಅತ್ಯಂತ ಸಂತಾಪಯುಕ್ತನಾಗಲು ;

ವಿದೂಷಕನು—“ಎಲೈ ಸ್ವಾಮಿಯೇ, ಇದೇನು ! ಈಪ್ರಕಾರವಾಗಿ ಕಾತರ ಪಡುವುದು ನಿನಗೆ ಯುಕ್ತವಲ್ಲ. ಸತ್ಪುರುಷರಾದವರು ಯಾವಾಗಲೂ ಶೋಕದಿಂ ಯುಕ್ತನಾದ ಮನಪುಳ್ಳವರಾಗಲಾಱರು ಎಷ್ಟು ಗಾಳಿ ಬೀಸಿದರೂ ಬೆಟ್ಟಗಳು ಚಲಿಸುವುವೆ ? ಪೇಳು. ಎಷ್ಟು ದುಃಖವಿದ್ದಾಗ್ಯೂ ಧೈರ್ಯವನ್ನವಲಂಬಿಸಬೇಕು” ಎಂದು ಸಮಾಧಾನೋಕ್ತಿಗಳಂ ಪೇಳುತ್ತಿರಲು ;

ರಾಯನು—“ನಿಷ್ಕಾರಣವಾಗಿ ಎನ್ನ ಪತ್ನಿಯಲ್ಲವೆಂದು ನುಡಿದಿದ್ದಱಿಂ ಸಂತಾಪಯುಕ್ತಳಾದ ಶಕುಂತಲೆಯುಂ ಸ್ಮರಿಸಿಕೊಂಡು ಅನಾಥನಂತೆ ದುಃಖಪಾತ್ರನಾಗುವೆನು. ಅದರೂ ಅವಳು ಮಾಡಿದ ಚೇಷ್ಟೆಯುಂ ಪೇಳುವೆನು, ಕೇಳು. ನಾನು ನಿಷ್ಠುರವಾಕ್ಯಗಳಿಂ ಶಕುಂತಲೆಯುಂ ತಿರಸ್ಕಾರವಂ ಗೆಯ್ಯಲು, ಆ ಶಕುಂತಲೆಯು ಅತ್ಯಂತ ದುಃಖಾಕ್ರಾಂತೆಯಾಗಿ ತಪೋವನವಂ ಕುಱಿತು ಪೋಗುತಿರ್ದ ಶಾರ್ಙ್ಗರವ ಮೊದಲಾದ ತನ್ನ ಸ್ವಜನವನ್ನು ಅನುಸರಿಸಿ ಪೋಗಲಿಚ್ಛೈಸಲಾ ಕಣ್ವಶಿಷ್ಯನಾಗಿ, ಗುರುವಿಗೆ ಸಮಾನನಾಗಿರುವ ಶಾರ್ಙ್ಗರವನು ಅವಳಂ ಕುಱಿತು—“ಎಲೌ ಶಕುಂತಳೆಯೇ, ಎಮ್ಮೊಡನೆ ಬರುವುದಕ್ಕೆ ನಿನಗೆ ಅಧಿಕಾರವೆಲ್ಲಿಯದು ? ನಿಲ್ಲು” ಎಂದು ಗರ್ಜಿಸಿ ನುಡಿಯಲಾಗ ದೀನಳಾಗಿ ಪೋಗದೆ ನಿಂತು, ಮಾಡಿದ ಕಾರ್ಯವಂ ಮಱೆತುದಱಿಂ ಕ್ರೂರನಾದ ಎನ್ನಲ್ಲಿ ಹೇರಳ ದುಃಖದಿಂದುಂಟಾದ ಕಂಬನಿಗಳಿಂ ಕಲುಷವಾದ ತನ್ನ ದೃಷ್ಟಿಯನ್ನಿರಿಸಿದಳೆಂಬುವುದಾವುದುಂಟೋ ಅದರಿಯು ಎನ್ನಂ ವಿಷದಿಂ ಯುಕ್ತವಾದ ಸರಳಿನಂತೆ ಸುಡುತ್ತಿರುವುದು” ಎಂದು ನುಡಿಯಲು ;

ಸಾನುಮತಿಯು—“ಈ ದುಷ್ಯಂತರಾಯನು ಶಕುಂತಲೆಯು ತಾನಾಗಿ ಬಂದ ಕಾಲದಲ್ಲಿ ತಿರಸ್ಕಾರವಂ ಗೆಯ್ದು ಈಗ ತನಗೆ ಬೇಕಾದಾಗ ಈರೀತಿಯಿಂದ ಸಂತಾಪವಂ ಪೊಂದುತ್ತಿರುವನು. ಅದರೂ ಈ ರಾಯನು ಯಾವವಿಧದಲ್ಲಾದರೂ ನಮ್ಮ ಶಕುಂತಲೆಯುಂ ಸ್ಮರಿಸುವನಲ್ಲ ಎಂದು ಎನಗೆ ಸಂತೋಷ ಪುಟ್ಟುತ್ತಿರುವುದು” ಎಂದು ನುಡಿದುಕೊಳ್ಳುತ್ತಿರಲು,

ವಿದೂಷಕನು—“ಎಲೈ ಸ್ವಾಮಿಯೇ, ಶಕುಂತಲಾದೇವಿಯುಂ ಯಾವನೋ ಒಬ್ಬ ಗಗನದಲ್ಲಿ ಸಂಚರಿಸುವನು ತೆಗೆದುಕೊಂಡು ಪೋಗಿರಬಹುದೆಂದು ಊಹಿಸುತ್ತಿರುವೆನು” ಎನ್ನಲು ;

ರಾಯನು—“ ಎಲೈ ಮಿತ್ರನೇ, ಪತಿಯೇ ದೇವರಾಗಿರುವ ಆ ಶಕುಂತಲೆಯಂ ಯಾವ ಪುರುಷನೂ ಮುಟ್ಟುವುದಕ್ಕೆ ಯೋಗ್ಯನಾಗಲಾರನು. ಆದರೂ ನಿನಗೆ ದೇವಿಯಾದ ಆ ಶಕುಂತಲೆಯ ಉತ್ಪತ್ತಿಗೆ ಕಾರಣಳಾದ ಮೇನಕೆಯ ಸಖಿಯರಲ್ಲಿ ಯಾವಳೋ ಒಬ್ಬಳು ತೆಗೆದುಕೊಂಡು ಪೋಗಿರುವಳೆಂಬ ಶಂಕೆಯು ಎನ್ನ ಮನಕುಂಟಾಗುವುದು ” ಎನಲು ;

ಆವಾಕ್ಯಕ್ಕೆ ಸಾನುಮತಿಯು—“ ಎನ್ನ ಮಿತ್ರಳಾದ ಸಾರಸಿಕೆಯು ಶಕ್ರತೀರ್ಥಸಮೀಪದಲ್ಲಿರ್ದ ರಾಯನಿಗೆ ತಿಳಿಯದಂತೆ ಆ ಶಕುಂತಲೆಯಂ ವಿಮಾನದಲ್ಲಿಟ್ಟು ತೆಗೆದುಕೊಂಡು ಪೋಗಿರುವಳು. ಆದರೂ ಈ ದುಷ್ಯಂತರಾಯನು ವಿರಹದಿಂ ಜ್ಞಾನಶೂನ್ಯನಾಗಿ ಪೇಳುವ ವಾಕ್ಯವು ಯಥಾರ್ಥವಾಗಿ ತೋರುತ್ತಿರುವುದು” ಎನ್ನುತ್ತಿರಲು ;

ವಿದೂಷಕನು—“ ಎಲೈ ಸ್ವಾಮಿಯೇ, ನೀನು ಅಪ್ಪಣೆಯನ್ನಿತ್ತಂತೆ ಆ ಮೇನಕೆಯ ಸಖಿಯು ತೆಗೆದುಕೊಂಡು ಪೋಗಿರುವುದು ನಿಜವಾದಲ್ಲಿ ಆ ಶಕುಂತಲೆಯ ಸಮಾಗಮವು ನಿನಗೆ ಜಾಗ್ರತೆಯಿಂದುಂಟಾಗುವುದು ” ಎನಲು ;

ರಾಯನು ಅತಿಸಂತುಷ್ಟನಾಗಿ— “ ಎಲೈ ವಿದೂಷಕನೇ, ಅವಳ ಸಂಘಟನೆಯು ಹೇಗೆ ಉಂಟಾಗುವುದು ?” ಎನಲು;

ವಿದೂಷಕನು—“ ಎಲೈ ಸ್ವಾಮಿಯೇ, ತಂದೆತಾಯಿಗಳು ಪತಿಯನ್ನಗಲಿ ಅತಿಶಯವಾದ ದುಃಖವಂ ಪೊಂದುತ್ತಿರುವ ಮಗಳಾದ ಶಕುಂತಲೆಯಂ ನೋಡಿಕೊಂಡು ಇರಲಾರದೆ ನಿನ್ನೊಡನೆ ಕೂಡಿಸುವ ಉಪಾಯವಂ ಮಾಡುವರಾದ್ದರಿಂದ ಜಾಗ್ರತೆಯಿಂ ಸಮಾಗಮವು ದೊರಕುವುದೆಂದು ನುಡಿದೆನು ” ಎನ್ನಲು ;

ರಾಯನು ನಿಡಿದಾಗಿ ನಿಟ್ಟುಸಿರಂ ಬಿಟ್ಟು, “ ಎಲೈ ಮಿತ್ರನಾದ ಮಾಂಡವ್ಯನೇ. ನಾನು ಶಕುಂತಲೆಯಂ ನೋಡಿದೆನೆಂಬುವುದು ಸ್ವಪ್ನದಲ್ಲಿ ಕಂಡು ಈಗ ಸ್ಮರಿಸಿಕೊಳ್ಳುವ ಬಗೆಯೋ, ಅಲ್ಲದಿರೆ ಯಾವನಾದರೂ ಇಂದ್ರಜಾಲವಂ ಗೆಯ್ದು ಮನೋಹರಳಾದ ಒಬ್ಬ ಸ್ತ್ರೀಯಂ ತೋರಿಸಿ ಮರೆಸಿಬಿಟ್ಟಿರುವನೋ, ಅಂತು ಮಲ್ಲದಿರೆ ಒಬ್ಬಾಳೊಬ್ಬ ಸ್ತ್ರೀಯಂ ಕನ್ನಡಿಯಲ್ಲಿ ಪ್ರತಿಬಿಂಬಿಸಿ ಇರುವಳನ್ನಾಗಿ ಕಂಡು ಭ್ರಾಂತಿಯಂ ಪೊಂದಿರುವೆನೋ, ಹಾಗಲ್ಲದಿರೆ ಪೂರ್ವಜನ್ಮದ ಪುಣ್ಯವು ಪರಿಸಮಾಪ್ತಿಯಾದ ಪರಿಯೋ ಮತ್ತು ಆ ಮನೋಹರಾಂಗಿಯಾದವಳ ರೂಪುಲಾವಣ್ಯಗಳಂ ನೋಡುವುದಕ್ಕಿಲ್ಲದಂತೆ ಅತಿಕ್ರಮಿಸಿ ಪೋದುವು. ಈ ನಾನಾಪ್ರಕಾರವಾದ ಅಭಿಲಾಷೆಗಳೆಂಬ ನದಿಗಳು ತೀರಗಳಿಲ್ಲದೆ ದಿಕ್ಕುದಿಕ್ಕುಗಳಂ ಸಾರುತ್ತಿರುವಲ್ಲದೆ

ಇನ್ನು ಮೇಲೆ ಎನಗೆ ಆ ಶಕುಂತಲೆಯ ಸಂದರ್ಶನವಾಗುವುದು ಅತಿ ದುರ್ಲಭವು" ಎಂದು ನುಡಿಯಲು ;

ವಿದೂಷಕನು—"ಎಲೈ ಸ್ವಾಮಿಯೇ, ಹಾಗೆ ಹೇಳಲಾಗದು. ಬರತಕ್ಕ ಪ್ರಯೋಜನಗಳು ಅವುಗಳ ಯೋಚನೆ ಇಲ್ಲದಿರ್ದರೂ ದೈವವಶದಿಂ ಒಂದೇ ಬರುವುವಲ್ಲದೆ ನಿಲ್ಲಲಾರವೆಂಬುವುದಕ್ಕೆ ನಿನ್ನ ರತ್ನಮುದ್ರಿಕೆಯೇ ನಿದರ್ಶನವಾಗಿರುವುದಾದ್ದರಿಂದ ಅಗತ್ಯವಾಗಿ ಶಕುಂತಲೆಯ ಸಮಾಗಮವು ನಿನಗುಂಟಾಗುವುದು" ಎಂದು ನುಡಿಯಲು ;

ರಾಯನು ತನ್ನ ರತ್ನಮುದ್ರಿಕೆಯಂ ನೋಡಿ,—"ಎಲೈ ಮಿತ್ರನಾದ ವಿದೂಷಕನೇ, ಯಾರಿಗೂ ದುರ್ಲಭವಾದ ರಮಣೀಯವಾಗಿರುವ ಆ ಶಕುಂತಲೆಯ ಬೆರಳಿನಿಂ ಜಾರಿಬಿದ್ದ ಈ ಉಂಗುರವು ಮಹತ್ತಾದ ದುಃಖಕ್ಕೆ ಯೋಗ್ಯವಾದುದು"ಎಂದು ನುಡಿದು ಉನ್ಮಾದಹೆಚ್ಚಿ ಆ ಉಂಗರವಂ ಕುರಿತು—"ಎಲೈ ಉಂಗರವೇ ಯಾವ ಕಾರಣದಿಂದ ಕೆಂಪಾದ ನಖಕಾಂತಿಗಳಿಂ ಸುಂದರವಾದ ಆ ಶಕುಂತಲೆಯ ಬೆರಳುಗಳಲ್ಲಿ ವಾಸವಂ ಗೆಯ್ದಿದ್ದು ಜಾರಿಬಿದ್ದಿರುವೆಯೋ ಆ ಕಾರಣದಿಂ ನಿನ್ನ ಪುಣ್ಯವು ಎನ್ನ ಪುಣ್ಯದಂತೆ ಸ್ವಲ್ಪವಾದುದೆಂಬಪಾಗಿ ನೀನು ಮಾಡಿದ ಕಾರ್ಯದಿಂದಲೇ ಊಹೆದೋರುತ್ತಲಿದೆ" ಎಂದು ನುಡಿಯಲು ;

ಸಾನುಮತಿಯು ಆ ವಾಕ್ಯವಂ ಕೇಳಿ "ಈ ಮುದ್ರಿಕೆಯು ಇನ್ನಾರ ಹಸ್ತಕ್ಕಾದರೂ ದೊರತಿರ್ದಲ್ಲಿ ದುಃಖಪಡುವುದು ಯುಕ್ತವಲ್ಲದೆ ತನ್ನ ಕೈಯೊಳಿರುವಲ್ಲಿ ಅದಂ ನೋಡಿ ರಾಯನು ವ್ಯರ್ಥವಾಗಿ ವ್ಯಸನವಂ ಪೊಂದುತ್ತಿರುವನು" ಎಂದು ಯೋಚಿಸುತ್ತಿರಲು ;

ವಿದೂಷಕನು—"ಅಯ್ಯಾ ಮಹಾರಾಯನೇ, ಪೂಜ್ಯಳಾದ ಶಕುಂತಲಾದೇವಿಯ ಹಸ್ತಕ್ಕೆ ಈ ರತ್ನಮುದ್ರಿಕೆಯು ಯಾವ ಉಪಾಯದಿಂದ ಕೊಡಲ್ಪಟ್ಟಿತೋ ತಿಳಿಯದು" ಎನಲು ;

ಸಾನುಮತಿಯು—"ಇದೇ ವಾರ್ತೆಯಂ ಕೇಳಬೇಕೆಂದು ಎನಗೂ ಬಹಳವಾಗಿ ಕುತೂಹಲವುಂಟಾಗಿರ್ದಂತೆ ಈ ವಿದೂಷಕನು ರಾಯನಂ ಪ್ರಶ್ನೆಯಂ ಗೆಯ್ದಿರುವನು" ಎಂದು ತನ್ನ ಮನದಲ್ಲಿ ಯೋಚಿಸುತ್ತಿರಲು ;

ರಾಯನು—"ಎಲೈ ವಿದೂಷಕನೇ, ಅದರ ಸಂಗತಿಯಂ ಸಂಗತವಾಗಿ ಪೇಳುವೆನು, ಕೇಳು. ನಾನು ಆ ಕಣ್ವಾಶ್ರಮದಿಂ ಪೊರಮಟ್ಟು ನಗರವಂ ಕುರಿತು ಬರಲುದ್ಯೋಗಿಸಲಾ ಶಕುಂತಲೆಯು ಕಣ್ಣೀರಂ ಬಿಡುತ್ತಾ—"ಎಲೈ ಪ್ರಾಣಕಾಂ

ಕನಾದ ಸ್ವಾಮಿಯೋ, ನೀನು ಪುರಕ್ಕೆ ಪೋದಮೇಲೆ ಮರಳಿ ಎನ್ನ ಸ್ಮರಣೆ ಬಂದು ಯಾವಾಗ ನಿಮ್ಮ ಸನ್ನಿಧಿಗೆ ಎನ್ನಂ ಕರೆಸಿಕೊಳ್ಳುವಿರಿ? " ಎಂದು ನುಡಿಯಲಾಗ, ನಾನು ಎನ್ನ ನಾಮಾಕ್ಷರಗಳಿಂದಂಚಿತವಾದ ಎನ್ನ ಮುದ್ರಿಕೆಯನ್ನವಳ ಕೋಮಲ ವಾದ ಬೆರಳಿನಲ್ಲಿ ಕೂಡಿಸಿ," ಎಲೌ ಪ್ರಾಣಪ್ರಿಯಳೇ, ಈ ಉಂಗರದಲ್ಲಿ ಬರೆದಿರುವ ಎನ್ನ ನಾಮಾಕ್ಷರಗಳಂ ದಿನವೊಂದಕ್ಕೆ ಒಂದಕ್ಷರಪ್ರಕಾರದಲ್ಲಿ ಎಣಿಕೆಗೆಯ್ಯುತ್ತಿರು. ಯಾವದಿವಸ ಅಕ್ಷರಂಗಳು ಸಮಾಪ್ತಿಯಂ ಪೊಂದುತ್ತಿರುವುವೋ ಆದಿವಸ ನಿನ್ನಂ ಎನ್ನ ಅಂತಃಪುರಪ್ರವೇಶವಂ ಗೆಯ್ಯುವುದಕ್ಕೆ ಸೇವಕಜನರು ಈ ಆಶ್ರಮಕ್ಕೆ ಬರುವರು" ಎಂದು ಅವಳಿಗೆ ನಂಬುಗೆಯನ್ನಿತ್ತು ಬಂದೆನು. ಆಬಳಿಕ ಕ್ರೂರನಾದ ನಾನು ಅಜ್ಞಾನದಿಂದವಳಂ ಕರೆಯಿಸುವುದಂ ಮರೆತೆನು " ಎಂದು ಕಂಬನಿದುಂಬಿ ಕಾಂತಿಹೀನನಾಗುತ್ತಿರಲು ;

ಸಾನುಮತಿಯು— " ಈ ದುಷ್ಯಂತರಾಯನು ಈ ಶಕುಂತಲೆಯಂ ಕರೆಯಿಸುವ ನಿಬಂಧನೆಯಂ ಗೆಯ್ದುದು ರಮಣೀಯವಾಗಿರುವುದು. ಆದರೂ ದೈವನೇ ಈ ರಾಯಂಗೆ ಅಜ್ಞಾನವನ್ನುಂಟುಮಾಡಿದುದು " ಎಂದು ನುಡಿದುಕೊಳ್ಳುತ್ತಿರಲು ;

ವಿದೂಷಕನು— " ಎಲೈ ಮಹಾರಾಯನೇ, ನೀನು ಕಣ್ವಾಶ್ರಮದಲ್ಲಿ ಆ ಶಕುಂತಲಾದೇವಿಯ ಬೆರಳಲ್ಲಿಟ್ಟ ರತ್ನಮುದ್ರಿಕೆಯು ಬೆಸ್ತರವನು ಛೇದಿಸಿದ ಲೋಹಿತಮತ್ಸ್ಯದ ಉದರ ಮಧ್ಯಕ್ಕೆ ಹೇಗೆ ಬಂದುದು? " ಎಂದು ಕೇಳಲು ;

ರಾಯನು— " ಎಲೈ ಮಾಂಡವ್ಯನೇ, ಕೇಳು. ಪ್ರತಿಷ್ಠಾನನಗರಕ್ಕೆ ಬರುತಿರ್ದ ನಿನಗೆ ದೇವಿಯಾದ ಶಕುಂತಲೆಯು ಮಾರ್ಗದಲ್ಲಿ ಗಂಗಾಪ್ರವಾಹದಲ್ಲಿರುವ ಶಚೀತೀರ್ಥಕ್ಕೆ ನಮಸ್ಕಾರವಂ ಗೆಯ್ವವಕಾಲದಲ್ಲಿ ಬಿದ್ದುದೆಂದು ಅವಳ ಸಂಗಡ ಬಂದಿರ್ದಗೌತಮಿಯೆಂಬ ಋಷಿಸ್ತ್ರೀಯು ಪೇಳಿದಳು " ಎನ್ನಲು;

ಆ ವಾಕ್ಯಕ್ಕೆ ವಿದೂಷಕನು— " ಎಲೈ ಸ್ವಾಮಿಯೆ, ನೀನು ಅಪ್ಪಣೆಯನ್ನಿತ್ತುದು ಯುಕ್ತವಾಗಿ ತೋರುವುದು " ಎಂದು ನುಡಿಯಲು;

ಸಾನುಮತಿಯು— " ಈ ಪ್ರಕಾರಕ್ಕೆ ಇರುವಲ್ಲಿ ಪಾಪಭೀರುವಾದ ಈ ದುಷ್ಯಂತರಾಯಂಗೆ ಈ ಶಕುಂತಲೆಯ ಗಂಧರ್ವವಿವಾಹದಲ್ಲಿ ಹೇಗೆ ಸಂದೇಹವುಟ್ಟಿತೋ ಮತ್ತು ಮಟ್ಟುಮೀರಿರುವ ಇಂಥ ಅನುರಾಗವಿರುವಲ್ಲಿ ಆ ಶಕುಂತಲೆಯು ಗುರುತಿನ ರತ್ನದುಂಗರವಂ ಇವನಿಗೆ ತೋರಿಸುವುದಕ್ಕೆ ಏನು ನಿಮಿತ್ತವಿರುವುದೋ ತಿಳಿಯದೆಂದು ಆಲೋಚಿಸುತ್ತಿರಲು;

ರಾಯನು ಮರಳಿ ಆ ಉಂಗರವಂ ನೋಡುತ್ತ ವಿರಹ ಹೆಚ್ಚಿ—"ಎಲೈ ಮಿತ್ರನೇ, ಈ ಉಂಗರದ ವೃತ್ತಾಂತವಂ ಚೆನ್ನಾಗಿ ತಿಳಿದೆಯ?" ಎಂದು ನುಡಿಯಲು;

ವಿದೂಷಕನು ರಾಯನಾಡುವ ವಾಕ್ಯವಂ ಕೇಳಿ, ಅವನ ಚೇಷ್ಟೆಗಳಂ ನೋಡಿ-ಈ ರಾಯನು ಹುಚ್ಚರ ಮಾರ್ಗವನ್ನನುಸರಿಸಿದನು. ಇನ್ನು ಮಾಡತಕ್ಕುದೇನೆಂದು, ತನ್ನ ಮನದಲ್ಲಿ ಯೋಚಿಸುತ್ತಿರಲು;

ರಾಯನು ಮರಳಿ ಆ ರತ್ನಮುದ್ರಿಕೆಯಂ ಕುರಿತು—"ಎಲೈ ಮುದ್ರಿಕೆಯೇ, ಸುಂದರಾಂಗಿಯಾಗಿ ಮೃದುವಾದ ಬೆರಳಿನಿಂ ಕೂಡಿಯಿರುವ ಎನ್ನ ಕಾಂತೆಳಾದ ಶಕುಂತಳೆಯ ಕರವಂ ಬಿಟ್ಟು ಜಲದಲ್ಲಿ ಹೇಗೆ ಮುಳುಗಿದೆ?" ಎಂದು ನುಡಿದು, ಅಷ್ಟರಲ್ಲೇ, "ಈ ಉಂಗರವಾದರೋ ನಿರ್ಜೀವಿಯಾಗಿರುವುದು. ಆದ್ದರಿಂದ ಅದರ ಗುಣಂಗಳಂ ನಿಂದಿಸಲಾಗದು. ಸಜೀವನಾಗಿ ಸಮಸ್ತ ಧರ್ಮಗಳಂ ತಿಳಿಯುತ್ತಾ, ಗೊರೆಯೊಸಿಸಿಕೊಂಡು ಇರುವ ನಾನು ಪ್ರಿಯಳಾದ ಶಕುಂತಲೆಯಂ ಪತ್ನಿಯಲ್ಲನೆಂದು ತಿರಸ್ಕಾರವಂ ಮಾಡಿರುವೆನಾದ್ದರಿಂ ಎನ್ನ ಗುಣಂಗಳಂ ಚೆನ್ನಾಗಿ ನಿಂದಿಸಬೇಕು" ಎಂದು ನುಡಿಯುತ್ತಿರಲು;

ವಿದೂಷಕನು — ಈ ರಾಯನು ಮನಬಂದಂತೆ ಮಾತುಗಳನ್ನಾಡುತ್ತಾ ಎನ್ನನೆಲ್ಲಿಯೂ ಪೋಗಲೀಸನು. ಕ್ಷುದ್ಬಾಧೆಯು ಎನ್ನಂ ಭಕ್ಷಿಸುತ್ತಿರುವುದು. ಇದನ್ನಾಡುವುದಕ್ಕೂ ಅನುಭವಿಸುವುದಕ್ಕೂ ಆಗದೆ ಇರುವುದು ಎಂದು ತನ್ನ ಮನದಲ್ಲಿ ಆಲೋಚಿಸುತ್ತಿರಲು;

ರಾಯನು—"ಎಲೈ ಮಿತ್ರನೇ, ಅಕಾರಣವಾಗಿ ಮಾಡಿದ ಶಕುಂತಲೆಯ ತಿರಸ್ಕಾರದಿಂ ಪುಟ್ಟಿರುವ ಪಶ್ಚಾತ್ತಾಪದಿಂ ಯುಕ್ತವಾದ ಮನಸ್ಸುಳ್ಳ ಎನ್ನಂ ಆ ಶಕುಂತಲೆಯ ದರ್ಶನವಂ ಗೆಯಿಸಿ ಸಂರಕ್ಷಿಸು" ಎಂದು ನುಡಿಯುತ್ತಿರಲು,

ಅಷ್ಟರಲ್ಲೇ ಚತುರಿಕೆಯೆಂಬ ಸ್ತ್ರೀಯು ಶಕುಂತಲೆಯ ಭಾವಚಿತ್ರಪಟವಂ ತೆಗೆದುಕೊಂಡುಬಂದು, "ಇದೇ ನಮ್ಮ ದೇವಿಯಾದ ಶಕುಂತಲೆಯ ಭಾವಚಿತ್ರ ಫಲಕವು" ಎಂದು ತೋರಿಸುತಿರ್ದಳು.

ಎಂಬಲ್ಲಿಗೆ

ಕೃಷ್ಣರಾಜಕಂಠೀರವರು ರಚಿಸಿದ ಕೃಷ್ಣರಾಜವಾಣೀವಿಲಾಸ ರತ್ನಾಕರನೆಂಬ ಶಾಕುಂತಲನಾಟಕ ಟೀಕಿನಲ್ಲಿ ದುಷ್ಯಂತರಾಯನು ವಿರಹದಿಂ ಉನ್ಮಾದಾವಸ್ಥೆಯಂ ಪೊಂದಿರಲು, ಚತುರಿಕೆಯು ಶಕುಂತಲೆಯ ಭಾವಚಿತ್ರವಂ ತೆಗೆದುಕೊಂಡು ರಾಯನ ಹೊರೆಗೆ ಬಂದಳೆಂಬ ಚತುರ್ಥಕಲ್ಲೋಲದಲ್ಲಿ ದ್ವಿತೀಯ ತರಂಗಂ ಸಂಪೂರ್ಣಂ.

ಚತುರ್ಥಕಲ್ಲೋಲದ ತೃತೀಯತರಂಗ.

ಅನಂತರದಲ್ಲಿ ಆ ವಿದೂಷಕನು ಚತುರಿಕೆ ತಂದ ಶಕುಂತಲೆಯ ಭಾವಚಿತ್ರವಂ ನೋಡಿ, ರಾಯನಂ ಕುರಿತು—« ಎಲೈ ಸ್ವಾಮಿಯೇ, ನೀನು ಮಾಡಿದ ಚಿತ್ರಕಾರ್ಯವು ಚೆನ್ನಾದುದು. ಈ ಪ್ರಕಾರವಾದ ರೂಪವಂ ನಾನೆಲ್ಲಿಯೂ ನೋಡಿದ್ದೇ ಇಲ್ಲ. ಮನೋಹರವಾದ ಆಕಾರದಿಂ ನೋಟಕ್ಕೆ ಯೋಗ್ಯವಾದ ಈ ಚಿತ್ರಪ್ರತಿಮೆಯ ದೇಹದಲ್ಲಿರುವ ನಿಮ್ನೋನ್ನತಪ್ರದೇಶಗಳಲ್ಲಿ ಎನ್ನ ದೃಷ್ಟಿಯು ಜಾರುತ್ತಿರುವುದೋ ಎಂಬಂತಿರುವುದು.'' ಎಂದು ಸ್ತೋತ್ರವಂ ಗೆಯ್ಯಲು ;

ಸಾನುಮತಿಯು ಆ ಭಾವಚಿತ್ರವಂ ನೋಡಿ, ಅತಿ ಸಂತೋಷಯುಕ್ತಳಾಗಿ, « ರಾಯನು ತನ್ನ ಕರದಲ್ಲಿ ಹಿಡಿದು ಬರೆದ ಚಿತ್ರದ ಕಡ್ಡಿಯ ಕುಶಲತೆಯನ್ನೇನೆಂದು ಬಣ್ಣಿಸಲಿ! ಪ್ರಿಯಸಖಿಯಾದ ಶಕುಂತಲೆಯೇ ಎನ್ನ ಮುಂಭಾಗದಲ್ಲಿ ನಿಂತಿರುವಂತೆ ತೋರುವುದು'' ಎಂದು ನುಡಿದುಕೊಳ್ಳುತ್ತಿರಲು;

ರಾಯನು ಆ ಚಿತ್ರಫಲಕವಂ ನೋಡಿ—« ಪ್ರಪಂಚದಲ್ಲಿರುವ ಸ್ಥಾವರಜಂಗಮಾತ್ಮಕವಾದ ಪದಾರ್ಥಂಗಳಲ್ಲಿ ಯಾವ ಯಾವ ಪದಾರ್ಥಗಳು ರೂಪಲಾವಣ್ಯವಿಹೀನಗಳಾಗಿರುವುವೋ ಅವುಗಳನ್ನು ಚಿತ್ರಂಗಳಲ್ಲಿ ರಮ್ಯಂಗಳಾಗಿ ಬರೆಯಬಹುದು. ಹಾಗಾದರೂ ಈ ಶಕುಂತಲೆಯ ಲಾವಣ್ಯಾತಿಶಯಗಳಂ ಸ್ವಲ್ಪವಾಗಿ ಬರೆದಿರುವೆನಲ್ಲದೆ ಸಮಗ್ರವಾಗಿ ಬರೆಯುವುದಕ್ಕಾಗದು'' ಎಂದು ನುಡಿಯಲು;

ಸಾನುಮತಿಯು—« ಇಂಥ ರೂಪವತಿಯಾದ ಶಕುಂತಲೆಗೋಸುಗ ರಾಯನು ತಿರಸ್ಕಾರವಂ ಗೆಯ್ದನೆಂದು ಪಶ್ಚಾತ್ತಾಪವಂ ಪೊಂದುತ್ತಿರುವುದು ಯುಕ್ತವಾಗಿರುವುದು'' ಎಂದು ತಿಳಿಯುತ್ತಿರಲು;

ವಿದೂಷಕನು—« ಎಲೈ ಸ್ವಾಮಿಯೇ, ಈ ಚಿತ್ರಪಟದಲ್ಲಿ ಸಮಾನವಾದ ವಯೋರೂಪಗಳಿಂ ಯುಕ್ತರಾಗಿ, ನೋಡುವುದಕ್ಕೆ ಯೋಗ್ಯರಾಗಿರುವ ಈ ಮೂರು ಮಂದಿಯಲ್ಲಿ ಪೂಜ್ಯಳಾದ ಶಕುಂತಲಾದೇವಿಯು ಯಾವಳಿರಬಹುದು?'' ಎಂದು ಕೇಳಲು;

ಸಾನುಮತಿಯು—« ಅಜ್ಞಾನವೆಂಬ ಅಂಜನವುಳ್ಳ ಈ ವಿದೂಷಕನು ನಮ್ಮ ಸಖಿಯಾದ ಶಕುಂತಲೆಯ ರೂಪವಂ ನೋಡಿದವನಂತೆ ತೋರಲಾರದು'' ಎಂದು ನುಡಿಯುತ್ತಿರಲು;

ರಾಯನು—“ಎಲೈ ವಿದೂಷಕನೇ, ನಾನು ಇವಳು ಶಕುಂತಲೆಯೆಂದು ಹೇಳಲೊಲ್ಲೆನು. ನೀನು ಈ ಮೂಱು ಮಂದಿಗಳಲ್ಲಿ ಶಕುಂತಲೆಯು ಯಾವಳು ಎಂದು ಊಹಿಸುತ್ತಿರುವೆ?” ಎನಲು;

ವಿದೂಷಕನು—“ಎಲೈ ಸ್ವಾಮಿಯೇ, ಶಿಥಿಲವಾದ ಬಂಧದಿಂ ಹೊಱ ಸೂಸಿ ಜಾಱಿ ಬೀಳುತ್ತಿರುವ ತೋರವಾದ ಮಲ್ಲಿಗೆಮೊಗ್ಗುಗಳಿಂ ಯುಕ್ತವಾದ ಕೇಶಾಗ್ರಮುಳ್ಳವಳಾಗಿ, ಮುತ್ತಿನಂತೆ ಮುದ್ದಾಗಿರುವ ಬೆವರ್ವನಿಗಳಿಂ ಮಂಡಿತವಾದ ಮುಖಮಂಡಲವುಳ್ಳವಳಾಗಿ, ಹೆಚ್ಚಾಗಿ ನೀಡಿ ಇರುವ ನಳಿತೋಳುಗಳಿಂ ರಮಣೀಯಳಾಗಿ, ನಾರಿಯಿಂ ಸಡಲವಂ ಗೆಯ್ದು ನಿಲ್ಲಿಸಿರುವ ಮನ್ಮಥನ ಧನುಸ್ಸೋ ಎಂಬಂತೆ ಹಿಡಿಗಡಗುವ ಬಡನಡುವಿನಿಂ ಬಳುಕುತ್ತಲಿರುವ ತನುವಿನಿಂ ಯುಕ್ತಳಾಗಿ, ಕೆಂದಳಿರಿಂ ಚೆಲ್ಲುವಂತಿರುವ ಸೀಮಾವಿನ ಮರದ ನೆರಳಿನಲ್ಲಿ ಸ್ವಲ್ಪವಾಗಿ ಬಳಲಿರುವಳಂತೆ ನಿಂತಿರುವಳೇ ಆ ಶಕುಂತಲೆಯೆಂತಲೂ ಅವಳ ಪಾರ್ಶ್ವದಲ್ಲಿರುವರೇ ಅವಳ ಸಖಿಯರುಗಳೆಂತಲೂ, ಊಹಿಸುತ್ತಿರುವೆನು” ಎಂದು ನುಡಿಯುತ್ತಿರಲು;

ರಾಯನು—“ಎಲೈ ವಿದೂಷಕನೇ, ನೀನು ಜಾಣ್ಮೆಯುಳ್ಳವನು ಚೆನ್ನಾಗಿ ಹೇಳಿದೆ” ಎಂದು ಶ್ಲಾಘನೆಯಂ ಗೆಯ್ದು,—“ಎಲೈ ಸ್ನೇಹಿತನೇ, ಕೇಳು. ಈ ಶಕುಂತಲೆಯ ಭಾವಚಿತ್ರದಲ್ಲಿ ಎನಗೆ ಅಭಿಮತವಾದ ಕೆಲವು ಚಿಹ್ನೆಗಳಿರುವುವು. ಅದು ಹೇಗೆಂದರೆ:-ನಾನೀಭಾವಚಿತ್ರವಂ ಬರೆಯುವಾಗ್ಗೆ ಆ ಮನೋಹರಾಂಗಿಯ ಆಕಾರವಂ ಊಹಿಸುವುದಱಿಂ ಸಾತ್ವಿಕಭಾವವು ಪುಟ್ಟಿ ಬೆವರು ಗೂಡಿದ ಬೆರಳು ತಗಲಿದ್ದಱಿಂ ಈ ರೇಖೆಗಳ ಸಮೀಪಗಳಲ್ಲಿ ಸ್ವಲ್ಪವಾಗಿ ಕಪ್ಪು ತೋಱಿರುವುದು. ಮತ್ತು ಅಲ್ಲಲ್ಲಿ ಉಬ್ಬಿ ಇರುವ ಹಳದಿ ಹಸರು ಮೊದಲಾದ ಬಣ್ಣಗಳಿಂದ ಆ ಶಕುಂತಲೆಯ ಸಂಗವು ಎಂದಿಗೆ ಉಂಟಾಗುವುದೋ ಎಂಬ ಚಿಂತೆಯಿಂ ಪುಟ್ಟಿದ ಕಣ್ಣೀರುಗಳು ಕಪೋಲಗಳಿಂ ಜಾಱಿ ಈ ಚಿತ್ರಪಟದಲ್ಲಿ ಬಿದ್ದಿರುವುದೆಂದು ಊಹಿಸುವುದಕ್ಕೆ ಯೋಗ್ಯವಾಗಿರುವುದು. ಇದೀಗ ಚಿಹ್ನೆಗಳು” ಎಂದು ನುಡಿದು ಬತ್ತಿನಲ್ಲಿ ಚಿತ್ರಫಲಕವಂ ಹಿಡಿದಿರುವ ಚತುರಿಕೆಯಂ ಕುಱಿತು, “ಎಲೆ ಚತುರಿಕೆಯೇ, ಶಕುಂತಲೆಯ ವಿಹಾರಸ್ಥಾನಂಗಳಂ ಅರ್ಧವಾಗಿ ಬರೆದಿರುವೆನು. ಸಂಪೂರ್ಣವಾಗಿ ಬರೆಯುವುದಕ್ಕೋಸುಗ ಚಿತ್ರದ ಕಡ್ಡಿಬಣ್ಣಗಳಂ ಜಾಗ್ರತೆಯಾಗಿ ತೆಗೆದುಕೊಂಡು ಬರುವುದು” ಎಂದು ಆಜ್ಞೆಯನ್ನೀಯಲು;

ಚತುರಿಕೆಯು—“ಎಲೈ ಮಾಂಡವ್ಯನೇ, ಚಿತ್ರದ ಪೆಟ್ಟಿಗೆಯಂ ನಾನು

ತೆಗೆದುಕೊಂಡುಬರುವವರೆಗೂ ಈ ಚಿತ್ರದ ಫಲಕವಂ ಪಿಡಿದಿರುವುದು'' ಎನ್ನಲು;

« ರಾಯನ ಪ್ರೇಮಪಾತ್ರವಾದ ಈ ಚಿತ್ರಫಲಕವಂ ನಾನು ಪಿಡಿದಿರುವೆನು'' ಎಂದು ಆ ಚತುರಿಕೆಯ ಹಸ್ತದಿಂ ಅದಂ ತೆಗೆದುಕೊಂಡು ಪಿಡಿಯಲು;

ಚತುರಿಕೆಯು ಚಿತ್ರಸಾಮಗ್ರಿಯಂ ತರುವುದಕ್ಕೆ ಪೋಗಲು;

ರಾಯನು—« ಎಲೈ ವಿದೂಷಕನೇ, ಪ್ರತ್ಯಕ್ಷವಾಗಿ ಬಂದ ಕೋಮಲಾಂಗಿಯಾದ ಶಕುಂತಲೆಯಂ ತಿರಸ್ಕಾರವಂ ಗೆಯ್ದು ಚಿತ್ರದಲ್ಲಿ ಬರೆದಿರುವ ಅವಳ ರೂಪವಂ ಪ್ರೇಮಾಸ್ಪದವೆಂದು ತಿಳಿದಿರುವ ನಾನು ಮಾರ್ಗದಲ್ಲಿ ನಿರ್ಮಲಜಲದಿಂ ಪೂರಿತವಾದ ನದಿಯಂ ಬಿಟ್ಟು ಬಿಸಲುಜಳದಲ್ಲಿ ಆಸೆಯುಳ್ಳ ಮನುಜನಂತಾದೆನು'' ಎನ್ನಲು;

ವಿದೂಷಕನು ತನ್ನ ಮನದಲ್ಲಿ—ನಿಶ್ಚಯವಾಗಿ ಈ ರಾಯನು ನದಿಯಂ ದಾಂಟಿ ಮೃಗತೃಷ್ಣೆಯಲ್ಲಿ ಜಲಭ್ರಾಂತಿಯಿಂ ತೊಳಲುತ್ತಿರುವನಂತಾದನು, ಎಂದು ಆಲೋಚಿಸಿ. ರಾಯನಂ ಕುರಿತು—« ಎಲೈ ಸ್ವಾಮಿಯೇ, ಈ ಚಿತ್ರಪಟದಲ್ಲಿ ಇನ್ನೇನು ಬರೆಯತಕ್ಕದ್ದಿರುವುದು ?'' ಎನ್ನಲು;

ಸಾನುಮತಿಯು,—ಯಾವ ಸ್ಥಳಗಳಲ್ಲಿ ಆ ಶಕುಂಲೆಯಿಂದೊಡಗೂಡಿ ನಿಸ್ಸಂಶಯವಾಗಿ ವಿಹಾರವಂ ಗೆಯ್ದಿರುವನೋ ಆ ಸ್ಥಳಂಗಳೆಲ್ಲವೂ ಬರೆಯತಕ್ಕನಾಗಿ ಇರುವುವು ಎಂದು ಯೋಚಿಸುತ್ತಿರಲು;

« ಮಿತ್ರನೇ, ಬರೆಯತಕ್ಕವಂ ಕೇಳು. ಬಿಳ್ಪುಗೂಡಿದ ಮರಳಿನಲ್ಲಿ ವಿಹಾರಾಸಕ್ತಂಗಳಾದ ಹಂಸಮಿಥುನಗಳುಳ್ಳ ಮಾಲಿನಿಯೆಂಬ ನದಿಯಂ. ಆ ನದಿಯ ಸುತ್ತಲೂ ಸಂಚರಿಸುತ್ತಿರುವ ಹರಿಣಂಗಳಂ ಸುಂದರವಾದ ಹಿಮತ್ಪರ್ವತದ ಸಮೀಪದಲ್ಲಿರುವ ಗಿರಿಗಳಂ. ನಾರುಮಡಿಗಳಂ ಕಟ್ಟಿರುವ ಆ ತಪೋವನದ ವೃಕ್ಷಂಗಳ ಕೊಂಬೆಗಳಂ, ಗಂಡುಹುಲ್ಲೆಯ ಶೃಂಗದಿಂ ಎಡಗಣ್ಣಂ ತುರಿಸಿಕೊಳ್ಳುತ್ತಿರುವ ಹೆಣ್ಣುಹುಲ್ಲೆಯುಂ ಬರೆಯಬೇಕು'' ಎಂದು ನುಡಿಯಲು;

ವಿದೂಷಕನು—« ಎಲೈ ಸ್ವಾಮಿಯೇ, ಇವೆಲ್ಲವಂ ಬರೆದಮೇಲೆ ಜೋಲುತ್ತಿರುವ ಭ್ರೂಮಧ್ಯದಿಂ ವಿಕಾರಸ್ವರೂಪರಾದ ಋಷಿಗಳಂ ಈ ಚಿತ್ರಪಟದಲ್ಲಿ ಬರೆಯಬೇಕಾಗಿರುವುದು'' ಎನಲು;

ರಾಯನು—« ಋಷಿಗಳಂತಿರಲಿ, ಆ ಶಕುಂತಲೆಯ ಈ ಭಾವಚಿತ್ರಕ್ಕೆ ಇನ್ನು ಕೆಲವು ಅಲಂಕಾರವಂ ಗೆಯ್ಯುವುದಂ ಮರೆತೆನು'' ಎನಲು;

ವಿದೂಷಕನು—« ಅದೇನಿರುವುದು: ಅಪ್ಪಣೆಯನ್ನೀಯಬೇಕು'' ಎನ್ನಲು;

ಆ ಸಾನುಮತಿಯು—“ ಈ ರಾಯನು ಶಕುಂತಲೆಯ ವನವಾಸಕ್ಕೂ ಅವಳ ದೇಹದ ಸೌಕುಮಾರ್ಯಕ್ಕೂ ಅನುಕೂಲಮಾದ ಚಿತ್ರವಂ ಬರೆಯುವುದಕ್ಕೆ ಯತ್ನವಂ ಗೆಯ್ಯುವನು ಎಂದು ತೋಱುವುದು ” ಎಂದು ಊಹಿಸುತ್ತಿರಲು ;

ರಾಯನು—“ ಎಲೈ ವಿದೂಷಕನೇ, ನಾನು ಬರೆಯದೆ ಮಱೆತಿರುವುದಂ ಕೇಳು. ಕಪೋಲಗಳಲ್ಲಿ ಜೋಲುತ್ತಿರುವ ಬಾಗೆಹೂವಿನ ಕೇಸರಗಳುಳ್ಳ ಕರ್ಣಾವತಂಸವಂ ಆ ಪ್ರಾಣಕಾಂತೆಯ ಕರ್ಣಂಗಳಿಗೆ ಅಲಂಕಾರವಂ ಗೆಯ್ದಂತೆ ಬರೆಯಲಿಲ್ಲ. ಮತ್ತು ಶರಚ್ಚಂದ್ರನ ಕಿರಣಗಳಂತೆ ಅತಿ ಬೆಳ್ಪಾದ ತಾವರೆದಂಟಿನಲ್ಲಿರುವ ತಂತುವಿನ ಹಾರವಂ ಆ ಕಾಂತೆಯ ತೋರವಾದ ಸ್ತನಮಧ್ಯಕ್ಕೆ ಸೇರಿಸಿದಂತೆ ಬರೆಯಲಿಲ್ಲ ” ಎಂದು ಪೇಳಲು ;

ವಿದೂಷಕನು—“ ನಮ್ಮ ದೇವಿಯಾದ ಶಕುಂತಲೆಯುಂ ಕೆಂದಾವರೆಯ ಚೆಂದವುಳ್ಳ ತನ್ನ ತುದಿಗೈಯಿಂ ಮುಖವಂ ಮುಚ್ಚಿ ಸ್ವಲ್ಪ ಭಯವಂ ಪೊಂದಿದವಳಂತೆ ಚಿತ್ರದಲ್ಲಿ ಬರೆದಿರುವೆ ” ಎಂದು ನುಡಿದು, ಆಮೇಲೆ ಆ ಪಟವಂ ಚೆನ್ನಾಗಿ ನೋಡಿ ಹಾಹಾಕಾರವಂ ಗೆಯ್ದು, “ ದಾಸೀಪುತ್ರನಾದ ಮಕರಂದಚೋರನಾದ ದುಷ್ಟಭ್ರಮರನು ಪೂಜ್ಯಳಾದ ನಮ್ಮ ಶಕುಂತಲಾದೇವಿಯ ಮುಖವಂ ಕುಱಿತು ಬರುವನು ” ಎಂದು ನುಡಿಯಲು ;

ರಾಯನು—“ ಎಲೈ ಮಾಂಡವ್ಯನೇ, ಆ ದುಷ್ಟ ಭ್ರಮರವು ಬಾರದಂತೆ ನಿವಾರಣೆಯಂ ಗೆಯ್ಯುವುದು? ” ಎನಲು ;

ವಿದೂಷಕನು—“ ಎಲೈ ಸ್ವಾಮಿಯೇ, ಜಗತ್ತಿನಲ್ಲಿರುವ ದುಷ್ಟರಂ ಶಿಕ್ಷಿಸುವುದಱಲ್ಲಿ ದಕ್ಷನಾಗಿರುವುದಱಿಂದೀಭ್ರಮರವಂ ನಿವಾರಿಸುವುದಕ್ಕೆ ನೀನೇ ಸಮರ್ಥನಾಗುವೆ ” ಎನಲು;

ರಾಯನು, ಯುಕ್ತವೇ ಸರಿಯೆಂದು, ಆ ಭ್ರಮರವಂ ಕುಱಿತು,-“ ಎಲೈ ಕುಸುಮಲತಾಪ್ರಿಯಾತಿಥಿಯಾದ ಭ್ರಮರವೇ, ನೀನು ವ್ಯರ್ಥಮಾಗಿ ಈ ಶಕುಂತಲೆಯ ಸಮೀಪದಲ್ಲಿ ಸುತ್ತಿ ಆಯಾಸವಂ ಪೊಂದುತ್ತಿರುವೆ. ಮತ್ತು ಪತಿವ್ರತೆಯಾಗಿ ನಿನ್ನಲ್ಲಿಯೇ ಅತಿ ಪ್ರೇಮಶಾಲಿಯಾದ ಹೆಣ್ಣು ಭ್ರಮರವು ಅಧಿಕ ಕ್ಷುದ್ಬಾಧಾತುರವಾದರೂ ನಿನ್ನಂ ಬಿಟ್ಟು ಮಕರಂದಪಾನವಂ ಗೆಯ್ಯದೆ ಇರುವುದು; ಅಲ್ಲಿಗೆ ಪೋಗದೆ ಇಲ್ಲಿ ಏಕೆ ಭ್ರಮಿಸುತ್ತಿರುವೆ ?” ಎಂದು ನುಡಿಯಲು ;

ವಿದೂಷಕನು—“ ಅಯ್ಯಾ ರಾಯನೇ, ಈ ಭ್ರಮರವು ಉತ್ಪತ್ತಿಸಿದ್ಧಮಾಗಿ ವಕ್ರಜಾತಿಯಾದ್ದಱಿಂದ, ಯುಕ್ತವಾಕ್ಯವಂ ಪೇಳಲು ಕೇಳುವುದೆ ?”

ಎಂದು ನುಡಿಯಲು;

ಆ ರಾಯನು—"ಎಲೈ ವಿದೂಷಕನೇ, ಈ ಭ್ರಮರವು ಎನ್ನಾಜ್ಞೆಯಂ ಮೀಱುವುದೋ?" ಎಂದು ಭ್ರಮರವಂ ಕುಱಿತು—"ಎಲೈ ತುಂಬಿಯೇ, ಕೇಳು. ಕೋಗಿಲ ಗಿಣಿಗಳು ಮುಟ್ಟದೆ ಇರುವ ಸೊಸಿಮರದ ಚಿಗುರಿನಂತೆ ಅತಿಮೃದುವಾಗಿ, ಶೋಭಾಯಮಾನವಾಗಿ, ಬಿಂಬಫಲದಂತಿರುವ ಆ ಶಕುಂತಲೆಯ ಅಧರವಂ ಅಧಿಕ ಧೈರ್ಯದಿಂ ಯುಕ್ತನಾಗಿ ಪಾನಗೈದಿರುವೆನು. ನೀನು ತಾರತಮ್ಯಾಜ್ಞಾನವಿಲ್ಲದೆ ಆ ಶಕುಂತಲೆಯ ಅಧರವಂ ಮುಟ್ಟಿದವನಾದರೆ, ನಿನ್ನಂ ಕಮಲಮಧ್ಯದಲ್ಲಿ ಬಂಧನಸ್ಥನನ್ನಾಗಿ ಮಾಡುವೆನು." ಎಂದು ಪೇಳಲು;

ವಿದೂಷಕನು ನಸುನಗುತ—"ಎಲೈ ರಾಯನೇ, ಈಪ್ರಕಾರವಾದ ತೀಕ್ಷ್ಣದಂಡನೆಗೆ ಯಾರುತಾನೇ ಭಯಪಡುವುದಿಲ್ಲ" ಎಂದು, ತನ್ನ ಮನದಲ್ಲಿ "ನಿಶ್ಚಯಮಾಗಿ ಈ ರಾಯನು ಆ ಶಕುಂತಲಾದೇವಿಯ ವಿಯೋಗದಿಂದ ಹುಚ್ಚನಂತೆ ಜ್ಞಾನಾಜ್ಞಾನದಿಂ ಯುಕ್ತನಾಗಿರುವನು. ಇವನ ಸಹವಾಸದಿಂದ ನಾನು ಈಪ್ರಕಾರವಾದ ಕಷ್ಟವಂ ಪೊಂದಬೇಕಾಗಿರುವುದು" ಎಂದು ಆಲೋಚಿಸಿ, "ಎಲೈ ರಾಯನೇ, ಈ ಚಿತ್ರಪಟವಂ ನೋಡಿ ಭ್ರಾಂತಿಯಂ ಪೊಂದುತ್ತಿರುವೆ" ಎನಲು;

ಸಾನುಮತಿಯು—"ಈ ರಾಯನು ವ್ಯಥೆಯಂ ಪೊಂದುವುದಂ ನೋಡಿದರೆ ಯಥಾರ್ಥವಾಗಿ ಶಕುಂತಲೆಯಂ ನೋಡಿ ದುಃಖಪಾತ್ರನಾದಂತೆ ತೋಱುವನು" ಎಂದು ತಿಳಿಯುತ್ತಿರಲು;

ರಾಯನು—"ಎಲೈ ವಿದೂಷಕನೇ, ಆಲೋಚನೆಯಂ ಗೆಯ್ಯದೆ ಈಪ್ರಕಾರಕ್ಕೆ ನೀನು ನುಡಿಯಬಹುದೆ. ಹೇಗೆಂದರೆ:—ಸ್ಥಾವರಜಂಗಮಾತ್ಮಕವಾದ ಸಮಸ್ತ ಪ್ರಪಂಚವು ಆ ಲೋಲಲೋಚನೆಯಾದ ಶಕುಂತಲೆಯ ಮಯವಾಗಿರುವುದೆಂದು ತಿಳಿದು, ಎನ್ನ ಹೃದಯವು ಅವಳಲ್ಲಿಯೇ ಏಕಾಕಾರವಾಗಿ ವ್ಯಾಪಿಸಿ, ಅವಳ ದರ್ಶನ ಸೌಖ್ಯವನ್ನನುಭವಿಸುತಿರ್ದರೂ ಈಗ ಎನಗೆ ಇದು ಯಥಾರ್ಥವಾದ ಶಕುಂತಲೆಯಲ್ಲವೆಂದು ವಿಸ್ಮೃತಿಯುಂಟುಮಾಡಿದ ನಿನ್ನ ವಾಕ್ಯದಿಂದ ಚಿತ್ರವೆಂಬ ಜ್ಞಾನವು ಉಂಟಾದುದು!" ಎಂದು ಕಣ್ಣೀರುಗಳಂ ಬಿಡುತ್ತಿರಲು;

ಆ ವಾಕ್ಯಕ್ಕೆ ಸಾನುಮತಿಯು—"ರಾಯನ ಸಂಪಿಧಾನ ಮಾರ್ಗವು ಪೂರ್ವಾಪರ ವಿರುದ್ಧಮುಳ್ಳುದಾಗಿ ಜ್ಞಾನಾಜ್ಞಾನದಿಂ ಯುಕ್ತಮಾಗಿರುವುದು" ಎಂದು ನುಡಿದುಕೊಳ್ಳುತ್ತಿರಲು;

ರಾಯನು ಅತ್ಯಂತ ಸಂತಾಪದಿಂ ಯುಕ್ತನಾಗಿ,—“ಎಲೈ ಮಿತ್ರನಾದ ಮಾಂಡವ್ಯನೇ, ಶಕುಂತಲೆಯ ವಿಯೋಗದುಃಖವಂ ಹೇಗೆ ಸೈರಿಸಲಿ! ಸ್ವಪ್ನದಲ್ಲಿ ಯಾದರೂ ಆ ಶಕುಂತಲೆಯ ಅಂಗಸಂಗವಾಗುವುದೊ ಎಂದರೆ ಸರ್ವಥಾ ನಿದ್ರೆಯು ಬಾರದೆ ಇರುವುದರಿಂದ ಆ ಸುಖವನ್ನನುಭವಿಸುವುದಕ್ಕೆ ಇಲ್ಲವಾದುದು. ಚಿತ್ರ ದಲ್ಲಿ ಬರೆದಿರುವ ಭಾವವಂ ಚೆನ್ನಾಗಿ ನೋಡಿ ಈ ಸಂತಾಪವಂ ಸೈರಿಸಬಹುದೆಂದರೆ ಕಣ್ಣೀರುಗಳು ಸ್ಥಳವನ್ನೀಯವು” ಎಂದು ನುಡಿಯುತ್ತಿರಲು;

ಸಾನುಮತಿಯು—“ಈ ರಾಯನು ಇಷ್ಟು ಅನುರಾಗಯುಕ್ತನಾಗಿ ದುಃಖಪಾತ್ರನಾಗಿರುವುದರಿಂದ ಈ ಶಕುಂತಲೆಗೆ ಇವನು ಮೊದಲು ತಿರಸ್ಕಾರ ಮಾಡಿದ ಸಂತಾಪವು ಪೋದುದು” ಎಂದು ತನ್ನ ಮನದಲ್ಲಿ ಆಲೋಚಿಸುತ್ತಿರಲು;

ಅಷ್ಟರಲ್ಲೇ ಚಿತ್ರದ ಪೆಟ್ಟಿಗೆಯಂ ತರುವುದಕ್ಕೆ ಪೋಗಿರ್ದ ಚತುರಿಕೆ ಯೆಂಬ ಸಖಿಯು ಬಂದು ಆ ದುಷ್ಯಂತರಾಯಂಗೆ ನಮಸ್ಕಾರವಂ ಗೆಯ್ದು—“ಎಲೈ ಸ್ವಾಮಿಯೇ, ನಾನು ಚಿತ್ರದ ಪೆಟ್ಟಿಗೆಯನ್ನು ತೆಗೆದುಕೊಂಡು ಇಲ್ಲಿಗೆ ಬರು ತಿರ್ದೆನು” ಎಂದು ನುಡಿದು ಸುಮ್ಮನಾಗಲು;

ರಾಯನು—“ಎಲೈ ಚತುರಿಕೆಯೇ, ಆಮೇಲೆ ಏನು ಕಾರ್ಯವು ನಡೆ ದುದು ಪೇಳು?” ಎನ್ನಲು;

ಸಖಿಯು ಭಯಯುಕ್ತಳಾಗಿ, “ಎಲೈ ಸ್ವಾಮಿಯೇ, ನಿನ್ನ ಪಟ್ಟದ ಮಹಿಷಿ ಯಾದ ವಸುಮತೀದೇವಿಯು ತರಳಿಕೆ ಎಂಬ ಸಖಿಯಿಂದೊಡಗೂಡಿ ಬರುತ ನನ್ನನ್ನು ಕರೆದು ಈ ಚಿತ್ರದ ಪೆಟ್ಟಿಗೆಯಂ ನಾನೇ ತೆಗೆದುಕೊಂಡುಪೋಗುವೆನೆಂದಾ ಪೆಟ್ಟಿಗೆಯನ್ನು ಎನ್ನ ಕೆಯ್ಯಿಂದ ಬಲಾತ್ಕಾರವಾಗಿ ತೆಗೆದುಕೊಂಡಳು” ಎಂದು ನುಡಿಯಲು,

ವಿದೂಷಕನು—“ಎಲೆ ಚತುರಿಕೆ, ನೀನು ಅದೃಷ್ಟದಿಂ ಬಿಡಿಸಿಕೊಂಡು ರಾಯನ ಸನ್ನಿಧಿಗೆ ಬಂದು ಸೇರಿದೆ. ಇಲ್ಲವಾದಲ್ಲಿ ನಿನಗೆ ತಕ್ಕ ಶಿಕ್ಷೆಯು ನಡೆಯು ತಿರ್ದುದು” ಎನಲು;

ಚತುರಿಕೆಯು,—“ಅಯ್ಯೊ ಮಾಂಡವ್ಯನೇ, ಕೈಯಿಂದ ಚಿತ್ರದ ಪೆಟ್ಟಿಗೆಯಂ ತೆಗೆದುಕೊಂಡು ಎನ್ನಂ ಹಿಡಿಯುವುದಕ್ಕೆ ಯತ್ನವಂ ಮಾಡುವಷ್ಟರಲ್ಲೇ, ನಾನು ಪಲಾಯನವಂ ಗೆಯ್ಯಲವರು ಎನ್ನನ್ನನುಸರಿಸಿ ಬರುವುದರಲ್ಲೇ ವಸುಮತೀ ದೇವಿಯು ವರ ಸೀರೆಯ ಸೆರಗು ಗಿಡದ ಕೊಂಬೆಗೆ ತಗಲಿಕೊಳ್ಳಲು, ಅದಂ ತರಳಿಕೆಯು ಬಿಡಿ ಸುವಷ್ಟರಲ್ಲಿ ಇಲ್ಲಿಗೆ ಓಡಿ ಬಂದೆನು” ಎಂದು ನುಡಿಯಲು;

ರಾಯನು,—“ ಅತಿಕೋಪಯುಕ್ತಳಾದ ವಸುಮತೀದೇವಿಯು ಇಲ್ಲಿಗೆ ಬಂದು ಶಕುಂತಲೆಯ ಭಾವಚಿತ್ರವಂ ನೋಡಿದಲ್ಲಿ ಮಹತ್ತಾದ ಪ್ರಮಾದವುಂಟಾಗುವುದಾದ್ದಱಿಂದ ಈ ಭಾವಚಿತ್ರಪಟವಂ ತೆಗೆದುಕೊಂಡು ಎಲ್ಲಾದರೂ ಕಾಣದ ಸ್ಥಳದಲ್ಲಿ ಸಂರಕ್ಷಿಸು ” ಎಂದು ಚತುರಿಕೆಗೆ ಅಪ್ಪಣೆಯನ್ನೀಯಲು ;

ವಿದೂಷಕನು ಆ ಚಿತ್ರಪಟವಂ ತೆಗೆದುಕೊಂಡು,—“ ಎಲೈ ಸ್ವಾಮಿಯೇ, ಈ ಚಿತ್ರಪಟವನ್ನು ನಾನು ಕಾಣದಂತೆ ಸಲಹುವೆನು. ನಾನು ಈ ಪಟವಂ ಕೊಂಡುಪೋದ ವಾರ್ತೆಯಂ ವಸುಮತೀದೇವಿಯು ತಿಳಿದಲ್ಲಿ ಎನ್ನಂ ಸಲಹುವರಾರು? ಪೇಳು. ಆದರೂ ಮೇಘಪ್ರತಿಚ್ಛಂದವೆಂಬ ಉಪ್ಪರಿಗೆಯಲ್ಲಿ ಈ ಪಟಸಹಿತನಾಗಿರುವೆನು. ಸ್ವಾಮಿಯವರು ಅಂತಃಪುರದ ಕಲಹವಿಲ್ಲದೆ ಸ್ವಸ್ಥಚಿತ್ತರಾಗಿರ್ದಲ್ಲಿ ಎನ್ನಂ ಕರೆಯಿಸಬೇಕು” ಎಂದು ನುಡಿದು, ಶೀಘ್ರಗಮನದಿಂ ಪೋಗಲು ;

ಸಾನುಮತಿಯು,—“ ಈ ರಾಯನು ಅನ್ಯಸ್ತ್ರೀಯರಲ್ಲಿ ಆಸಕ್ತಚಿತ್ತನಾದಾಗ್ಯೂ ಜ್ಯೇಷ್ಠೆ ಎಂಬ ಗೌರವವನ್ನಿರಿಸಿರುವನು. ಆದ್ದಱಿಂ ಸ್ಥಿರಮಿತ್ರತ್ವವುಳ್ಳವನು” ಎಂದು ನುಡಿಯುತ್ತಿರಲು;

ಅಷ್ಟಱಲ್ಲೀ ಮಂತ್ರಿಯ ಸಮೀಪಕ್ಕೆ ಪೋಗಿ ಇರ್ದ ದ್ವಾರಪಾಲಕಿಯು ಒಂದು ಪತ್ರಿಕೆಯಂ ತೆಗೆದುಕೊಂಡು, ರಾಯನ ಸಮೀಪಕ್ಕೆ ಬಂದು, ಜಯಶೀಲನಾಗೆಂದು ನುಡಿದು, ನಮಸ್ಕಾರವಂ ಗೆಯ್ಯಲು,

ಆ ರಾಯನು ಆ ಸ್ತ್ರೀಯಂ ಕುಱಿತು,—“ಎಲೈ ದ್ವಾರಪಾಲಕಿಯೇ, ನೀನು ಮಾರ್ಗದಲ್ಲಿ ವಸುಮತೀದೇವಿಯಂ ಕಂಡೆಯಾ?” ಎಂದು ಕೇಳಲು ;

ಸ್ತ್ರೀಯು,—“ ಎಲೈ ಸ್ವಾಮಿಯೇ, ಆ ದೇವಿಯರು ಈ ಪ್ರಮದವನಕ್ಕೆ ಬರುತಿರ್ದು ನಾನು ಈಪತ್ರಿಕೆಯಂ ತೆಗೆದುಕೊಂಡು ಬರುವುದಂ ಕಂಡು ಏನೋ ರಾಜಕಾರ್ಯವಿರುವುದೆಂದು ಹಿಂದಿರುಗಿ ಪೋದರು.” ಎಂದು ಬಿನ್ನೈಸಲು,

ಆ ರಾಯನು ಅತಿ ಸಂತೋಷಯುಕ್ತನಾಗಿ,—“ಎನ್ನ ರಾಣಿಯಾದ ವಸುಮತಿಯು ಸಕಲಕಾರ್ಯಗಳ ಸ್ಥೂಲಸೂಕ್ಷ್ಮವಂ ಬಲ್ಲವಳಾದ್ದಱಿಂದೆನ್ನ ಕಾರ್ಯವಿರೋಧವಂ ಗೆಯ್ಯಲಾಱಳು.” ಎಂದು ಪೇಳುತ್ತಿರಲು;

ಆ ದ್ವಾರಪಾಲಕಿಯು—“ಎಲೈಸ್ವಾಮಿಯೇ, ಮಂತ್ರಿಶ್ರೇಷ್ಠನಾದ ಆರ್ಯಪಿಶುನನು ಸ್ವಾಮಿಯವರಿಗೆ ವಿಜ್ಞಾಪನೆಯಂ ಗೆಯ್ಯುವಂತೆ ಪೇಳಿರುವುದೇನಂದರೆ:— ರಾಜಕಾರ್ಯಂಗಳು ಅಗಣಿತಂಗಳಾಗಿ ಇರ್ದರೂ ಇದೊಂದುಕಾರ್ಯವು ಒಲವತ್ತರವಾಗಿರುವುದು. ಅದಂ ಈಪತ್ರಿಕೆಯಲ್ಲಿ ಒರೆದಿರುವೆನು. ಸ್ವಾಮಿಯವರು ಸಾವ

ಧಾನಚಿತ್ತರಾಗಿ ಪರಾಂಬರಿಸುವಂತೆ ವಿಜ್ಞಾಪನೆಯಂ ಗೆಯ್ದಿರುವೆನು'' ಎಂದು ಬಿನ್ನೈಸಲು;

ಆ ರಾಯನು ಅವಳು ತಂದ ಪತ್ರಿಕೆಯಂ ಕರದಿಂದೆ ತೆಗೆದುಕೊಂಡು ಓದಿ, ‘‘ ಸಮುದ್ರವ್ಯಾಪಾರದಿಂ ಸಂಪಾದಿಸಿದ ದ್ರವ್ಯಸಮೂಹವುಳ್ಳ ಧನಮಿತ್ರನೆಂಬ ವರ್ತಕನು ಅನೇಕ ಹಡಗುಗಳು ಸಮುದ್ರದಲ್ಲಿ ಮುಳುಗಿಪೋದವೆಂಬ ವ್ಯಸನದಿಂದ ಮರಣವಂ ಪೊಂದಿರುವನು. ಅವನು ಅಪುತ್ರನಾಗಿ ದೀನನಾಗಿರ್ದನಾದ್ದರಿಂದ ವನ ಸಮಸ್ತದ್ರವ್ಯಸಮೂಹವು ದೊರೆಗಳಿಗೆ ಸೇರಬೇಕಾಗಿ ಇರುವುದು'' ಎಂದು ಬರೆದಿರುವುದನ್ನೋದಿ, ‘‘ ಲೋಕದಲ್ಲಿ ಮಕ್ಕಳಿಲ್ಲದ ಭಾಗ್ಯವು ವ್ಯರ್ಥವಾದು'' ದೆಂದು ನುಡಿದು, ‘‘ಎಲೆ ದ್ವಾರಪಾಲಕಿಯೇ, ಆ ಧನಮಿತ್ರನೆಂಬ ವರ್ತಕನು ಬಹು ದ್ರವ್ಯವುಳ್ಳವನಾದ್ದರಿಂ ಬಹುಪತ್ನಿಯರುಳ್ಳವನಾಗಿರಬಹುದು. ನೀನು ಪೋಗಿ ಅವನ ಹೆಂಡತಿಯರಲ್ಲಿ ಯಾವಳಾದಾಗ್ಯೂ ಗರ್ಭಿಣಿಯಾಗಿರುವಳೇ ಎಂದು ವಿಚಾರಣೆಯಂ ಮಾಡಿ ವಿಜ್ಞಾಪನೆಯಂ ಗೆಯ್ದೆಯಾದರೆ, ಮಂತ್ರಿ ಬರೆದಿರುವ ಪತ್ರಿಕೆಗೆ ಪ್ರತ್ಯುತ್ತರವನ್ನೀಯುವೆನು'' ಎಂದು ಅಪ್ಪಣೆಯನ್ನೀಯಲು ;

ಆ ದ್ವಾರಪಾಲಕಿಯು—‘‘ ಹೇಗೆ ಅಪ್ಪಣೆಯಾಗುವುದೋ ಆ ಪ್ರಕಾರಕ್ಕೆ ನಡೆದುಕೊಳ್ಳುವೆನು'' ಎಂದು ನುಡಿದು, ಹಿಂದಿರುಗಿ ಬಂದು, ಮಂತ್ರಿಯ ಸಮೀಪವಂ ಸೇರಿ, ಆ ವೃತ್ತಾಂತವಂ ವಿಚಾರಣೆಯಂ ಗೆಯ್ದು ರಾಯನ ಸಮೀಪಕ್ಕೆ ಬಂದು,—‘‘ಎಲೈ ಸ್ವಾಮಿಯೇ, ಆತನ ಮಿತ್ರನ ಪತ್ನಿಯೊರ್ವಳು ಗರ್ಭವಾಗಿ ಪುಂಸವನಕರ್ಮವು ನಡೆದಿರುವುದು'' ಎಂದು ವಿಜ್ಞಾಪಿಸಲು ;

ಆ ರಾಯನು—‘‘ಎಲೆ ದ್ವಾರಪಾಲಕಿಯೇ, ಗರ್ಭದಲ್ಲಿರುವ ಶಿಶುವಾದರೂ ತಂದೆಯ ದ್ರವ್ಯವನ್ನನುಭವಿಸುವುದಕ್ಕೆ ಬಾಧ್ಯನಾಗುವನೆಂದು ಎನ್ನ ಅಪ್ಪಣೆಯಂ ಮಂತ್ರಿಗೆ ಪೇಳುವುದು'' ಎಂದು ನುಡಿಯಲು;

ಆ ದ್ವಾರಪಾಲಕಿಯು,—‘‘ಅಪ್ಪಣೆಯಾದಂತೆ ನಡೆದುಕೊಳ್ಳುವೆನು.'' ಎಂದು ಮಂತ್ರಿಯ ಸಮೀಪಕ್ಕೆ ಪೋಗುತ್ತಿರಲು ;

ಆ ರಾಯನು ಅವಳಂ ಕರೆದು—‘‘ಎಲೆ ಸ್ತ್ರೀಯೇ, ಆ ಧನಪಾಲನಿಗೆ ಮಕ್ಕಳಿರುವರೊ ಇಲ್ಲವೊ ಎಂಬ ವಿಚಾರಣೆಯಂ ಗೈದುದರಿಂ ಪ್ರಯೋಜನವಿಲ್ಲ. ಆದರೂ ಎನ್ನ ರಾಜ್ಯದಲ್ಲಿ ಯಾವಯಾವ ಪ್ರಜೆಗಳು ಮಕ್ಕಳು ಅಣ್ಣತಮ್ಮಂದಿರು ಮೊದಲಾದ ಬಂಧುಗಳಿಂ ವಿಯುಕ್ತರಾಗಿರುವರೋ ಪಾಪಕಾರ್ಯ ಒಂದು ಹೊರತು ಮಿಕ್ಕ ಕಾರ್ಯಂಗಳಲ್ಲಿ ಅವರುಗಳಿಗೆ ದುಷ್ಯಂತರಾಯನೇ ಮಗನಾಗಿ, ತಂದೆ

ತಾಯಿ ಮೊದಲಾದ ಬಂಧುವಾಗಿ, ಅವರಂ ಸಲಹುವನು ಎಂದು ನಮ್ಮ ಪುರದ ರಾಜಬೀದಿ ಮೊದಲಾದ ಸ್ಥಳಂಗಳಲ್ಲಿ ಡಂಗುರವಂ ಪೊಯ್ಸಿ ಸಾಱಿಸುವಂತೆ ಮಂತ್ರಿಗೆ ಪೇಳು'' ಎಂದು ಅಪ್ಪಣೆಯನ್ನೀಯಲು ;

ಆ ಸ್ತ್ರೀಯು—"ಆಜ್ಞೆಯಾದಂತೆ ಪೇಳುವೆನು'' ಎಂದು ಬಂದು, ಅದೇರೀತಿಯಿಂ ಮಂತ್ರಿಗೆ ಪೇಳಿ, ಬೀದಿಬೀದಿಗಳಲ್ಲಿ ಸಾಱಿಸಿ, ಮರಳಿ ರಾಯನಿರುವ ಪ್ರಮದವನಕ್ಕೆ ಬಂದು—"ಎಲೈ ಸ್ವಾಮಿಯೇ ನೀಸಿತ್ತ ಅಪ್ಪಣೆಯ ಮೇರೆ ಪುರದ ಬೀದಿಗಳಲ್ಲಿ ಸಾಱಿಸಲಾಗಿ ಅಮಾತ್ಯ ಮೊದಲಾದ ಸಕಲ ಪ್ರಜೆಗಳೂ ಕಾಲಕ್ಕೆ ಸರಿಯಾಗಿ ಸುರಿದ ಮಳೆಯಿಂ ಸಂತೋಷಮಂ ಪೊಂದುವರಂತೆ ಸಂತುಷ್ಟರಾದರು'' ಎಂದು ಬಿನ್ನೈಸಲು;

ಆ ರಾಯನು ಮಕ್ಕಳಿಲ್ಲವೆಂಬ ವ್ಯಸನವಂ ಮನದಲ್ಲಿಟ್ಟು ನಿಟ್ಟುಸಿರಂ ಬಿಟ್ಟು—"ಎಲೆ ದ್ವಾರಪಾಲಕಿಯೇ, ಲೋಕದಲ್ಲಿ ಸಂತಾನವಿಲ್ಲದ ವಂಶಕ್ಕೆ ಮೂಲಪುರುಷನಾದವನು ಮೃತಿಯಂ ಪೊಂದಲು ಅವನು ಸಂಪಾದಿಸಿದ ದ್ರವ್ಯವೆಲ್ಲಾ ಪರಾಧೀನವಾಗುವುದಱಿಂದ ಪುರುವಂಶದಲ್ಲಿ ಪುಟ್ಟಿದ ಎನ್ನ ಐಶ್ವರ್ಯವು ಪುತ್ರಾಭಾವದಿಂ ಅನ್ಯರಾಯರ ಸ್ವಾಧೀನವಾಗುವುದು'' ಎಂದುಅತ್ಯಂತ ವ್ಯಸನವುಳ್ಳವನಾಗುತ್ತಿರಲು ;

ಆ ಪ್ರತಿಹಾರಿಯು—"ಎಲೈ ಸ್ವಾಮಿಯೇ, ಈ ಕಾರ್ಯವು ನಿನ್ನ ಶತ್ರುಗಳಿಗೆ ಉಂಟಾಗುವುದಲ್ಲದೆ ಇಂಥ ಅಮಂಗಳ ಕಾರ್ಯವು ಎಂದಿಗೂ ನಿನ್ನಂ ಪೊಂದಲಾಗದು'' ಎಂದು ನುಡಿಯಲು;

ರಾಯನು—"ಎಲೆ ಸ್ತ್ರೀಯೆ, ಕೇಳು ಸಮೀಪಕ್ಕೆ ಬಂದಿರ್ದ ಸಂಪದ್ರೂಪಳಾದ ಶಕುಂತಲೆಯಂ ತಿರಸ್ಕಾರವಂ ಗೆಯ್ದಿರುವೆನ್ನಂ ನಿಂದಿಸು'' ಎಂದು ನುಡಿಯಲು;

ಸಾನುಮತಿಯು—"ಈ ರಾಯನು ಸಖಿಯಾದ ಶಕುಂತಲೆಯಂ ಹೃದಯದಲ್ಲಿಟ್ಟು ನಿಶ್ಚಯಮಾಗಿ ತನ್ನ ಶರೀರಮಂ ನಿಂದಿಸಿಕೊಳ್ಳುತ್ತಿರುವನು'' ಎಂದು ಯೋಚಿಸುತ್ತಿರಲು;

ರಾಯನು—"ಎಲೆ ದ್ವಾರಪಾಲಕಿಯೇ ಕೇಳು. ಮಹತ್ತಾದ ಫಲವನ್ನನುಭವಿಸುವುದಕ್ಕೋಸುಗ ಉತ್ಕೃಷ್ಟವಾದ ವರ್ಷಾಕಾಲದಲ್ಲಿ ನೆಲದಲ್ಲಿ ಬೀಜವನ್ನು ಇರಿಸುವಂತೆ ಶುಕ್ಲರೂಪದಿಂ ಬೀಜವನ್ನಿರಿಸಿ ಈಗ ಕುಲಪ್ರತಿಷ್ಠಾರೂಪಳಾಗಿ ಧರ್ಮಪತ್ನಿಯಾದ ಆ ಶಕುಂತಲೆಯಂ ಪುತ್ರಪ್ರಸವಕಾಲದಲ್ಲಿ ಧಿಕ್ಕಾರವಂ ಗೆಯ್ದ

ನು.'' ಎಂದು ಕೇಬನಿಯಂ ತುಂಬುತ್ತಿರಲು;

ಸಾನುಮತಿಯು— '' ರಾಯನಾಡುವ ವಾಕ್ಯದಿಂದಾಶಕುಂತಲೆಯು ಪೂರ್ಣಗರ್ಭಿಣಿಯಾಗಿರುವಳೆಂದು. ತೋರುವುದು, ಹಾಗಾದಲ್ಲಿ ಈ ರಾಯಂಗೆ ಧರ್ಮಾತ್ಮನಾ ನಾಶರಹಿತನಾದ ಪುತ್ರನು ಪುಟ್ಟುವನು.'' ಎಂದು ನುಡಿಯುತ್ತಿರಲು

ಆ ಪೊತ್ತಿನಲ್ಲಿ ನಿಂದಿರ್ದ ಚತುರಿಕೆಯು ರಾಯನಾಕಾರವಂ ನೋಡಿ ದ್ವಾರಪಾಲಕಿಯಂ ಪ್ರತ್ಯೇಕವಾಗಿ ಕರೆದು—''ಎಲೌ ಸಖಿಯೇ, ಧನಮಿತ್ರನು ಪುತ್ರರಹಿತನೆಂದು ಕೇಳಿದ್ದಱಿಂ ತನಗೂ ಪುತ್ರರಿಲ್ಲವೆಂದು ಅಧಿಕವಾದ ಚಿಂತಾಕ್ರಾಂತನಾಗಿರುವನು. ನೀನು ಜಾಗ್ರತೆಯಾಗಿ ಪೋಗಿ ಮೇಘಪ್ರತಿಚ್ಛಂದವೆಂಬ ಉಪ್ಪರಿಗೆಯಲ್ಲಿ ಪೂಜ್ಯನಾದ ಮಾಂಡವ್ಯನು ಭಾವಚಿತ್ರದ ಪಟವಂ ತೆಗೆದುಕೊಂಡು ಪೋಗಿರುವನು. ಅವನಂ ರಾಯನ ದುಃಖಸಮಾಧಾನವಂ ಗೆಯ್ಯುವುದಕ್ಕೋಸುಗ ಕರೆದುಕೊಂಡು ಬರುವುದು'' ಎನ್ನಲು;

ದ್ವಾರಪಾಲಕಿಯು ಸಂತೋಷಯುಕ್ತಳಾಗಿ, ''ಸಮಯಕ್ಕೆ ಸರಿಯಾದ ವಾಕ್ಯವಂ ಪೇಳಿರುವೆ'' ಎಂದು ನುಡಿದು ವಿದೂಷಕನಿರುವ ಉಪ್ಪರಿಗೆಯಂ ಕುಱಿತು ಪೋಗಲು;

ರಾಯನು—'' ಪುತ್ರವಿಹೀನನೆಂದು ಸಂಶಯವಂ ಪೊಂದುತ್ತಿರುವ ಎನ್ನ ಪಿತೃದೇವತೆಗಳಿಗೆ ಕಾಲಾನಂತರದಲ್ಲಿ ವೇದೋಕ್ತ ತಿಲೋದಕ ಮೊದಲಾದ ಉತ್ತರಕ್ರಿಯೆಯನ್ನು ಎನ್ನ ವಂಶದಲ್ಲಿಯಾವ ಪುರುಷನು ಪುಟ್ಟಿ ಮಾಡುವನೋ ತಿಳಿಯದು? ಅದಲ್ಲದೆ ಆ ಪಿತೃದೇವತೆಗಳು ಪುತ್ರಾಭಾವದಿಂ ದುಃಖವಂ ಪೊಂದುತ್ತಿರುವ ಎನ್ನ ನಿರ್ಮಲವಾದ ಕಣ್ಣೀರಂ ಪಾನವಂ ಗೆಯ್ಯುವರೋ ತಿಳಿಯದು'' ಎಂದು ಮೂರ್ಛೆಯಂ ಪೊಂದಿ, ಪುಷ್ಪಪರಾಗದಿಂ ಪೂರಿತಮಾದ ಮಾಧವೀಮಂಟಪದ ಭೂಮಿಯಲ್ಲಿ ಬೀಳಲು ;

ಆ ಚತುರಿಕೆಯು ಅದಂ ಕಂಡು, ಅತ್ಯಂತ ಭಯಭ್ರಾಂತಳಾಗಿ, ಆ ರಾಯಂಗೆ ಬೀಸಣಿಗೆ ಮುಂತಾದ ಉಪಚಾರವಂ ಗೆಯ್ದು ಸಂತೈಸುತ್ತಿರಲು ;

ಸಾನುಮತಿಯು ರಾಯನಂ ನೋಡಿ ಹಾಹಾಕಾರವಂ ಗೆಯ್ದು—''ಮಹಾಪ್ರಮಾದ ಬಂದುದು! ಮುಂದೆ ಗತಿಯೇನು! ಈರಾಯನು ದೀಪವಿದ್ದರೂ ಒಂದು ಪದಾರ್ಥದ ಮಱೆಯಿಂ ಅಂಧಕಾರವನ್ನು ಅನುಭವಿಸುತ್ತಿರುವನು. ಆ ಶಕುಂತಲೆಯೊಡಗೂಡಿಸುವಂತೆ ಮಾಡುವೆನು. ಮತ್ತು ಯಜ್ಞಭಾಗವಂ ಸಂಗ್ರಹಿಸುವುದಕ್ಕೋಸುಗ ಬಂದಿರ್ದ ದೇವತೆಗಳು ರಾಯನಂ ಕುಱಿತು—''ಎಲೈ ರಾಯನೇ,

ನೀನು ಶೀಘ್ರವಾಗಿ ನಿನ್ನ ಧರ್ಮಪತ್ನಿಯಾದ ಶಕುಂತಲೆಯಂ ಕೂಡಿ ಸಂತುಷ್ಟನಾಗೆಂದು ಪೇಳಿದರೆಂಬ ವಾರ್ತೆಯಂ ಕೇಳಿರ್ದೆನು. ಆ ವಾರ್ತೆಯು ಸ್ಮರಣೆಗೆ ಬಂದಿರುವುದು. ಈ ರಾಯನು ವಿರಹಾತುರನಾಗಿ ನಾನಾವಿಧಾವಸ್ಥೆಗಳಂ ಪೊಂದುವುದನ್ನಾ ಶಕುಂತಲೆಗೆ ಪೇಳಿ, ಅವಳಂ ಸಂತಸಂಗೊಳಿಸುವೆನು. ಇನ್ನು ಕಾಲ ವಿಳಂಬನವಂ ಮಾಡುವುದು ಯುಕ್ತಮಲ್ಲ'' ಎಂದು ವಿಮಾನಾರೂಢಳಾಗಿ ಗಗನ ಮಾರ್ಗವಂ ಕುಱಿತು ಹೋಗಲು;

ಇತ್ತಲು ವಿದೂಷಕನು ಮೇಘಪ್ರತಿಚ್ಛಂದವೆಂಬ ಉಪ್ಪರಿಗೆಯಲ್ಲಿ ಭಾವ ಚಿತ್ರದ ಪಟವಂ ಪಿಡಿದು ಇರುತ್ತಿರಲು;

ಇಂದ್ರನು ಸ್ವರ್ಗವನ್ನಾಕ್ರಮಿಸಿ ಯುದ್ಧವಂ ಗೆಯ್ಯುತ್ತಿರುವ ರಾಕ್ಷಸರಂ ನಿಗ್ರಹಿಸುವುದಕ್ಕೋಸುಗ ಮಾತಲಿ ಎಂಬ ಸಾರಥಿಗೆ-ಭೂಲೋಕಕ್ಕೆ ರಥವಂ ತೆಗೆದು ಕೊಂಡು ಪೋಗಿ ಶೂರಾಗ್ರೇಸರನಾದ ದುಷ್ಯಂತರಾಯನಂ ಸ್ವರ್ಗಕ್ಕೆ ಕರೆದು ಕೊಂಡುಬರುವುದೆಂದು ಅಪ್ಪಣೆಯನ್ನೀಯಲಾ ಮಾತಲಿಯು ರತ್ನಮಯವಾದ ರಥವಂ ತೆಗೆದುಕೊಂಡು ಬರುತ್ತಾ ಪ್ರಮದವನದ ಸಮೀಪದಲ್ಲಿರುವ ಉಪ್ಪರಿಗೆ ಯಲ್ಲಿ ಒಬ್ಬನೇ ಇರ್ದ ವಿದೂಷಕನಂ ಕಂಡು ಇವನಂ ವಿನೋದವಂ ಗೆಯ್ಯಬೇಕೆಂದು ತಿರಸ್ಕರಣೀವಿದ್ಯೆಯಿಂದ ರಥವಂ ಮಱೆಗೆಯ್ದು ತಾನು ಕಾಣದಂತೆ ಬಂದು ಆ ವಿದೂಷಕನ ಕತ್ತಂ ಪಿಡಿದು ನೋಯಿಸಲು ;

ವಿದೂಷಕನು ಭಯಭ್ರಾಂತನಾಗಿ ‹‹ ಇದೇನೋ ಒಂದು ಪಿಶಾಚವೋ ಅಲ್ಲವಾದಲ್ಲಿ ರಾಕ್ಷಸನೋ, ಯಾರೋ ಎನ್ನಂ ಕೊಲ್ಲುವರು ಸಂರಕ್ಷಿಸು, ಸಂರಕ್ಷಿಸು!'' ಎಂದು ಘೋರವಾಗಿ ರಾಯನಂ ಕೂಗಲು;

ರಾಯನು ಮೂರ್ಛೆದಿಳಿದು ಆ ಶಬ್ದವನ್ನು ಕಿವಿಗೊಟ್ಟು ಕೇಳಿ,—‹‹ಎಲೆ ವೇತ್ರವತಿಯೇ, ಈ ದೀನಸ್ವರವು ವಿದೂಷಕನದಾಗಿ ತೋಱುವುದು?'' ಎನಲಾ ದ್ವಾರಪಾಲಕಿಯು ಭಯಾನ್ವಿತಳಾಗಿ,—‹‹ಎಲೈ ಸ್ವಾಮಿಯೇ, ನಿನ್ನ ಮಿತ್ರನಾದ ಮಾಂಡವ್ಯನು ಯಾವನಿಂದಲೋ ಸಾತಿಯಂ ಹೊಂದಿದಂತೆ ಕೂಗುತ್ತಿರುವನು '' ಎನ್ನಲಾರಾಯನು— ‹‹ಎಲೆ ಸ್ತ್ರೀಯೇ, ಯಾವನಿಂದ ಮಾಂಡವ್ಯನು ಆರ್ತಸ್ವರೂಪವುಳ್ಳವನಾದನು?'' ಎನ್ನಲಾಸ್ತ್ರೀಯು—‹‹ಎಲೈ ಸ್ವಾಮಿಯೇ ಅದೃಶ್ಯರೂಪವಂ ತಾಳಿ ಬಂದದಾನೊಂದು ಪಿಶಾಚವು ಆ ಉಪ್ಪರಿಗೆಯನ್ನೇಱಿ ವಿದೂಷಕನಂ ಬಾಧಿಸುವಂತೆ ತೋಱುವುದು '' ಎನ್ನಲಾ ರಾಯನು—‹‹ ಎಲೆ ಸ್ತ್ರೀಯೇ, ಎನ್ನ ಮನೆಯನ್ನು ಪಿಶಾಚಗಳು ಎಂತು ಪ್ರವೇಶವಂ ಗೆಯ್ಯುವುದು ?'' ಎಂದು ನುಡಿದು,

“ಹಾಗಲ್ಲದಿದ್ದರೆ ಲೋಕದಲ್ಲಿ ಜನಗಳು ಪ್ರತಿದಿನದಲ್ಲಿಯೂ ನಡೆಯುವ ವ್ಯಾಪಾರರಂಗಳ ಅಜ್ಞಾನದಿಂದ ತಿಳಿಯದೆ ಇರುವಲ್ಲಿ ಪ್ರಾಣಿಗಳಲ್ಲಿ ಯಾವನು ಯಾವ ಮಾರ್ಗದಲ್ಲಿ ಸಂಚರಿಸುತ್ತಿರುವನೋ ತಿಳಿಯುವುದಕ್ಕಾಗಲಾರದು. ಆದಕಾರಣದಿಂದ ಪಿಶಾಚಂಗಳು ಎನ್ನ ಉಪ್ಪರಿಗೆಯಲ್ಲಿ ಸೇರಿರ್ದರೂ ಇರಬಹುದು.” ಎಂದು ನುಡಿಯುತ್ತಿರಲು;

ವಿದೂಷಕನು—“ನಾನು ರಕ್ಷಕರಿಲ್ಲದೆ ಕಷ್ಟಪಡುವೆನು” ಎಂದು ಮರಳಿ ಕೂಗಲು;

ರಾಯನು ತಾನಿರ್ದ ಮಾಧವೀಮಂಟಪವಂ ಬಿಟ್ಟು ಕೆಲವುದೂರ ಬಂದು, “ಎಲೈ ಮಿತ್ರನಾದ ಮಾಂಡವ್ಯನೇ, ಭಯವಂ ಪೊಂದಬೇಡ” ಎಂದು ಕೂಗಲು;

ವಿದೂಷಕನು—“ಎಲೈ ಮಹಾರಾಯನೇ, ಯಾವನೋ ಒಬ್ಬನು ಎನ್ನ ಕತ್ತನ್ನು ಹಿಂದಕ್ಕೆ ಎಳೆದು ಕಬ್ಬಂ ಮುರಿಯುವಂತೆ ತೀಕ್ಷ್ಣವಾಗಿ ಮುರಿಯುತ್ತಲಿರುವನಾದ್ದರಿಂದ ನಾನು ಭಯವಂ ಪೊಂದದೆ ಹೇಗೆ ಇರುವುದಕ್ಕೆ ಆಗುವುದು?” ಎಂದು ಕೂಗಲು;

ರಾಯನು ನಾಲ್ಕುದಿಕ್ಕಂ ನೋಡಿ ಚಂಡವಾದ ಕೋದಂಡಮಂ ಪಿಡಿದು ಆ ಧನುಸ್ಸಿನಲ್ಲಿ ತೀಕ್ಷ್ಣವಾದ ಬಾಣಸಂಧಾನವಂ ಗೆಯ್ಯುತ್ತಿರಲು;

ಅಷ್ಟರಲ್ಲೇ ಸಾರಥಿಯು—“ಎಲೈ ವಿದೂಷಕನೇ, ನಿನ್ನ ಕತ್ತಿನಲ್ಲಿರುವ ಬಿಸಿಯ ರಕ್ತವನ್ನು ಅಪೇಕ್ಷಿಸುತ್ತಿರುವ ಈ ನಾನು ವ್ಯಾಘ್ರವು ಓಡಿಹೋಗುತ್ತಿರುವ ಗೋವಂ ಪಿಡಿದು ಸಂಹರಿಸುವಂತೆ ಕೊಲ್ಲುವೆನು. ಸಮಸ್ತ ದೀನರಾದವರ ಭಯವಂ ಪರಿಹರಿಸುವುದಕ್ಕೋಸುಗ ಪಿಡಿದು ಇರುವ ಧನುಸ್ಸಿನಿಂ ಯುಕ್ತನಾದ ದುಷ್ಯಂತರಾಯನು ಈಗ ನಿನಗೆ ಸಂರಕ್ಷಕನಾಗಲಿ!” ಎಂದು ಘೋರವಾಗಿ ಕೂಗಿದ ಶಬ್ದವಂ ರಾಯಂ ಕೇಳಿ, “ಯಾವನೋ ಒಬ್ಬ ರಾಕ್ಷಸನಾಗಿರಬಹುದು” ಎಂದು ಮನದಂದು, “ಎಲೆ ಸ್ತ್ರೀಯೇ, ಎನ್ನ ನಾಮವಂ ತೆಗೆದುಕೊಂಡು ಯಾವನೋ ರಾಕ್ಷಸನು ಕೂಗುವನು” ಎಂದು ನುಡಿದು, ಅಧಿಕರೋಷದಿಂ ಯುಕ್ತನಾಗಿ—“ಎಲೈ ರಾಕ್ಷಸಾಧಮನೇ, ನಿನ್ನಂ ದಿಗ್ಬಲಿಯನ್ನೀಯುವೆನು” ಎಂದು ಧನುಸ್ಸಿನಲ್ಲಿ ಬಾಣವನ್ನು ಹೂಡಿ, “ಎಲೆ ಸ್ತ್ರೀಯೇ, ಆ ಉಪ್ಪರಿಗೆಯಂ ಕುರಿತು ನಡೆ” ಎಂದು ನುಡಿಯಲವಳು ಆ ಉಪ್ಪರಿಗೆಯ ಸೋಪಾನಮಾರ್ಗವನ್ನನುಸರಿಸಿ ರಾಯನಂ ಕರೆದುಕೊಂಡು ಬರಲು;

ರಾಯನಾವುಪ್ಪರಿಗೆಯ ಸುತ್ತಲೂ ನೋಡಿ ಯಾರನ್ನೂ ಕಾಣದೆ—" ದ್ವಾರಪಾಲಕಿಯೇ, ಈಗ ಪ್ರಾಸಾದವು ಜನರಿಂ ಶೂನ್ಯವಾಗಿರುವುದು. ವಿದೂಷ ಧ್ವನಿ ಮಾತ್ರ ಕೇಳಿಬರುವುದು " ಎಂದು ನುಡಿಯಲು;

ವಿದೂಷಕನು—" ಎಲೈ ಸ್ವಾಮಿಯೇ. ನಿನ್ನಂ ನಾನು ನೋಡುತ್ತಿ ವೆನು. ಎನ್ನಂ ನೀನು ಕಾಣದೆ ಇರುವೆ. ಬೆಕ್ಕು ಹಿಡಿದ ಇಲಿಯಂತೆ ಪ್ರಾಣ ಆಸೆಯಿಲ್ಲದೆ ಇರುವೆನು" ಎನ್ನಲು;

ರಾಯನು—"ಎಲೈ ವಿದೂಷಕನೇ, ನೀನು ತಿರಸ್ಕರಣೀ ವಿದ್ಯದಿಂ ಅ ನಾಗಿರುವೆ ಆದರೂ ನನ್ನ ಬಾಣವು ನಿನ್ನಂ ಕಾಣುತ್ತಿರುವುದು. ನೀನು ಭಯ ಬಿಟ್ಟು ಸ್ಥಿರನಾಗು"ಎಂದು ಪೇಳಿ, ಕ್ರೂರವಾದ ಬಾಣವಂ ಧನುಸ್ಸಿನಲ್ಲಿ ಸಂಧಾ ಗೆಯ್ದು, "ಎಲೈ ಮಿತ್ರನೇ, ಹಂಸೆಯು ಹೇಗೆ ಜಲದಿಂ ಬೆರೆದಿರುವ ಕ್ಷೀ ಗ್ರಹಿಸಿ ನೀರಂ ಬಿಡುತ್ತಿರುವುದೋ ಆದಱಂತೆ ಎನ್ನ ಬಾಣವು ಅದೃಶ್ಯನಾಗಿ ಬ್ರಾ ಣನಾಗಿರುವ ನಿನ್ನಂ ಬಿಟ್ಟು ನಿನ್ನಂ ಬಾಧಿಸುತ್ತಿರುವ ಪುರುಷನಂ ಸಂಹರಿಸುತ್ತಿ ವುದು " ಎಂದು ಬಾಣವಂ ನಾರಿಯಲ್ಲಿ ಸೇರಿಸಿ ಕರ್ಣಾಂತವಾಗಿ ಸೆಳೆದು ವಷ್ಟಱಲ್ಲೇ ಆ ಮಾತಲಿಯು ವಿದೂಷಕನಂ ಬಿಟ್ಟು ತಿರಸ್ಕರಣೀ ವಿದ್ಯವಂ ಹೆ ತಟ್ಟಿ ರಾಯನ ಸಮ್ಮುಖಕ್ಕೆ ಬರಲು;

ವಿದೂಷಕನು ವ್ಯಾಘ್ರಮುಖದಿಂದ ತಪ್ಪಿ ಬಂದವನಂತೆ ಭಯದಿಂದ ಗುತ್ತಾ ಮಾತಲಿಯಿಂ ಮುಕ್ತನಾಗಿ, ರಾಯನ ಸಮೀಪವಂ ಸೇರುತ್ತಿರಲು;

ಆ ಮಾತಲಿಯು ರಾಯಂಗೆ ವಂದನೆಯಂ ಮಾಡಿ, "ಎಲೈ ಮಹಾ ನಾದ ದುಷ್ಯಂತರಾಯನೇ, ಎನಗೆ ಸ್ವಾಮಿಯಾದ ದೇವೇಂದ್ರನು ಶತ್ರುಗಳ ರಾಕ್ಷಸರಂ ತನ್ನ ಬಾಣಕ್ಕೆ ಗುಱಿಮಾಡಿರುವನು. ನೀನು ನಿನ್ನ ಹಸ್ತದಲ್ಲಿ ಧನುಸ್ಸನ್ನಾ ರಾಕ್ಷಸರಲ್ಲಿ ಸೆಳೆದು ಬಾಣಗಳಂ ಪ್ರಯೋಗಿಸುವುದು ಯುಕ್ತ ಲೋಕದಲ್ಲಿ ದಯೆಯಿಂ ಸೌಮ್ಯರಾದ ಸತ್ಪುರುಷರ ನೇತ್ರಂಗಳು ತಮ್ಮ ಸ್ನೇ ರಲ್ಲಿ ಅನುರಾಗಯುಕ್ತಂಗಳಾಗಿ ಆಗುವುವಲ್ಲದೆ ಅಪ್ರಕಾರಕ್ಕೆ ದುಷ್ಟರಲ್ಲಿ ಲಾಱವು. ಅದಱಂತೆ ನಿನ್ನ ಬಾಣಂಗಳು ಮಿತ್ರನಾದ ವಿದೂಷಕನಂ ವ್ಯಥೆಪ ತಿರ್ದ ಎನ್ನಲ್ಲಿ ಬೀಳಲಾಱವು" ಎಂದು ನುಡಿಯಲು;

ರಾಯನು ತಾನು ಧನುಸ್ಸಿನಲ್ಲಿ ಪೂಡಿರ್ದ ಬಾಣವನ್ನಿಳುಹಿ, "ಎಲೈ ಇ ಸಾರಥಿಯಾದ ಮಾತಲಿಯೇ, ನಿನಗೆ ಕುಶಲವೆ?" ಎಂದು ಬೆಸಗೊಳ್ಳಲು, ಆ ವಿ ಷಕನು ಅತ್ಯಂತ ಕೋಪದಿಂ ಯುಕ್ತನಾಗಿ, " ಎಲೈ ರಾಯನೇ, ಯಜ್ಞಕ್ಕೆ

ಪಶುವಂ ಕೊಲ್ಲುವಂತೆ ಎನ್ನಂ ಸಂಹರಿಸುತಿರ್ದ ಇವನಂ ಕುಱಿತು, 'ಇಂದ್ರಸಾರಥಿಯೇ ಕುಶಲವೆ' ಯೆಂದು ಕೇಳುವ ನಿನ್ನ ವಾಕ್ಯವು ಬಹು ಚೆನ್ನಾದುದು!" ಎಂದು ನುಡಿಯಲು;

ಮಾತಲಿಯು—"ಎಲೈ ಮಹಾರಾಯನೇ, ತ್ರಿಲೋಕಾಧಿಪತಿಯಾದ ದೇವೇಂದ್ರನು ನಿನ್ನ ಬಳಿಗೆ ನನ್ನಂ ಕಳುಹಿಸಿ ಇರುವನು. ಏಕೆಂದರೆ:—ಕಾಲನೇಮಿಯ ಪುತ್ರರಾದ ಮಹಾ ಪರಾಕ್ರಮಶಾಲಿಗಳಾದ ರಾಕ್ಷಸರಿರುವರು" ಎನಲಾ ರಾಯನು, "ಆ ರಾಕ್ಷಸರು ಮಹಾ ಬಲಿಷ್ಠರು! ಅಂತಹ ಪುರವಾದ ಸ್ವರ್ಗವನ್ನೂ ಆಕ್ರಮಿಸಿ ಬಾಧಿಸುತ್ತಿರುವರೆಂದು ದೇವಋಷಿಯಾದ ನಾರದರ ವಚನದಿಂ ತಿಳಿದಿರುವೆನು" ಎನಲು;

ಮಾತಲಿಯು—"ಎಲೈ ಸ್ವಾಮಿಯೇ, ನಿನ್ನ ಸ್ನೇಹಿತನಾದ ಇಂದ್ರನು ಆ ಕಾಲನೇಮಿಪುತ್ರರಾದ ರಾಕ್ಷಸರೊಡನೆ ಯಥಾರ್ಥವಾಗಿ ರಣಭೂಮಿಯಂ ಕುಱಿತು ಪೋಗಿ ಅಲ್ಲಿ ಈ ರಾಕ್ಷಸರಂ ಸಂಹರಿಸುವುದಕ್ಕೆ ಯೋಗ್ಯನಾಗಿರುವನು ದುಷ್ಯಂತರಾಯನೇ ಸರಿ ಎಂದು ನಿನ್ನಂ ಸ್ಮರಿಸಿ, ಎನ್ನಂ ಇಲ್ಲಿಗೆ ಕಳುಹಿಸಿರುವನು. ಆದರೂ ಯಾವ ಅಂಧಕಾರವು ಸೂರ್ಯನ ತೇಜಸ್ಸಿನಿಂ ಪೋಗುವುದಕ್ಕೆ ಅಸಾಧ್ಯವಾಗಿರುವುದೋ ಆ ಕತ್ತಲೆಯಂ ಚಂದ್ರನೆಂತು ಪರಿಹರಿಸುವನೋ ತಿಳಿಯದು. ತ್ರಿಲೋಕಾಧಿಪತಿಯಾದ ಇಂದ್ರನು ಸಂಹರಿಸಲಾಱದ ರಾಕ್ಷಸರಂ ನೀನೆಂತು ಸಂಹರಿಸುವೆಯೋ ಕಾಣೆನು. ಪೂಜ್ಯನಾದ ನೀನು ಧನುರ್ಬಾಣಬತ್ತಳಿಕೆಗಳಂ ಧರಿಸಿ ರತ್ನಮಯವಾದ ಈ ಇಂದ್ರರಥವನ್ನಾರೋಹಣವಂ ಗೆಯ್ದು ಸ್ವರ್ಗಕ್ಕೆ ಬಿಜಯಂಗೆಯ್ಯಬಹುದು" ಎಂದು ನುಡಿಯಲು;

ರಾಯನು—"ಎಲೈ ಮಾತಲಿಯೇ, ಪೂಜ್ಯನಾದ ಇಂದ್ರನ ಆಜ್ಞೆಯು ಎಂತಾಗಿರುವುದೋ ಆಪ್ರಕಾರಕ್ಕೆ ನಡೆದುಕೊಳ್ಳುವೆನು" ಎಂದು ನುಡಿದು, "ಈ ವಿದೂಷಕನಂ ಏನುಕಾರಣಕ್ಕೋಸುಗ ವ್ಯಥೆಪಡಿಸಿದೆ?" ಎನ್ನಲು;

ಮಾತಲಿಯು—"ಅಯ್ಯಾ ಮಹಾರಾಜನೇ, ಆ ವೃತ್ತಾಂತವಂ ಪೇಳುವೆನು ಕೇಳು. ಪ್ರಮುದವನಮಧ್ಯದಲ್ಲಿ ಅತ್ಯಂತ ಚಿಂತಾನ್ವಿತನಾಗಿ ಕಾಂತಿವಿಹೀನನಾಗಿರುವ ಪೂಜ್ಯನಾದ ನಿನ್ನಂ ಕಂಡು—ಏನು ಕಾರಣದಿಂದಲೋ ಈ ಮಹಾರಾಯನು ವ್ಯಸನಾತುರನಾಗಿರುವನು, ಇವನಿಗೆ ವ್ಯಥೆಯಂ ಪುಟ್ಟಿಸಲು ಆ ಚಿಂತೆಯು ಪೋಗಿ ಕ್ರೋಧವುಂಟಾಗುವುದೆಂದು ಯೋಚಿಸಿ ಈ ವಿದೂಷಕನಂ ವ್ಯಥೆಪಡಿಸಿದೆನು. ಆದರೂ ಲೋಕದಲ್ಲಿ ಉರಿಯುತಿರ್ದ ಅಗ್ನಿಯಂ ಕಡ್ಡಿಯಿಂದ ಕೆದಱಲು ಪ್ರಜ್ವಲಿಸುತ್ತಿರು

ವುದು. ಸರ್ಪವು ವ್ಯಥೆಯಂ ಹೊಂದಿಸಲು ಹೆಡೆಯನ್ನೆತ್ತಿ ಕಚ್ಚುವುದಕ್ಕೆ ಬರುವುದು. ಸಮಸ್ತಜನರು ಒಬ್ಬನಿಂ ಕ್ಷೋಭೆಯುಂಟಾದ ಕಾಲದಲ್ಲಿ ತಮ್ಮತಮ್ಮ ಮಹಾತ್ಮೆಯಂ ತೋಱುತ್ತಿರುವರಾದ್ದಱಿಂ ನಿನಗೆ ಕೋಪವುಂಟಾದಕಾಲದಲ್ಲಿ ಏನು ಕಾರ್ಯವಂ ಗೆಯ್ಯುವೆಯೋ ನೋಡುವೆನೆಂದು ಈರೀತಿಯಿಂ ಗೆಯ್ದೆನು '' ಎಂದು ನುಡಿಯಲು;

ರಾಯನು—“ ಎಲೈ ಮಾತಲಿಯೇ, ಚೆನ್ನಾಗಿ ಮಾಡಿದೆ !'' ಎಂದು ನಸುನಗುತ, ವಿದೂಷಕನಂ ಏಕಾಂತಕ್ಕೆ ಕರೆದು, “ ಎಲೈ ವಿದೂಷಕನೇ ತ್ರಿಲೋಕಾಧಿಪತಿಯಾದ ಇಂದ್ರನ ಆಜ್ಞೆಯು ಮೀಱತಕ್ಕದ್ದಲ್ಲವಾಗಿರುವುದಱಿಂದ ಈ ವೃತ್ತಾಂತವಂ ಮಂತ್ರಿಯಾದ ಆರ್ಯಪಿಶುನಂಗೆ ಪೇಳುವುದಲ್ಲದೆ ಇನ್ನು ಕೆಲವು ವಾಕ್ಯವು ಪೇಳತಕ್ಕುದಿರುವುದು. ಏನೆಂದರೆ—ನಾನು ಧನುರ್ಧಾರಿಯಾಗಿ ರಾಕ್ಷಸ ಸಂಹಾರಕ್ಕೋಸುಗ ಸ್ವರ್ಗಕ್ಕೆ ಪೋಗುವೆನಾದ್ದಱಿಂ ನಾನು ಬರುವವರೆಗೂ ಸಮಸ್ತ ಪ್ರಜೆಗಳಂ ಧರ್ಮದಿಂ ಸಲಹುತ್ತಿರುವುದೆಂದು ಎನ್ನಾಜ್ಞೆಯಂ ಪೇಳುವುದು '' ಎಂದು ಅಪ್ಪಣೆಯನ್ನೀಯಲು;

ವಿದೂಷಕನು—“ ನಿನ್ನ ಆಜ್ಞೆಯಾದಂತೆ ನಡೆದುಕೊಳ್ಳುವೆನು '' ಎಂದು ಪೋಗಲು;

ಮಾತಲಿಯು ರಥವಂ ತಂದು ರಾಯನ ಮುಂಭಾಗದಲ್ಲಿರಿಸಲಾರಾಯನು ಧನುರ್ಬಾಣವಂ ಧರಿಸಿ ಆ ಇಂದ್ರರಥಾರೋಹಣಂವಂ ಗೆಯ್ಯುವುದಕ್ಕೆ ಉದ್ಯುಕ್ತನಾದನು.

ಎಂಬಲ್ಲಿಗೆ

ಕೃಷ್ಣರಾಜಕಂಠೀರವರು ರಚಿಸಿದ ಕೃಷ್ಣರಾಜವಾಣೀವಿಲಾಸರತ್ನಾಕರವೆಂಬ ಶಾಕುಂತಲನಾಟಕ ನವೀನಟೀಕಿನಲ್ಲಿ ದುಷ್ಯಂತರಾಯನು ಮಾತಲಿ ತಂದ ಇಂದ್ರರಥಾರೋಹಣವಂ ಗೆಯ್ದು ಸ್ವರ್ಗಕ್ಕೆ ಪೋಗಲುದ್ಯುಕ್ತನಾದನೆಂಬ ಚತುರ್ಥಕಲ್ಲೋಲದಲ್ಲಿ ತೃತೀಯತರಂಗಂ ಸಂಪೂರ್ಣಂ.

ಚತುರ್ಥಕಲ್ಲೋಲದ ಚತುರ್ಥತರಂಗಂ.

ಅನಂತರದಲ್ಲಿ ರಾಜಾಧಿರಾಜನಾದ ದುಷ್ಯಂತಮಹಾರಾಯನು ನವರತ್ನಕಲಶಂಗಳಿಂ ಸಾಲಾಗಿ ಮೇಲಾಗಿ ಮೆರೆಯುತ್ತಿರುವ ಕಿಱುಗಂಟೆಗಳಿಂ, ಸುತ್ತಲೂ ಮೊತ್ತವಾಗಿ ಸೇರಿಸಿರುವ ಪತಾಕೆಗಳಿಂ, ವಾಯುವೇಗವನೊಳಕೊಂಡು ಮನೋವೇಗದ ಮಹಿಮೆಯಂ ಮಟ್ಟುಗೆಯ್ಯುತ್ತಿರುವ ಜಾತ್ಯಶ್ವಗಳಿಂ ಮನೋಹರವಾದ ಶಚೀಪತಿಯ ರಥವನ್ನಾರೋಹಣವಂ ಗೆಯ್ಯಲು;

ಮಾತಲಿಯು ಅಶ್ವಗಳನ್ನು ಅಂತರಿಕ್ಷವನ್ನಾಕ್ರಮಿಸುವಂತೆ ಕಶಾಗ್ರದಿಂ ಸಂಜ್ಞೆಯಂ ಗೆಯ್ದಿದಮಾತ್ರದಿಂದಲೇ ಆ ಕುದುರೆಗಳು ಸ್ವರ್ಗಮಾರ್ಗವನ್ನನುಸರಿಸಿ ಪೋಗುತ್ತಿರಲು;

ರಾಯನು ಅಲ್ಲಲ್ಲಿರುವ ಪರ್ವತ, ಪುರ, ಪುಣ್ಯಕ್ಷೇತ್ರ ಮೊದಲಾದ ಸ್ಥಾನಂಗಳಂ ನೋಡುತ್ತ ಬರಲು—ಮುಂಭಾಗದಲ್ಲಿ ಮನೋವಾಕ್ಕುಗಳಿಗೆ ಅಗೋಚರವಾದ ಮಹಿಮೆಯಿಂದೊಪ್ಪುತ, ಸಗರಪುತ್ರರುಗಳಿಗೆ ಸ್ವರ್ಗಸೋಪಾನರೂಪಗಳಾದ, ತನ್ನ ತೀರದಲ್ಲಿ ಸೇರಿ ಬೆಳೆದಿರುವ ಸುವರ್ಣಕಮಲಗಳಿಂದ ಹೊಱಸೂಸುತ್ತಿರುವ ಮಕರಂದಧಾರೆಗಳಂ ಪೀಱಿ ಮದವೇಱಿ ಝುಂಕಾರವಂ ಗೆಯ್ಯುತ್ತಿರುವ ತುಂಬಿಗಳ ಗಾನಸ್ವರವಂ ಕೇಳುತ್ತ ತಮ್ಮ ಚಂಚೂಪುಟಗಳಿಂದ ಸ್ವರ್ಣಮೃಣಾಳಪಂಚಕಾಕಾರವಂ ಗೆಯ್ಯುತ್ತ ತಮ್ಮ ಪಕ್ಷವಿಕ್ಷೇಪಗಳಿಂ ಪುಟ್ಟಿದ ಜಲಶೀಕರಗಳಿಂದ ಗಗನಮಾರ್ಗದಲ್ಲಿ ಮಂಜಿನ ಮಳೆಗಾಲದ ಶಂಕೆಯಂ ಪುಟ್ಟಿಸುತ್ತ, ಶೈತ್ಯ, ಸೌರಭ್ಯ, ಮಾಂದ್ಯದಿಂದೊಡಗೂಡಿ ಚಲಿಸುತ್ತಿರುವ ಮಱುಗಾಳಿಯಿಂ ಹೊಱಸೂಸಿದ ಕಮಲಪರಾಗಗಳಿಂ ಹೊಂಬಣ್ಣಮಾದ ಮೈಸಿರಿಯಿಂದೊಪ್ಪುತಿರುವ, ಅನೇಕ ರಾಜಹಂಸೆಗಳಿಂದ ಭಾಸುರಳಾಗಿ, ಭೂಲೋಕದ ಜನರುಗಳಂತೆ ಸ್ವರ್ಗಲೋಕಸ್ಥಿತರಾದ ಇಂದ್ರಾದಿದೇವತೆಗಳಂ ಪಾವನರಂ ಮಾಡಲೋಸುಗ ಬಂದಿರುವಳೋ ಎಂಬಂತೆ, ಮತ್ತು ತನ್ನ ಮಾಹಾತ್ಮ್ಯೆಯಿಂದ ಸಮಸ್ತ ಜನರ ಮಹಾಪಾತಕಂಗಳಂ ಪರಿಹರಿಸಿ ಸ್ವರ್ಗಲೋಕವನ್ನೇಱಿಸಿದ ಸಗರಪುತ್ರರು ಮೊದಲಾದವರ ಯೋಗಕ್ಷೇಮವಂ ನೋಡಲೋಸುಗ ಬಂದಿರುವಳೋ ಎಂಬಂತೆ ನಿರ್ಮಲೋದಕದಿಂ ಸಂಪೂರ್ಣಳಾಗಿ ಹರಿಯುತ್ತಿರುವ—ದೇವಗಂಗೆಯಂ ಕಂಡು, ಮನದಲ್ಲಿ ನಮಸ್ಕರಿಸಿ, ಅಲ್ಲಲ್ಲಿ ಪೊಳೆದೋಱಿ ಪಱಿಬರುವ ಯೌವನದಿಂದೊಪ್ಪುತ್ತಿರುವ ದೇವಕಾಂತೆಯರು ತಂಪುದೋಱುವ ಮಂದಾರ

ವೃಕ್ಷಂಗಳ ನೆರಳುಗಳಲ್ಲಿ ಕುಳಿತು ವೀಣೆಗಳಂ ಕರದಲ್ಲಿ ಪಿಡಿದು ತಂತ್ರೀಸ್ವರದೊಡನೆ ತಮ್ಮ ಕಂಠನಾದವಂ ಜತೆಗೊಳಿಸಿ ಕಿವಿಗಿಂಪಾಗಿ ಪಾಡುವ ಸೊಂಪುದೋಱುವ ಗಾನಸ್ವರವನ್ನನುರಾಗದಿಂ ಕೇಳುತ್ತ-ನಂದನವನದಲ್ಲಿರುವ ಸುಂದರಂಗಳಾದ ಕ್ರೀಡಾಶೈಲ, ಲತಾವಿತಾನ, ಮಾಧವೀಮಂಟಪ ಮೊದಲಾದ ರಮ್ಯಸ್ಥಳಗಳಲ್ಲಿ ಕುಳಿತು ಸಿಹಿಮಾವಿನ ಪಣ್ಣುಗಳಂ ಕೊಕ್ಕಿನಿಂ ಕುಕ್ಕಿ ತನಿರಸವಂ ಪಾನವಂಗೆಯ್ದು ಧ್ವನಿಗೆಯ್ಯುತ್ತಿರುವ ಶುಕ, ಪಿಕ, ಮಯೂರ ಮೊದಲಾದ ಪಕ್ಷಿಗಳ ಕಲರವವನ್ನಾಕರ್ಣಿಸುತ್ತ,—ಮುಂಭಾಗದಲ್ಲಿ ಸಮಸ್ತ ಮಂಗಳಗಳಿಗೆ ಮನೆಯಾಗಿ, ಕಂಗಳಿಗೆ ಕಾಂತಿರಾಶಿಯಾಗಿ, ಜನಗಳೈಶ್ವರ್ಯಕ್ಕೆ ವಾಸಭೂಮಿಯಾಗಿ, ಜಯಲಕ್ಷ್ಮಿಗೆ ನಾಟ್ಯಸ್ಥಾನವೆನಿಸಿ, ನವರತ್ನಂಗಳ ಕಾಂತಿಪುಂಜದಿಂ ಭಾಸ್ಕರನಂ ಭಂಗಿಸುತ್ತಿರುವ ದೇವಾಧಿಪತಿಯಾದ ಇಂದ್ರನ ವೈಜಯಂತವೆಂಬ ಪ್ರಾಸಾದವಂ ನೋಡುತ್ತ—ವಸಿಷ್ಠ, ವಾಮದೇವ ಮೊದಲಾದ ಋಷಿಸಮೂಹದಿಂದಲೂ, ದೇವ ಯಕ್ಷ ಕಿನ್ನರ ಕಿಂಪುರುಷ ಮೊದಲಾದ ದೇವಯೋನಿಗಳಿಂದಲೂ, ವಾಜಪೇಯ, ರಾಜಸೂಯ ಮೊದಲಾದ ಯಜ್ಞಪಥಾಯಕರಾದ ಕರ್ಮದೇವತೆಗಳಿಂದಲೂ, ಅಗ್ನಿಯಮ ಮೊದಲಾದ ದಿಕ್ಪಾಲಕರುಗಳಿಂದಲೂ, ರಂಭೆ ಊರ್ವಸಿ ಮೊದಲಾದ ದೇವ ವಾರಕಾಂತೆಯರಿಂದಲೂ, ನಾನಾಪ್ರಕಾರವಾದ ಜನಸಂದೋಹದಿಂದಲೂ, ಸುಂದರವಾಗಿರುವ ಸುಧರ್ಮೆಯೆಂಬ ಸಭೆಯಂ ಪ್ರವೇಶಿಸಿ—ದಿವ್ಯರತ್ನಸಿಂಹಾಸನಾರೂಢನಾಗಿರುವ ದೇವೇಂದ್ರನಂ ಕಂಡು ರಥದಿಂದಿಳಿದು ನಮಸ್ಕಾರವಂಗೆಯ್ಯಲು;

ಆ ಯಿಂದ್ರನಾದುಷ್ಯಂತರಾಯನಂ ಆಲಿಂಗಿಸಿ, ಮೃದುಮಧುರೋಕ್ತಿಯಿಂ ಕುಶಲಪ್ರಶ್ನೆಯಂ ಗೆಯ್ದು, ತಾನು ಕುಳ್ಳಿರುವ ಸಿಂಹಾಸನದ ಅರ್ಧಭಾಗದಲ್ಲಿ ರಾಯನಂ ಕುಳ್ಳಿರಿಸಿಕೊಂಡು, ಸ್ವಾಮ್ಯಮಾತ್ಯಸುಹೃತ್ಕೋಶ ರಾಷ್ಟ್ರದುರ್ಗ ಬಲಂಗಳೆಂಬ ಸಪ್ತಾಂಗದ ಯೋಗಕ್ಷೇಮವಂ ಬೆಸಗೊಂಡು, ದುಷ್ಟರಾದ ಕಾಲನೇಮಿ ಪುತ್ರರುಗಳ ವೃತ್ತಾಂತವಂ ಪೇಳಲು;

ಆ ರಾಯನು ಸಂತುಷ್ಟನಾಗಿ—"ಎಲೈ ತ್ರಿಲೋಕಾಧಿಪತಿಯಾದ ಸ್ವಾಮಿಯೇ, ನಿನ್ನ ಅನುಗ್ರಹದಿಂದ ಎನ್ನಸಮಸ್ತರಾಜ್ಯವು ಸುಭಿಕ್ಷವುಳ್ಳುವಾಗಿರುವುದು. ಆದರೂ ಈಗ ಅಪ್ಪಣೆಯನ್ನಿತ್ತ ಕಾಲನೇಮಿಪುತ್ರರು ಮೊದಲಾದ ರಾಕ್ಷಸರ ಸಂಹರಿಸುವುದು ನಿಮ್ಮ ಅನುಗ್ರಹ ಶಕ್ತಿಯಲ್ಲದೆ ಎನ್ನಿಂದಾಗದು" ಎಂದು ವಿನಯೋಕ್ತಿಗಳಂ ಪೇಳಲು;

ಶಚೀಪತಿಯು ತನ್ನ ಸಮಸ್ತಮಾದ ದೇವಸೇನೆಯಂ ಜತೆಗೊಳಿಸುವಂತೆ ಅಜ್ಞೆಯನ್ನಿತ್ತು, "ಎಲೈ ರಾಯನೇ, ಈ ದೇವಸೇನೆಯಿಂದೊಡಗೂಡಿ, ಆ ದುಷ್ಟರಾದ ರಾಕ್ಷಸಸಮೂಹವಂ ನಿರ್ಮೂಲವಂ ಗೆಯ್ಯುವುದು '' ಎಂದು ತನ್ನ ರಥವನ್ನಿತ್ತು ಕಳುಹಲು;

ರಾಯನು ಸಮಸ್ತ ದೇವಸೇನಾಪರಿವೃತನಾಗಿ ರಥದೊಳು ಕುಳಿತು, ಯುದ್ಧಭೂಮಿಗೆ ಹೋಗಿ, ತನ್ನ ಚಂಡಮಾದ ಕೋದಂಡದಿಂ ವಿಮುಕ್ತಂಗಳಾದ ಬಾಣಪರಂಪರೆಗಳಿಂ ದುರ್ಜಯರಾದ ಕಾಲನೇಮಿಪುತ್ರರುಗಳ ಪ್ರಾಣಂಗಳಂ ಕಾಲನಿಗೆ ಕೈಗಾಣಿಕೆಗಳಂ ಮಾಡಿ, ಸ್ವರ್ಗವಾಸಿಗಳಿಗೆ ನಿರ್ಭಯವನ್ನುಂಟುಮಾಡಿ, ಸಮಸ್ತ ದೇವರಾಕ್ಷಸರುಗಳಿಗೆ ವಿಸ್ಮಯವಂ ಪುಟ್ಟಿಸಿ, ಮರಳಿ ಸುಧರ್ಮೆಯೆಂಬ ಸಭೆಯಂ ಕುಱಿತು ಬರಲು;

ದೇವರಾಜನು ದುಷ್ಯಂತರಾಜನು ಮಾಡಿದ ಪರಾಕ್ರಮಕ್ಕೆ ಆಶ್ಚರ್ಯವಂ ಪೊಂದಿ, ಭೂಲೋಕದುರ್ಲಭಮಾದ ವಸ್ತುವಿನಿಂದ ರಾಯನಂ ಸಂತುಷ್ಟನನ್ನಾಗಿ ಮಾಡಿ, ಕೆಲವುದಿವಸ ಆ ಸ್ವರ್ಗದಲ್ಲೇ ಇಟ್ಟುಕೊಂಡಿರ್ದು, ಒಂದುದಿವಸ 'ಭೂಲೋಕಪ್ರಜಾಸಂರಕ್ಷಣೆಯಂ ಗೆಯ್ಯದೆ ಇಲ್ಲೇ ಈ ರಾಯನು ಇದ್ದನಾದರೆ ಧರ್ಮಕಾರ್ಯಕ್ಕೆ ಹಾನಿಬರುವುದು ' ಎಂದು ಯೋಚಿಸಿ, ಮಾತಲಿಯಂ ಕರೆದು, ಆತನಿಗೆ ಈ ದುಷ್ಯಂತಮಹಾರಾಯನಂ ಯಥಾಪ್ರಕಾರಮಾಗಿ ಪ್ರತಿಷ್ಠಾನಪುರಕ್ಕೆ ರಥದಿಂ ಕರೆದುಕೊಂಡು ಪೋಗುವಂತೆ ಅಪ್ಪಣೆಯನ್ನಿತ್ತು, ಆ ರಾಯಂಗೆ ಮಂದಾರಮಾಲೆ ಮೊದಲಾದ ವಸ್ತುವನ್ನಿತ್ತು ಸತ್ಕರಿಸಿ, ಬೃಹಸ್ಪತಿ ಮೊದಲಾದ ದೇವತೆಗಳೊಡಗೊಂಡು ಕೆಲವು ದೂರ ಬಂದು ಕಳುಹಿಸಿಕೊಡಲು;

ರಾಯನು ಅತ್ಯಂತಸಂತೋಷಭರಿತಾಂತರಂಗನಾಗಿ ಇಂದ್ರರಥಾರೋಹಣವಂ ಗೆಯ್ದು ಭೂಲೋಕಾಭಿಮುಖನಾಗಿ ಬರುತ್ತಿರಲು;

ಇತ್ತಲು ಸಾರಸಿಕೆಯು ಮರೀಚಿಋಷಿಯ ಆಶ್ರಮದಲ್ಲಿರುವ ಮೇನಕೆಯ ಸಮೀಪಕ್ಕೆ ಆ ಶಕುಂತಲೆಯಂ ಕರೆದುಕೊಂಡು ಬಂದು ಅಲ್ಲಿ ನಡೆದ ವೃತ್ತಾಂತವಂ ಪೇಳಲು; ಆ ಮೇನಕೆಯು ಆ ವಾರ್ತೆಯೆಲ್ಲವಂ ಕೇಳಿ ಪೂರ್ಣಗರ್ಭಿಣಿಯಾಗಿರುವ ತನ್ನ ಮಗಳಂ ಕಂಡು ಪರಮಾನಂದಭರಿತಳಾಗಿ, ಕೆಲವು ದಿವಸದ ಮೇಲೆ ಚಕ್ರವರ್ತಿಲಕ್ಷಣಲಕ್ಷಿತನಾಗಿ ಶಕುಂತಲಾಗರ್ಭದಲ್ಲಿ ಒಬ್ಬ ಪುತ್ರನು ಹುಟ್ಟಲು, ಆತನಂ ಸಲಹುತ್ತ, ಆತನ ಬಾಲಲೀಲೆಯಿಂ ಸಂತುಷ್ಟಳಾಗುತ್ತಿರಲು;

ಆ ಪುತ್ರನು ಉದಯಾದಿತ್ಯನಂತೆ ದಿನಕ್ರಮವಾಗಿ ವೃದ್ಧಿಯಂ ಪೊಂದಿ ಸಿಂಹದ ಮರಿಗಳಂ ಪಿಡಿದು ಮರ್ದಿಸುತ್ತ, ಮದ್ದಾನೆಗಳ ಸೊಂಡಿಲಂ ಪಿಡಿದು ಕೀಳುತ್ತ, ರಾಕ್ಷಸರುಗಳಂ ಪಿಡಿದು ಆಶ್ರಮವೃಕ್ಷಗಳಿಗೆ ಬಂಧಿಸುತ, ಬಾಲಕ್ರೀಡೆಯಂ ಗೆಯ್ಯುತ್ತಿರಲು;

ಆಶ್ರಮವಾಸಿಗಳಾದ ಋಷಿಗಳೆಲ್ಲರೂ ಆ ಶಿಶುವನ್ನೋಡಿ ಅತ್ಯಾಶ್ಚರ್ಯಯುಕ್ತರಾಗಿ ಆ ಬಾಲಕನಿಗೆ ಸರ್ವವಂ ಸಂಹರಿಸುವುದರಿಂ ಸರ್ವದಮನನೆಂದು ನಾಮಧೇಯವನ್ನಿಟ್ಟು ಸಂತೋಷಯುಕ್ತರಾಗಿ ಸಲಹುತ್ತಿರಲು;

ಸಾನುಮತಿಯು ಪ್ರತಿಷ್ಠಾನಪಟ್ಟಣದ ಪ್ರಮದವನದಿಂ ಬಂದು ಆ ವನದಲ್ಲಿ ಆ ದುಷ್ಯಂತರಾಯನು ಶಕುಂತಲೆಯಂ ಸ್ಮರಿಸಿಕೊಂಡು ವಿರಹಾತುರನಾಗಿ ವ್ಯಥೆಯಂ ಪೊಂದುತ್ತಿರುವ ರೀತಿಯೆಲ್ಲವಂ ವಿಸ್ತಾರವಾಗಿ ಶಕುಂತಲೆಗೆ ವಿಸ್ತರಿಸಲಾ ಶಕುಂತಳೆಯು ಆನಂದಸಾಗರದೊಳ್ ಮುಳುಗಿ ಅದೃಷ್ಟದಿಂದ ರಾಯಂಗೆ ಎನ್ನ ಸ್ಮರಣೆಯು ಪುಟ್ಟಿತೆಂದು ತನ್ನ ಮನದಲ್ಲಿ ತಿಳಿದು ಬಾಲಕನ ಬಹುಳವಾದ ಚೇಷ್ಟೆಗಳಂ ನೋಡುತ್ತ ಸಂತೋಷ ಸಾಮ್ರಾಜ್ಯದಲ್ಲಿ ಇರುತ್ತಿರಲು:

ಇತ್ತ ರಾಯನು ಭೂಲೋಕಾಭಿಮುಖನಾಗಿ ರಥವಂ ನಡೆಯಿಸಿಕೊಂಡು ಬರುವ ಮಾತಲಿಯಂ ಕುರಿತು—" ಎಲೈ ಇಂದ್ರಸಾರಥಿಯೇ, ಆ ತ್ರಿಪುರಾಧಿಪತಿಯಾದ ಇಂದ್ರನು ಅಪ್ಪಣೆಯನ್ನಿತ್ತಂತೆ ಸಮಸ್ತರಾಕ್ಷಸರಂ ಸಂಹರಿಸಿದೆನು. ಆದರೂ ಅವನು ಮಾಡಿದ ಅತಿಶಯವಾದ ಬಹುಮಾನಕ್ಕೆ ಎನ್ನ ಶರೀರವು ಯೋಗ್ಯವಲ್ಲವೆಂದು ನಿಶ್ಚೈಸುತ್ತಿರುವನು." ಎನ್ನಲು:

ಮಾತಲಿಯು ನಸುನಕ್ಕು,—" ಎಲೈ ಮಹಾರಾಜನೇ, ಮೊದಲು ಆ ಇಂದ್ರನು ಅತ್ಯಂತ ಪ್ರೀತಿಯಿಂದ ಸ್ವಲ್ಪವಾಗಿ ಮಾಡಿದ ಮರ್ಯಾದೆಯಂ ನೀನು ಪರ್ವತಕ್ಕೆ ಸಮಾನವಾದುದೆಂದು ತಿಳಿಯುತ್ತಿರುವೆ. ಆ ಇಂದ್ರನು ನೀನು ಮಾಡಿದ ರಾಕ್ಷಸಸಂಹಾರ ಮೊದಲಾದ ಕಾರ್ಯದಲ್ಲಿ ಆಶ್ಚರ್ಯಯುಕ್ತನಾಗಿ, 'ಆ ದುಷ್ಯಂತರಾಯಂಗೆ ಇಷ್ಟು ಬಹುಮಾನವಂ ಮಾಡಿದರೂ ಅವನು ಮಾಡಿದ ಕಾರ್ಯಕ್ಕೆ ಅನುಗುಣವಾಗಿ ಮರ್ಯಾದೆಯನ್ನು ಮಾಡಲಿಲ್ಲ' ಎಂದು ಎಣಿಸುತ್ತಿರುವನು" ಎಂದು ನುಡಿಯಲು ;

ದುಷ್ಯಂತರಾಯನು—" ಎಲೈ ಮಾತಲಿಯೇ, ಅಂತು ನುಡಿಯದಿರು. ಆ ಇಂದ್ರನು ಸಮಸ್ತ ದೇವತೆಗಳಗಿದಿರಾಗಿ ಎನ್ನಂ ತಾನು ಕುಳಿತಿರ್ದ ಸಿಂಹಾಸನದ ಅರ್ಧಭಾಗದಲ್ಲಿ ಕುಳ್ಳಿರಿಸಿ, ಕುಶಲಪ್ರಶ್ನೆಯಂ ಗೆಯ್ದು, ನಾನು ಬರುವ ಕಾಲದಲ್ಲಿ ಮಾಡಿದ ಬಹುಮಾನವು ಮನೋರಥದ ಎಲ್ಲೆಗಂಟು ಮೀರಿರುವುದು.

ಹೇಗೆಂದರೆ:—ಆಯಿಂದ್ರನು ಕೊಡುವೆನೆಂದು ಮನದಲ್ಲಿ ಪ್ರಾರ್ಥನೆಯಂ ಗೆಯ್ಯುತ್ತ ಸಮೀಪಸ್ಥನಾದ ಜಯಂತನಂ ನೋಡಿ ನಸುನಗುತ್ತ, ತನ್ನ ವಕ್ಷಸ್ಸ್ಥಳದ ಗಂಧದಿಂ ಗುರುತಾಗಿರುವ ತನ್ನ ಕತ್ತಿನಲ್ಲಿರ್ದ ಮಂದಾರಮಾಲೆಯಂ ಎನ್ನ ಕತ್ತಿಗೆ ಹಾಯ್ಕಿದನಾದ್ದಱಿಂ ಮಗನಾದ ಜಯಂತನಿಗಿಂತಲೂ ಆ ಶಚೀಪತಿಗೆ ನಾನು ಪ್ರೇಮಪಾತ್ರನಾನಿಗಿರುವೆನಾದ್ದಱಿಂದ ಅವನು ಮಾಡಿದ ಬಹುಮಾನವೇ ಬೊಡ್ಡ ದೆಂದು ತಿಳಿಯುವೆನು '' ಎನ್ನಲು ;

ಮಾತಲಿಯು—'' ಆಯುಷ್ಮಂತನಾದ ಮಹಾರಾಯನೇ, ಕೇಳು. ದೇವಾಧಿಪತಿಯಿಂದ ಬಹುಮಾನವಂ ಪೊಂದುವುದಕ್ಕೆ ನೀನು ಯೋಗ್ಯನಲ್ಲವೋ ಏನು ? ಮತ್ತು ಪೂರ್ವದಲ್ಲಿ ನರಸಿಂಹಾಕಾರನಾದ ಮಹಾವಿಷ್ಣುವು ಬಗ್ಗಿರ್ದ ಗಿಣ್ಣುಗಳುಳ್ಳ ತನ್ನ ಹಸ್ತದ ಉಗುರುಗಳ ಕೊನೆಗಳಿಂ ಹಿರಣ್ಯಾಕ್ಷನ ಉದರವಂ ಸೀೞ್ದು ಈ ಸ್ವರ್ಗವಂ ಶತ್ರುರಹಿತವನ್ನಾಗಿ ಮಾಡಿದನು. ಈಗಲೂ ಅದೇ ಪ್ರಕಾರವಾದ ನಿನ್ನ ಬಾಣಗಳಿಂ ಅನೇಕ ರಾಕ್ಷಸರಂ ಸಂಹರಿಸಿ ಈ ಸ್ವರ್ಗಕ್ಕೆ ಅದೇ ರೀತಿಯಿಂ ಸುಖವನ್ನುಂಟುಮಾಡಿರುವೆ. ಆದ್ದಱಿಂದ ಸುಖಪರನಾದ ಇಂದ್ರನಿಗೆ ನೀವೀರ್ವರು ಮಾಡಿದ ಉಪಕೃತಿಯು ಮಹತ್ತಾದುದು '' ಎಂದು ನುಡಿಯಲು ;

ರಾಯನು—'' ಎಲೈ ಮಾತಲಿಯೇ, ನಾವು ದೇವಾಧಿಪತಿಯಾದ ಇಂದ್ರನ ಮಹಿಮೆಯನ್ನೇ ಸ್ತೋತ್ರವಂ ಗೆಯ್ಯಬೇಕು. ಹೇಗೆಂದರೆ:—ಲೋಕದಲ್ಲಿ ಸೇವಕ ಜನರುಗಳು ಮಹತ್ತರವಾದ ಕಾರ್ಯಂಗಳಲ್ಲಿ ಸಿದ್ಧಿಯಂ ಪಡೆಯುವುದೆಂಬುದಾವದುಂಟೋ ಅದು ಅವರಿಗೆ ದೊರೆಯಾದವನ ಬಹುಮಾನಗುಣವೆಂದು ತಿಳಿಯಬೇಕು. ಹೇಗೆಂದರೆ–ಸೂರ್ಯನು ಹೆಳವನಾದ ಅರುಣನನ್ನು ತನ್ನ ರಥದ ಮುಂದೆ ಕುಳ್ಳಿರಿಸದಿರ್ದನಾದರೆ, ಅವನು ಅಂಧಕಾರವಂ ಪರಿಹರಿಸುವುದಕ್ಕೆ ಹೇಗೆ ಸಮರ್ಥನಾಗುವನು, ಪೇಳು ? ಯಾವ ಕಾರ್ಯನಿರ್ವಾಹವು ಪುಟ್ಟಬೇಕಾದರೂ ಪ್ರಭುವಾದವನ ಮಾಹಾತ್ಮ್ಯಯಿಂದಾಗಬೇಕಲ್ಲದೆ ಸೇವಾಜನರ ಸಾಮರ್ಥ್ಯದಿಂದಾಗಲಾಱದು. ಆದ್ದಱಿಂ ಸಮಸ್ತರಾಕ್ಷಸರ ಸಂಹಾರವು ಪೂಜ್ಯನಾದ ಇಂದ್ರನ ಮಾಹಾತ್ಮ್ಯಯಿಂ ಸಿದ್ಧಿಸಿತು '' ಎಂದು ನುಡಿಯಲು ;

ಮಾತಲಿಯು—'' ಎಲೈ ಮಹಾರಾಜನೇ, ನಿನ್ನಲ್ಲಿ ಇಷ್ಟು ಮಾಹಾತ್ಮ್ಯವಿದ್ದರೂ ನೀನಿಂತು ಇಂದ್ರನಂ ಸ್ತೋತ್ರವಂ ಗೆಯ್ಯುವುದು ಯುಕ್ತವೇ ಸರಿ '' ಎಂದು ನುಡಿಯುತ್ತ ಕೆಲವು ದೂರ ರಥವಂ ನಡೆಯಿಸಿ,—'' ಎಲೈ ಸ್ವಾಮಿಯೇ, ಈ ಸ್ವರ್ಗಭಾಗದಲ್ಲಿ ಪ್ರತಿಷ್ಠೆಯಂ ಪೊಂದಿದ ನಿನ್ನ ಕೀರ್ತಿಯ ಸೌಭಾಗ್ಯವಂ

ನೋಡು. ಸ್ವರ್ಗವಾಸಿಗಳಾದ ದೇವತೆಗಳು ಕಲ್ಪವೃಕ್ಷದ ತ್ವಕ್ಕುಗಳಲ್ಲಿ ದೇವ ಕಾಂತೆಯರ ದೇಹದಿಂ ಬಿದ್ದಿರುವ ಕುಂಕುಮಗಳ ಲೇಶದಿಂದ ಗಾನವಂ ಗೆಯ್ಯು ವುದಕ್ಕೆ ಯೋಗ್ಯವಾಗುವಂತೆ ಶೋಭನಾರ್ಥಬಂಧಬಂಧುರಗಳಾಗುವಂತೆ ರಾಕ್ಷಸ ಜಯೋಪಾಯ ಮೊದಲಾದ ನಿನ್ನ ಚರಿತ್ರೆಯಂ ಯೋಚನೆಮಾಡಿ, ಅಕ್ಷರಗಳಿಂದ ಬರೆಯುತ್ತಿರುವರು '' ಎಂದು ನುಡಿಯಲು ;

ರಾಯನು—“ ಎಲೈ ಮಾತಲಿಯೇ, ಅದಂತಿರಲಿ. ನಾನು ನಿನ್ನೆ ಸ್ವರ್ಗಕ್ಕೆ ಬರುವಾಗ್ಗೆ ರಾಕ್ಷಸಸಂಹಾರದಲ್ಲಿ ಉತ್ಸುಕನಾಗಿದ್ದುದರಿಂ ಚೆನ್ನಾಗಿ ಸ್ವರ್ಗಮಾ ರ್ಗವಂ ನೋಡಲಿಲ್ಲ. ಈಗ ನಾವು ಸಪ್ತವಾಯುಮಾರ್ಗಗಳಲ್ಲಿ ಯಾವ ಮಾರ್ಗ ದಲ್ಲಿರುವೆವು ಪೇಳು '' ಎಂದು ನುಡಿಯಲು ;

ಮಾತಲಿಯು—“ ಯಾವ ವಾಯುವು ಅಂತರಿಕ್ಷಕ್ಕೆ ಅಲಂಕಾರವಾಗಿ ರುವ ಗಂಗೆಯಂ ವಹಿಸುತ್ತ, ನಕ್ಷತ್ರಂಗಳು ಮೊದಲಾದ ತೇಜಸ್ಸುಗಳಂ ಎಲ್ಲಾ ಕಡೆ ಯಲ್ಲೂ ಪ್ರಚಾರವಂ ಗೆಯ್ಯುತ್ತಿರುವುದೋ, ಸೂರ್ಯಕಾಂತಿಯಿಂ ನಿಸ್ತಮಸ್ಕ ವಾದ ಪರಿವಹವೆಂದು ಪೆಸರುಳ್ಳ ಆ ವಾಯುಮಾರ್ಗವೆಂದು ಬಲ್ಲವರು ಪೇಳುತ್ತಿ ರುವರು '' ಎನಲು ;

ರಾಯನು—“ಆ ವಾಯುಮಂಡಲಕ್ಕೆ ಬಂದಿರುವುದರಿಂದಲೇ ಒಳಗೆ ಹೊ ರಗೆ ಇರುವ ಇಂದ್ರಿಯಗಳಿಂ ಯುಕ್ತನಾಗಿ ಹೃದಯವಾಸಿಯಾದ ಪರಮಾತ್ಮನು ಅಧಿಕಸಂತೋಷವಂ ಪೊಂದುತ್ತಿರುವನು '' ಎಂದು ನುಡಿದು, ರಥಚಕ್ರವಂ ನೋಡಿ, “ ಎಲೈ ಸಾರಥಿಯೇ, ಈಗ ನಾವು ಮೇಘಮಂಡಲದಿಂ ಕೆಳಕ್ಕೆ ಇಳಿದಿರುವೆವು '' ಎನಲು ;

ಮಾತಲಿಯು—“ ಎಲೈ ಸ್ವಾಮಿಯೇ, ಮೇಘಮಾರ್ಗದಿಂದಿಳಿದ ಸಂಗ ತಿಯು ಹೇಗೆ ನಿನಗೆ ತಿಳಿದುದು ? '' ಎನಲು ;

ರಾಯನು—“ ಇದೋ, ಗಾಲಿಗಳ ಸಂದಿಗಳಲ್ಲಿ ಸಂಚರಿಸುವ ಚಾತಕಪಕ್ಷಿ ಗಳಿಂದಲೂ, ಸೂರ್ಯನ ಕಾಂತಿಯಿಂ ವ್ಯಾಪ್ತಮಾಗಿರುವ ಅಶ್ವಗಳಿಂದಲೂ, ಜಲ ಕಣಗಳಿಂ ನನೆದಿರುವ ಗಾಲಗಳ ಅಚ್ಚುಳ್ಳ ನಮ್ಮ ಈ ರಥವು ಜಲಗರ್ಭಗಳಾದ ಮೇಘಂಗಳ ಮೇಲುಗಡೆಯಲ್ಲಿ ಪೋದ ರೀತಿಯಂ ಸೂಚನವಂ ಗೆಯ್ಯುತ್ತಿರುವುದು'' ಎನಲು ;

ಮಾತಲಿಯು— “ಎಲೈ ಸ್ವಾಮಿಯೇ, ಈ ರಥವು ಅತಿಶಯವಾದ ವೇಗ ಶಾಲಿಯಾದುದರಿಂ ಒಂದು ನಿಮಿಷಮಾತ್ರದಲ್ಲಿಯೇ ನಿನ್ನ ದೇಶವಂ ಸೇರುತ್ತಿರು ವುದು'' ಎನ್ನಲು;

ರಾಯನು—“ಎಲೈ ಮಾತಲಿಯೇ, ಅತಿವೇಗದಿಂದ ರಥವು ಕೆಳಕ್ಕೆ ಇಳಿಯುವುದರಿಂ ಭೂಲೋಕವು ಅತ್ಯಾಶ್ಚರ್ಯಯುಕ್ತವಾಗಿ ಕಾಣುತ್ತಿರುವುದು. ಹೇಗೆಂದರೆ:—ಮೇಲೆ ನೋಡುವಲ್ಲಿ ಭೂಮಿಯಲ್ಲಿ ಮುಳುಗಿದ್ದಂತೆ ತೋರುತ್ತಿರ್ದ ಪರ್ವತದ ಕೊನೆಗಳಿಂದೀಗ ಭೂಮಿಯೇ ಇಳಿಯುವುದೋ ಎಂಬಂತೆ ಪರ್ವತಂಗಳು ಉನ್ನತಂಗಳಾಗಿ ಭೂಮಿಯು ತಗ್ಗಾಗಿ ಕಾಣುತ್ತಿರುವುದು. ವೃಕ್ಷಂಗಳು ಕೊಂಬೆಗಳು ವ್ಯಕ್ತವಾಗಿ ಕಾಣುವುದರಿಂ ಮೊದಲು ಎಲೆಗಳ ಗುಂಪಿನಲ್ಲಡಗಿರ್ದ ಭಾವವಂ ಬಿಡುವಂತೆಯೂ ತೋರುವುವು. ನದಿಗಳು ಮೊದಲು ತಮ್ಮ ಪ್ರವಾಹವೆಲ್ಲಾ ಅಡಗಿ ಅತಿಸೂಕ್ಷ್ಮಂಗಳಾಗಿ ಕಾಣುತ್ತಿರ್ದು ಈಗ ಸುತ್ತಲೂ ಇರುವ ಕಾಲುವೆ ಮೊದಲಾದವುಗಳಿಂದ ವ್ಯಕ್ತವಾಗಿ ಕಾಣುತ್ತಿರುವುವು. ಮತ್ತು ಭೂಮಿಯು ಯಾವ ಪುರುಷನಿಂದಲೋ ಮೇಲಕ್ಕೆ ಎಸೆಯಲ್ಪಟ್ಟು ಎನ್ನ ಸಮೀಪಕ್ಕೆ ಬರುವುದೋ ಎಂಬಂತೆ ತೋರುವುದು” ಎಂದು ನುಡಿಯಲು ;

ಮಾತಲಿಯು—“ಆಯುಷ್ಮಂತನಾದ ಮಹಾರಾಯನೇ, ಚೆನ್ನಾಗಿ ನೋಡಿ ಪೇಳಿದೆ. ಆದರೂ ಭೂಲೋಕವು ಸಮಸ್ತ ಸತ್ಕರ್ಮಂಗಳ ಸಾಧನೆಗೆ ಯೋಗ್ಯವಾದುದರಿಂ ಅತ್ಯುತ್ತಮವಾಗಿ ಮನೋಹರವಾಗಿ ತೋರುವುದು” ಎಂದು ನುಡಿಯಲು;

ರಾಯನು—“ಎಲೈ ಮಾತಲಿಯೇ, ಪೂರ್ವಪಶ್ಚಿಮಸಮುದ್ರವಂ ವ್ಯಾಪಿಸಿ ಸುವರ್ಣರಸವಂ ಸುರಿಯುತ್ತ ಸಂಧ್ಯಾಕಾಲದ ಮೇಘದಂತೆ ಒಪ್ಪುತ್ತ ಕಾಣುವ ಆ ಪರ್ವತವು ಯಾವುದು ?” ಎಂದು ಬೆಸಗೊಳಲು ;

ಮಾತಲಿಯು—“ಇದೇ ಕಿಂಪುರುಷಖಂಡದಲ್ಲಿರುವ ಹೇಮಕೂಟ ನಾಮಕವಾದ ಪರ್ವತವು. ಈ ಪರ್ವತದಲ್ಲಿ ವಾಸವಂ ಗೆಯ್ಯುವ ಋಷಿಗಳಿಗೆ ತಪಸ್ಸಿದ್ಧಿಕರವಾದ ಪುಣ್ಯಕ್ಷೇತ್ರಗಳಂ ನೋಡು, ಎಷ್ಟು ಪವಿತ್ರಕರವಾಗಿರುವುದು. ಮತ್ತು ಸ್ವಾಯಂಭುವ ಮನುವಿನ ಪುತ್ರನಾದ ಮರೀಚಿಋಷಿಯ ದೆಸೆಯಿಂದ ಯಾವ ಕಶ್ಯಪಬ್ರಹ್ಮನು ಪುಟ್ಟಿ ದೇವತೆಗಳಿಗೂ ರಾಕ್ಷಸರುಗಳಿಗೂ ತಂದೆಯಾಗಿ ಮಹಾಪ್ರಭಾವಶಾಲಿಯಾಗಿರುವನೋ ಆ ಕಶ್ಯಪಬ್ರಹ್ಮನು ದಿತಿ ಅದಿತಿ ಯೆಂಬ ಧರ್ಮಪತ್ನಿಯರಿಂದೊಡಗೂಡಿ ಈ ಪರ್ವತದ ಪುಣ್ಯಕರವಾದ ಕ್ಷೇತ್ರದಲ್ಲಿ ತಪಸ್ಸಂಗೆಯ್ಯುತ್ತಿರುವನು” ಎಂದು ನುಡಿಯಲು;

ರಾಯನು—“ಎಲೈ ಮಾತಲಿಯೇ, ತೇಜೋನಿಧಿಯಾಗಿ ಸಮಸ್ತ ಶ್ರೇಯಸ್ಸನ್ನುಂಟುಮಾಡುತ್ತಿರುವ ಆ ಕಶ್ಯಪಋಷಿಗಳಿಗೆ ವಂದನೆಯಂ ಮಾಡದೆ ಅತಿಕ್ರ

ಘಿಸಿ ಪೋಗಬಾರದಾದ್ದರಿಂದ ಹೇಮಕೂಟಪರ್ವತಾಗ್ರಕ್ಕೆ ರಥವಂ ತೆಗೆದುಕೊಂಡು ನಡೆ'' ಎಂದು ನುಡಿಯಲು;

ಮಾತಲಿಯು—"ಅಯ್ಯಾ ಸ್ವಾಮಿಯೇ, ನೀನು ಯೋಚಿಸಿದ ಕಾರ್ಯವು ಅಗತ್ಯವಾಗಿ ಮಾಡತಕ್ಕುದು'' ಎಂದು ನುಡಿದು ಆ ಪರ್ವತಾಗ್ರಕ್ಕೆ ಮಣಿಮಯ ರಥವನ್ನಿಳುಹಿಸಲು, ರಾಯನು ನಸುನಗುತ್ತ-

"ಎಲೈ ಮಾತಲಿಯೇ, ಕೇಳು. ಗಾಲಿಗಳಿಂ ಶಬ್ದವು ಪುಟ್ಟದೆ, ಅಚ್ಚುಗಳಿಂ ಧೂಳೇಳದೆ, ಭೂಮಿಯ ಸ್ಪರ್ಶದಿಂ ತಡೆಯಿಲ್ಲದೆ ಈ ಪರ್ವತಾಗ್ರಕ್ಕೆ ಇಳಿಯುತ್ತಿರುವ ನಿನ್ನ ರಥವು ಪೋಗುವುದೇ ಕಾಣದೆ ಇರುವುದು'' ಎಂದು ನುಡಿಯಲು;

ಮಾತಲಿಯು—"ಆಯುಷ್ಮಂತನಾದ ಮಹಾರಾಯನೇ! ನಿನಗೂ, ಇಂದ್ರನಿಗೂ ಈ ರಥವೊಂದರಿಂ ತಾರತಮ್ಯವಲ್ಲದೆ ಇನ್ನಾವುದರಲ್ಲಿಯೂ ನ್ಯೂನಾಧಿಕ್ಯವಿಲ್ಲ'' ಎನಲು ;

ರಾಯನು—" ಎಲೈ ಮಾತಲಿಯೇ, ಈಪ್ರದೇಶದಲ್ಲಿ ಮಾರೀಚಮಹಾಮುನಿಯ ಆಶ್ರಮವು ಯಾವುದು?'' ಎಂದು ನುಡಿಯಲು ;

ಮಾತಲಿಯು ತನ್ನ ಬೆರಳ ಕೊನೆಯಿಂದ ಮಾರೀಚಾಶ್ರಮವಂ ತೋರಿ- "ಎಲೈ ಸ್ವಾಮಿಯೇ, ಹುತ್ತದಲ್ಲಿ ಅರ್ಧವಾಗಿ ಮುಳುಗಿರುವ ತನ್ನ ದೇಹವುಳ್ಳವನಾಗಿ, ವಕ್ಷಸ್ಥಳದಲ್ಲಿ ಹತ್ತಿಕೊಂಡಿರುವ ಹಾವಿನ ಸೋಲೆಗಳಿಂ ಯುಕ್ತನಾಗಿ, ಕತ್ತಿನಲ್ಲಿ ಸುತ್ತಿರುವ ಪುರಾತನವಾದ ಬಳ್ಳಿಗಳ ಬಳಗಗಳಿಂ ಅತ್ಯಂತ ಪೀಡಿತನಾಗಿ ಎರಡು ಭುಜಗಳಂ ವ್ಯಾಪಿಸಿದ ಪಕ್ಷಿಗಳ ಗೂಡುಗಳಿಂ ಯುಕ್ತವಾದ ಜಟಾಮಂಡಲದಿಂ ಮಂಡಿತನಾಗಿ, ಚಂಡಕರ ಸೂರ್ಯಮಂಡಲಕ್ಕೆ ಅಭಿಮುಖನಾಗಿ, ಕೊಂಬೆಗಳಿಲ್ಲದ ವೃಕ್ಷಗಳಂತೆ ನಿಶ್ಚಲನಾಗಿ ಕಾಣುತ್ತ ಈ ಆಶ್ರಮದಲ್ಲಿ ತಪಸ್ಸಂ ಗೆಯ್ಯುತ್ತಿರುವನೇ ಕಶ್ಯಪಬ್ರಹ್ಮನು ; ಇದೋ, ನೋಡು'' ಎಂದು ತೋರಿಸಲು ;

ಆ ರಾಯನು—"ಇಂಥ ಕಷ್ಟತಪಸ್ವಿಗೋಸ್ಕರ ನಮಸ್ಕಾರವು!'' ಎಂದು ನುಡಿಯಲಾಮಾತಲಿಯು ವೇಗದಿಂ ಪೋಗುತ್ತಿರುವ ರಥಾಶ್ವಗಳ ರಜ್ಜುಗಳಂ ಸೆಳೆದು ಪಿಡಿದಾಹೇಮಕೂಟಪರ್ವತ ಶೃಂಗಕ್ಕೆ ರಥವನ್ನಿಳುಹಿ,—"ಎಲೈ ಸ್ವಾಮಿಯೇ, ಮಂದಾರವೃಕ್ಷಂಗಳಿಂ ಸುಂದರವಾಗಿ, ಸಮಸ್ತಸತ್ಕರ್ಮಾನುಷ್ಠಾನಕ್ಕೆ ವಾಸಭೂಮಿಯಾಗಿ, ಸ್ವಜಾತಿವೈರಗಳಂ ಬಿಟ್ಟು ಸಂತೋಷದಿಂ ಸಂಚರಿಸುತ್ತಿರುವ ಸಿಂಹ ಶಾರ್ದೂಲ ಮೊದಲಾದ ಮೃಗಗಳಿಂದಲೂ, ಗಿಣಿ ಕೋಗಿಲೆ ಮೊದಲಾದ ಪಕ್ಷಿಗಳ ಕಲಕಲಧ್ವನಿಗಳಿಂದಲೂ, ವ್ಯಾಪ್ತವಾಗಿ ಕಂಗಳಿಗೆ ಕಾಂತಿಯಂ ಬೀರುತ್ತ

ರುವ ಕಶ್ಯಪಬ್ರಹ್ಮನ ಆಶ್ರಮವಂ ನೋಡು ! ''

ಎಂದು ಪೇಳಲಾ ರಾಯನು ಅಧಿಕ ಹರ್ಷದಿಂದ ಯುಕ್ತನಾಗಿ,— " ಎಲೈ ಇಂದ್ರಸಾರಥಿಯೇ, ಈ ಆಶ್ರಮವು ಸ್ವರ್ಗಕ್ಕಿಂತಲೂ ಸಂತೋಷಕರವಾಗಿ ಇರುವುದು'' ಎಂದು, " ಈ ಆಶ್ರಮವಂ ನೋಡಿದ್ದರಿಂ ನಾನು ಆನಂದಸುಧಾ ಸಮುದ್ರದಲ್ಲಿ ಮುಳುಗಿದಂತೆ ಇರುವೆನು ''ಎಂದು ನುಡಿಯಲು ;

ಮಾತಲಿಯು ರಥವಂ ನಿಲ್ಲಿಸಿ— "ಎಲೈ ರಾಯನೇ, ರಥದಿಂದಿಳಿ '' ಎಂದು ನುಡಿಯುವ ಸಾರಥಿಯ ವಾಕ್ಯಾನುಸಾರವಾಗಿ ರಥದಿಂ ರಾಯನು ಇಳಿದು, "ಎಲೈ ಮಾತಲಿಯೇ, ರಥವಂ ಬಿಟ್ಟು ಎನ್ನೊಡನೆ ಪೇಗೆ ಬರುವೆ ? '' ಎನ್ನಲು ;

ಮಾತಲಿಯು— "ಎಲೈ ಸ್ವಾಮಿಯೇ, ಈ ಕುದುರೆಗಳಂ ವೃಕ್ಷದ ಮೂಲ ದಲ್ಲಿ ಕಟ್ಟಿರುವೆನು '' ಎಂದು ರಥದಿಂದಿಳಿದಾರಥಾಶ್ವಂಗಳಂ ವೃಕ್ಷದಲ್ಲಿ ಬಂಧಿಸಿ, ರಾಯಂಗೆ ಮಾರ್ಗವಂ ತೋರಿಸುತ್ತ ಮುಂಭಾಗದಲ್ಲಿ ಬರುತ್ತ, "ಎಲೈ ರಾ ಯನೇ, ಜ್ಯೋತಿಷ್ಟೋಮ, ಅತಿರಾತ್ರ ಮೊದಲಾದ ಯಾಗಗಳಂ ಮಾಡುವ ಶಾಲೆಗಳಿಂ ಪೊರಮಡುವ ಧೂಮರಾಜಿಯು ಈ ತಪೋವನಲಕ್ಷ್ಮಿಯ ಜಡೆಯೆಂಬ ಶಂಕೆಯನ್ನುಂಟುಮಾಡುತ್ತಿರುವುದು ಚೆನ್ನಾಗಿ ನೋಡು'' ಎಂದು ಮರಳಿಮರಳಿ ಪೇಳುತ್ತಿರಲು ;

ರಾಯನು— " ಎಲೈ ಮಾತಲಿಯೇ, ನಾನು ಅತ್ಯಾಶ್ಚರ್ಯ ಯುಕ್ತನಾಗಿ ನೋಡುತ್ತಿರುವೆನು. ಆದರೂ ಇನ್ನೂ ಕೆಲವು ಋಷಿಗಳು ಯಾವ ತಪೋವನದಲ್ಲಿ ಉಗ್ರತಪವಂ ಮಾಡಬೇಕೆಂದು ಆಸೆಯಂ ಮಾಡುತ್ತಿರುವರೋ ಆಯಾ ಪುಣ್ಯಾಕರ ವಾಗಿ ಪಾಪಪರಿಹಾರಿಯಾದ ಮಾರೀಚಋಷಿಯ ಆಶ್ರಮದಲ್ಲಿ ತಪಸ್ಸಂ ಗೆಯ್ಯುವ ಋಷಿಗಳಿಗೆ ವಾಯುವಿನಿಂ ಪ್ರಾಣಧಾರಣೆಯಂ ಮಾಳ್ಪುದು ಉಚಿತವಾಗಿರುವುದು; ಕಲ್ಪವೃಕ್ಷವನದಲ್ಲಿ ಸುವರ್ಣಕಮಲಂಗಳ ಪರಾಗಂಗಳಿಂ ಹೊಂಬಣ್ಣವಾಗಿರುವ ಜಲದಲ್ಲಿ ಪುಣ್ಯಕರವಾದ ಸ್ನಾನವ್ಯಾಪಾರವು ಯುಕ್ತವಾಗಿರುವುದು; ಮತ್ತು ರತ್ನಮಯವಾದ ಶಿಲೆಗಳಲ್ಲಿ ಪರಬ್ರಹ್ಮನ ಧ್ಯಾನವಂ ಗೆಯ್ಯುವುದು ಯೋಗ್ಯವಾ ಗಿರುವುದು; ಸುರಸ್ತ್ರೀಯರ ಸಮೀಪದಲ್ಲಿ ಚಲಿಸದೆ ಇರುವ ತಪಸ್ಸಿನಿಂ ಯುಕ್ತ ರಾಗಿ ಪ್ರಜ್ವಲಿಸುತ್ತಿರುವದು ಯೋಗ್ಯವಾಗಿರುವುದು '' ಎಂದು ನುಡಿಯಲು ;

ಮಾತಲಿಯು— " ಅಯ್ಯಾ ಮಹಾರಾಯನೇ, ಸತ್ಪುರುಷರಾದ ಈ ಋಷಿ ಗಳ ಪ್ರಾರ್ಥನೆಯು ವೃದ್ಧಿಯಂ ಹೊಂದತಕ್ಕದು '' ಎಂದು ನುಡಿಯುತ್ತಿರಲು ;

ಈ ಮಧ್ಯೇ ಒಬ್ಬಾನೊಬ್ಬ ಋಷಿಶಿಷ್ಯನು ಸಂಗಡ ಬರುವ ವೃದ್ಧಶಾಕಲ್ಯನೆಂಬವನಂ ಕುಱಿತು, "ಎಲೈ ವೃದ್ಧಶಾಕಲ್ಯನೇ, ಷಡ್ಗುಣೈಶ್ವರ್ಯಸಂಪನ್ನನಾದ ಕಶ್ಯಪಋಷಿಯು ಏನು ಕಾರ್ಯವಂ ಗೆಯ್ಯುತ್ತಿರುವನು ?" ಎಂದು ಪ್ರಶ್ನೆಯಂ ಗೆಯ್ಯಲಾವೃದ್ಧಶಾಕಲ್ಯನು– "ಋಷಿಪತ್ನಿಯರಿಂ ಸೇವಿತಳಾದ ದಕ್ಷಪುತ್ರಿಯಾದ ಅದಿತಿದೇವಿಯರಿಗೆ ಪತಿವ್ರತಾಮಹಾತ್ಮ್ಯೆಯಿಂ ಕೂಡಿದ ಪುಣ್ಯಕರವಾದ ಪುರಾಣವಂ ಪೇಳುತ್ತಿರುವನು" ಎಂದು ನುಡಿಯಲು ;

ಆ ವಾಕ್ಯವಂ ಕೇಳಿದ ರಾಯನು—"ಎಲೈ ಮಾತಲಿಯೇ, ಮಹಾಮಹಿಮನಾದ ಕಶ್ಯಪಋಷಿಯ ಸಂದರ್ಶನಕ್ಕೆ ಪೋಗಬೇಕಾದಲ್ಲಿ ಸಮಯ ನಿರೀಕ್ಷಣೆಯಂ ಗೆಯ್ಯಬೇಕಾಗಿರುವುದು" ಎಂದು ನುಡಿಯಲು ;

ಮಾತಲಿಯು ರಾಯನಂ ನೋಡಿ, "ಎಲೈ ಸ್ವಾಮಿಯೇ, ನಾನು ಎಷ್ಟು ಹೊತ್ತಿನೊಳಗಾಗಿ ಗುರುವಾದ ಮಾರೀಚ ಋಷಿಯ ಸಮಯವಂ ತಿಳಿದು ನೀನು ಬಂದಿರುವ ಸಂಗತಿಯಂ ಅಱಿಕೆಗೆಯ್ಯುವೆನೋ ಅದುವರೆಗೂ ನೀನು ಈ ಮನೋಹರವಾದ ಅಶೋಕವೃಕ್ಷದ ಛಾಯೆಯನ್ನಾಶ್ರಯಿಸಿ ಇರುವುದು" ಎಂದು ನುಡಿಯಲು ;

ರಾಯನು—"ನಿನ್ನ ಮನಕ್ಕೆ ಯಾವುದು ಯುಕ್ತವಾಗಿ ತೋಱುವುದೋ ಅದೇ ರೀತಿಯಿಂ ಮಾಡತಕ್ಕುದು. ನಾನೀಯಶೋಕವೃಕ್ಷದ ಸಮೀಪದಲ್ಲಿ ಇರುವೆನು" ಎನಲು ;

ಮಾತಲಿಯು ರಾಯನಂ ಬಿಟ್ಟು ಆ ಕಶ್ಯಪಬ್ರಹ್ಮನಿರುವ ಆಶ್ರಮವಂ ಕುಱಿತು ಪೋಗಲು ;

ಇತ್ತಲಾ ರಾಯನು ಶುಭಸೂಚನೆಗಳಾಗುವುದಂ ತನ್ನ ಬಲದ ಭುಜವು ಹಾಱುವುದಂ ಪರಿಭಾವಿಸಿ ತನ್ನ ಭುಜವಂ ಕುಱಿತು, "ಎಲೈ ಭುಜವೇ, ಎನ್ನ ಮನೋರಥವು ಪೂರ್ಣವಾಗಬೇಕೆಂದು ಅಪೇಕ್ಷಿಸದೆ ಇರುವೆನು. ವ್ಯರ್ಥವಾಗಿ ಕಂಪನವಂ ಪೊಂದುತ್ತಿರುವೆ. ಮತ್ತು ಪೂರ್ವ ದೊರಕಿರ್ದ ಶ್ರೇಯೋರೂಪಳಾದ ಶಕುಂತಳೆಯು ತಿರಸ್ಕೃತಳಾಗಿ ದುಃಖಭಾಜನಳಾಗಿರುವಳು" ಎಂದು ನುಡಿಯುತ್ತ, ಆ ತಪೋವನದ ಸಂದರ್ಶನದಿಂ ಮೊದಲು ಶಕುಂತಲೆಯೊಡನೆ ಕಣ್ವಾಶ್ರಮದಲ್ಲಿ ಮಾಡಿದ ವಿಹಾರ ಮೊದಲಾದ ಚರ್ಯಂಗಳಂ ಸ್ಮರಿಸಿಕೊಂಡು ಮಹಾ ದುಃಖಾತುರನಾಗಿ ಕಂಬನಿಗಳಂ ಬಿಡುತ್ತಾ ಕುಳಿತಿರಲು ;

ಅನಿತಱೊಳು ಒಬ್ಬ ಋಷಿಪತ್ನಿಯು—"ಎಲೈ ಬಾಲಕನೇ, ಚಾಪಲ್ಯವಂ

ಮಾಡದಿರು, ಮಾಡದಿರು'' ಎಂದು, (ತನ್ನಲ್ಲಿ) ಉತ್ಪತ್ತಿಸ್ವಭಾವವನ್ನೇ ಪೊಂದಿರುವನೆನುತ್ತಿರಲು ;

ರಾಯನು ಆ ಋಷಿಪತ್ನಿಯಾಡಿದ ವಾಕ್ಯವಂ ಕೇಳಿ, "ವಿನಯಪೂರ್ವಕಮಾದ ಶಬ್ದವು ಕೇಳಿ ಬರುವುದು. ಯಾವ ಬಾಲಕನು ಬುದ್ಧಿಯಂ ಪೇಳಿಸಿಕೊಳ್ಳುವನು? '' ಎಂದು ಆ ಶಬ್ದವನ್ನೇ ಅನುಸರಿಸಿ, ಆ ವೃಕ್ಷಂಗಳ ಸಂದಿಗಳಲ್ಲಿ ಚೆನ್ನಾಗಿ ದೃಷ್ಟಿಯನ್ನಿಟ್ಟು,"ಇಬ್ಬರು ಋಷಿಸ್ತ್ರೀಯರುಗಳಿಂ ಅನುಸರಿಸಲ್ಪಟ್ಟವನಾಗಿ ಅತ್ಯಂತ ಸಾಹಸದಿಂ ಯುಕ್ತನಾಗಿ,—ತಾಯಿಯ ಸ್ತನ್ಯವಂ ಅರ್ಧಪಾನವಂ ಗೆಯ್ಯುತ್ತಿರುವ, ಎಳೆಯುವುದಱಿಂ ಕ್ಲೇಶಯುಕ್ತಮಾದ ಕೂದಲುಗಳುಳ್ಳ, ಸಿಂಹದ ಮಱಿಯಂ ಬಾಲಕ್ರೀಡೆಗೋಸುಗ ಬಲಾತ್ಕಾರದಿಂದೆಳೆಯುತ್ತಿರುವ ಈಬಾಲಕನು ಯಾವನೊ ತಿಳಿಯದು? '' ಎಂದು ಸಂದೇಹಾಸ್ಪದನಾಗುತ್ತಿರಲು ;

ಅಷ್ಟಱಲ್ಲೇ ಆ ಬಾಲಕನು ಆ ಸಿಂಹದ ಮಱಿಯಂ ತನ್ನ ಹಸ್ತದಿಂದೆಳೆಯುತ್ತ ಋಷಿಸ್ತ್ರೀಯರಿಬ್ಬರಿಂದೊಡಗೊಂಡು ಆ ದುಷ್ಯಂತರಾಯನಿರ್ದ ವೃಕ್ಷಸಮೀಪಕ್ಕೆ ಬಂದು, "ಎಲೈ ಸಿಂಹದ ಮಱಿಯೇ, ನೀನು ಬಾಯ ತೆಱೆದೆಯಾದರೆ ನಿನ್ನ ಹಲ್ಲುಗಳಂ ಎಣಿಕೆಗೆಯ್ಯುವೆನು'' ಎನಲು ;

ಆ ಋಷಿಪತ್ನಿಯರಲ್ಲೊರ್ವಳು-"ಎಲೈ ಬಾಲಕನೇ, ಮಕ್ಕಳುಗಳಿಗಿಂತಲೂ ಅತಿಶಯವಾಗಿ ಪ್ರೇಮಾಸ್ಪದವಾದ ಆಶ್ರಮದಲ್ಲಿ ಬಳೆದ ಈ ಸಿಂಹವ ಏಕೆ ಬಾಧಿಸುತ್ತಿರುವೆ ? ನಿನ್ನ ಪರಾಕ್ರಮವು ಕ್ಷಣಕ್ಕೆ ಒಂದು ರೀತಿಯಾಗಿ ವೃದ್ಧಿಯಂ ಪೊಂದುತ್ತಿರುವುದು. ಈಪ್ರಕಾರವಾಗಿ ಸಮಸ್ತ ಸಿಂಹಶಾರ್ದೂಲ ಮದಗಜ ಮೊದಲಾದ ಮೃಗಗಳಂ ಲಕ್ಷ್ಯವಿಲ್ಲದೆ ಸಂಹರಿಸುತ್ತಿರುವ ನಿನಗೆ ಋಷಿಗಳೆಲ್ಲರೂ ಸರ್ವದಮನನೆಂದು ನಾಮಧೇಯವಂ ಗೆಯ್ದಿರುವುದು ಯುಕ್ತವಾಗಿರುವುದು'' ಎಂದು ನುಡಿಯಲು ;

ದುಷ್ಯಂತರಾಯನು, ಸರ್ವಾಂಗಸುಂದರನಾಗಿ ಶುಭಲಕ್ಷಣಲಕ್ಷಿತನಾಗಿರುವ ಆ ಪುತ್ರನಂ ನೋಡಿ, "ಈ ಬಾಲಕನಲ್ಲಿ ಎನಗೆ ಸಾಕ್ಷಾತ್ಪುತ್ರನಲ್ಲಿ ಹುಟ್ಟುವ ಪ್ರೇಮವು ಏನು ಕಾರಣದಿಂದುಂಟಾಗುತ್ತಿರುವುದೋ, ತಿಳಿಯದು. ಆದರೂ ಅಪುತ್ರಭಾವವು ಅನ್ಯಪುತ್ರರ ಸಂದರ್ಶನದಿಂದಿಂತು ಅನುರಾಗವನ್ನುಂಟುಮಾಡುತ್ತಿರುವುದು'' ಎಂದು ಆಲೋಚಿಸುತ್ತಿರಲು ;

ಮತ್ತೊರ್ವಳು—"ಎಲೈ ಸರ್ವದಮನ! ನೀನು ಸಿಂಹದಮಱಿಯಂ ಬಿಡದೆ ಭಾದಿಸುತ್ತಿರುವೆ ? ಇದಱ ತಾಯಿಯು ನಿನ್ನಂ ಬಂದು ಕಚ್ಚುವುದು'' ಎನಲು;

ಆ ಪುತ್ರನು ನಸುನಗುತ, ಆ ಸ್ತ್ರೀಯಂ ಕುಱಿತು, ‹‹ ಎಲೆ ವೃದ್ಧೆ! ನೀನು ಪೇಳಿದ ಮಾತಿನಿಂ ನಾನು ಬಹಳ ಭಯಯುಕ್ತನಾದೆನು!'' ಎಂದು ತುಟಿಯನ್ನೀಡಿ ಹಾಸ್ಯವಂ ಗೆಯ್ಯಲು ;

ರಾಯನು—‹‹ಜ್ವಾಲೆಯನ್ನುಗುಳುತ್ತಿರುವ ಅಗ್ನಿಯು ವೃದ್ಧಿಯಂ ಪೊಂದುವಂತೆ ಬಾಲಕನು ಮಹತ್ತರವಾದ ತೇಜೋಬೀಜದಂತೆ ಎನಗೆ ತೋಱುತ್ತಿರುವನು'' ಎಂದು ತನ್ನೊಳು ತಾನು ಆಲೋಚಿಸುತ್ತಿರಲು ;

ಋಷಿಸ್ತ್ರೀಯು—‹‹ಎಲೈ ಪುತ್ರನೇ, ಈ ಸಿಂಹದ ಮಱಿಯಂ ಬಿಟ್ಟುಕಳುಹು. ನಿನಗೆ ಇನ್ನೊಂದು ಕ್ರೀಡಾಯೋಗ್ಯವಾದ ವಸ್ತುವಂ ಕೊಡುವೆನು'' ಎಂದು ನುಡಿಯಲು ;

ಬಾಲಕನು—‹‹ನೋಡುವೆನು ಆ ವಸ್ತುವಂ ಕೊಡು ಕೊಡು '' ಎಂದು ತನ್ನ ಹಸ್ತವಂ ನೀಡಲು ;

ರಾಯನು ಆ ಬಾಲಕನ ಹಸ್ತದಲ್ಲಿ ಕಾಣುತ್ತಿರುವ ಶಂಖ ಚಕ್ರ ಪದ್ಮ ಮೊದಲಾದ ಚಿಹ್ನೆಗಳಂ ಕಂಡು ಆಶ್ಚರ್ಯಯುಕ್ತನಾಗಿ, ‘‘ ಈ ಬಾಲಕನು ಸಮಸ್ತವಾದ ಚಕ್ರವರ್ತಿ ಲಕ್ಷಣದಿಂ ಯುಕ್ತನಾಗಿರುವನು '' ಎಂದು, ಮತ್ತೂ ‘‘ ಶೋಭನೀಯವಾದ ವಸ್ತುವಿನಲ್ಲಿ ವಿಶ್ವಾಸದಿಂ ನೀಡಿದ ಹಸ್ತವು ಸೇರುವೆಯಿಂದೊಪ್ಪುತ್ತಿರುವ ಬೆರಳುಗಳುಳ್ಳುದಾಗಿರುವುದಱಿಂದಲೆ ಕಾಣದೆ ಇರುವ ದಳಗಳ ಸಂಧಿಯುಳ್ಳ ಪ್ರಾತಃಕಾಲದಿಂ ಕೂಡಿಯಿರುವ ನೂತನವಾದ ರಕ್ತಕಾಂತಿಯಿಂ ಯುಕ್ತವಾದ ಒಂದು ಕಮಲದಂತೆ ಪ್ರಕಾಶಮಾನವಾಗುತ್ತಿರುವುದು'' ಎಂದು ಯೋಚಿಸುತ್ತಿರಲು;

ಆ ಋಷಿಸ್ತ್ರೀಯು ಇನ್ನೊರ್ವಳಂ ಕುಱಿತು—‘‘ ಎಲೈ ಸುವ್ರತೆ, ಈ ಸರ್ವದಮನನು ವಾಚಾಮಾತ್ರದಿಂ ಸಮಾಧಾನವಂ ಪೊಂದಲಾಱನು. ಆದ್ದಱಿಂದ ಎನ್ನ ಪರ್ಣಶಾಲೆಯಲ್ಲಿ ಮಾರ್ಕಂಡೇಯನೆಂಬ ಋಷಿಕುಮಾರನಿಗೋಸುಗವಾಗಿ ಬಣ್ಣಗಳಂ ಬರೆದಿರುವ ಮೃತ್ತಿಕಾಮಯೂರವಿರುವುದು, ಅದಂ ಈ ಪುತ್ರನಿಗೆ ಕೊಡುವುದಕ್ಕೋಸುಗ ತೆಗೆದುಕೊಂಡು ಬರುವುದು '' ಎಂದು ನುಡಿಯಲು ;

ಆ ಸುವ್ರತೆಯೆಂಬ ಋಷಿಪತ್ನಿಯು ಆ ಮೃತ್ತಿಕಾಮಯೂರಮಂ ತೆಗೆದುಕೊಂಡು ಬರುವುದಕ್ಕೋಸುಗ ಪರ್ಣಶಾಲೆಯಂ ಕುಱಿತು ಪೋಗಲು ;

ಆ ಬಾಲಕನು—‘‘ ಎಲೈ ತಾಯೆ, ನಾನು ಮೃತ್ತಿಕಾಮಯೂರವನ್ನೊಲ್ಲೆನು. ಈ ಸಿಂಹದ ಮಱಿಯೊಡನೆ ಆಟವನ್ನಾಡುತ್ತಿರುವೆನು '' ಎಂದು ನುಡಿಯುತ್ತಿರಲು;

ಆ ಋಷಿಸ್ತ್ರೀಯು ಆ ಮಗುವಿನ ಅತಿ ಸಾಹಸಸೂಚಕವಾದ ವಾಕ್ಯವಂ ಕೇಳಿ ಮಂದಹಾಸವಂ ಗೆಯ್ಯುತ್ತಿರಲು ;

ಆ ರಾಯನು,—“ ದುಷ್ಟನಾದ ಈ ಕುಮಾರನಲ್ಲಿ ಅಧಿಕಾಭಿಲಾಷೆಯಿಂ ಯುಕ್ತನಾಗುವೆನು. ಮತ್ತು ಲೋಕದಲ್ಲಿ ಪುಣ್ಯಶಾಲಿಗಳಾದ ಜನಗಳು ನಿಮಿತ್ತವಿಲ್ಲದೆ ನಗುವುದರಿಂ ಸ್ವಲ್ಪವಾಗಿ ಹೊರದೋರುತ್ತಿರುವ ಮೊಲ್ಲೆಮೊಗ್ಗುಗಳಂತಿರುವ ದಂತಾಗ್ರಗಳುಳ್ಳ, ಸ್ಫುಟವಾಗಿ ತೋರ್ಪಡದೆ ಇರುವ ಅಕ್ಷರಗಳಿಂದ ರಮಣೀಯವಾದ ತೊದಲ್ನುಡಿದ ವಾಗ್ವ್ಯಾಪಾರವುಳ್ಳ, ತೊಡೆಗಳನ್ನಾಶ್ರಯಿಸುವುದರಲ್ಲಿ ಅತ್ಯಂತ ವಿಶ್ವಾಸಿಗಳಾದ ಮಕ್ಕಳುಗಳಂ ಎತ್ತಿಕೊಂಡು ಅವರ ಅಂಗಗಳಲ್ಲಿ ಇದ್ದ ಧೂಳುಗಳಿಂ ಮಲಿನಾಂಗರಾಗುತ್ತಿರುವರು ! ಆ ಪುಣ್ಯವಂ ನಾನು ಪಡೆಯಲಿಲ್ಲವಾದ್ದರಿಂದೀ ಸಮಸ್ತೈಶ್ವರ್ಯವು ವ್ಯರ್ಥವಾಗಿ ತೋರುವುದು ! ” ಎಂದು ವ್ಯಸನಾತುರನಾಗುತ್ತಿರಲು ;

ಆ ಋಷಿಸ್ತ್ರೀಯು ಆ ಬಾಲಕನು ಸಿಂಹದ ಶಿಶುವಂ ಹಿಂಸೆಗೆಯ್ಯುವುದಂ ನೋಡಿ—“ ಈ ದುಷ್ಟನಾದ ಬಾಲಕನು ಎನ್ನಂ ಲಕ್ಷ್ಯಂಗೆಯ್ಯದೆ ಇರುವನು. ಇವನಂ ಶಿಕ್ಷಿಸುವುದಕ್ಕೆ ದಕ್ಷರಂ ಕಾಣುವೆನು ” ಎಂದು ಎಡಬಲವಂ ನೋಡಿ, “ ಎಲೈ ಋಷಿಕುಮಾರರುಗಳಲ್ಲಿ ಯಾರು ? ” ಎಂದು ಕೂಗಿ, ದುಷ್ಯಂತರಾಯನಂ ಕಂಡು,-“ಎಲೈ ಭದ್ರಾಕಾರನಾದ ಪುರುಷನೇ, ಇಲ್ಲಿ ಬಂದು ಬಿಡಿಸಲಸದಳವಾದ ಹಸ್ತಮುಷ್ಟಿಯುಳ್ಳ ಈ ದುಷ್ಟಬಾಲಕನಿಂ ಬಾಲಕ್ರೀಡೆಗೋಸುಗ ಬಾಧಿಸಲ್ಪಟ್ಟ ಸಿಂಹದ ಶಿಶುವಂ ಬಿಡಿಸಿ ಸಲಹುವುದು ” ಎಂದು ನುಡಿಯಲು ;

ಆ ವಾಕ್ಯಕ್ಕೆ ರಾಯನು ಸಂತುಷ್ಟನಾಗಿ, ನಸುನಗುತ ಬಂದು, ಆ ಬಾಲಕನಂ ಕುರಿತು,—“ ಎಲೈ ಮಹರ್ಷಿಕುಮಾರನೇ, ಈ ರೀತಿಯಿಂ ಪುಟ್ಟಿದು ಮೊದಲಾಗಿ ತಪೋವನಕ್ಕೆ ವಿರೋಧಕಾರ್ಯದಲ್ಲಿ ಆಸಕ್ತನಾದ ನೀನು ತಪಸ್ಸನ್ನೆಂತು ಮಾಡುತ್ತಿರುವೆ ? ಮತ್ತು ಕಾಳೋರಗದ ಶಿಶುವಿನಿಂದ ಆಶ್ರಿತವಾದ ಈ ಗಂಧವೃಕ್ಷವು ಹೇಗೆ ಸರ್ವರಿಂದಲೂ ದೂಷಿಸಲ್ಪಟ್ಟದ್ದಾಗಿರುವುದೋ ಅದರಂತೆ ದುಷ್ಟಕ್ರೀಡೆಗಳಿಂದ ಆಶ್ರಿತವಾದ ಗುಣಮುಳ್ಳ ಪುರುಷನು ಸಮಸ್ತ ಋಷಿಗಳಿಂ ನಿಂದಿತನಾಗುವನು ” ಎಂದು ನುಡಿಯಲು ;

ಋಷಿಪತ್ನಿಯು—“ ಅಯ್ಯಾ ಸುಂದರಾಕಾರನಾದ ಪುರುಷನೇ, ಈ ಪುತ್ರನಂ ಋಷಿಕುಮಾರನೆಂದು ಕರೆದೆಯಷ್ಟೆ. ಇವನು ಋಷಿಪುತ್ರನಲ್ಲ ” ಎಂದು ನುಡಿಯಲು ;

ಆ ವಾಕ್ಯಕ್ಕೆ ರಾಯನು—“ ಎಲೆ ಪೂಜ್ಯಳಾದ ಸ್ತ್ರೀಯೇ, ಮನೋಹರವಾದ ಇವನ ಆಕಾರಕ್ಕೆ ಅಸದೃಶವಾದ ಚೇಷ್ಟೆಯಿಂ ಇವನು ಮುನಿಪುತ್ರನಲ್ಲ

ವೆಂದು ತೋಱುವುದು. ಆದರೆ ಇವನು ಈ ಋಷಿಗಳಿಗೆ ಯೋಗ್ಯವಾದ ತಪೋವನದಲ್ಲಿ ವಾಸವಂ ಗೆಯ್ಯುವುದಱಿಂದಿಂತು ನುಡಿದೆನು'' ಎಂದು ಪೇಳಿ, ಆ ಬಾಲಕನ ಕೆಯ್ಯಿಂ ಪೀಡಿತವಾದ ಆ ಸಿಂಹದ ಮಱಿಯಂ ಬಿಡಿಸಿ, ಆ ಬಾಲಕನ ಮೆಯ್ದಡವಿ, ಯಾವ ಪುರುಷನ ಕುಲಾಂಕುರರೂಪಮಾದ ಈ ಪುತ್ರನಂ ಮುಟ್ಟಿದ್ದಱಿಂದೆನ್ನ ಅಂಗಗಳಲ್ಲಿ ಒಂದಾನೊಂದು ಅತಿಶಯವಾದ ಆನಂದ ಪುಟ್ಟುತ್ತಿರುವುದು, ಸುಕೃತಶಾಲಿಯಾದ ಯಾವ ಪುರುಷನಿಗೆ ಇವನು ಸಾಕ್ಷಾತ್ಪುತ್ರನೋ ಅವನಿಗೆ ಇವನು ಏನು ಸಂತೋಷವನ್ನುಂಟುಮಾಡುವನೋ ತಿಳಿಯದು.'' ಎಂದು ತನ್ನ ಮನದಲ್ಲಿ ಆಲೋಚಿಸುತ್ತಿರಲ ;

ಆ ಋಷಿಸ್ತ್ರೀಯು ಆ ಬಾಲಕನ ಮುಖವಂ ರಾಯನಂ ಸಹ ನೋಡಿ, ಅತ್ಯಾಶ್ಚರ್ಯವುಂಟಾದುದೆಂದು ನುಡಿಯಲು;

ರಾಯನು—“ ಎಲೌ ಪೂಜ್ಯಳೇ, ನಿನಗೆ ಆಶ್ಚರ್ಯವುಂಟಾಗುವುದಕ್ಕೆ ಕಾರಣವೇನು ? '' ಎನ್ನಲು ;

ಆ ಸ್ತ್ರೀಯು—“ಅಯ್ಯಾ ಪೂಜ್ಯನೇ, ಈ ಪುತ್ರನ ಆಕಾರ ನಿನ್ನ ಆಕಾರ ನೋಡುವವರಿಗೆ ನಿಮ್ಮಿಬ್ಬರಿಗೆ ಏನೋ ಒಂದು ಸಂಬಂಧವಂ ಪೇಳುತ್ತಿರುವುದು, ಅಪರಿಚಿತನಾದರೂ ನಿನ್ನಾಕಾರವು ಈ ಪುತ್ರನೊಡನೆ ಸ್ವಲ್ಪವಾದರೂ ತಾರತಮ್ಯವಿಲ್ಲದೆ ಇರುವುದ್ದಱಿಂದ ನಾನು ಆಶ್ಚರ್ಯಯುಕ್ತಳಾದೆನು '' ಎಂದು ನುಡಿಯಲು;

ರಾಯನು ಆ ಕುಮಾರನಂ ಎತ್ತಿಕೊಂಡು ಶಿರಸ್ಸನ್ನಾಘ್ರಾಣಿಸಿ, ಮುಖದಲ್ಲಿ ಮುತ್ತಿಟ್ಟು, ಆ ಋಷಿಸ್ತ್ರೀಯಂ ಕುಱಿತು—“ ಎಲೌ ಪೂಜ್ಯಳೇ ಈ ಬಾಲಕನು ಋಷಿಪುತ್ರನಲ್ಲವೆಂದು ಪೇಳುತ್ತಿರುವೆಯಷ್ಟೆ. ಹಾಗಾದರೆ ಇವನು ಯಾವ ರಾಜಪುತ್ರನು, ಯಾವ ವಂಶದಲ್ಲಿ ಪುಟ್ಟಿದವನು?'' ಎಂದು ಕೇಳಲು;

ಆ ಸ್ತ್ರೀಯು—“ಇವನು ಪುರುವಂಶದಲ್ಲಿ ಪುಟ್ಟಿದವನು'' ಎನ್ನಲು ;

ರಾಯನು—“ ಎನಗೂ ಈ ಪುತ್ರನಿಗೂ ಒಂದೇ ವಂಶವಾದುದು. ಆದ್ದಱಿಂದಲೆ ಈ ಸ್ತ್ರೀಯು ನಮ್ಮಿಬ್ಬರಿಗೂ ಸಮಾನವಾದ ಆಕಾರವುಂಟಾದುದೆಂದು ನುಡಿಯುತ್ತಿರುವಳು. ಆದರೂ ಪುರುವಂಶದವರ ಮಾಹಾತ್ಮ್ಯೆಯು ಅತ್ಯಧಿಕಮಾಗಿರುವುದು ; ಮತ್ತು ಆ ವಂಶದ ರಾಯರುಗಳು ಮೊದಲು ಭೂಸಂರಕ್ಷಣೆಯಂ ಗೆಯ್ಯುವುದಕ್ಕೋಸುಗ ಸುಧಾಶುಭ್ರಮಾಗಿರುವ ನವರತ್ನಮಯಂಗಳಾದ ಗೃಹಂಗಳಲ್ಲಿ ವಾಸವಂ ಗೆಯ್ಯುತ್ತ ಅನೇಕ ಸುಖವನ್ನನುಭವಿಸಿ, ಅನಂತರದಲ್ಲಿ ವನವಾಸವಂ

ಗೆಯ್ದು, ನಿಯಮವ್ರತರಾಗಿ ಕಂದಮೂಲಫಲಾದಿಗಳಂ ಭಕ್ಷಿಸುತ್ತ, ವೃಕ್ಷಮೂಲಂಗಳೇ ಮನೆಯುಳ್ಳವರಾಗಿ ಇರುವರು. ಆದ್ದರಿಂದ ಈ ವನದಲ್ಲಿ ವಾಸವಂ ಗೆಯ್ವ ನಮ್ಮ ಸಂಸ್ಥನಾದ ಯಾವ ಪುರುಷನಿಂದ ಯಾವ ಸ್ತ್ರೀಯಲ್ಲಿ ಈ ಪುತ್ರನು ಪುಟ್ಟಿರಬಹುದು?'' ಎಂದು ನುಡಿಯಲು;

ಆ ಸ್ತ್ರೀಯು—''ಅಯ್ಯಾ ಪೂಜ್ಯನೇ, ಕೇಳು. ಈ ಬಾಲಕನ ತಾಯಿಯು ಅಪ್ಸರಸ್ತ್ರೀಯಿಂದ ಪುಟ್ಟಿ ದೇವತೆಗಳಿಗೆ ತಂದೆಯಾದ ಕಶ್ಯಪಬ್ರಹ್ಮನ ಈ ಆಶ್ರಮದಲ್ಲಿ ಈ ಪುತ್ರನಂ ಪೆತ್ತಳು'' ಎನ್ನಲು ;

ರಾಯನು—ಈ ಬಾಲಕನ ತಾಯಿಯು ಅಪ್ಸರಸ್ತ್ರೀಯ ಉದರದಲ್ಲಿ ಪುಟ್ಟಿದವಳೆಂದು ಋಷಿಸ್ತ್ರೀಯು ಪೇಳುವ ವಾಕ್ಯವು ಎನಗೆ ಮರಳಿ ಆಶೆಯನ್ನುಂಟುಮಾಡುತ್ತಿರುವುದು ಎಂದು ತನ್ನ ಹೃದಯದಲ್ಲಿ ಯೋಚಿಸಿ—''ಎಲೌ ಸ್ತ್ರೀಯೆ, ಈ ಪುತ್ರನಂ ಪೆತ್ತವಳು ಯಾವ ಹೆಸರುಳ್ಳ ದೊರೆಯ ಪತ್ನಿಯು ?'' ಎಂದು ಕೇಳಲು;

ಆ ಸ್ತ್ರೀಯು—'' ಎಲೈ ಪೂಜ್ಯನೇ, ಧರ್ಮಪತ್ನಿಯ ಪರಿತ್ಯಾಗವಂ ಗೆಯ್ದಿರುವ ದುಷ್ಟನಾದ ಆ ರಾಯನ ನಾಮೋಚ್ಚಾರಣೆಯಂ ಗೆಯ್ಯಲಾರೆನು '' ಎನ್ನಲು ;

ಆ ವಾಕ್ಯವಂ ಕೇಳಿ, ರಾಯನು—' ಈ ಸ್ತ್ರೀಯು ಪೇಳುವ ವಾಕ್ಯವು ಎನ್ನ ಕಥೆಯನ್ನೇ ಅನುಸರಿಸುತ್ತಿರುವುದು. ಆದರೂ ಈ ಬಾಲಕನ ಪೆತ್ತವಳ ನಾಮಧೇಯವಂ ವಿಚಾರಿಸುವೆನು '' ಎಂದು ಮನದಲ್ಲಿ ಯೋಚಿಸಿ, ಅಷ್ಟರಲ್ಲೇ ಪರಸ್ತ್ರೀಯ ಪೆಸರಂ ಕೇಳುವುದು ನ್ಯಾಯವಲ್ಲವೆಂದು ತಿಳಿಯುತ್ತಿರುವನಿತರೊಳು–

ಸುವ್ರತೆಯೆಂಬ ಋಷಿಸ್ತ್ರೀಯು ಮೃಣ್ಮಯವಾದ ಮಯೂರವಂ ತೆಗೆದುಕೊಂಡು ಆಬಾಲಕನ ಸಮೀಪಕ್ಕೆ ಬಂದು ಆ ನವಿಲನ್ನಾ ಕುಮಾರನಿಗೆ ತೋರಿಸಿ, ಈ ಪಕ್ಷಿಯ ಲಾವಣ್ಯವಂ ನೋಡು ಎಂದು ಪೇಳುವಲ್ಲಿ, '' ಶಕುಂತಲಾವಣ್ಯಂ ಪಶ್ಯ '' ಎಂದು ನುಡಿಯಲು; ಆ ವಾಕ್ಯದಿಂದಾಬಾಲಕನಿಗೆ ಶಕುಂತದ ಲಾವಣ್ಯವಂ ನೋಡೆಂದು ನುಡಿದಳೆಂಬ ಜ್ಞಾನವುಂಟಾಗದೆ, ಶಕುಂತಳೆಯ ಲಾವಣ್ಯವಂ ನೋಡೆಂದು ನುಡಿದಂತೆ ಬೋಧೆಯುಂಟಾಗಲಾಗಿ, ಆ ಬಾಲಕನು ಚೆನ್ನಾಗಿ ಎಡಬಲವಂ ನೋಡಿ, '' ಎನ್ನ ತಾಯಿ ಎಲ್ಲಿ ? '' ಎಂದು ನುಡಿಯಲಾ ಋಷಿಪತ್ನಿಯರೀರ್ವರು ನಗುತ, '' ಜನನಿಯಲ್ಲಿ ಅಧಿಕಾಭಿಲಾಷೆಯುಳ್ಳ ಈ ಬಾಲಕನು ನಾಮಸಾಮ್ಯದಿಂ ವಂಚಿತನಾದನು '' ಎಂದು ನುಡಿದು, ''ಎಲೈ ಬಾಲಕನೇ, ಈ ಮೃಣ್ಮಯ

ವಾದ ಮಯೂರದ ಲಾವಣ್ಯವಂ ನೋಡೆಂದು ಪೇಳಿದೆನಲ್ಲದೆ ನಿನ್ನ ತಾಯಿಯಾದ ಶಕುಂತಳೆಯ ವರ್ಣವಂ ನೋಡೆಂದು ನುಡಿಯಲಿಲ್ಲ '' ಎಂದು ನುಡಿಯಲು,

ಆ ರಾಯನು ಆ ಬಾಲಕನು ನುಡಿದ ವಾಕ್ಯವಂ ಕೇಳಿ,— ಈ ಪುತ್ರನ ತಾಯಿಯ ಪೆಸರು ಶಕುಂತಳೆಯೆಂದು ಇರುವುದೋ ಏನು ? ಲೋಕದಲ್ಲಿ ಒಂದೇ ನಾಮವುಳ್ಳವರು ಬಹುಜನವಿರುವರು. ಆದರೂ ಈ ಪುತ್ರನು ಪುರುವಂಶದಲ್ಲಿ ಪುಟ್ಟಿದವನೆಂತಲೂ ಇವನ ತಾಯಿ ಶಕುಂತಳೆಯೆಂತಲೂ ನುಡಿಯುವ ಈ ಸ್ತ್ರೀಯರುಗಳ ವಾಕ್ಯದಿಂ ಮೃಗತೃಷ್ಣೆಯಲ್ಲಿ ಜಲಭ್ರಾಂತಿಯುಂಟಾದಂತೆ ಸಾಮ್ಯದಿಂದೆನಗೆ ಅಧಿಕಾಭಿಲಾಷೆಯು ಪುಟ್ಟಿರುವುದು ಎಂದು ಯೋಚಿಸುತ್ತಿರಲು ;

ಆ ಬಾಲಕನು ಆ ಋಷಿಸ್ತ್ರೀಯಂ ಕುಱಿತು— '' ಎಲೌ ತಾಯೇ, ನಾನೀ ಮೃತ್ತಿಕಾಮಯೂರವನ್ನೊಲ್ಲೆ. ಎನಗೆ ಸಿಂಹದ ಶಿಶುವನ್ನೇ ತಂದುಕೊಡು '' ಎಂದು ನುಡಿಯುತ್ತಿರಲು ;

ಸ್ತ್ರೀಯು ಆ ಬಾಲಕನ ದೇಹಸಂರಕ್ಷಣಾರ್ಥವಾಗಿ ಮಾರೀಚಮಹಾಮುನಿಯು ಕಟ್ಟಿದ್ದ ಅಪರಾಜಿತವೆಂಬ ಮೂಲಿಕೆಯ ಯಂತ್ರವನ್ನು ಆ ಕುಮಾರನ ಕೈಯಲ್ಲಿ ಕಾಣದೆ ಸಂತಾಪದಿಂ ಯುಕ್ತಳಾಗಿ ಪಾರ್ಶ್ವದಲ್ಲಿರುವಳಂ ಕುಱಿತು ಗಾಬರಿಯಿಂದ '' ಎಲೆ ಸಖಿ, ಈ ಬಾಲಕನ ದೇಹಸಂರಕ್ಷಣೆಗೋಸುಗ ಕಟ್ಟಿದ್ದ ಯಂತ್ರವನ್ನಿವನ ಮುಂಗೈಯಲ್ಲಿ ಕಾಣೆನಲ್ಲಾ ! '' ಎಂದು ಭಯಭ್ರಾಂತಳಾಗುತ್ತಿರಲು ;

ರಾಯನು— '' ಎಲೌ ಪೂಜ್ಯರಾದ ಸ್ತ್ರೀಯರುಗಳಿರಾ, ಏಕೆ ಭಯಾತುರರಾಗುತ್ತಿರುವಿರಿ? ಈ ಬಾಲಕನು ಸಿಂಹದ ಮಱಿಯಂ ಸೆಳೆದುಕೊಂಡು ಬರುವ ಸಮಯದಲ್ಲಿ ಇವನ ಹಸ್ತದಿಂ ಜಾರಿ ಇಲ್ಲಿ ಬಿದ್ದಿರುವುದು '' ಎಂದು ನುಡಿದು ಆ ಯಂತ್ರವಂ ತೆಗೆದುಕೊಳ್ಳುವುದಕ್ಕೆ ಇಚ್ಛೈಸುತ್ತಿರಲು;

ಅಷ್ಟಱಲ್ಲೇ ಆ ಋಷಿಸ್ತ್ರೀಯರು— ಎಲೈ ಪೂಜ್ಯನೇ, ಆ ಯಂತ್ರವಂ ಮುಟ್ಟದಿರೆಂದು ನುಡಿಯುವಷ್ಟಱಲ್ಲೇ ರಾಯನು ಆ ಯಂತ್ರವಂ ಹಸ್ತದಲ್ಲಿ ತೆಗೆದುಕೊಂಡದ್ದಂ ಅವರೀರ್ವರು ಕಂಡು, '' ಈ ಪುರುಷನು ಯಂತ್ರವಂ ಹೇಗೆ ತೆಗೆದುಕೊಂಡನೊ ! '' ಎಂದಾಶ್ಚರ್ಯಯುಕ್ತರಾಗಿ, ತಮ್ಮ ಹಸ್ತಗಳಂ ಎದೆಯಲ್ಲಿಟ್ಟು ಒಬ್ಬರೊಬ್ಬರು ಮುಖಾವಲೋಕನವಂ ಗೆಯ್ಯುತ್ತಿರಲು ;

ಆ ದುಷ್ಯಂತರಾಯನು,— '' ಎಲೌ ಋಷಿಪತ್ನಿಯರುಗಳಿರಾ! ಈ ಯಂತ್ರವಂ ಮುಟ್ಟದಿರೆಂದು ಆಶ್ಚರ್ಯದಿಂ ಯುಕ್ತರಾಗಿ ನುಡಿದ ವಾಕ್ಯದ ಸಂಗತಿಯಂ

ಪೇಳಿರಿ'' ಎನ್ನಲು,

ಆ ಸ್ತ್ರೀಯರಲ್ಲೊಬ್ಬಳು—''ಎಲೈ ಪೂಜ್ಯನೇ, ಕೇಳು. ಮಾರೀಚಮಹಾಮುನಿಯು ಈ ಪುತ್ರನ ಜಾತಕರ್ಮವಾಗುವ ಕಾಲದಲ್ಲಿ ಅಪರಾಜಿತವೆಂಬ ಮೂಲಿಕೆಯಿಂದ ಯಂತ್ರವಂ ಮಾಡಿ ರಾಕ್ಷಸಾದಿಗಳ ಬಾಧೆಯಾಗದಂತೆ ಈ ಬಾಲಕನ ದೇಹದಲ್ಲಿ ಕಟ್ಟಿದನು'' ಎನಲು ;

ರಾಯನು—''ಅಥವಾ ಕಟ್ಟಿದಾಕ್ಷಣವೆ ಇದಂ ಮುಟ್ಟಬಾರದೆಂಬ ನೆವವೇನು ?'' ಎಂದು ಕೇಳಲು ;

ಆ ಸ್ತ್ರೀಯರು—''ಎಲೈ ಪೂಜ್ಯನೇ, ಆ ಋಷಿಯು ಈ ಬಾಲಕನ ತಾಯಿ ತಂದೆಗಳು ಹೊರತು ಭೂಮಿಗೆ ಬಿದ್ದ ಈ ಯಂತ್ರವನಿನ್ನಾರು ಮುಟ್ಟಿದಾಗ್ಯೂ ಆಕ್ಷಣದಲ್ಲೇ ಅದು ಸರ್ಪವಾಗಿ ಅವರಂ ಕಚ್ಚುವಂತೆ ವರವನ್ನಿತ್ತಿರುವನು'' ಎನ್ನಲು,

ರಾಯನು—''ನೀವು ಪೇಳಿದಂತೆ ಪೂರ್ವದಲ್ಲಿ ಯಾರಾದರೂ ಮುಟ್ಟಿದ್ದಕ್ಕೆ ಅವರಂ ಕಚ್ಚಿದ ಸಂಗತಿಯಂ ನೀವು ಕಂಡಿರುವಿರಾ?'' ಎನ್ನಲು;

ಆ ವಾಕ್ಯಕ್ಕೆ ಆ ಸ್ತ್ರೀಯರು ಅನೇಕಪ್ರಕಾರವಾಗಿ ಕಂಡಿರುವೆವೆನ್ನಲು ;

ರಾಯನು ಆನಂದಸುಧಾಸಮುದ್ರದಲ್ಲಿ ಮುಳುಗಿ,—'' ನಾನು ಮನೋರಥದಿಂ ಸಂಪೂರ್ಣನಾದರೂ ಇನ್ನು ಆ ಶಕುಂತಳೆಯ ಸಂದರ್ಶನವಿಲ್ಲದೆ ಇರುವುದರಿಂ ಅಧಿಕ ಸಂತೋಷವಂ ಪೊಂದಲಾರೆನು'' ಎಂದು, ಆ ಬಾಲಕನಂ ಮರಳಿ ಆಲಿಂಗಿಸಿ ಮುದ್ದಾಡುತ್ತಿರಲು ;

"ಎಲೆ ಸುವ್ರತೆ ನಡೆ, ನಾವೀ ವೃತ್ತಾಂತವೆಲ್ಲವಂ ಶಕುಂತಳೆಗೆ ತಿಳಿಸುವ'' ಎಂದು ನುಡಿದು, ಅವಳಿರುವ ಪರ್ಣಶಾಲೆಗೆ ಪೋಗಿ ನಾರಸೀರೆಯನ್ನುಟ್ಟು ಕೃಶಳಾಗಿರುವ ಶಕುಂತಲೆಯಂ ಕಂಡು ಈ ವೃತ್ತಾಂತವೆಲ್ಲವಂ ತಿಳುಹುತ್ತಿರಲು;

ಅತ್ತಲಾಬಾಲಕನು—''ಎಲೈ ಪುರುಷನೇ, ಎನ್ನಂ ಬಿಟ್ಟು ಕಳುಹು. ಎನ್ನ ತಾಯಿಯ ಸಮೀಪಕ್ಕೆ ಹೋಗುವೆನು'' ಎನ್ನಲು;

ರಾಯನು—''ಪುತ್ರನೇ, ನಾವಿಬ್ಬರೂ ಪೋಗಿ ನಿನ್ನ ತಾಯಿಗೆ ಸಂತೋಷವನ್ನುಂಟುಮಾಡುವೆವು'' ಎನ್ನಲು;

ಬಾಲಕನು—'' ಎನ್ನ ತಂದೆಯಾದವನು ದುಷ್ಯಂತರಾಯನಾಗಿರುವಲ್ಲಿ ಎನ್ನ ತಾಯಿಯ ಸನ್ನಿಧಿಗೆ ಬರುವುದಕ್ಕೆ ನೀನಾರು? ''ಎಂದು ನುಡಿಯಲು;

ರಾಯನು ಮುಗುಳ್ನಗೆಯಿಂ ಯುಕ್ತನಾಗಿ—''ಈಬಾಲಕನ ನುಡಿಯು

ನಿಶ್ಚಯವಪ್ಪುದ ವಿಶ್ವಾಸವಂ ಪುಟ್ಟಿಸುತ್ತಿರುವುದು'' ಎಂದು, ಆ ಬಾಲಕನ ಭಾಷೆಗಳಂ ಕೇಳುತ್ತ ಸಂತುಷ್ಟನಾಗುತ್ತಿರಲು;

ಅಷ್ಟರಲ್ಲೇ ಶಕುಂತಳೆಯು ಅಲ್ಲಿ ನಡೆದ ವೃತ್ತಾಂತವಂ ಋಷಿಸ್ತ್ರೀಮುಖವಚನದಿಂ ಕೇಳಿ, ಅಧಿಕ ಸಂತೋಷಯುಕ್ತಳಾಗಿ, ಪರ್ಣಶಾಲೆಯಿಂ ಪೊರಮಟ್ಟು, ಜಡೆಯು ಗಂಟಿನಿಂದ ಒಂದಾಗಿರುವ ಕೇಶಸಮೂಹದಿಂದಲೂ ಮಲಿನವಸ್ತ್ರದಿಂದಲೂ ವಿರಾಜಮಾನಳಾಗಿ ಜಲಪಾನವಂ ಗೆಯ್ದು ತಪವಂ ಗೆಯ್ಯುತ್ತಿರ್ದ ವನಲಕ್ಷ್ಮಿಯೋ ಎಂಬಂತೆ ಬಿಳ್ಪೇರಿದ ಶರೀರದಿಂ ರಾಜಿಸುತ್ತ, ಮಲಿನವಸ್ತ್ರದಲ್ಲಿ ಕಟ್ಟಿದ ದಿವ್ಯರತ್ನದಂತೆ ನಾರಸೀರೆಯಲ್ಲಿ ಅಡಗಿರುವ ದೇಹಕಾಂತಿಯುಳ್ಳವಳಾಗಿ, ಬರುತ, ಎನ್ನ ಪುತ್ರನಾದ ಸರ್ವದಮನನ ಶರೀರದಲ್ಲಿದ್ದ ಮೂಲಿಕೆಯು ಭೂಮಿಗೆ ಬೀಳಲದಂ ಸುಲಭವಾಗಿ ತನ್ನ ಕರದಿಂ ತೆಗೆದುಕೊಂಡವನು ಒಬ್ಬಾನೊಬ್ಬ ಪುರುಷನು ಯಾವನೋ ಎಂಬ ವಿಚಾರದಲ್ಲಿ ಅಭಿಲಾಷೆಯಿಲ್ಲದೆ, ಅವನೇ ದುಷ್ಯಂತಮಹಾರಾಯನಾಗಿರುವನೆಂದು ಎನ್ನ ಅದೃಷ್ಟದಲ್ಲಿ ಅಭಿಲಾಷೆಯುಂಟಾದುದು ಎಂದೂ, ಮತ್ತು ಇವನೇ ದುಷ್ಯಂತರಾಯನು ನಿಜವಾದಲ್ಲಿ, ಎನ್ನೊಡನೆ ಸಾನುಮತಿಯು ಬಂದು ರಾಯನೂ ನಿನ್ನಂ ಸ್ಮರಿಸಿಕೊಂಡು ಅಧಿಕ ವಿರಹವ್ಯಥೆಯುಂ ಪೊಂದುತ್ತ, ಆಹಾರವಂ ವರ್ಜಿಸಿರುವನೆಂದು ಪೇಳಿದ ವಾಕ್ಯವು ಯಥಾರ್ಥವಾಗಿ ತೋರುವುದೆಂದೂ ಮನದಲ್ಲಿ ಯೋಚಿಸುತ್ತ ಬರುತ್ತಿರಲು ;

ರಾಯನು ಸ್ವಲ್ಪದೂರದಲ್ಲಿ ಬರುವ ಶಕುಂತಳೆಯುಂ ಕಂಡು, ರೋಮಾಂಚದಿಂ ವ್ಯಾಪ್ತವಾದ ಶರೀರನಾಗಿ-ಅತ್ಯಂತ ಮಲಿನವಾದ ಸೀರೆಯನ್ನುಟ್ಟು ತಪವಂ ಗೆಯ್ಯುವುದರಿಂ ಕೃಶಾಂಗಿಯಾಗಿ, ಅತಿದುಃಖದಿಂ ತೈಲಾದಿಸಂಸ್ಕಾರವಿಲ್ಲದೆ ಒಂದಾಗಿ ಬತ್ತಿಗಟ್ಟಿರುವ ಕೇಶಪಾಶವನುಳ್ಳವಳಾಗಿ, ಪರಿಶುದ್ಧ ಸ್ವಭಾವಶಾಲಿಯಾಗಿ, ನಿಷ್ಕರುಣೆಯಾದ ಎನ್ನಂತೆ ಬಹುಕಾಲದಿಂ ಬಂದ ವಿರಹವ್ಯಥೆಯುಂ ವಹಿಸಿರುವಂತೆ ತೋರುತ್ತಿರುವಳು '' ಎಂದು ನುಡಿಯುತ್ತಾ, ಅವಳ ಮುಖಕಮಲವನ್ನೇ ನೋಡುತ್ತಿರಲು;

ಶಕುಂತಳೆಯು ಪಶ್ಚಾತ್ತಾಪದಿಂ ಕಾಂತಿಹೀನನಾಗಿರುವ ದುಷ್ಯಂತರಾಯನಂ ಕಂಡು, '' ಇವನಾರೋ ದುಷ್ಯಂತರಾಯನಂತೆ ತೋರುತ್ತ ಮಂಗಳಾಂಗನಾದ ಎನ್ನ ಪುತ್ರನ ಸರ್ವಾಂಗವನ್ನಾಲಿಂಗಿಸಿ ತನ್ನ ಶರೀರಸಂಗದಿಂದವನ ದೇಹವಂ ಕಾದಿಸುತ್ತಿರುವನು! '' ಎಂದು ಸಮೀಪಕ್ಕೆ ಬರಲು ;

ಆ ಬಾಲಕನು ಆ ದುಷ್ಯಂತರಾಯನ ಸಮೀಪವಂ ಬಿಟ್ಟು ಶಕುಂತಳೆಯು

ಸಮೀಪವಂ ಸೇರಿ, " ತಾಯೆ ಇವನಾರೋ ಪರಕೀಯ್ಯನು ಎನ್ನನ್ನು ಪುತ್ರನೆಂದಾಲಿಂಗಿಸುತ್ತಿರುವನು " ಎಂದು ನುಡಿಯಲು;

ಬಾಲಕನ ಆ ಮುದ್ದುಮಾತಂ ಕೇಳಿ ಸಂತುಷ್ಟಹೃದಯನಾದ ದುಷ್ಯಂತರಾಯನು ಶಕುಂತಳೆಯಂ ಕುಱಿತು—" ಎಲೌ ಪ್ರಾಣಪ್ರಿಯಳೇ, ಮೊದಲು ನಿನ್ನಲ್ಲಿ ಅಜ್ಞಾನದಿಂ ಪ್ರಯೋಗಿಸಿದ ಕ್ರೂರತ್ವವು ಈಗ ಅನುಕೂಲ ಪರಿಣಾಮವುಳ್ಳದ್ದಾದುದು. ನಿನ್ನ ಸಂದರ್ಶನದಿಂದೆನ್ನ ಶರೀರವು ಜ್ಞಾನಯುಕ್ತವಾದುದು" ಎನಲು;

ಆ ಶಕುಂತಳೆಯು ತನ್ನ ಮನವಂ ಕುಱಿತು–"ಹೃದಯವೆ, ಯಾವ ಪುರುಷನು ಯಾವನೋ ಎಂಬ ಸಂದೇಹವಂ ಬಿಡು. ದೈವವು ಮಾತ್ಸರ್ಯವಂ ಬಿಟ್ಟು ಎನ್ನ ವಿಷಯದಲ್ಲಿ ದಯಾಶಾಲಿಯಾದುದು. ಇವನೇ ಪ್ರಾಣಧಾರಕನಾದ ದುಷ್ಯಂತರಾಯನು " ಎಂದು ಪೇಳುತ್ತಿರಲು;

ರಾಯನು—"ಎಲೆ ಕೋಮಲಾಂಗಿಯಾದ ಶಕುಂತಳೆಯೇ, ಗ್ರಹಣವಾದ ಮೇಲೆ ಚಂದ್ರನಂ ಸೇರುವ ರೋಹಿಣೀದೇವಿಯಂತೆ ಅಜ್ಞಾನವೆಂಬ ಅಂಧಕಾರದಿಂ ಮುಕ್ತನಾದ ಎನ್ನ ಮುಂಭಾಗದಲ್ಲಿ ಬಂದು ನಿಂತಿರುವೆ" ಎಂದು ನುಡಿಯಲು;

ಶಕುಂತಳೆಯು ಪೂರ್ವದಲ್ಲಿರ್ದ ಅನುರಾಗವಂ ಮಧ್ಯದಲ್ಲಿ ಬಂದ ವಿಪತ್ತಂ ಈಗ ಉಂಟಾದ ಸಂಬಂಧವಂ ಸಹ ಸ್ಮರಿಸಿ, ಅತಿ ವ್ಯಸನಾತುರಳಾಗಿ, ರಾಯನಂ ಕುಱಿತು—" ಎಲೈ ಆರ್ಯಪುತ್ರನೆ, ಜಯಶೀಲನಾಗು " ಎಂದು ನುಡಿಯುವಷ್ಟಱಲ್ಲೇ ಹೇರಳ ದುಃಖದಿಂದ ಗದ್ಗದಗೂಡಿದ ಧ್ವನಿಯಿಂದ ಶಂಖದಂತಿರುವ ಕತ್ತಿನಲ್ಲಿ ಒತ್ತಿಬಂದ ಅತ್ಯಂತದುಃಖನಿಂ ಮುತ್ತಿನಂತೆ ಮುದ್ದಾಗಿ ಬೀಳುವ ಕಂಬನಿಗಳುಳ್ಳವಳಾಗಿ, ಲಜ್ಜೆಯಿಂ ಶಿರವಂ ಬಾಗಿ ನಿಂತಿರಲು;

ಆ ರಾಯನು—" ಎಲೌ ಪ್ರಾಣಾಧಾರಳೆ, ಕೇಳು. " ಜಯ ಆರ್ಯಪುತ್ರ" ಎಂದು ಪೇಳುವ ವಾಕ್ಯವು ಕಣ್ಣೀರುಗಳಿಂದ ತಡೆಯಲ್ಪಟ್ಟುದಾದಾಗ್ಯೂ ಜಯವೆಂದು ಪೇಳ್ದ ಎರಡು ವರ್ಣಂಗಳೇ ಎನ್ನಂ ಜಯಿಸಿದುವು, ಮತ್ತು ತಾಂಬೂಲಲಾಕ್ಷಾರಸಾದಿಸಂಸ್ಕಾರವಿಲ್ಲದೆ ಇದ್ದರೂ ಜಪಾಪುಷ್ಪದಂತೆ ರಕ್ತಿಮೆಯಂ ಪಡೆದಿರುವ ನಿನ್ನ ಅಧರವು ಎನ್ನ ಮನವಂ ಕರಗಿಸುತ್ತಿರುವುದು " ಎಂದು ನುಡಿಯಲು;

ಬಾಲಕನು ಶಕುಂತಳೆಯೂ ರಾಯನೂ ಸಲ್ಲಾಪವಂ ಗೆಯ್ಯುವುದಂ ಕೇಳಿ, " ಎಲೆ ತಾಯೇ, ನಿನ್ನೊಡನೆ ಈ ಪ್ರಕಾರಕ್ಕೆ ಸಲ್ಲಾಪವಂ ಗೆಯ್ಯುವುದಕ್ಕೆ ಇವನಾರು? " ಎಂದು ಬೆಸಗೊಳ್ಳಲು;

ಶಕುಂತಳೆಯು—" ವತ್ಸನೆ, ಇವನು ಸಮಸ್ತಸೌಭಾಗ್ಯಸ್ವರೂಪನಾದ ನಿನ್ನ

ಉತ್ಪತ್ತಿಗೆ ಕಾರಣನೆಂದು ತಿಳಿ'' ಎಂದು ನುಡಿದು ಅಧಿಕವ್ಯಸನಾತುರಳಾಗಿರಲು

ದುಷ್ಯಂತರಾಯನು ಆ ಶಕುಂತಳೆಯ ಪಾದಪದ್ಮಂಗಳಲ್ಲಿ ಬಿದ್ದು-“ ಪ್ರಾಣ ಕಾಂತೆ, ನಾನು ತಿರಸ್ಕಾರವಂ ಗೆಯ್ದುದಱಿಂದುಂಟಾದ ಅಪ್ರಿಯವು ನಿನ್ನ ಹೃದಯ ದಿಂ ಬಿಟ್ಟು ಪೋಗಲಿ! ನೀನು ಎನ್ನ ಸಮೀಪವಂ ಕುಱಿತು ಬಂದಮೇಲೆ ಎನಗೆ ಅಜ್ಞಾನವು ಅತ್ಯಂತ ಬಲವಾಗಿರ್ದುದು. ಮತ್ತೂ ಅಧಿಕವಾದ ಅಜ್ಞಾನಯುಕ್ತ ರಾದ ಜನರುಗಳು ಶುಭಕರವಾದ ವಸ್ತುಗಳು ಪ್ರಾಪ್ತವಾದರೂ ತಿರಸ್ಕಾರವಂ ಗೆಯ್ಯುತ್ತಿರುವರು. ಹೇಗೆಂದರೆ:—ಜಾತ್ಯಂಧನು ಶಿರಸ್ಸಿನಲ್ಲಿ ಪರಿಮಳಭರಿತವಾದ ಪುಷ್ಪಮಾಲೆಯಂ ಸರ್ಪವೆಂಬ ಭ್ರಾಂತಿಯಿಂ ತೆಗೆದಿಡುವಂತೆ'' ಎಂದು ನುಡಿಯಲು;

ಶಕುಂತಲೆಯು ಕಂಬನಿಗಳಂ ಬಿಡುತ್ತ—“ ಎಲೈ ಸ್ವಾಮಿಯೇ, ಈಪ್ರಕಾ ರಕ್ಕೆ ಮಾಡದೆ ಇರು'' ಎಂದು ನುಡಿದು, “ಆಗ ನಿನ್ನ ಸಂದರ್ಶನಕ್ಕೆ ಬಂದ ದಿವಸ ಗಳಲ್ಲಿ ಎನ್ನ ಪೂರ್ವಾರ್ಜಿತವಾದ ಕರ್ಮವು ಬಲವತ್ತರವಾಗಿ ಶೋಭನವಾದ ಚರಿತ್ರಕ್ಕೆ ಪ್ರತಿಬಂಧಕವಾಗಿರುತಿರ್ದುದು. ಮಹಾತ್ಮನಾದ ನೀನು ಯಾವಕಾರಣ ದಿಂ ಎನ್ನವಿಷಯದಲ್ಲಿ ಈ ಪ್ರಕಾರಕ್ಕೆ ನಿಷ್ಠುರಹೃದಯನಾದೆಯೋ ಅದ್ದಱಿಂದಲೇ ಎನ್ನ ಕರ್ಮವು ಬಲವತ್ತರವಾದುದಲ್ಲದೆ ನಿನ್ನಿಂದ ಎಳ್ಳನಿತಾದರೂ ಅಪರಾಧವಿಲ್ಲ'' ಎಂದು ನುಡಿಯಲು ;

ರಾಯನು ಭೂಮಿಯಿಂದೆದ್ದು ನಿಲ್ಲಲು,

ಶಕುಂತಲೆಯು—“ಎಲೈ ಸ್ವಾಮಿಯೇ, ದುಃಖಪಾತ್ರಳಾದ ಎನ್ನಂ ಹೇಗೆ ಸ್ಮರಿಸಿಕೊಂಡು ಇಲ್ಲಿಗೆ ಬಂದೆಯೋ ಅದಂ ಅಪ್ಪಣೆಯನ್ನೀಯಬೇಕು,'' ಎಂದು ವಿಜ್ಞಾಪನೆಯಂ ಗೆಯ್ಯಲು ;

ರಾಯನು—“ ಎಲೆ ಬಿಂಬಾಧರೆ, ಕೀಳಲ್ಪಟ್ಟ ವಿಷಾದವೆಂಬ ಶಲ್ಯವುಳ್ಳವ ನಾದ ಮೇಲೆ ಎಲ್ಲವಂ ವಿವರಿಸುವೆನು, ಆದರೂ ಎಲೆ ಕೃಶೋದರಿ, ಪೂರ್ವದಲ್ಲಿ ನೇತ್ರಗಳಿಂ ಬಿದ್ದು ಯಾವ ನಿನ್ನ ಬಿಂಬಾಧರವಂ ಬಾಧಿಸುತ್ತಿರ್ದ ಕಣ್ಣೀರಿನ ಬಿಂದು ಗಳಿಂ ಅಜ್ಞಾನದಿಂದ ಉಪೇಕ್ಷೆಯಂ ಗೆಯ್ದನೋ ಈಗ ನಿನ್ನ ನೇತ್ರಾಂತವಂ ವ್ಯಾಪಿಸಿರುವ ಅದೇ ಕಂಬನಿಗಳಂ ಎನ್ನ ಹಸ್ತಗಳಿಂದೊರಸಿ ಹೋಗಲ್ಪಟ್ಟ ಪಶ್ಚಾ ತ್ತಾಪವುಳ್ಳವನಾಗುವೆನು'' ಎಂದು ಶಕುಂತಲೆಯಂ ತನ್ನ ತೊಡೆಯಲ್ಲಿ ಕುಳ್ಳಿರಿಸಿ, ಮುತ್ತಿನಂತೆ ಅಂಚಿನಲ್ಲಿ ಒಪ್ಪುತ್ತಿರುವ ಕಂಬನಿಗಳಂ ತನ್ನ ದುಕೂಲಾಗ್ರಗಳಿಂ ದೊರಸಿ, ಧೂಮ್ರವರ್ಣವಾಗಿರ್ದರೂ ಕೊಂಕುಗೂಡಿ ಇರುವ ಮುಂಗುರುಳುಗಳಂ ತಿರ್ದಿ ಸರಿಮಾಡುತ್ತಿರಲು;

ಶಕುಂತಲೆಯು ಪೂರ್ವದಲ್ಲಿ ತನ್ನಿಂ ಪೋಗಿರ್ದ ಮುದ್ರಿಕೆಯಂ ರಾಯನ ಬೆರಳಿನಲ್ಲಿ ಕಂಡು, ''ಎಲೈ ಆರ್ಯಪುತ್ರನೇ, ಸ್ವಾಮಿಯೇ, ಪೂರ್ವದಲ್ಲಿ ಎನಗೆ ಕೊಟ್ಟಿರ್ದ ಮುದ್ರಿಕೆಯಲ್ಲವೆ ನಿನ್ನ ಹಸ್ತದಲ್ಲಿರುವುದು?'' ಎಂದು ಕೇಳಲು;

ರಾಯನು—''ಸಂಶಯವೇನು? ಆ ಮುದ್ರಿಕೆ ದೊರಕಿರ್ದುದಱಿಂದ ನಿನ್ನ ಸ್ಮರಣೆಯು ಎನಗೆ ಉಂಟಾಯಿತು'' ಎಂದು ನುಡಿಯಲು,

ಶಕುಂತಲೆಯು—''ಈ ಮುದ್ರಿಕೆಯು ಆರ್ಯಪುತ್ರನಾದ ನಿನ್ನ ವಿಶ್ವಾಸ ಕಾಲದಲ್ಲಿ ದುರ್ಲಭವಾಗಿ ಸಮಯದಲ್ಲಿ ವಿಷಮವನ್ನುಂಟುಮಾಡಿದುದು'' ಎಂದು ನುಡಿಯಲು;

ದುಷ್ಯಂತರಾಯನು—'' ಎಲೆ ಶಕುಂತಲೆ, ಎಳಬಳ್ಳಿಯು ಋತುಗಳಿಗೆ ಗುಱುತಾಗಿರುವ ಪುಷ್ಪವಂ ಧರಿಸುವಂತೆ ಈ ಮುದ್ರಿಕೆಯಂ ನೀನು ಧರಿಸು'' ಎಂದು ನುಡಿಯಲು;

ಶಕುಂತಲೆಯು—''ಎಲೈ ಸ್ವಾಮಿಯೆ, ಈಯುಂಗರದಲ್ಲಿ ಎನಗೆ ಆಸೆಯಿಲ್ಲದೆ ಇರುವುದು, ಮೊದಲು ಧಾರಣೆಯಂ ಮಾಡಿದ್ದಱಿಂ ದುಃಖಕ್ಕೆ ಕಾರಣವಾದುದಾದ್ದಱಿಂ ನೀನೇ ಧಾರಣೆಯಂ ಗೆಯ್ಯಬಹುದು'' ಎಂದು ಬಿನ್ನೈಸುತ್ತಿರುವಷ್ಟಱಲ್ಲೇ ಕಶ್ಯಪಬ್ರಹ್ಮನ ಸಮೀಪಕ್ಕೆ ಪೋಗಿರ್ದ ಇಂದ್ರಸಾರಥಿಯು ಬಂದು, ಪತ್ನೀಪುತ್ರಸಹಿತನಾಗಿರುವ ರಾಯನಂ ನೋಡಿ—'' ಎಲೈ ಮಹಾರಾಯನೇ, ದೈವಯೋಗದಿಂದೀಗ ಪತ್ನೀಪುತ್ರರಿಂದೊಡಗೂಡಿ ವೃದ್ಧಿಯಂ ಪೊಂದುತ್ತಿರುವೆ'' ಎಂದು ನುಡಿಯಲು;

ರಾಯನು—''ಎಲೈ ಮಾತಲಿಯೇ, ನಿನ್ನಂಥ ಮಿತ್ರನು ಎನಗೆ ದೊರಕಿದ್ದಱಿಂದ ಎನ್ನ ಮನೋರಥವು ಸಫಲವಾದುದು. ಆದರೂ ನಾನೀ ಶಕುಂತಲೆಯೊಡಗೂಡಿದ ಸಂತೋಷವರ್ತಮಾನವು ಪೂಜ್ಯನಾದ ಇಂದ್ರನಿಗೆ ತಿಳಿದುದೋ ಏನು?'' ಎಂದು ಬೆಸಗೊಳ್ಳಲು;

ಮಾತಲಿಯು ನಕ್ಕು—''ಎಲೈ ಮಹಾರಾಜನೇ, ಅಷ್ಟಮಹಾಸಿದ್ಧಿಯಂ ಪಡೆದಿರುವ ಮಹಾಮಹಿಮರಾದವರಿಗೆ ತಿಳಿಯದೆ ಇರುವ ವೃತ್ತಾಂತವೇ ಇಲ್ಲ'' ಎಂದು ನುಡಿದು, ''ಈಗ ಮರೀಚಪುತ್ರನಾದ ಕಶ್ಯಪಬ್ರಹ್ಮನು ಸಂತುಷ್ಟಚಿತ್ತನಾಗಿ ಕುಳಿತಿರುವನು. ನೀನು ಪೋದಲ್ಲಿ ದರ್ಶನವನ್ನೀಯುವನು'' ಎಂದು ನುಡಿಯಲು;

ರಾಯನು—“ಎಲೆ ಶಕುಂತಲೆ, ಪುತ್ರನಾದ ಸರ್ವದಮನನಂ ಎತ್ತಿಕೊ, ನಿನ್ನಜತೆಯಲ್ಲಿ ಗುರುವಾದ ಕಶ್ಯಪಬ್ರಹ್ಮನ ಸಂದರ್ಶನಕ್ಕೆ ಪೋಗುವೆನು” ಎನ್ನಲು;

ಶಕುಂತಲೆಯು—“ಎಲೈ ಸ್ವಾಮಿಯೇ, ನಿನ್ನಿಂದೊಡಗೂಡಿ ಕಶ್ಯಪಬ್ರಹ್ಮನ ಸಮೀಪಕ್ಕೆ ಪೋಗುವಲ್ಲಿ ಎನಗೆ ಲಜ್ಜೆಯುಂಟಾಗುವುದು” ಎನ್ನಲು

ರಾಯನು—“ಎಲೌ ಕಾಂತೆ, ಈ ಲಜ್ಜೆಯಿಂದ ಪ್ರಯೋಜನವಿಲ್ಲ. ಸಂತೋಷಕಾಲದಲ್ಲಿ ಗುರುಗಳ ಸನ್ನಿಧಿಗೆ ಪತ್ನೀಪುತ್ರಸಹಿತವಾಗಿ ಪೋಗಬೇಕು ನಡೆ” ಎಂದು ಅವಳಿಂದೊಡಗೂಡಿ, ಆ ಮಹಾಮಹಿಮನಾದ ಕಶ್ಯಪಋಷಿಯ ಸಮೀಪವಂ ಕುಱಿತು ಪೋಗಲು;

REGISTRAR OSMANIA UNIVERSITY

ಪತ್ನಿಯಾದ ಅದಿತಿಯೊಡಗೂಡಿ, ಜಟಾಮಂಡಲಮಂಡಿತನಾಗಿ, ತೇಜೋರೂಪನಾಗಿ, ವ್ಯಾಘ್ರಾಜಿನಾಸನದಲ್ಲಿ ಕುಳಿತು, ಮುಂಭಾಗದಲ್ಲಿ ಸಪತ್ನೀಕನಾಗಿ ಬರುವ ದುಷ್ಯಂತರಾಜನಂ ಕಂಡು, ತನ್ನ ಪತ್ನಿಯಂ ಕುಱಿತು, “ಎಲೌ ದಕ್ಷಪುತ್ರಿಯಾದ ಅದಿತಿಯೇ, ಪುರೋಭಾಗದಲ್ಲಿರುವವನೇ ಸಮಸ್ತ ಭೂಮಂಡಲವಂ ರಕ್ಷಿಸುತ್ತ ನಿನ್ನ ಪುತ್ರನಾದ ಇಂದ್ರನಿಗೆ ಯುದ್ಧಭೂಮಿಯಲ್ಲಿ ರಾಕ್ಷಸರಂ ಸಂಹರಿಸಿ ಹಿತವನ್ನುಂಟುಮಾಡುತ್ತಿರುವವನು. ಇವನೇ ದುಷ್ಯಂತರಾಯನೆಂಬ ಮಹಾರಾಜನು, ಮತ್ತು ಯಾವ ಈ ದುಷ್ಯಂತರಾಯನ ಧನುಸ್ಸಿನಿಂದಲೇ ಶತ್ರುನಿಗ್ರಹವಾಗುತ್ತಿರುವಲ್ಲಿ ಶತಧಾರೆಗಳಿಂ ಯುಕ್ತವಾದ ವಜ್ರಾಯುಧವು ಇಂದ್ರನ ಹಸ್ತಕ್ಕೆ ಅಲಂಕಾರವಾಗಿರುವುದಲ್ಲದೆ ಶತ್ರುಸಂಹಾರಕ್ಕೆ ಯೋಗ್ಯವಾಗಲಾಱದು” ಎಂದು ನುಡಿಯಲು;

ಅದಿತಿಯು—“ಈ ರಾಯನಂ ನೋಡಿದ ಮಾತ್ರದಿಂದಲೆ ಮಹಾ ಪ್ರಭಾವಶಾಲಿಯೆಂದು ತಿಳಿಯುವೆನು” ಎಂದು ನುಡಿಯಲು;

ಆ ಮಾತಲಿಯು ಕಶ್ಯಪಋಷಿಯ ಸಮೀಪಕ್ಕೆ ಮುಂಬರಿದು ಪೋಗಿ ಕಶ್ಯಪಬ್ರಹ್ಮನಂ ಅದಿತಿಯಂ ಕುಱಿತು—“ಎಲೈ ದೇವತೆಗಳಿಗೆ ಮಾತಾಪಿತೃಗಳಾದ ಮಹಾಮಹಿಮರುಗಳಿರಾ, ಪುತ್ರಪ್ರೇಮವಂ ಸೂಚಿಸುತ್ತಿರುವ ನಿಮ್ಮ ಕೃಪಾದೃಷ್ಟಿಯಿಂ ಈ ರಾಜದಂಪತಿಗಳನ್ನು ನೋಡಬೇಕು” ಎಂದು ಬಿನ್ನೈಸಲು;

ರಾಯನು ಆ ಕಶ್ಯಪಬ್ರಹ್ಮನಂ ಕಂಡು, “ಎಲೈ ಮಾತಲಿಯೇ, ಸಮಸ್ತರಾದ ಮುನಿಗಳು ಯಾವ ಈ ಅದಿತಿಕಾಶ್ಯಪರೀರ್ವರಂ ದ್ವಾದಶಾದಿತ್ಯರ ಉತ್ಪತ್ತಿಗೆ ಕಾರಣರೆಂದು ಪೇಳುತ್ತಿರುವರೋ, ಮತ್ತು ಸ್ವರ್ಗಮರ್ತ್ಯಪಾತಾಳಂಗಳಿಗೆ ಒಡೆಯು

ನಾಗಿ ಯಜ್ಞಭಾಗಕ್ಕೆ ಅಧೀಶ್ವರನಾದ ಇಂದ್ರನಂ ಪೆತ್ತಿರುವರೋ, ಯಾವ ಇವರೀರ್ವರಲ್ಲಿ ಪರಮಪುರುಷನಾದ ಮಹಾವಿಷ್ಣುವು ತಾನು ಉಪೇಂದ್ರನಾಗಿ ಪುಟ್ಟುವುದಕ್ಕೆ ಇಚ್ಛೈಸಿದನೋ, ಚತುರ್ಮುಖಬ್ರಹ್ಮನಿಗೆ ಮೊಮ್ಮಕ್ಕಳಾಗಿ ದಕ್ಷಬ್ರಹ್ಮನಿಂ ಪುಟ್ಟಿದ ಅದಿತಿಯುಂ ಮರೀಚಿಋಷಿಯಿಂ ಪುಟ್ಟಿದ ಕಾಶ್ಯಪಬ್ರಹ್ಮನಂ ಕುಱಿತು ನಮಸ್ಕಾರವಂ ಗೆಯ್ಯುವೆ '' ಎಂದು ನುಡಿಯಲು ;

ಮಾತಲಿಯು—'' ಮಹಾರಾಜನಾದ ನೀನು ಪೇಳುವ ವಾಕ್ಯವು ಯಥಾರ್ಥವೇ ಸರಿ '' ಎಂದು ನುಡಿಯುತ್ತಿರಲು ;

ರಾಯನು ಮಹಾ ಋಷಿಯಾದ ಕಶ್ಯಪಬ್ರಹ್ಮನ ಸಮೀಪವಂ ಸೇರಿ, '' ಪತ್ನೀಪುತ್ರರಿಂದೊಡಗೂಡಿ ಇಂದ್ರನಿಂ ಪ್ರೇರಿತನಾದ ದುಷ್ಯಂತರಾಯನು ನಮಸ್ಕಾರವಂ ಗೆಯ್ಯುವನು'' ಎಂದು ತನ್ನ ನಾಮಗ್ರಹಣಪೂರ್ವಕವಾಗಿ ಸಾಷ್ಟಾಂಗ ನಮಸ್ಕಾರವಂ ಗೆಯ್ಯಲು ;

ಕಶ್ಯಪಬ್ರಹ್ಮನು—'' ಎಲೈ ದುಷ್ಯಂತರಾಯನೆ, ನೀನು ಚಿರಂಜೀವಿಯಾಗಿ ಸಮಸ್ತ ಭೂಮಂಡಲವಂ ಪರಿಪಾಲಿಸು ! '' ಎಂದು ಆಶೀರ್ವಾದವಂ ಗೆಯ್ಯಲು ;

ಅದಿತಿಯು—'' ಎಲೈ ರಾಯನೆ, ಭೂಮ್ಯಂತರಿಕ್ಷದಲ್ಲಿ ನಿರರ್ಗಳಸಂಚಾರವುಳ್ಳ ರಥವುಳ್ಳವನಾಗು '' ಎನಲು ;

ಶಕುಂತಲೆಯು ಅವರ ಸಮೀಪವಂ ಸೇರಿ, '' ಪೂಜ್ಯರಾದ ನಿಮ್ಮೀರ್ವರಿಗೂ ಪುತ್ರಿಯಾದ ಶಕುಂತಳೆಯು ನಮಸ್ಕರಿಸುವಳು '' ಎಂದು ಸಾಷ್ಟಾಂಗಪ್ರಣಾಮವಂ ಗೆಯ್ಯಲು ;

ಕಶ್ಯಪನು—'' ಎಲೌ ಪುತ್ರಿಯಾದ ಶಕುಂತಲೆಯೇ, ನಿನ್ನ ಪತಿಯಾದ ಈ ದುಷ್ಯಂತರಾಯನು ಇಂದ್ರನಿಗೆ ಸಮಾನನಾಗಿರುವನು, ನಿನ್ನ ಪುತ್ರನಾದ ಸರ್ವದಮನನು ಜಯಂತನಿಗೆ ಸದೃಶನಾಗಿರುವನು ಆದ್ದಱಿಂ ನಿನಗೆ ಇನ್ನೊಂದಾಶೀರ್ವಾದವು ಯೋಗ್ಯವಲ್ಲ ; ಪುಲೋಮಪುತ್ರಿಯಾದ ಶಚೀದೇವಿಗೆ ಸಮಾನಳಾಗು ! '' ಎಂದಾಶೀರ್ವಾದವಂ ಗೆಯ್ಯಲು ;

ಅದಿತಿಯು ಶಕುಂತಲೆಯಂ ಕುಱಿತು—'' ಎಲೌ ಪುತ್ರಿಯಾದ ಶಕುಂತಲೆಯೇ, ನೀನು ನಿನ್ನ ಪತಿಯಾದ ಈ ರಾಯನ ಬಹುಮಾನಕ್ಕೆ ಪಾತ್ರಳಾಗು. ನಿನ್ನ ಪುತ್ರನಾದ ಈ ಸರ್ವದಮನನು ನಿನ್ನ ವಂಶಕ್ಕೂ ನಿನ್ನ ಪತಿಯ ವಂಶಕ್ಕೂ ಆನಂದಕರನಾಗಲಿ ! '' ಎಂದು ಆಶೀರ್ವಾದವಂ ಗೆಯ್ಯಲು ;

ಆ ಕಶ್ಯಪಋಷಿಯು ಸಮಸ್ತರಂ ಕುಳಿತುಕೊಳ್ಳುವಂತೆ ಆಜ್ಞೆಯನ್ನೀಯಲು ಅವರೆಲ್ಲರೂ ಆ ಋಷಿಯ ಸಮೀಪದಲ್ಲಿ ಕುಳಿತುಕೊಳ್ಳಲು ;

ಮಾತಲಿಯು,—"ಇವನು ದುಷ್ಯಂತರಾಯನು, ಇವಳು ಇವನ ಧರ್ಮ ಪತ್ನಿಯಾದ ಶಕುಂತಲೆಯು, ಇವನ ಪುತ್ರನಿವನು" ಎಂದು ಪ್ರತ್ಯೇಕ ಪ್ರತ್ಯೇಕ ವಾಗಿ ಆ ಋಷಿಗೆ ತೋರಿಸಲು ;

ಋಷಿಯು—"ಎಲೈ ಮಹಾರಾಜನೇ, ಪೂಜ್ಯನಾದ ನೀನು ನಿನಗೆ ಯೋಗ್ಯಳಾದ ಪತಿವ್ರತಾಶಿರೋಮಣಿಯಾದ ಶಕುಂತಲೆಯು ಪತ್ನಿಯಾದದ್ದು ಇವಳ ಗರ್ಭದಲ್ಲಿ ವಂಶವರ್ಧಕನಾದ ಈ ಪುತ್ರನು ಪುಟ್ಟಿದ್ದೂ ಅಧಿಕ ದ್ರವ್ಯವೂ ಆ ದ್ರವ್ಯಾನುಗುಣವಾದ ಭಕ್ತಿಯೂ ಆ ಭಕ್ತಿಗೆ ಅನುಕೂಲವಾದ ಸತ್ಪಾತ್ರವೂ ಇವು ಮೂರೂ ದೊರಕಿದಂತಾದುದು." ಎಂದು ಅಪ್ಪಣೆಯನ್ನೀಯಲು;

ರಾಯನು—"ಎಲೈ ಮಹಾಮುನಿಯೇ, ನಿನ್ನ ಅನುಗ್ರಹವು ಅಪೂರ್ವವಾಗಿ ತೋರುತ್ತಿರುವುದು. ಮೊದಲು ಮನಸಾಭೀಷ್ಟಸಿದ್ಧಿಯು, ಅನಂತರದಲ್ಲಿ ತಮ್ಮ ದರ್ಶನವಾದುದು. ತಮ್ಮ ಅನುಗ್ರಹವು ಅಪೂರ್ವವಾದುದು. ಕುಸುಮೋತ್ಪತ್ತಿಯಾದಮೇಲೆ ಫಲಂಗಳಾಗುತ್ತಿರುವುದು, ಹಾಗೆಯೇ ಮೇಘೋದಯವಾದ ಮೇಲೆ ಜಲವುಂಟಾಗುವುದು. ಈರೀತಿಯಲ್ಲಿ ಲೋಕದಲ್ಲಿ ಕಾರಣಗಳಿಂದ ಕಾರ್ಯಂಗಳು ಪುಟ್ಟುತ್ತಿರುವುದು ವಿಹಿತವು. ನಿನ್ನ ಅನುಗ್ರಹವಾದರೋ ಸಂದರ್ಶನಕ್ಕೆ ಮೊದಲೇ ಸಮಸ್ತ ಸಂಪತ್ತುಗಳನ್ನೀಯುವುದು" ಎನ್ನಲು;

ಮಾತಲಿಯು—"ಮಹಾತ್ಮರಾದಂಥವರು ಈರೀತಿಯಿಂದಲೆ ಸಮಸ್ತ ಜನರಿಗೆ ಪ್ರಸನ್ನರಾಗುತ್ತಿರುವರು" ಎಂದು ನುಡಿಯಲು;

ರಾಯನು—"ಎಲೈ ಷಡ್ಗುಣೈಶ್ವರ್ಯಸಂಪನ್ನನಾದ ಮಹಾಮುನಿಯೇ, ನಿನ್ನ ಆಜ್ಞಾವಾಹಕಳಾದ ಶಕುಂತಲೆಯಂ ವಿವಾಹಿತಳನ್ನಾಗಿ ಮಾಡಿಕೊಂಡು ನಾನು ಪುರಕ್ಕೆ ಬಂದ ಕೆಲವುದಿವಸದಮೇಲೆ ಬಂಧುಗಳಾದ ಋಷಿಶಿಷ್ಯರು ಇವಳಂ ಎನ್ನ ಸಮೀಪಕ್ಕೆ ಕರೆತರಲಾಗ ನಾನು ಜ್ಞಾನಶೂನ್ಯನಾಗಿ ಇವಳಂ ಎನ್ನ ಪತ್ನಿಯಲ್ಲವೆಂದು ತಿರಸ್ಕಾರವಂ ಗೆಯ್ದು, ನಿನ್ನ ಗೋತ್ರೋತ್ಪನ್ನನಾದ ಕಣ್ವಮುನಿಗೆ ಮಹಾಪರಾಧಿಯಾದೆನು. ಆಬಳಿಕ ನಾನೀ ಶಕುಂತಳೆಗೆ ಗುರುತಾಗಿ ಕೊಟ್ಟಿರ್ದ ಉಂಗುರವಂ ನೋಡಿದಮೇಲೆ ಇವಳ ವಿವಾಹಿತಳನ್ನಾಗಿ ಮಾಡಿಕೊಂಡುದು ನಿಶ್ಚಯವೆಂದು ತಿಳಿದೆನು. ಇದೆಲ್ಲವಂ ಪರಿಭಾವಿಸಿ ನೋಡಲು, ಅತ್ಯಾಶ್ಚರ್ಯವಾಗಿ ನನಗೆ ತೋರುತ್ತಿರುವುದು. ಮತ್ತು ಒಬ್ಬಾನೊಬ್ಬ ಮಂದಬುದ್ಧಿಯಾದ ಪುರುಷನು ಮುಂಭಾಗದಲ್ಲಿರ್ದ ಗಜಮಂ ಕಂಡು ಇದು ನಿಶ್ಚಯವಾಗಿ ಗಜವಲ್ಲವೆಂದು ತಿಳಿದು ಅದು ಪೋದಮೇಲೆ ಆ ಆನೆಯ ಹೆಜ್ಜೆಗಳಂ ನೋಡಿ ಎನ್ನ ಸಮೀ

ಪಕ್ಕೆ ಬಂದಿದ್ದುದು ಆನೆಯೋ ನಿಶ್ಚಯವೆಂದು ತಿಳಿಯುವಂತೆ ನಾನು ಇವಳು ಎದುರಿಗೆ ಬಂದಿದ್ದಾಗ ಎನ್ನ ಪತ್ನಿಯೋ ಅಲ್ಲವೆಂದು ಇವಳು ಪೋದಮೇಲೆ ವಿವಾಹವಾದದ್ದು ನಿಶ್ಚಯವೋ ಅಪದ್ಧವೋ ಎಂಬ ಸಂಶಯವುಳ್ಳವನಾಗಿ ಉಂಗರವಂ ನೋಡಿದಮೇಲೆ ಇವಳು ಎನ್ನ ಪತ್ನಿಯಹುದೆಂದು ತಿಳಿಯುತ್ತಾ ವಿಕಾರಬುದ್ಧಿಯುಳ್ಳವನಾದೆನು. ಇದಕ್ಕೆ ಕಾರಣವೇನು?'' ಎಂದು ಬಿನ್ನೈಸಲು;

ಮಾತಲಿಯು—''ಎಲೈ ರಾಯನೇ, ನೀನು ಅಪರಾಧಿಯೆಂದು ನಿನ್ನಲ್ಲಿ ಶಂಕೆಯನ್ನು ಮಾಡಬೇಡ'' ಎನ್ನಲು ;

ಮಾರೀಚ ಮಹರ್ಷಿಯು—'' ಎಲೈ ದುಷ್ಯಂತರಾಯನೇ, ಈ ಪ್ರಕಾರವಾಗಿ ಅವಿವೇಕವಂ ಮಾಡಿದೆನೆಂದು ತಿಳಿಯದಿರು. ನಿನ್ನಲ್ಲಿ ಅಂಥ ಅಜ್ಞಾನವು ಪುಟ್ಟುವುದು ಯುಕ್ತವಾಗಿಯೇ ಇರುವುದು. ಅದರ ಸಂಗತಿಯಂ ಪೇಳುವೆನು, ಕೇಳು ನೀನು ಈ ಶಕುಂತಳೆಯಂ ತಿರಸ್ಕಾರವಂ ಗೆಯ್ಯಲು ಪುರೋಹಿತನೊಡಗೂಡಿ ಹಿಂದಿರುಗಿ ಅಪ್ಸರಸ್ತೀರ್ಥಸಮೀಪಕ್ಕೆ ಬರಲು ಅಷ್ಟರಲ್ಲಿ ಇವಳ ತಾಯಿಯಾದ ಮೇನಕೆಯು ಕಳುಹಿಸಿದ್ದ ಸಾರಸಿಕೆಯು ಈ ಶಕುಂತಲೆಯಂ ಮೇನಕಿಯ ಸಮೀಪಕ್ಕೆ ತೆಗೆದುಕೊಂಡು ಬರಲಾ ಮೇನಕಿಯು ಈ ಶಕುಂತಲೆಯಂ ಕರೆದುಕೊಂಡು ದಕ್ಷಪುತ್ರಿಯಾದ ಅದಿತಿಯ ಸಮೀಪಕ್ಕೆ ಬಂದು ಈ ವೃತ್ತಾಂತವಂ ಪೇಳಲಾಗ ನಾನು-ದುರ್ವಾಸಋಷಿಯ ಶಾಪದಿಂ ಶಕುಂತಲೆಯಂ ತಿರಸ್ಕಾರವಂ ಗೆಯ್ದನಲ್ಲದೆ ಇನ್ನೊಂದು ಕಾರಣವಿಲ್ಲವೆಂಬದಾಗಿಯೂ ಆ ಋಷಿಯು ನೀನಿತ್ತ ಉಂಗರದ ಸಂದರ್ಶನದಿಂ ತಾನಿತ್ತ ಶಾಪವು ಪೋಗುವದೆಂಬ ಶಾಪಾವಸಾನವಂ ಪೇಳಿರುವ ಸಂಗತಿಯೆಲ್ಲವಂ ಜ್ಞಾನದೃಷ್ಟಿಯಿಂ ತಿಳಿದೆನು'' ಎನ್ನಲು ;

ರಾಯನು ನಿಟ್ಟುಸಿರು ಬಿಟ್ಟು, '' ಎಲೈ ಮಹಾಮಹಿಮನೇ, ನೀನಿಂತು ಅಪ್ಪಣೆಯನ್ನಿತ್ತುದರಿಂ ಲೋಕಾಪವಾದದಿಂದ ಬಿಡಲ್ಪಟ್ಟೆನು'' ಎನ್ನಲು ;

ಶಕುಂತಲೆಯು ತನ್ನ ಮನದಲ್ಲಿ ''ಈ ಕಾರಣವಿದ್ದುದರಿಂದಲೇ ರಾಯನು ಎನ್ನಂ ತಿರಸ್ಕಾರವಂ ಗೆಯ್ದನು, ಮತ್ತು ನಾನು ಅತ್ಯಂತ ವಿರಹಾತುರಳಾಗಿ ಆ ತಪೋವನವಂ ಬಿಟ್ಟು ಈ ರಾಯನ ಪುರಕ್ಕೆ ಬರುವ ಕಾಲದಲ್ಲಿ ಅನಸೂಯೆ ಪ್ರಿಯಂವದೆಯರೆಂಬ ಎನ್ನ ಸಖಿಯರೀರ್ವರು-ಎಲೈ ಶಕುಂತಲೆ, ರಾಯನು ನಿನ್ನಂ ಮರೆತವನಾದರೆ ಈ ಮುದ್ರಿಕೆಯಂ ತೋರಿಸೆಂದು ಎನಗೆ ಕೊಟ್ಟರು. ಅದಂ ಈಗ ಸ್ಮರಿಸಿಕೊಂಡಲ್ಲಿ ಇದೆಲ್ಲಾ ಯಥಾರ್ಥವಾಗಿ ತೋರುವು''ದೆಂದು ಆಲೋಚನೆಯಂ ಗೆಯ್ಯುತ್ತಿರಲು ;

ಮಾರೀಚ ಮಹರ್ಷಿಯು—“ಶಕುಂತಳೆಯೇ, ಕೇಳು. ಈಗ ನಿನ್ನ ಪತಿಯು ಸಂಗದಿಂ ಕೃತಾರ್ಥಳಾದೆ. ಆದರೂ ಈ ಪ್ರಕಾರವಾಗಿ ಎನ್ನಂ ತಿರಸ್ಕಾರವಂ ಗೆಯ್ದನೆಂದು ಮನದಲ್ಲಿ ವಿಷಾದವಂ ಪೊಂದಬೇಡ. ಮತ್ತು ಕನ್ನಡಿಯಲ್ಲಿರ್ದ ಮಾಲಿನ್ಯವು ಪೋದಮೇಲೆ ನಿರ್ಮಲವಾದ ಛಾಯೆಯು ತೋರ್ಪಂತೆ ಶಾಪದಿಂ ಬಿಡಲ್ಪಟ್ಟ ನಿನ್ನ ಪತಿಯಲ್ಲಿ ನಿನಗೆ ಸಮಸ್ತಸ್ವಾತಂತ್ರ್ಯವುಂಟಾಗುವುದು” ಎನಲು;

ರಾಯನು ಕರಗಳಂ ಮುಗಿದು, “ ಎಲೈ ಸ್ವಾಮಿಯೇ, ಈ ಶಕುಂತಳೆಯು ಎನ್ನ ವಂಶಕ್ಕೆ ಪ್ರತಿಷ್ಠಾರೂಪಳೆಂದು ತಿಳಿಯುತ್ತಿರುವೆನು ” ಎನ್ನಲು ;

ಮಾರೀಚ ಋಷಿಯು—“ ಎಲೈ ರಾಯನೇ, ಅದೇ ರೀತಿಯಿಂದೀ ಶಕುಂತಳೆಯಂ ತಿಳಿಯುತ್ತಿರುವ ನೀನು ಈ ಪುತ್ರನನ್ನು ಚಕ್ರವರ್ತಿಯಾಗುವನೆಂಬದಾಗಿ ತಿಳಿದುಕೊ, ಮತ್ತು ಈ ಪುತ್ರನು ನಿಮ್ನೋನ್ನತಪ್ರದೇಶವಿಲ್ಲದ ಸಮನಾದ ಅಂತರಿಕ್ಷದಲ್ಲಿ ಸಂಚರಿಸುವ ರತ್ನಮಯವಾದ ರಥಾರೂಢನಾಗಿ ದಾಟಿಸಲ್ಪಟ್ಟ ಸಪ್ತಸಮುದ್ರವುಳ್ಳವನಾಗಿ, ಸಪ್ತದ್ವೀಪವಂ ಜಯಿಸಿ, ಮೃಗಸಂಹಾರದಿಂದಿಲ್ಲಿ ಉಂಟಾದ ಸರ್ವದಮನನೆಂಬ ನಾಮಧೇಯವಂ ಬಿಟ್ಟು ಸಮಸ್ತಲೋಕಸಂರಕ್ಷಣೆಯಿಂ ಭರತನೆಂಬ ನಾಮವಂ ಧರಿಸುತ್ತಿರುವನು ” ಎಂದು ಅಪ್ಪಣೆಯನ್ನೀಯಲು ;

ರಾಯನು ಅಧಿಕಸಂತೋಷಭರಿತನಾಗಿ, “ಎಲೈ ಸ್ವಾಮಿಯೇ, ನೀನು ಪುತ್ರನಿಗೆ ಜಾತಕರ್ಮ ಮೊದಲಾದ ಕರ್ಮಗಳಂ ಮಾಡಿ ಸಂರಕ್ಷಿಸುತ್ತಿರುವೆಯಾದ್ದರಿಂ ನೀನು ಆಶೀರ್ವಾದವಂ ಗೆಯ್ದ ಸಮಸ್ತ ಸದ್ಗುಣಂಗಳು ಈ ಪುತ್ರನಲ್ಲುಂಟಾಗುತ್ತಿರುವುವೆಂದು ತಿಳಿಯುವೆನು ” ಎನ್ನಲು ;

ಅದಿತಿದೇವಿಯು ಕಶ್ಯಪಬ್ರಹ್ಮನಂ ಕುರಿತು, “ ಎಲೈ ಸ್ವಾಮಿಯೇ, ಕಣ್ವಮುನೀಶ್ವರನ ಸಮೀಪಕ್ಕೆ ನಿನ್ನ ಪುತ್ರಿಯಾದ ಶಕುಂತಳೆಯು ತನ್ನ ಪತಿಯಾದ ದುಷ್ಯಂತರಾಯನೊಡಗೂಡಿ ಸಂತುಷ್ಟಳಾಗಿರುವಳೆಂಬ ವೃತ್ತಾಂತವಂ ಸಮೀಪಸ್ಥರಾದ ಶಿಷ್ಯರಿಗೆ ಪೇಳಿ ಕಳುಹಿಸಬಹುದು. ಇವಳ ತಾಯಿಯಾದ ಮೇನಕೆಯು ಎನ್ನ ಸಮೀಪದಲ್ಲೇ ಇರುವಳಾದ್ದರಿಂದೀ ವೃತ್ತಾಂತವು ತಿಳಿದೇ ಇರುವುದು ” ಎನಲು ;

ಆ ಶಕುಂತಳೆಯು—“ ಎನ್ನ ಹೃದಯದಲ್ಲಿರ್ದ ಅಭಿಪ್ರಾಯವನ್ನು ಅದಿತಿದೇವಿಯು ಅಪ್ಪಣೆಯನ್ನಿತ್ತಳು” ಎಂದು ತನ್ನ ಮನದಲ್ಲಿ ಯೋಚಿಸುತ್ತಿರಲು;

ರಾಯನು—“ಎಲೈ ಸ್ವಾಮಿಯೇ, ಕಣ್ವಮುನಿಯು ದುರ್ವಾಸಋಷಿಯ ಶಾಪ ಮೊದಲಾಗಿ ಸಮಸ್ತವಾದ ಈ ವೃತ್ತಾಂತವಂ ಜ್ಞಾನದೃಷ್ಟಿಯಿಂ ತಿಳಿದವ

ನಾದ್ದರಿಂದಲೆ ಅವನ ಪುತ್ರಿಯಾದ ಈ ಶಕುಂತಲೆಯಂ ತಿರಸ್ಕರಿಸಿದಾಗ್ಯೂ ಎನಗೆ ಶಾಪವನ್ನೀಯಲಿಲ್ಲ '' ಎನಲು;

ಕಶ್ಯಪನು—''ಎಲೈ ರಾಯನೇ, ಅವನು ತನ್ನ ತಪಃಪ್ರಭಾವದಿಂ ಸಕಲ ಚರ್ಯವಂ ತಿಳಿದವನಾದರೂ ಅವನಿಗೆ ಈ ವೃತ್ತಾಂತವು ಪ್ರೀತಿಕರಮಾದುದರಿಂ ನಾವು ಪೇಳಿ ಕಳುಹಿಸಬೇಕು'' ಎಂದು ನುಡಿದು ಸಮೀಪದಲ್ಲಿರ್ದ ಶಿಷ್ಯನಂ ಕರೆದು, ''ಎಲೈ ಗಾಲವನೇ, ನೀನು ಅಂತರಿಕ್ಷಗಮನದಿಂ ಕಣ್ವಾಶ್ರಮಕ್ಕೆ ಪೋಗಿ ನಿನ್ನ ಪುತ್ರಿಯಾದ ಶಕುಂತಲೆಯು ಸಮಸ್ತ ಶುಭಲಕ್ಷಣಲಕ್ಷಿತನಾದ ಪುತ್ರನಂ ಪಡೆದು ದುರ್ವಾಸಋಷಿಯ ಶಾಪದಿಂ ಬಿಡಲ್ಪಟ್ಟವಳಾಗಿ ಪತಿಯಾದ ದುಷ್ಯಂತ ರಾಯನಿಂದೊಡಗೂಡಿ ಸಂತೋಷಭರಿತಳಾಗಿರುವಳೆಂಬ ಶುಭವಾರ್ತೆಯಂ ಪೇಳಿ ಬರುವುದು'' ಎಂದು ಅಪ್ಪಣೆಯನ್ನೀಯಲು;

ಗಾಲವನು ಆಜ್ಞೆಯಾಬಂತೆ ನಡೆದುಕೊಳ್ಳುವೆನೆಂದು ಅಂತರಿಕ್ಷಮಾರ್ಗ ದಲ್ಲಿ ಪೋಗಲು;

ಕಶ್ಯಪನು—''ಎಲೈ ಮಹಾರಾಜನೇ, ನೀನು ನಿನ್ನ ಪತ್ನೀಪುತ್ರರಿಂದೊಡ ಗೂಡಿ, ಮಣಿಮಯವಾದ ಇಂದ್ರರಥಾರೋಹಣವಂ ಗೆಯ್ದು ಪ್ರಸಿದ್ಧಮಾದ ಪ್ರತಿಷ್ಠಾನಗರವಂ ಕುರಿತು ಪೋಗುವುದು'' ಎಂದು ಆಜ್ಞೆಯನ್ನೀಯಲು;

ರಾಯನು ಪತ್ನೀಪುತ್ರರಿಂ ಸಮೇತನಾಗಿ ಆ ಕಶ್ಯಪಬ್ರಹ್ಮನ ಚರಣಾರ ವಿಂದಕ್ಕೆ ನಮಸ್ಕಾರವಂ ಗೆಯ್ಯಲು;

ಋಷಿಯು—''ಎಲೈ ರಾಯನೇ, ಎನ್ನ ಪುತ್ರನಾದ ದೇವೇಂದ್ರನು ಕಾಲ ಕಾಲದಲ್ಲಿ ಮಳೆಗಳನ್ನುಂಟುಮಾಡಿ ಸಮಸ್ತರಾದ ನಿನ್ನ ಪ್ರಜೆಗಳಲ್ಲಿ ಸದಾಸಂತೋ ಷವನ್ನುಂಟುಮಾಡಲಿ; ನೀನು ಅಶ್ವಮೇಧ ವಾಜಪೇಯ ರಾಜಸೂಯ ಪೌಂಡರೀಕ ಮೊದಲಾದ ಯಜ್ಞಗಳಂ ಮಾಡಿ ಸ್ವರ್ಗವಾಸಿಗಳಾದ ದೇವತೆಗಳಿಗೆ ಸಂತೋಷ ವನ್ನುಂಟುಮಾಡು. ಈರೀತಿಯಿಂ ನೀವಿಬ್ಬರೂ ಸ್ವರ್ಗಮರ್ತ್ಯಪಾತಾಳಲೋಕಂ ಗಳಂ ಸಲಹುವುದರಿಂ ಶ್ಲಾಘನೀಯವಾದ ಚರ್ಯಂಗಳಿಂ ಅನೇಕ ಯುಗಂಗಳಂ ಕಳೆಯುವುದು'' ಎಂದು ಆಶೀರ್ವಾದವಂ ವಿರಚಿಸಲು;

ರಾಯನು—''ಎಲೈ ಸ್ವಾಮಿಯೇ, ತಾವು ಅಪ್ಪಣೆಯನ್ನಿತ್ತಂತೆ ಭಕ್ತಿ ಯುಕ್ತನಾಗಿ, ಶ್ರೇಯಸ್ಕರಮಾದ ಕಾರ್ಯಗಳಲ್ಲಿ ಯತ್ನವುಳ್ಳವನಾಗುವೆನು'' ಎಂದು ಬಿನ್ನೈಸಲು;

ಮುನಿಯು ಅಧಿಕಾನಂದಭರಿತನಾಗಿ-"ಎಲೈ ಧರ್ಮಾತ್ಮಕನಾದ ರಾಯನೇ, ಇನ್ನೇನು ನಿನಗೆ ಪ್ರಿಯವಾದ ಕಾರ್ಯವಂ ಮಾಡಲಿ, ಅದಂ ಪೇಳು" ಎನಲು;

ರಾಯನು—"ಎಲೈ ಸ್ವಾಮಿಯೇ, ನಿಮ್ಮ ಚಿತ್ತಕ್ಕೆ ಏನು ತೋರುತ್ತಿರುವುದೋ ಅದೆಲ್ಲವಂ ಎನ್ನ ಶ್ರೇಯಸ್ಸಿಗೋಸುಗ ಮಾಡಬಹುದಲ್ಲದೆ ಇಂಥದಂ ಮಾಡೆಂದು ಬಿನ್ನೈಸಲಾರೆನು" ಎಂದು ಆ ಕಶ್ಯಪಬ್ರಹ್ಮನಿಂದಲೂ ಅದಿತಿದೇವಿಯಿಂದಲೂ ಅಪ್ಪಣೆಯಂ ಪಡೆದು ಮೇನಕೆಯಿರುವ ಸ್ಥಾನಕ್ಕೆ ಬಂದು, ಅವಳಂ ಮೃದುಮಧುರೋಕ್ತಿಯಿಂ ಸಂತುಷ್ಟಳಂ ಗೆಯ್ದು ಅವಳ ಅನುಜ್ಞೆಯಂ ಕೈಕೊಂಡು, ಪತ್ನೀಪುತ್ರಸಹಿತನಾಗಿ ಆ ಯಿಂದ್ರರಥಾರೋಹಣವಂ ಗೆಯ್ದು ವಾಯುಮಾರ್ಗದಿಂ ನವರತ್ನಖಚಿತಚಂದ್ರಶಾಲಾಸಹಸ್ರಂಗಳಿಂ ಬಂಧುರವಾದ ತನ್ನ ಪ್ರತಿಷ್ಠಾನಪುರವಂ ಸೇರಿ, ಇಂದ್ರನಸಾರಥಿಯಾದ ಮಾತಲಿಗೆ ರತ್ನಾಭರಣಗಳಿಂದ ಆನಂದವಂ ಪುಟ್ಟಿಸಿ ಸ್ವರ್ಗಕ್ಕೆ ರಥವಂ ಕೊಂಡು ಪೋಗುವಂತೆ ಆಜ್ಞಾಪಿಸಿ, ತಾನು ದಿವ್ಯರತ್ನಸಿಂಹಾಸನದಲ್ಲಿ ಕುಳಿತು, ಸಂತುಷ್ಟಚಿತ್ತನಾಗಿ, ಧರ್ಮದಿಂ ಸಮಸ್ತ ಪ್ರಜಾಪಾಲನವಂಗೆಯ್ಯುತ್ತಿರ್ದನು.

REGISTRAR
OSMANIA UNIVERSITY

॥ಗದ್ಯ॥

ಚಂಡಕರಮಂಡಲೋಚ್ಚಂಡತೇಜಃ ಪ್ರಕಾಂಡಷಂಡಖಂಡಿತಾಖಂಡಶೌರ್ಯಪರಿಮಂಡಿತಭಂಡನೋದ್ದಂಡಾರಿಮಂಡಲ ಕಂಡೂಲದೋರ್ದಂಡ ಪಾಂಡಿತ್ಯ-ಪಾಂಡುರುಚಿಖಂಡಡಿಂಡೀರಪುಂಡರೀಕಪರಿಪಾಂಡುರಯಶಃಪಿಚಂಡಿಲಬ್ರಹ್ಮಾಂಡಭಾಂಡೋದ್ಭಟ ಕಾಲಕೂಟಪ್ರತಿಭಟ ಕಟುಕಪಟನಿಶಾಟಕೂಟಪಾಟನಲಂಪಟ ನಿಟಿಲಪುಟಘಟಿತವಿಕಟಕೃಪೀಟಯೋನಿ ಕುಟಿಲಮೋಹಾಂಧಕಾರಚ್ಛಟಾವಿಘಟನಪಟು ನಟನ್ಮಹಾನಟಪರ್ಯಟತ್ತಟಿನೀತಟಾಂತರಿಂಗದಭಂಗೋತ್ತುಂಗ ತರಂಗ ಸಂಗರಭಂಗ ಸಂಭ್ರಮೋಜ್ಜೃಂಭಮಾಣಗಂಭೀರವಾಗ್ಗುಂಭಸಂಭಾವಿತ, ಗರನಗರವರನಿಲಯಚಂದ್ರಚೂಡಚರಣಾರವಿಂದಸೇವಾಮರಂದನಿರಂತರನಿಷೇವಣ ಸ್ವಯಂವೃತ ಕವಿತಾವಧೂರತ್ನ ರಾಜಾಧಿರಾಜ ಚಾಮರಾಜಪುತ್ರಾತ್ರೇಯಸಗೋತ್ರ ಪವಿತ್ರವಿಚಿತ್ರ, ಶಂಖಚಕ್ರಮಕರಮತ್ಸ್ಯಶರಭಸಾಳ್ವಗಂಡಭೇರುಂಡಧರಣೀವರಾಹಹನುಮದ್ಗರುಡಕಂಠೀರವಾದ್ಯನೇಕಬಿರುದಾಂಕಿತನರಪತಿಬಿರುದ, ಬಿರುದೆಂತೆಂಬರಗಂಡ, ಪ್ರತಾಪಮಾರ್ತಂಡಶ್ರೀಚಾಮುಂಡಿಕಾವರಪ್ರಸಾದಲಬ್ಧ ಮಹೀಶೂರಮಹಾಸಂಸ್ಥಾನಮಧ್ಯದೇದೀಪ್ಯಮಾನಕುಲಕ್ರಮಾಗತ ದಿವ್ಯರತ್ನ ಸಿಂಹಾಸನಾರೂಢ, ಉಭಯಕವಿತಾವಿಚಕ್ಷಣ ಶ್ರೀಕೃಷ್ಣರಾಜಕಂಠೀರವರು ಲೋಕೋಪಕಾರಾರ್ಥವಾಗಿ ಸರಸಜನಾನಂದಕರವಾಗಿ ನವರಸಭರಿತವಾಗಿ ಕರ್ಣಾಟಕ ಭಾಷೆಯಿಂ ವಿರಚಿಸಿದ ಕೃಷ್ಣರಾಜವಾಣೀವಿಲಾಸ ರತ್ನಾಕರವೆಂಬ ಶಾಕುಂತಲನಾಟಕ ನವೀನಟೀಕಿನಲ್ಲಿ ದುಷ್ಯಂತರಾಯನು ಶಕುಂತಳೆಯಿಂದಲೂ ಮಗನಾದ ಸರ್ವದಮನನಿಂದಲೂ ಯುಕ್ತನಾಗಿ ಮಾತಲಿ ಸಮೇತವಾದ ಇಂದ್ರರಥಾರೋಹಣವಂ ಗೆಯ್ದು ತನ್ನ ಪ್ರತಿಷ್ಠಾನಪುರಕ್ಕೆ ಬಂದು ಸುಖದಿಂ ಪೃಥ್ವೀಸಾಮ್ರಾಜ್ಯವಂ ಗೆಯ್ಯುತಿರ್ದನೆಂಬ ಚತುರ್ದಶಕಲ್ಲೋಲದಲ್ಲಿ ಚತುರ್ಥ ತರಂಗಂ ಸಂಪೂರ್ಣಂ.

ಶಾಕುಂತಲನಾಟಕ ನವೀನ ಟೀಕೆ ಸಂಪೂರ್ಣಂ.

ಮಂಗಳಂ ಮಹತ್ ಶ್ರೀ ಶ್ರೀ ಶ್ರೀ

ಪ್ರವರ್ತತಾಂ ಪ್ರಕೃತಿಹಿತಾಯ ಪಾರ್ಥಿವಃ ।
ಸರಸ್ವತೀ ಶ್ರುತಿತಹಿತಾ ಮಹೀಯತಾಂ ॥
ಮಮಾಪಿ ಚ ಕ್ಷಪಯತು ನೀಲಲೋಹಿತಃ ।
ಪುನರ್ಭವಂ ಪರಿಗತವೃತ್ತಿರಾತ್ಮಭೂಃ ॥

ಶ್ರೀ ಚಾಮುಂಡಿಕಾರ್ಪಣಮಸ್ತು.

ಶ್ರೀರಾಮಾಯನಮೋನಮಃ. ಶ್ರೀಕೃಷ್ಣಾಯನಮೋನಮಃ.

REGISTRAR
OSMANIA